ಹುಬ್ಬಳ್ಳಿ
ಸೋಮವಾರ, 13 ಏಪ್ರಿಲ್ 2026
ಸಂಪುಟ 16, ಸಂಚಿಕೆ 19, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಜು.3ರಿಂದ ಅಮರನಾಥ ಯಾತ್ರೆ |೦೨ | ಲೆಬನಾನ್‌ನಲ್ಲಿ 10 ಲಕ್ಷ ನಿರಾಶ್ರಿತರು | ೦೨ | ಸೀಮಿತ ಪ್ರವೇಶ ನ್ಯಾಯಕ್ಕೆ ಸವಾಲು |೦೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಧನಿಷ್ಠೆ

ದಿನದ ಮಾತು

ಗರ್ವವನ್ನು ಬಿಟ್ಟಾಗ ಸಹನೆ ಮನುಷ್ಯನಲ್ಲಿ ಮನೆ ಮಾಡುತ್ತದೆ.

▲ಮಹಾವೀರ

ಪ್ರಾಣದೀವಿಗೆಯಾದರು ಕವಿ ಶಿವರಾಮು

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

5 ಕೆಜಿ ಎಲ್‌ಪಿಜಿ ಸಿಲಿಂಡರ್ ಪಿಎನ್‌ಜಿ ಪೂರೈಕೆಗೆ ವೇಗ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಇಂಧನ ವ್ಯತ್ಯಯದ ನಡುವೆ ದೇಶೀಯ ಇಂಧನ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಭಾರತ 5 ಕೆಜಿ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯನ್ನು ಹೆಚ್ಚಿಸಿದೆ ಮತ್ತು ಪೈಪ್ಡ್ ನೈಸರ್ಗಿಕ ಅನಿಲ(ಪಿಎನ್‌ಜಿ) ಸರಬರಾಜನ್ನು ವೇಗಗೊಳಿಸಿದೆ.

• ಪುಟ ೨

ಸಾಮಾಜಿಕ ಜಾಲತಾಣದಲ್ಲಿ ನಾರೀಶಕ್ತಿ ವಿಧೇಯಕ ಅರಿವು

• **ಬೆಂಗಳೂರು:** ಪ್ರಧಾನಿ ಮೋದಿ ನೇತೃತ್ವದ ಸರ್ಕಾರವು ಮಹಿಳೆಯರ ದಶಕಗಳ ಕಾಲದ ಕನಸನ್ನು ನನಸು ಮಾಡಲು ಹೊರಟಿದ್ದು, ನಾರೀಶಕ್ತಿ ವಂದನಾ ಅಧಿನಿಯಮವನ್ನು ಬೆಂಬಲಿಸಿ ರಾಜ್ಯ ಬಿಜೆಪಿ ವಿವಿಧ ಅಭಿಯಾನ ನಡೆಸುತ್ತಿದೆ.

• ಪುಟ ೪

ತುಷ್ಟೀಕರಣ ನೀತಿಗಳನ್ನು ಅನುಸರಿಸುತ್ತಿರುವ ಟಿಎಂಸಿ

• **ಕೋಲ್ಕತಾ:** ಪಶ್ಚಿಮಬಂಗಾಳದಲ್ಲಿ ಟಿಎಂಸಿ ತುಷ್ಟೀಕರಣ ನೀತಿಗಳನ್ನು ಅನುಸರಿಸುತ್ತಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆರೋಪಿಸಿದ್ದಾರೆ. ಬಂಗಾಳವನ್ನು ದೇಶದ ಆಧ್ಯಾತ್ಮಿಕ ಅನ್ವೇಷಣೆಯನ್ನು ಶ್ರೀಮಂತಗೊಳಿಸಿದ ಸ್ವಾಮಿ ವಿವೇಕಾನಂದ ಮತ್ತು ರಾಮಕೃಷ್ಣರ ಭೂಮಿ ಎಂದು ಕರೆಯಲಾಗುತ್ತದೆ ಎಂದರು.

• ಪುಟ ೨

ಜೈಶಂಕರ್ ಯುಎಇ ಭೇಟಿ: ಮಧ್ಯಪ್ರಾಚ್ಯ ಬಿಕ್ಕಟ್ಟಿನ ಚರ್ಚೆ

• ಪುಟ ೨

ಸಿಲಿಗುರಿ ಕಾರಿಡಾರ್‌ಗೆ ಬೆದರಿಕೆ ಒಡ್ಡಿದವರಿಗೆ ಟಿಎಂಸಿ ಬೆಂಬಲ

• ಪುಟ ೨

ನಜೀರ್ ರಾಜೀನಾಮೆ ಕೊಟ್ಟಿಲ್ಲ: ಸಿದ್ದರಾಮಯ್ಯ

• ಪುಟ ೫

ಬಂಗಾಳ ಮೊದಲ ಹಂತ: 3.6 ಕೋಟಿ ಮತದಾರರು

• ಪುಟ ೨

2028ಕ್ಕೆ ಅಂತರಿಕ್ಷ ನಿಲ್ದಾಣದ ಮೊದಲ ಮಾಡ್ಯೂಲ್ ಸಿದ್ಧ

• ಪುಟ ೪

ಪಾಕ್‌ನಲ್ಲಿ ನಡೆದ ಅಮೆರಿಕ–ಇರಾನ್ ಮಾತುಕತೆ ವಿಫಲ

ಹಾರ್ಮುಜ್ ದಿಗ್ಬಂಧನ



» ಎರಡು ವಾರಗಳ ಕದನ ವಿರಾಮ ಅತಂತ್ರ

» ಹಾರ್ಮುಜ್ ಜಲಸಂಧಿ ಮೇಲೆ ಅಮೆರಿಕ ನೌಕಾ ದಿಗ್ಬಂಧನ

• **ಇಸ್ಲಾಮಾಬಾದ್/ವಾಷಿಂಗ್ಟನ್:** ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ಐತಿಹಾಸಿಕ ಅಮೆರಿಕ–ಇರಾನ್ ಶಾಂತಿ ಮಾತುಕತೆ 21 ಗಂಟೆ ಸತತ ಚರ್ಚೆಯ ನಂತರ ಭಾನುವಾರ ವಿಫಲವಾಗಿದೆ. 1979ರ ಇಸ್ಲಾಮಿಕ್ ಕ್ರಾಂತಿಯ ನಂತರ ಎರಡೂ ದೇಶಗಳ ನಡುವಿನ ಮೊದಲ ನೇರ ಉನ್ನತ ಮಟ್ಟದ ಮಾತುಕತೆ ಯಾವುದೇ ಒಪ್ಪಂದವಿಲ್ಲದೆ ಮುಗಿದಿದ್ದು, ಏಪ್ರಿಲ್ 22ರಂದು ಅವಧಿ ಮುಗಿಯಲಿರುವ ಎರಡು ವಾರಗಳ ಯುದ್ಧವಿರಾಮದ ಭವಿಷ್ಯ ಅತಂತ್ರಕ್ಕೆ ಬಿದ್ದಿದೆ. ಮಾತುಕತೆ ವಿಫಲವಾದ ತಕ್ಷಣ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾರ್ಮುಜ್ ಜಲಸಂಧಿ ಮೇಲೆ ತಕ್ಷಣ ನೌಕಾ ದಿಗ್ಬಂಧನ ಹೇರುವ ಆದೇಶ ನೀಡಿದ್ದಾರೆ. ಈ ಮೂಲಕ ಜಾಗತಿ ತೈಲ ಸಾಗಾಟಕ್ಕೆ ಬ್ರೇಕ್ ಹಾಕುವ ಪ್ರಯತ್ನ ನಡೆಸಿದ್ದಾರೆ.



ಅಣ್ವಸ್ತ್ರ ಕಾರ್ಯಕ್ರಮವೇ ತಿಕ್ಕಾಟದ ಮೂಲ: ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ನೇತೃತ್ವದ ಅಮೆರಿಕ ತಂಡ ಮತ್ತು ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಾಗ್ರ್ ಘಾಲಿಬಾಫ್ ನೇತೃತ್ವದ ಇರಾನ್ ತಂಡದ ನಡುವಿನ ಚರ್ಚೆ ಮುಖ್ಯವಾಗಿ ಮೂರು ವಿಷಯಗಳಲ್ಲಿ ಮುರಿದು ಬಿದ್ದಿದೆ. ಇರಾನಿನ ಅಣ್ವಸ್ತ್ರ ಕಾರ್ಯಕ್ರಮ, ಹಾರ್ಮುಜ್ ಜಲಸಂಧಿ ನಿಯಂತ್ರಣ ಮತ್ತು ಜಪ್ತಿ ಮಾಡಿದ ಇರಾನ್ ಆಸ್ತಿಗಳ ಬಿಡುಗಡೆ. ➡ಪುಟ ೪

10 ಮತ್ತು 15 ಅಂಶಗಳ ಪ್ರಸ್ತಾಪ

ಇರಾನ್ ತನ್ನ 10 ಅಂಶಗಳ ಯೋಜನೆಯಲ್ಲಿ ಪಶ್ಚಿಮ ಏಷ್ಯಾದಿಂದ ಅಮೆರಿಕ ಪಡೆಗಳ ವಾಪಸಾತಿ, ಎಲ್ಲ ನಿರ್ಬಂಧಗಳ ತೆರವು, ಯುರೇನಿಯಂ ಸಂವರ್ಧನದ ಹಕ್ಕು ಮತ್ತು ಹಾರ್ಮುಜ್ ಮೇಲೆ ತನ್ನ ನಿಯಂತ್ರಣ ಮುಂದುವರಿಸಲು ಬೇಡಿಕೆ ಇಟ್ಟಿತ್ತು. ಅಮೆರಿಕ ತನ್ನ 15 ಅಂಶಗಳ ಪ್ರಸ್ತಾಪದಲ್ಲಿ ಇರಾನ್ ಅಣ್ವಸ್ತ್ರ ಕಾರ್ಯಕ್ರಮ ಸಂಪೂರ್ಣ ನಿಲ್ಲಿಸಲು, ಹಾರ್ಮುಜ್ ಮುಕ್ತ ಸಮುದ್ರ ವಲಯವಾಗಿ ಘೋಷಿಸಲು ಮತ್ತು ಹೆಜ್ಬೊಲ್ಲಾ ಸೇರಿದಂತೆ ಪ್ರಾದೇಶಿಕ ಪ್ರಾಕ್ಸಿ ತಂಡಗಳಿಗೆ ಹಣ ಮತ್ತು ಶಸ್ತ್ರ ನೀಡುವುದನ್ನು ನಿಲ್ಲಿಸಲು ಒತ್ತಾಯಿಸಿತ್ತು.

ಇರಾನ್ ನಂಬಿಕೆ ಗಳಿಸಲು ಅಮೆರಿಕ ವಿಫಲ

ಇರಾನ್ ಮುಖ್ಯ ಮಾತುಕಾರ ಘಾಲಿಬಾಫ್, ಮಾತುಕತೆ ವಿಫಲಕ್ಕೆ ಅಮೆರಿಕವನ್ನೇ ಹೊಣೆ ಮಾಡಿದರು. ಇರಾನ್ ತಂಡ ಭವಿಷ್ಯಮುಖಿ ಪ್ರಸ್ತಾಪಗಳನ್ನು ಮಂಡಿಸಿತು. ಆದರೆ ಎದುರು ತಂಡ ಇರಾನ್ ಪ್ರತಿನಿಧಿ ತಂಡದ ವಿಶ್ವಾಸ ಗಳಿಸಲು ವಿಫಲವಾಯಿತು ಎಂದು ಅವರು ಎಕ್ಸ್‌ನಲ್ಲಿ ಬರೆದಿದ್ದಾರೆ. ಅಮೆರಿಕ ಈಗ ನಮ್ಮ ತಾರ್ಕಿಕತೆ ಅರ್ಥ ಮಾಡಿಕೊಂಡಿದೆ. ಅದು ನಮ್ಮ ನಂಬಿಕೆ ಗಳಿಸಬಲ್ಲದೇ ಎಂಬುದನ್ನು ನಿರ್ಧರಿಸಲಿ ಎಂದರು. ಇರಾನ್ ವಿದೇಶಾಂಗ ಸಚಿವಾಲಯ ಅಮೆರಿಕ ಅತಿಯಾದ ಮತ್ತು ಕಾನೂನುಬಾಹಿರ ಬೇಡಿಕೆಗಳನ್ನು ಮಂಡಿಸಿತು ಎಂದು ಆರೋಪಿಸಿ, ಯಶಸ್ಸಿನ ಹೊಣೆ ಅಮೆರಿಕದ ಪ್ರಾಮಾಣಿಕ ಇಚ್ಛಾಶಕ್ತಿಯ ಮೇಲಿದೆ ಎಂದಿತು. ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಾಘೈ, 40 ದಿನಗಳ ಯುದ್ಧದ ಹಿನ್ನೆಲೆಯಲ್ಲಿ ಅಪನಂಬಿಕೆ ಮತ್ತು ಅನುಮಾನದ ವಾತಾವರಣದಲ್ಲಿ ನಡೆದ ಮಾತುಕತೆಯಲ್ಲಿ ಒಂದೇ ಸಭೆಯಲ್ಲಿ ಒಪ್ಪಂದ ನಿರೀಕ್ಷಿಸಲಾಗದು; ಎರಡೂ ದೇಶಗಳ ನಿಲುವು ಸಮೀಪಿಸುವ ಪ್ರಯತ್ನ ಮುಂದುವರಿಯಲಿದೆ ಎಂದರು.

ಟೆಹರಾನ್‌ನಲ್ಲಿ ನಿರಾಶೆ, ಧಿಕ್ಕಾರ

ಟೆಹರಾನ್ ಬೀದಿಗಳಲ್ಲಿ ಜಲಸಂಧಿ ಮುಚ್ಚಿದ್ದೇ ಇರಲಿ ಎಂಬ ಭಾರೀ ಬಿಲ್ ಬೋರ್ಡ್‌ಗಳ ನಡುವೆ ಸಾಮಾನ್ಯ ಇರಾನಿಯರು ಮಾತುಕತೆ ವಿಫಲಕ್ಕೆ ಬೇಸರ ವ್ಯಕ್ತಪಡಿಸಿದರೂ ನಿರ್ಧಾರದ ಬಗ್ಗೆ ಧಿಕ್ಕಾರ ತೋರಿದರು. ನಾನು ಯುದ್ಧ ವಿರೋಧಿ. ಮಾತುಕತೆ ಉತ್ತಮ ಮಾರ್ಗ. ಆದರೆ, ಅಮೆರಿಕದ ಅನುಚಿತ ಬೇಡಿಕೆಗಳು ವ್ಯರ್ಥಗೊಳಿಸಿದವು ಎಂದು ಫರ್ಹಾದ್ ಸಿಮಿಯಾ(43) ಹೇಳಿದರು. ಯುದ್ಧಭೂಮಿಯಲ್ಲಿ ಗಳಿಸಿದ್ದನ್ನು ಮಾತುಕತೆ ಮೇಜಿನ ಮೇಲೆ ಕಳೆದುಕೊಳ್ಳಬಾರದೆಂಬ ಕಾಳಜಿ ಇತ್ತು ಎಂದು ಮೆಹ್ದಿ ಹೊಸ್ಸೈನಿ(43) ಹೇಳಿದರು. ಫೆಬ್ರವರಿ 28ರಂದು ಶುರುವಾದ ಸಂಘರ್ಷದಲ್ಲಿ ಇರಾನ್‌ನಲ್ಲಿ ಕನಿಷ್ಠ 3,000, ಲೆಬನಾನ್‌ನಲ್ಲಿ 2,020, ಇಸ್ರೇಲ್‌ನಲ್ಲಿ 23 ಮತ್ತು ಗಲ್ಫ್ ದೇಶಗಳಲ್ಲಿ ಡಜನ್‌ಗೂ ಹೆಚ್ಚು ಜನರು ಸಾವಿಗೀಡಾಗಿದ್ದಾರೆ.

ಮೈನ್ ತೆರವು ಕಾರ್ಯಾಚರಣೆ

• ಪುಟ ೪

ಖ್ಯಾತ ಗಾಯಕಿ ಆಶಾ ಭೋಸ್ಲೆ ವಿಧಿವಶ

ಆಶಾಗಾನ ಅನಂತಯಾನ

• **ಮುಂಬೈ:** ಯಾವುದೇ ಒಂದು ಸಂಗೀತ ಶೈಲಿಗೆ ಸೀಮಿತವಾಗದೆ, ಹಿಂದಿ ಹಿನ್ನೆಲೆ ಗಾನದಲ್ಲಿ ತಮ್ಮದೇ ಆದ ವಿಶಿಷ್ಟ ಗುರುತು ಮೂಡಿಸಿದ್ದ ಖ್ಯಾತ ಗಾಯಕಿ ಆಶಾ ಭೋಸ್ಲೆ ಅವರು ಭಾನುವಾರ ಮುಂಬೈ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 92 ವರ್ಷ ವಯಸ್ಸಾಗಿತ್ತು.

ಎದೆ ಸೋಂಕು ಮತ್ತು ಆಯಾಸದ ಕಾರಣದಿಂದ ಶನಿವಾರ ಸಂಜೆ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಾಗಿದ್ದ ಅವರು ಚಿಕಿತ್ಸೆ ಫಲಕಾರಿ ಯಾಗದೆ ಕೊನೆಯುಸಿರೆಳೆದರು ಎಂದು ಅವರ ಮೊಮ್ಮಗಳು ಝನಾಯಿ ಭೋಸ್ಲೆ ತಿಳಿಸಿದ್ದಾರೆ.

ಮಂಗೇಶ್ಕರ್ ಮಕ್ಕಳಲ್ಲಿ ಒಬ್ಬರಾದ ಆಶಾ ಭೋಸ್ಲೆ, ತಮ್ಮ ಅಕ್ಕ ಲತಾ ಮಂಗೇಶ್ಕರ್ ಅವರ ಜತೆಗೆ ಹಲವು ದಶಕಗಳ ಕಾಲ ಹಿಂದಿ ಚಿತ್ರರಂಗದ ಹಿನ್ನೆಲೆ ಗಾನವನ್ನು ಆಳಿದರು. ವಿಭಿನ್ನ ಶೈಲಿಗಳಲ್ಲಿ ಹಾಡುವ ಸಾಮರ್ಥ್ಯದಿಂದ ಅವರು ಅಪಾರ ಜನಪ್ರಿಯತೆ ಗಳಿಸಿದ್ದರು.ಹಮ್ ಇಂತೇಜಾರ್ ಕರೇಂಗೇ ಹಾಡಿನಲ್ಲಿ ಮೀನಾಕುಮಾರಿ ಅವರ ದುಃಖಭರಿತ ಭಾವನೆಗಳಿಗೂ, ಪಿಯಾ ತು ಅಬ್ ತೋ ಆಜಾದಲ್ಲಿ ಹೆಲೆನ್ ಅವರ ಆಕರ್ಷಕ ಶೈಲಿಗೂ ಧ್ವನಿ ನೀಡಿದ ಅವರು, ಸಿನಿರಂಗದಲ್ಲಿ ಮಹಿಳಾ ಧ್ವನಿಗೆ ಹೊಸ ಅರ್ಥ ನೀಡಿದರು. ಆಜಾ, ಆಜಾ ಮತ್ತು ಚೈನ್ ಸೆ ಹಮ್ ಕೋ ಕಭಿ ಮೊದಲಾದ ಹಾಡುಗಳ ಮೂಲಕ ಅನೇಕ ಪೀಳಿಗೆಯ ಜನರನ್ನು ಮನರಂಜಿಸಿದ ಅವರ ಧ್ವನಿ ಇಂದು ಲಕ್ಷಾಂತರ ಅಭಿಮಾನಿಗಳನ್ನು ಶೋಕಸಾಗರದಲ್ಲಿ ಮುಳುಗಿಸಿದೆ. ➡ಪುಟ ೪



1933-2026

ಇಂದು ಅಂತ್ಯಸಂಸ್ಕಾರ

ಆಶಾ ಭೋಸ್ಲೆ ಅವರ ಅಂತ್ಯಸಂಸ್ಕಾರವು ಸೋಮವಾರ ಸಂಜೆ 4 ಗಂಟೆಗೆ ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ಸರ್ಕಾರಿ ಗೌರವಗಳೊಂದಿಗೆ ನಡೆಯಲಿದೆ. ➡ಪುಟ ೪

ಆಶಾ ಭೋಸ್ಲೆ ಧ್ವನಿಯಲ್ಲಿ ಅಮರವಾದ ಆತ್ಮ

ಆಶಾ ಭೋಸ್ಲೆ ಬೆಂಗಳೂರಿಗೆ ಬಂದಾಗ...

• ಮಂಜುಳಾಗುರುರಾಜ್

• ವಿಶೇಷ ಪುಟ ೦೦

ಆಶಾ ಬೋಸ್ಲೆ ಅವರ ನಿಧನದಿಂದ ತೀವ್ರ ದುಃಖಿತನಾಗಿದ್ದೇನೆ. ಅವರು ಭಾರತದ ಅತ್ಯಂತ ಪ್ರಸಿದ್ಧ ಮತ್ತು ಬಹುಮುಖ ಧ್ವನಿಗಳಲ್ಲಿ ಒಬ್ಬರು. ದಶಕಗಳ ಅವರ ವಿಶಿಷ್ಟ ಸಂಗೀತ ಪ್ರಯಾಣವು ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿದೆ. ವಿಶ್ವದಾದ್ಯಂತ ಅಸಂಖ್ಯಾತ ಜನರ ಹೃದಯವನ್ನು ಮುಟ್ಟಿದೆ. ಭಾವಪೂರ್ಣ ರಾಗಗಳಿಂದ ಹಿಡಿದು ಉತ್ಸಾಹಭರಿತ ಸಂಯೋಜನೆಗಳವರೆಗೆ, ಧ್ವನಿಯು ಕಾಲಾತೀತ ಪ್ರತಿಭೆಯನ್ನು ಹೊಂದಿತ್ತು.

■ **ನರೇಂದ್ರ ಮೋದಿ,** ಪ್ರಧಾನಿ

ಲೋಕಸಭೆ, ರಾಜ್ಯಸಭೆಯ ಸದನ ನಾಯಕರಿಗೆ ಮೋದಿ ಪತ್ರ

ಮಹಿಳಾ ಮೀಸಲು ಜಾರಿಗೆ ಸಕಾಲ

• **ಹೊಸದಿಲ್ಲಿ:** ಅಸ್ತಿತ್ವದಲ್ಲಿರುವ ಕಾನೂನಿಗೆ ತಿದ್ದುಪಡಿ ತರುವ ಮೂಲಕ 2029ರ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಮಹಿಳಾ ಮೀಸಲಾತಿ ಜಾರಿಗೊಳಿಸುವಂತೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.



ಏ.11ರಂದು ಲೋಕಸಭೆ ಮತ್ತು ರಾಜ್ಯಸಭೆಯ ಸದನ ನಾಯಕರಿಗೆ ಬರೆದ ಪತ್ರದಲ್ಲಿ, ನಾರಿ ಶಕ್ತಿ ವಂದನ್ ಅಧಿನಿಯಮಕ್ಕೆ ತಿದ್ದುಪಡಿಗಳನ್ನು ಅಂಗೀಕರಿಸಲು ಎಲ್ಲಾ ರಾಜಕೀಯ ಪಕ್ಷಗಳು ಒಂದಾಗಬೇಕು ಎಂದು ಮೋದಿ ಒತ್ತಾಯಿಸಿದ್ದಾರೆ. ಆಡಳಿತಮತ್ತು ನಿರ್ಧಾರಕೈಗೊಳ್ಳುವಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು 2029ರಲ್ಲಿ ಈ ಕಾನೂನು ಜಾರಿಗೆ ತರುವುದು ಅವಶ್ಯಕ ಎಂದು ಹೇಳಿದ್ದಾರೆ.

ಸಂಸತ್ತಿನ ವಿಶೇಷ ಅಧಿವೇಶನ: ಬಜೆಟ್ ಅಧಿವೇಶನದ ವಿಸ್ತರಣೆಯ ಬೆನ್ನಲ್ಲೇ ಏ.16 ರಿಂದ 18ರವರೆಗೆ ಮೂರು ದಿನಗಳ ಸಂಸತ್ತಿನ ವಿಶೇಷ ಸಭೆಯನ್ನು ನಿಗದಿಪಡಿಸಲಾಗಿದೆ. ಉದ್ದೇಶಿತ ತಿದ್ದುಪಡಿಗಳು ಈ ಕಾನೂನಿನ ಜಾರಿ ಪ್ರಕ್ರಿಯೆಯನ್ನು ವೇಗಗೊಳಿಸುವ ಗುರಿ ಹೊಂದಿವೆ. ➡ಪುಟ ೪

ಮುಖ್ಯಾಂಶಗಳು

- » ಏ.16ರಿಂದ 18ರವರೆಗೆ ಸಂಸತ್ತಿನ ವಿಶೇಷ ಅಧಿವೇಶನ
- » 2029ರ ವೇಳೆಗೆ ಮಹಿಳಾ ಮೀಸಲಾತಿ ಜಾರಿಗೆ ಪ್ರಸ್ತಾವನೆ
- » ಲೋಕಸಭೆ ಸ್ಥಾನಗಳ ಸಂಖ್ಯೆ 81ಕ್ಕೆ ಏರಿಕೆ; 273 ಸ್ಥಾನಗಳು ಮಹಿಳೆಯರಿಗೆ ಮೀಸಲು
- » 2027ರ ನಂತರದ ಜನಗಣತಿಯ ಕ್ಷೇತ್ರ ಮರು ವಿಂಗಡಣೆವರೆಗೆ ಕಾಯಬೇಕಾಗಿಲ್ಲ

ಇಂದು ಮೋದಿ ಭಾಷಣ

• ಪುಟ ೪

ನಾಸಿಕ್: ಲೈಂಗಿಕ ಕಿರುಕುಳ, ಮತಾಂತರ | ಎಸ್‌ಐಟಿ ತನಿಖೆ

ಟಿಸಿಎಸ್‌ನ ಸಿಬ್ಬಂದಿ ಅಮಾನತು

• **ಮುಂಬೈ:** ನಾಸಿಕ್‌ನ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ಕಚೇರಿಯಲ್ಲಿ ಲೈಂಗಿಕ ಕಿರುಕುಳ ಹಾಗೂ ಮತಾಂತರ ಪ್ರಕರಣಗಳು ಬೆಳಕಿಗೆ ಬಂದ ಹಿನ್ನೆಲೆಯಲ್ಲಿ, ದೇಶದ ಪ್ರಮುಖ ಐಟಿ ಕಂಪನಿ ಟಿಸಿಎಸ್ ಭಾನುವಾರ ತನ್ನ ಸಿಬ್ಬಂದಿ ವಿರುದ್ಧ ಕ್ರಮ ತೆಗೆದುಕೊಂಡಿದ್ದು, ಆರೋಪಿಗಳನ್ನು ಅಮಾನತು ಮಾಡಿದೆ.

ಕಂಪನಿ ಹೇಳಿಕೆ ಹೊರಡಿಸಿದ್ದು, ನಾಸಿಕ್ ಪ್ರಕರಣದ ಬಗ್ಗೆ ನಮಗೆ ತಿಳಿದ ತಕ್ಷಣ ನಾವು ತ್ವರಿತ ಕ್ರಮ ಕೈಗೊಂಡಿದ್ದೇವೆ. ತನಿಖೆ ನಡೆಯುತ್ತಿರುವ ಉದ್ಯೋಗಿಗಳನ್ನು ತನಿಖೆ ಮುಗಿಯುವವರೆಗೆ ಅಮಾನತಿನಲ್ಲಿ ಇಡಲಾಗಿದೆ. ನಾವು ಸ್ಥಳೀಯ ಪೊಲೀಸರೊಂದಿಗೆ ಸಹಕರಿಸುತ್ತಿದ್ದೇವೆ ಎಂದು ತಿಳಿಸಿದೆ. ಟಿಸಿಎಸ್ ಯಾವುದೇ ರೀತಿಯ ಕಿರುಕುಳ ಮತ್ತು ಬಲವಂತಕ್ಕೆ ಶೂನ್ಯ-ಸಹಿಷ್ಣುತೆ ನೀತಿ ಹೊಂದಿದೆ. ಕಾರ್ಯಸ್ಥಳದಲ್ಲಿ ನಮ್ಮ ಉದ್ಯೋಗಿಗಳ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಯಾವಾಗಲೂ ಖಾತರಿಪಡಿಸುತ್ತಿದ್ದೇವೆ ಎಂದು ಮುಂಬೈ ಮೂಲದ ಕಂಪನಿ ಹೇಳಿದೆ. ➡ಪುಟ ೪



ನಾಸಿಕ್‌ನಲ್ಲಿ ಮತಾಂತರ, ಲೈಂಗಿಕ ಕಿರುಕುಳ ಸಂಚು

• ಪುಟ ೪

9 ಎಫ್‌ಐಆರ್ ದಾಖಲು

2022 ರಿಂದ 2026ರ ನಡುವೆ ನಡೆದ ಘಟನೆಗಳಿಗೆ ಸಂಬಂಧಿಸಿ ಇಲ್ಲಿಯವರೆಗೆ ಒಟ್ಟು ಒಂಬತ್ತು ಎಫ್‌ಐಆರ್‌ಗಳು ದಾಖಲಾಗಿವೆ. ದಾನಿಶ್ ಶೇಖ್, ತಾಉಸಿಫ್ ಅತ್ತಾರ್, ರಝಾ ಮೆಮನ್, ಶಾಹ್‌ರುಖ್ ಖುರೇಶಿ, ಶಫಿ ಶೇಖ್, ಆಸಿಫ್ ಮತ್ತು ಅನ್ಸಾರಿ ಆರೋಪಿಗಳಾಗಿದ್ದಾರೆ.

ಅಲ್ಪಸಂಖ್ಯಾತರ ಸಮಿತಿ ರದ್ದು

• **ಬೆಂಗಳೂರು:** ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ಅಬ್ದುಲ್ ಜಬ್ಬಾರ್ ರಾಜೀನಾಮೆ ನೀಡಿದ ಬೆನ್ನಲ್ಲೇ, ಅಲ್ಪಸಂಖ್ಯಾತರ ವಿಭಾಗ ಸಮಿತಿಯನ್ನು ವಿಸರ್ಜಿಸಲಾಗಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಸೇರಿದಂತೆ ಹಲವು ಅಲ್ಪಸಂಖ್ಯಾತ ನಾಯಕರು ಪಕ್ಷದ ಅಭ್ಯರ್ಥಿ ಪರವಾಗಿ ಸರಿಯಾಗಿ ಕಾರ್ಯನಿರ್ವಹಿಸಿಲ್ಲ ಎನ್ನುವ ಆರೋಪವನ್ನು ಸ್ವಪಕ್ಷೀಯರೇ ಮಾಡಿದ್ದರು. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ಅಬ್ದುಲ್ ಜಬ್ಬಾರ್ ಶನಿವಾರ ರಾಜೀನಾಮೆ ನೀಡಿದ್ದರು. ರಾಜೀನಾಮೆಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅಂಗೀಕಾರ ಮಾಡಿದ್ದಾರೆ. ➡ಪುಟ ೪

ಅಲ್ಪಸಂಖ್ಯಾತರ ರಾಜ್ಯ, ಜಿಲ್ಲಾ ಘಟಕದಲ್ಲಿ ಸಾಮೂಹಿಕ ರಾಜೀನಾಮೆ?

• ಪುಟ ೪

ಆನೆ ದಾಳಿಗೆ ವ್ಯಕ್ತಿ ಬಲಿ

• **ಬೇಲೂರು:** ಕಾಡಾನೆ ದಾಳಿಗೆ ಮತ್ತೋರ್ವ ರೈತ ಬಲಿಯಾಗಿರುವ ಘಟನೆ ಬೇಲೂರು ತಾಲೂಕಿನ ಅರೇಹಳ್ಳಿ ಹೋಬಳಿಯಲ್ಲಿ ನಡೆದಿದೆ. ರಾಜಶೇಖರ್ (65)ಕಾಡಾನೆ ದಾಳಿಗೆ ಮೃತಪಟ್ಟ ರೈತನಾಗಿದ್ದು, ತಾಲೂಕಿನ ಕಣಗುಪ್ಪೆ ಗ್ರಾಮದಲ್ಲಿ ಘಟನೆ ಸಂಭವಿಸಿದೆ. ಎಂದಿನಂತೆ ರಾಜಶೆಟ್ಟಿ ತೋಟಕ್ಕೆ ತೆರಳಿದ್ದ ವೇಳೆ ಈ ದುರ್ಘಟನೆ ಜರುಗಿದೆ.ಬೇಲೂರು ತಾಲೂಕಿನ ಮೃತ ರಾಜಶೇಖರ್ ಎಂದಿನಂತೆ ಭಾನುವಾರ ಮುಂಜಾನೆ ತೋಟದ ಕೆಲಸಕ್ಕೆಂದು ಮನೆಯಿಂದ ತೆರಳಿದ್ದರು. ➡ಪುಟ ೪



ಧಾರವಾಡ: ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಅವರನ್ನು ಬೆಳಗಾವಿ ಗೃಹ ಕಚೇರಿಯಲ್ಲಿ ಧಾರವಾಡದ ಕಾಂಗ್ರೆಸ್ ಮುಖಂಡರು ಸನ್ಮಾನಿಸಿದರು. ಮುಖಂಡರಾದ ರುದ್ರಗೌಡ ಪಾಟೀಲ, ಪತ್ರಕರ್ತ ಸಂಗನಗೌಡ ಹೂವನ್ನವರ, ಶಿವಕುಮಾರ ಪಾಟೀಲ, ಉದ್ಯಮಿ ಈರನಗೌಡ ಪಾಟೀಲ ಮತ್ತು ಶಿವಕುಮಾರ್ ಪಾಟೀಲ ಇದ್ದರು.

ನಗರದ ಮಹನೀಯರ ಪುತ್ಥಳಿ ಸ್ವಚ್ಛತೆ ಇಂದು

ಹುಬ್ಬಳ್ಳಿ: ಇಲ್ಲಿಯ ಕಾರವಾರ ರಸ್ತೆಯ ಬಿಜೆಪಿ ಕಚೇರಿಯಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮದಿನದ ಅಂಗವಾಗಿ ಪೂರ್ವಭಾವಿ ಸಭೆ ನಡೆಸಲಾಯಿತು.

ಹು-ಧಾ ಮಹಾನಗರ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ ಮಾತನಾಡಿ, ಏ.14ರಂದು ಬೆಳಗ್ಗೆ 10 ಗಂಟೆಗೆ ಪಕ್ಷದ ವತಿಯಿಂದ ಸ್ಟೇಷನ್ ರಸ್ತೆಯಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು. ಬೆಳಗ್ಗೆ 10.30ಕ್ಕೆ ಪಕ್ಷದ ಕಚೇರಿಯಲ್ಲಿ ಕಾರ್ಯಕ್ರಮ, ಅದೇ ದಿನ ಎಲ್ಲ ವಾರ್ಡ್‌ಗಳಲ್ಲಿ ಅಂಬೇಡ್ಕರ್ ಭಾವ ಚಿತ್ರಕ್ಕೆ ಪುಷ್ಪಾರ್ಚಣೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಏ.19ರಂದು ಕಾರವಾರ ರಸ್ತೆ ಅರವಿಂದ ನಗರದ ಪಕ್ಷದ ಕಚೇರಿಯಲ್ಲಿ ವಿವಿಧ ಸಮಾಜದ ವೃತ್ತಿಪರರ ಕರೆಸಿ ಕಾರ್ಯಕ್ರಮ ಮಾಡಲಾಗುತ್ತಿದ್ದು, ಮುಖ್ಯ ವಕ್ತಾರರಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಕಾರ್ಯಕಾರಿಣಿ ಸದಸ್ಯ ಶ್ರೀಧರ ನಾಡಿಗೀರ ಅವರು ಭಾಗವಹಿಸುವರು. ಏ.13ರಂದು ನಗರದಲ್ಲಿರುವ ಎಲ್ಲ ಮಹನೀಯರ ಪುತ್ಥಳಿಗಳನ್ನು ಸ್ವಚ್ಛತೆ ಮಾಡಲಾಗುವುದು ಎಂದರು.

ಪ್ರಧಾನ ಕಾರ್ಯದರ್ಶಿ ವಸಂತ ನಾಡಜೋಶಿ, ರಾಜ್ಯ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಕೌತಾಳ, ಸಿದ್ದು ಮೊಗಲಿಶೆಟ್ಟರ್, ಡಾ. ಕ್ರಾಂತಿ ಕಿರಣ, ಮಹಾನಗರ ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಹನುಮಂತ ಹರಿವಾಣ, ಜಿಲ್ಲಾ ಎಸ್ ಟಿ ಮೋರ್ಚಾ ಅಧ್ಯಕ್ಷ ಅಶೋಕ ವಾಲ್ಮೀಕಿ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷ ಸೀಮಾ ಲದವಾ, ಪೂರ್ವ ಕ್ಷೇತ್ರದ ಅಧ್ಯಕ್ಷ ಮಂಜುನಾಥ ಕಾಟಕರ, ಪ್ರೀತಂ ಅರಕೇರಿ ಇದ್ದರು.



ಹುಬ್ಬಳ್ಳಿ: ಇಲ್ಲಿಯ ಕಾರವಾರ ರಸ್ತೆಯ ಬಿಜೆಪಿ ಕಚೇರಿಯಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮದಿನದ ಅಂಗವಾಗಿ ಪೂರ್ವಭಾವಿ ಸಭೆ ನಡೆಸಲಾಯಿತು.

ಕಿರುಸುದ್ದಿ

ಕಾಮಗಾರಿಗೆ ಭೂಮಿಪೂಜೆ



ಅಳ್ನಾವರ: ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಶಿಫಾರಸಿನಂತೆ ವಿಧಾನ ಪರಿಷತ್ ಸದಸ್ಯ ಡಾ.ಎಂ.ಜಿ. ಮುಳೆ ಅವರು ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಅಳ್ನಾವರ ಪಟ್ಟಣದ ರುದ್ರಭೂಮಿ ಅಭಿವೃದ್ಧಿಗೆ ನೀಡಿರುವ ಅನುದಾನದಡಿ ಕೈಕೊಳ್ಳಲಾಗುವ ಕಾಮಗಾರಿಗೆ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಲಖನ ಬರಗುಂಡಿ ಭೂಮಿಪೂಜೆ ನೆರವೇರಿಸಿದರು.

ರೇಲ್ವೆ ನಿಲ್ದಾಣ ಸಲಹಾ ಸಮಿತಿ ಸದಸ್ಯ ಪ್ರವೀಣ ಪವಾರ ಮಾತನಾಡಿ, ಸ್ಥಳೀಯ ಸಂಸ್ಥೆ ಮತ್ತು ಶಾಸಕರ, ಸಂಸದರ ಅನುದಾನದಲ್ಲಿ ಮುಕ್ತಿ ಧಾಮದ ಅಭಿವೃದ್ಧಿಯನ್ನು ಹಂತ ಹಂತವಾಗಿ ಮಾಡಲು ಪ್ರಯತ್ನಿಸಲಾಗುವುದು ಎಂದರು.

ಅಜಿತ ಬೆಟದೂರ ಯಲ್ಲಪ್ಪ ತೇರಗಾಂವಕರ, ನಾರಾಯಣ ಪಟೇಲ, ಪರಶುರಾಮ್ ಗಾಯಡೊಳ್ಳಿ, ಕೇದಾರಿ ದುಲಬಾಜಿ, ಶಾಹು ಶಿಂಧೆ, ನಾರಾಯಣ್ ಮೋರೆ, ಶಿವಾಜಿ ಡೊಳ್ಳಿನ, ಪರಶುರಾಮ ರೇಡೆಕರ, ಶಾಂತು ಪಟೇಲ್ ಸಮೀರ್ ಗಾವಡೆ, ಅರ್ಜುನ್ ಬೆನಳಕರ, ದತ್ತಾ ಗೂಂದಳ್ಳಿ, ಸಂತೋಷ ಕಾಕಡೆ, ಯಲ್ಲಪ್ಪ ಕುಣಕಿಕೊಪ್ಪ, ಪ್ರಭಾಕರ್ ಕಾಂಬಳೆ, ದತ್ತಾ ಪಟ್ಟಣ ಮತ್ತಿತರರಿದ್ದರು.

ಶೇಂಗಾ ಉತ್ಪಾದನೆ ಹೆಚ್ಚಿಸಿ



ಧಾರವಾಡ: ಕೃಷಿ ವಿವಿಯ ಮೊದಲ ಕುಲಪತಿ ದಿ. ಡಾ.ಜೆ.ವಿ.ಗೌಡ ಶಿಕ್ಷಣ ಮತ್ತು ಸಂಶೋಧನಾ ಪ್ರತಿಷ್ಠಾನದ ಸಂಸ್ಥಾಪನಾ ದಿನದ ಉಪನ್ಯಾಸ ನಗರದ ಕೃಷಿ ವಿಶ್ವವಿದ್ಯಾಲಯದ ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ಸಭಾಂಗಣದಲ್ಲಿ ಜರುಗಿತು.

ಭಾರತದಲ್ಲಿ ಹೈ ಓಲಿಕ್ ಶೇಂಗಾ: ಲ್ಯಾಬ್ ಟು ಲ್ಯಾಂಡ್ ಯಶಸ್ವಿ ಪಯಣ- ಬೆಳವಣಿಗೆ ಕುರಿತು ಉಪನ್ಯಾಸ ನೀಡಿದ ಭಾರತೀಯ ಶೇಂಗಾ ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಎಸ್.ಕೆ.ಬೇರಾರ, ಶೇಂಗಾ ಎಣ್ಣೆ ಬಳಕೆ ಬಗ್ಗೆ ಮಾಹಿತಿ ನೀಡಿದರು. ಶೇಂಗಾದಲ್ಲಿ ಶೇ.50ರಷ್ಟು ಎಣ್ಣೆ ಅಂಶವಿದೆ. ಇದರ ಉತ್ಪಾದನೆ ಹೆಚ್ಚಿಸಿ, ಖಾದ್ಯ ತೈಲದ ಅವಶ್ಯಕತೆ ಪೂರೈಸಿ ಆಮದು ಅವಲಂಬನೆ ತಗ್ಗಿಸಬಹುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಡಾ. ಪಿ.ಎಲ್.ಪಾಟೀಲ ಮಾತನಾಡಿ, ಬೆಳೆ ಅಭಿವೃದ್ಧಿ ಸಂಶೋಧನೆಯಲ್ಲಿ ನವೀನ ಪದ್ಧತಿಗಳ ಅಳವಡಿಕೆಯಿಂದ ಉತ್ಪಾದನೆ ಹೆಚ್ಚಳದ ಕುರಿತು ತಿಳಿಸಿ, ಡಾ. ಜೆ.ವಿ.ಗೌಡರ ದೃಷ್ಟಿಕೋನ ಮುಂದುವರೆಸುವುದಾಗಿ ಭರವಸೆ ನೀಡಿದರು. ಡಾ. ಜೆ.ವಿ.ಗೌಡರ ಪತ್ನಿ ಸುಶೀಲಾ ಗೌಡರ, ಕೃವಿವಿ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಪಾರ್ವತಿ ಕುರ್ಲೆ, ವೀರನಗೌಡ ಪೊಲೀಸಗೌಡರ, ರವಿಕುಮಾರ ಮಾಳಿಗೇರ, ಬಸವರಾಜ ಕುಂದಗೋಳಮಠ, ಮಾಲತೇಶ ಶ್ಯಾಗೋಟಿ ಅನೇಕರು ಪಾಲ್ಗೊಂಡಿದ್ದರು.

ಜನಪದ ಹಾಡಿನಲ್ಲಿ ನೀತಿಪಾಠ




ಧಾರವಾಡ: ಲಾವಣಿ ಹಾಗೂ ಗೀಗೀ ಪದಗಳು ಕೇವಲ ಮನರಂಜನೆಗೆ ರಚಿಸಿಲ್ಲ. ಈ ಹಾಡುಗಳಲ್ಲಿ ನಮ್ಮ ಜನಪದ ಸಂಸ್ಕೃತಿ ಹಾಗೂ ನೀತಿ ಪಾಠಗಳು ತಿಳಿಸುವ ಸಂದೇಶಗಳಾಗಿವೆ ಎಂದು ಜಾನಪದ ವಿದ್ವಾಂಸ ಮಲ್ಲಯ್ಯಸ್ವಾಮಿ ತೋಟಗಂಟಿ ಅಭಿಪ್ರಾಯಪಟ್ಟರು. ಕವಿಸಂ ರಾ.ಹ.ದೇಶಪಾಂಡೆ ಭವನದಲ್ಲಿ ದಿ. ದೇವೇಂದ್ರಕುಮಾರ ಹಕಾರಿ ದತ್ತಿ ಪ್ರಯುಕ್ತ ನಡೆದ ಲಾವಣಿ ಪದ ಹಾಗೂ ಗೀಗೀ ಪದಗಳಲ್ಲಿ ದೇಶಭಕ್ತಿ ಕುರಿತು ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಡಾ.ಮಹೇಶ ಹೊರಕೇರಿ ಮಾತನಾಡಿ, ಲಾವಣಿ ಮತ್ತು ಗೀಗೀ ಪದಗಳನ್ನು ಮೂಲ ಜಾನಪದಕ್ಕೆ ಧಕ್ಕೆ ಬಾರದಂತೆ ಹಾಡಬೇಕು. ಈ ಪದಗಳಲ್ಲಿ ದ್ವಂದಾರ್ಥದ ಹಾಡುಗಳು ಜನಪದರ ಮನೋವಿಕಾರಕ್ಕೆ ಕಾರಣವಾಗುತ್ತವೆ ಎಂದು ಎಚ್ಚರಿಸಿದರು. ವೀರಣ್ಣ ಒಡ್ಡೀನ, ಡಾ.ಧನವಂತ ಹಾಜವಗೋಳ, ಉದಯ ಹಕಾರಿ, ರವಿ ತೋಟಗಂಟಿ, ಎಚ್.ಎನ್.ಸುಣಗಾರ, ಡಾ.ಸದಾಶಿವ ಮರ್ಜಿ, ಡಾ. ಚಂದ್ರಶೇಖರ ರೊಟ್ಟಿಗವಾಡ ಇತರರಿದ್ದರು. ದತ್ತಿದಾನಿ ರವಿಶಂಕರ ಹಕಾರಿ ದತ್ತಿ ಆಶಯ ನುಡಿದರು. ಡಾ.ಜಿನದತ್ತ ಹಡಗಲಿ ಸ್ವಾಗತಿಸಿದರು. ಶಂಕರ ಹಲಗತ್ತಿ ಪ್ರಾಸ್ತಾವಿಸಿದರು. ಸತೀಶ ತುರಮರಿ ನಿರೂಪಿಸಿದರು. ಶಂಕರ ಕುಂಬಿ ವಂದಿಸಿದರು.

ನಿಧನ ಸುದ್ದಿ

ದಾಕ್ಷಾಯಣಿ ಕ್ಯಾಮನಗೌಡರ

ಧಾರವಾಡ: ಸ್ಥಳೀಯ ಕುಸುಮ ನಗರದ ನಿವಾಸಿ ದಾಕ್ಷಾಯಣಿ ಹನುಮಂತಗೌಡ ಕ್ಯಾಮನಗೌಡರ(72) ಶುಕ್ರವಾರ ನಿಧನ ಹೊಂದಿದರು. ಇವರಿಗೆ ಪುತ್ರ ಪಕ್ಷಿತಜ್ಞ ಪ್ರಕಾಶ ಗೌಡರ ಹಾಗೂ ಓರ್ವ ಪುತ್ರಿ, ಅಪಾರ ಬಳಗವಿದೆ.



ಬಂಕ್-ಆಟೋ ಮಾಲೀಕರ ಸಭೆ | ಜಿಲ್ಲಾಧಿಕಾರಿ ಸ್ನೇಹಲ್ ಸೂಚನೆ

ದರಪಟ್ಟಿ ಫಲಕ ಅಳವಡಿಸಿ



ಧಾರವಾಡ: ಗಲ್ಫ್ ರಾಷ್ಟ್ರಗಳಲ್ಲಿ ಯುದ್ಧದ ಭೀತಿಯಿಂದ ಎಲ್‌ಪಿಜಿ ಹಾಗೂ ಸಿಎನ್‌ಜಿ ಗ್ಯಾಸ್ ಸರಬರಾಜಿನಲ್ಲಿ ವ್ಯತ್ಯಯವಾಗಿದೆ. ಆಟೋ ಚಾಲಕರ ಚಿಂತಸದೆ, ಸಮಾಧಾನವಾಗಿ ನಿರ್ವಹಿಸಬೇಕಿದೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಎಲ್‌ಪಿಜಿ, ಸಿಎನ್‌ಜಿ ಬಂಕ್ ಮಾಲೀಕರ ಹಾಗೂ ಹು-ಧಾ ಆಟೋ ಚಾಲಕರ ಸಂಘದ ಸಭೆ ನಡೆಸಿ, ಜಿಲ್ಲೆಯಲ್ಲಿ 21 ಎಲ್‌ಪಿಜಿ, 11 ಸಿಎನ್‌ಜಿ ಬಂಕ್‌ಗಳಿಗೆ ಹಂತಹಂತವಾಗಿ ದಾಸ್ತಾನು ಮಾಡಲಿದೆ ಎಂದರು.

ಎಲ್‌ಪಿಜಿ ಮತ್ತು ಸಿಎನ್‌ಜಿ ಗ್ಯಾಸ್ ಬಂಕ್‌ಗಳಲ್ಲಿ ದರಪಟ್ಟಿ, ದಾಸ್ತಾನು ಮಾಹಿತಿ ಫಲಕ ಹಾಕುವುದೂ ಸಹ ಕಡ್ಡಾಯ. ಅಲ್ಲದೇ ಮಾನವೀಯ ನೆಲೆಯಲ್ಲಿ ಪರಸ್ಪರ ಸಹಕಾರ ಮತ್ತು ಪಾರದರ್ಶಕತೆಯಿಂದ ಪರಿಹಾರ ಒದಗಿಸಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ, ಆಹಾರ ಇಲಾಖೆಯ ಜಂಟಿ ನಿರ್ದೇಶಕ ವಿನೋದಕುಮಾರ ಹೆಗ್ಗಳಗಿ, ಪೊಲೀಸ್ ಇಲಾಖೆ, ಆಹಾರ ಇಲಾಖೆ, ಅಳತೆ-ಮಾಪನ ಇಲಾಖೆ, ಬಂಕ್ ಮಾಲೀಕರು, ಆಟೋ ಚಾಲಕರು ಇದ್ದರು.

ಸರಬರಾಜು ಆಧರಿಸಿ ವಿತರಣೆ

ಎಲ್‌ಪಿಜಿ, ಸಿಎನ್‌ಜಿ ಪೂರೈಕೆಯಲ್ಲಿ ವಿಳಂಬವಾಗುತ್ತಿದೆ. ಗ್ಯಾಸ್ ಬಳಕೆದಾರರು ಮತ್ತು ಬಂಕ್ ಮಾಲೀಕರಿಗೆ ತೊಂದರೆ ಕೂಡ ಆಗಿದೆ. ಈ ಸಮಸ್ಯೆಯು ಕೆಲವೇ ದಿನಗಳಲ್ಲಿ ಪರಿಹಾರವಾಗಲಿದೆ. ಆಟೋ ಚಾಲಕರು ಸಹಕಾರ ನೀಡಬೇಕು. ಎಲ್‌ಪಿಜಿ, ಸಿಎನ್‌ಜಿ ಗ್ಯಾಸ್ ಸರಕಾರಿ ಸ್ವಾಮ್ಯದ ಕಂಪನಿಗಳಲ್ಲಿ ದಾಸ್ತಾನಿದೆ. ಸರಬರಾಜು ಆಧರಿಸಿ ವಿತರಿಸಲಾಗುವುದು. ಯಾರು ಆತಂಕ, ಭಯ ಪಡುವ ಅಗತ್ಯವಿಲ್ಲ. ಕೇಂದ್ರ-ರಾಜ್ಯ ಸರ್ಕಾರವು ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸುತಿರುವುದಾಗಿ ಜಿಲ್ಲಾಧಿಕಾರಿ ಸ್ನೇಹಲ್ ಆರ್. ತಿಳಿಸಿದರು.

- ಎಲ್‌ಪಿಜಿ, ಸಿಎನ್‌ಜಿ ಬಂಕ್ ಮಾಲೀಕರು ಮತ್ತು ಸಿಬ್ಬಂದಿ ಗ್ರಾಹಕರು ಮತ್ತು ಜನರೊಂದಿಗೆ ಸಹನೆಯಿಂದ ವರ್ತಿಸಿ, ವಿನಯದಿಂದ ಮಾತನಾಡಬೇಕು
- ಎಲ್ಲ ಬಂಕ್‌ಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯ ಕಡ್ಡಾಯವಾಗಿ ಒದಗಿಸಿ
- ಬಂಕ್‌ಗಳಲ್ಲಿ ಶುದ್ಧ ಕುಡಿಯುವ ನೀರು, ಸ್ವಚ್ಛ ಶೌಚಾಲಯ, ಗಾಳಿ ತುಂಬುವ ವ್ಯವಸ್ಥೆ ಹಾಗೂ ಅಗತ್ಯ ಸುರಕ್ಷತಾ ಕ್ರಮಗಳನ್ನು ಸಮರ್ಪಕವಾಗಿ ಕಲ್ಪಿಸಿ
- ಜನರಿಗೆ ತೊಂದರೆ ಉಂಟಾಗದಂತೆ ಬಂಕ್ ಮಾಲೀಕರು ಕ್ರಮ ವಹಿಸಲು ಸೂಚಿಸಿದ ಜಿಲ್ಲಾಧಿಕಾರಿ ಸ್ನೇಹಲ್ ಆರ್.

ಮಹಿಳಾ ಸಾಹಿತ್ಯ ಹೊಸ ದಿಕ್ಕಿನತ್ತ ಸಾಗಲಿ

ಧಾರವಾಡ: ಶ್ರೀ ಕ್ಷೇತ್ರ ಧರ್ಮಸ್ಥಳ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಮಹಿಳಾ ಗ್ರಂಥ ಬಹುಮಾನ ಪ್ರದಾನ ಸಮಾರಂಭವು ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಂಗಣದಲ್ಲಿ ನಡೆಯಿತು.

ಸಾಹಿತಿಗಳಾದ ಸವಿತಾ ನಾಗಭೂಷಣ, ಡಾ.ಕ್ಯಾತ್ಯಾಯಣಿ ಮತ್ತು ಡಾ. ಕೆ.ಎಸ್. ಕವಿಗಾ ಅವರಿಗೆ ತಲಾ ರೂ.15 ಸಾವಿರ ನಗದು, ಸ್ಮರಣಿಕೆ ಒಳಗೊಂಡ ರತ್ನಮ್ಮ ಹೆಗ್ಗಡೆ ಗ್ರಂಥ ಬಹುಮಾನ ಪ್ರದಾನಿಸಲಾಯಿತು.

ಪ್ರಶಸ್ತಿ ಪ್ರದಾನಿಸಿದ ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ. ಅಜಿತ ಪ್ರಸಾದ ಮಾತನಾಡಿ, ಮಾತೋಶ್ರೀ ರತ್ನಮ್ಮ ಅವರು ಒಂದು ಕುಟುಂಬದ ಶಕ್ತಿ ಅಲ್ಲ, ಸಾಹಿತ್ಯ ಮತ್ತು ಸಂಸ್ಕೃತಿ ಪೋಷಕರಾಗಿದ್ದರು. ಮಹಿಳಾ ಸಾಹಿತ್ಯ ಹೊಸ ದಿಕ್ಕಿನಲ್ಲಿ ಸಾಗುತ್ತಿದೆ. ಮನೆಯ ಚೌಕಟ್ಟನ್ನು ಮೀರಿಯೂ ಜಾಗತಿಕ ವಿದ್ಯಮಾನಗಳಿಗೆ ಸ್ಪಂದಿಸುವ ಲೇಖಕಿಯರ ಸಂಖ್ಯೆ ಹೆಚ್ಚುತ್ತಿರುವುದು ಆಶಾದಾಯಕ ಬೆಳವಣಿಗೆ ಎಂದರು. ಲೇಖಕಿಯರು ತಮ್ಮ ಬರವಣಿಗೆ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕೆಲಸ ಮಾಡಬೇಕು. ಮಹಿಳೆಯರ ದೃಷ್ಟಿಕೋನದಿಂದ ಮೂಡಿಬರುವ ಸಾಹಿತ್ಯ ಸಮಾಜದಲ್ಲಿ ಸಂವೇದನೆ ಮೂಡಿಸಲಿದೆ. ಲೇಖಕಿಯರು ಕೇವಲ ಕಲ್ಪನಾ ಲೋಕಕ್ಕೆ ಸೀಮಿತವಾಗದೆ, ಸಮಾಜದ ವಾಸ್ತವ ಮತ್ತು ವೈಚಾರಿಕತೆ ಸಾಹಿತ್ಯದ ಮೂಲಕ ಪ್ರತಿಬಿಂಬಿಸಬೇಕು ಎಂದರು.

> **ಬರವಣಿಗೆ ಎಂಬುದು ಕೇವಲ ಅಕ್ಷರಗಳ ಜೋಡಣೆಯಲ್ಲ, ಅದೊಂದು ಬದುಕಿನ ಅನುಭವಗಳ ಸಾಕ್ಷಾತ್ಕಾರ. ಮಹಿಳೆಯರು ಸಾಹಿತ್ಯದ ಮೂಲಕವಾಗಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಬೇಕಿದೆ.**
> ■ ಡಾ.ಅಜಿತ ಪ್ರಸಾದ, ಕಾರ್ಯದರ್ಶಿ, ಜನತಾ ಶಿಕ್ಷಣ ಸಮಿತಿ, ಧಾರವಾಡ

ಬಹುಮಾನ ಸ್ವೀಕರಿಸಿದ ಲೇಖಕಿ ಸವಿತಾ ನಾಗಭೂಷಣ, ಮಹಿಳಾ ಸಾಹಿತ್ಯ ರಚನೆ ಸವಾಲು ಪ್ರಸ್ತಾಪಿಸಿ, ಹೆಣ್ಣುಮಕ್ಕಳಿಗೆ ಬರವಣಿಗೆ ಕೇವಲ ಹವ್ಯಾಸ ಅಲ್ಲ, ಅವರ ಅಸ್ತಿತ್ವದ ಹುಡುಕಾಟ. ಅಕ್ಷರ ಕಟ್ಟುವ ಕಾರ್ಯಕವಾಗಿದೆ ಎಂದರು. ಕವಿಸಂ ಉಪಾಧ್ಯಕ್ಷ ಶ್ರೀನಿವಾಸ ವಾಡಪ್ಪಿ ಅಧ್ಯಕ್ಷತೆ ವಹಿಸಿದ್ದರು. ಕವಿಸಂ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಸತೀಶ ತುರಮರಿ, ವೀರಣ್ಣ ಒಡ್ಡೀನ್, ಡಾ.ಧನವಂತ ಹಾಜವಗೋಳ, ಡಾ. ಶೈಲಜಾ ಅಮರಶೆಟ್ಟಿ, ಗೌರಮ್ಮ ಗೋರೆಬಾಳ ಇತರರಿದ್ದರು.



ರಸ್ತೆ ಕಾಮಗಾರಿಗೆ ಜೋಶಿ ಭೂಮಿಪೂಜೆ

ಹುಬ್ಬಳ್ಳಿ: ಇಲ್ಲಿನ ಗೋಕುಲ್ ರೋಡ್ ಅಕ್ಷಯ್ ಕಾಲೋನಿಯಿಂದ ಸಿದ್ಧಾರೂಢ ಮಠದ ಆರ್‌ಎನ್ ಶೆಟ್ಟಿ ಮುಖ್ಯ ರಸ್ತೆ ಕಾರಣಾಂತರಗಳಿಂದ ಅಪೂರ್ಣಗೊಂಡಿರುವ ರಸ್ತೆಗೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಬಾಕಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ಸಲ್ಲಿಸಿದರು.

ನಂತರ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಅನುದಾನದಲ್ಲಿ ಶಾಸಕ ಮಹೇಶ ಟೆಂಗಿನಕಾಯಿ ಒತ್ತಾಯದ ಮೇರೆಗೆ ಮಂಜೂರು ಮಾಡಿಸಿ ಈಗ ಪೂರ್ಣಗೊಳಿಸಲು ಪೂಜೆಯನ್ನು ಮಾಡಿದ್ದೇವೆ. ಹುಬ್ಬಳ್ಳಿ-ಧಾರವಾಡದಲ್ಲಿನ ಒಳ ರಸ್ತೆಗಳನ್ನು ಮಾಡಲು ನಮಗೆ ಬರುವುದಿಲ್ಲ, ಸೆಂಟ್ರಲ್ ಕ್ಷೇತ್ರದಲ್ಲಿ ಶಾಸಕ ಮಹೇಶ ಟೆಂಗಿನಕಾಯಿ ಅವರು ಶಾಸರಾಗಿ ಒಳ್ಳೆಯ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದಾರೆ ಎಂದರು.

ಶಾಸಕರಾದ ಮಹೇಶ ಟೆಂಗಿನಕಾಯಿ ಮಾತನಾಡಿ, ಕೇಂದ್ರ ಸರ್ಕಾರದ ಅನುದಾನದಿಂದ ಈ ರಸ್ತೆಯ ಕಾಮಗಾರಿ ಪೂರ್ಣಗೊಳ್ಳುತ್ತಿದ್ದು ಪ್ರಹ್ಲಾದ ಜೋಶಿ ರವರಿಗೆ ಧನ್ಯವಾದಗಳು ಸಲ್ಲಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಸದಸ್ಯರಾದ ಮಾಜಿ ಮಹಾಪೌರ ಪ್ರಕಾಶ್ ಕ್ಯಾರ ಕಟ್ಟಿ , ಪಾಲಿಕೆಯ ಸದಸ್ಯ ಸೆಂಥಿಲ್ ಕುಮಾರ್, ಸೆಂಟ್ರಲ್ ಕ್ಷೇತ್ರದ ಉಪಾಧ್ಯಕ್ಷ ಕೃಷ್ಣ ಗಂಡ ಗಾಳೇಕರ್, ಸಿದ್ದೇಶ್ ಕಬಾಡದ, ಲೀಲಾವತಿ ಪಾಸ್ತೆ, ರೇಖಾ ಸರ್ಜನ್ ಮೊದಲಾದವರಿದ್ದರು.

ಬಾರದ ಅನುದಾನ

ರಾಜ್ಯ ಸರ್ಕಾರದಿಂದ ಅನುದಾನ ಬರುತ್ತಿಲ್ಲ. ಮಹಾನಗರ ಪಾಲಿಕೆಗೆ ನೌಕರರಿಗೆ ಸಂಬಳ ನೀಡಲು ಕೂಡಾ ಬಹಳ ಕಷ್ಟವಿದೆ. ಇಂತಹ ಸಂದರ್ಭದಲ್ಲಿ ಶಾಸಕ ಮಹೇಶ ಟೆಂಗಿನಕಾಯಿ ಅವರ ಮನವಿ ಮೇರೆಗೆ ಕೇಂದ್ರ ಸರ್ಕಾರದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.



ಭಗವದ್ಗೀತೆ ಓದಿನಿಂದ ಸುಂದರ ಬದುಕು ಸಾಧ್ಯ: ಸಾಗರೇಕರ

ಅಳ್ನಾವರ: ಹಿಂದು ಧರ್ಮದ ಜಾಗೃತಿ ಎಲ್ಲರಲ್ಲಿ ಮೂಡಬೇಕು. ಪವಿತ್ರ ಭಗವದ್ಗೀತೆ ಪ್ರತಿ ಮನೆಯಲ್ಲಿ ಇಟ್ಟುಕೊಂಡು ಓದುವ ಸಂಪ್ರದಾಯ ಬೆಳೆಸಬೇಕು ಎಂದು ಹಿಂದೂ ಏಕತಾ ಸಂಘಟನೆಯ ಮುಖ್ಯಸ್ಥ ಮಹಾದೇವ ಸಾಗರೇಕರ ಹೇಳಿದರು.

ಇಲ್ಲಿನ ಹಿಂದೂ ಜಾಗರಣಾ ವೇದಿಕೆ ಸಂಘಟನೆಯವರು ಕಲ್ಮೇಶ್ವರ ದೇವಸ್ಥಾನದಲ್ಲಿ 11 ದಿನಗಳಿಂದ ಹಮ್ಮಿಕೊಂಡ ಭಗವದ್ಗೀತೆ ಪಾರಾಯಣ ಕಾರ್ಯಕ್ರಮದ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಆಧ್ಯಾತ್ಮಿಕ ಚಿಂತನೆಗಳಲ್ಲಿ ದಿವ್ಯ ಶಕ್ತಿ ಅಡಗಿದೆ. ಸನಾತನ ಧರ್ಮಾಚರಣೆ ಪದ್ಧತಿ ರೂಢಿಸಿಕೊಳ್ಳಬೇಕು ಎಂದರು.

ಇಸ್ಕಾನ್ ದೇವಾಲಯದ ಬಹುಳಾಶ್ವದಾಸ ಪ್ರಭು ಆಶೀರ್ವಚನ ನೀಡಿ, ದಾಸ್ ಸಾಹಿತ್ಯ. ಭಗವದ್ಗೀತೆ ಓದಿನಿಂದ ಬೌದ್ಧಿಕ , ಆಧ್ಯಾತ್ಮಿಕ ಕ್ರಿಯೆ ಚುರುಕುಗೊಳ್ಳುತ್ತದೆ . ಭಕ್ತಿಯಲ್ಲಿ ನಂಬಿಕೆ ಇಡಬೇಕು. ವಚನಗಳ ಅರ್ಥ ಅರಿತುಕೊಳ್ಳಬೇಕು ಎಂದರು.

ಪೂರ್ಣಿಮಾ ಮುತ್ನಾಳ ಭಗವದ್ಗೀತೆ ಪಾರಾಯಣ ನಡೆಸಿಕೊಟ್ಟರು. ಮಕ್ಕಳು, ಹಿರಿಯರು, ಮಾತಾ-ಭಗಿನಿಯರು ಇದ್ದರು. ಆರಂಭದಲ್ಲಿ ಮುಖ್ಯ ಬೀದಿಯಲ್ಲಿ ಶೋಭಾ ಯಾತ್ರೆ ಸಂಚರಿಸಿ ಹರೇ ರಾಮ ನಾಮ ಜಪಿಸಲಾಯಿತು. ಗೀತಾ ಆರತಿ ಹಾಡಲಾಯಿತು. ಮಕ್ಕಳಿಗೆ ಉಚಿತವಾಗಿ ಭಗವದ್ಗೀತೆ ಪುಸ್ತಕ ಹಂಚಲಾಯಿತು. ಭಜನೆ, ಕೀರ್ತನೆ, ಪ್ರಸಾದ ವಿತರಣೆ ಜರುಗಿತು. ಭಕ್ತ ಸೇವಕದಾಸ್ ಉಪನ್ಯಾಸ ನೀಡಿದರು. ಹಿರಿಯರಾದ ಪಾಂಡುರಂಗ ರೇವಣಕರ, ಉದಯ ಶಿಬ್ರೀಕೆರಿ, ಪುಂಡಲಿಕ ಪಾರ್ದಿ, ರಾಜು ಕರ್ಲೇಕರ, ಜಯಶ್ರೀ ಉಡುಪಿ, ಸಚಿನ ಲಿಂಗನಮಠ, ಅರ್ಜುನ ಬೆನ್ನಳಕರ, ನಾರಾಯಣ ಪಟೇಲ, ಪರಶುರಾಮ ಕಾಕತ್ಕರ್, ಸುನಿಲ ಸಾಗರೇಕರ, ಅರ್ಚಕ ಪಾಳೇಕರ ಇದ್ದರು.



ಬಾಲ ಭಾರತಿ ಸಂಸ್ಕಾರ ಸುಧಾ ಬೇಸಿಗೆ ಸಂಸ್ಕಾರ ಶಿಬಿರದ ಸಮಾರೋಪ

ಕುಂದಗೋಳ: ಶೃಂಗೇರಿ ಶಾರದಾ ಪೀಠದ ಪರಮಾನುಗ್ರಹದೊಂದಿಗೆ ಪಟ್ಟಣದ ಶಾರದಾ ಶಂಕರ ಆಚಾರ್ಯ ಮಠದಲ್ಲಿ ಆಯೋಜಿಸಲಾದ ಬಾಲ ಭಾರತಿ ಸಂಸ್ಕಾರ ಸುಧಾ ಬೇಸಿಗೆ ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭವು ಭಾನುವಾರ ವಿಜೃಂಭಣೆಯಿಂದ ನೆರವೇರಿತು.

ಶಿಬಿರದಲ್ಲಿ ಭಾಗವಹಿಸಿದ್ದ ಎಪ್ಪತ್ತಕ್ಕೂ ಹೆಚ್ಚು ಮಕ್ಕಳಿಗೆ ವಿವಿಧ ಸ್ತೋತ್ರಗಳು, ಭಾರತೀಯ ಇತಿಹಾಸ, ಸಂಸ್ಕೃತಿ ಹಾಗೂ ನೈತಿಕ ಮೌಲ್ಯಗಳ ಕುರಿತು ತರಬೇತಿ ನೀಡಲಾಯಿತು. ಪ್ರಧಾನ ಗುರುಗಳಾಗಿ ವೇದಬ್ರಹ್ಮ ಹನುಮಂತ ಭಟ್ ಜೋಶಿ ಹಾಗೂ ಸಹಾಯಕ ಗುರುಗಳಾಗಿ ರಾಮಚಂದ್ರ ಜೋಶಿ ಮಕ್ಕಳಿಗೆ ಪಾಠ ಬೋಧಿಸಿದರು.

ಪ್ರಧಾನ ಗುರುಗಳಾಗಿ ವೇದಬ್ರಹ್ಮ ಹನುಮಂತ ಭಟ್ ಜೋಶಿ ಮಾತನಾಡಿ, ಶಿಬಿರದ ಸಮಗ್ರ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದ್ದು, ಮಕ್ಕಳಲ್ಲಿನ ಶಿಸ್ತು, ಸಂಸ್ಕಾರ ಮತ್ತು ಅಧ್ಯಾತ್ಮದ ಅರಿವು ವೃದ್ಧಿಯಾಗಿರುವುದಾಗಿ ಹರ್ಷ ವ್ಯಕ್ತಪಡಿಸಿದರು.



ಪಟ್ಟಣದಲ್ಲಿ ನಡೆದ ಶಿಬಿರದಲ್ಲಿ ಹಾಜರಾದ ಪೋಷಕರು ಹಾಗೂ ಸ್ಥಳೀಯರು ಶಿಬಿರದ ಆಯೋಜನೆಯನ್ನು ಮೆಚ್ಚುಗೆ ವ್ಯಕ್ತಪಡಿಸಿದರು.

ಪಿಯುಸಿ-2: ಜೈ.ಬಿ.ಅಣ್ಣಿಗೇರಿ ಕಾಲೇಜು ಸಾಧನೆ

ಧಾರವಾಡ: ನಗರದ ವೈ.ಬಿ.ಅಣ್ಣಿಗೇರಿ ವಿಜ್ಞಾನ ಹಾಗೂ ವಾಣಿಜ್ಯ ಪದವಿಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಪಿಯುಸಿ-2 ಪರೀಕ್ಷೆಯಲ್ಲಿ ಶೇ.97 ಫಲಿತಾಂಶ ಪಡೆದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಗುಲ್ ದರ್ಶನ ನಾಯಕ್ (585) ಪ್ರಥಮ , ವಾಣಿಜ್ಯ ವಿಭಾಗದಲ್ಲಿ 585 ಅಂಕ ಪಡೆದ ದಿಶಾ ಭಟ್ ಮತ್ತು ಶಿಫಾ ಖಾಜಿ ಕಾಲೇಜಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಪರೀಕ್ಷೆ ಬರೆದ 360 ವಿದ್ಯಾರ್ಥಿಗಳಲ್ಲಿ 80 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 217 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ತೇಜಸ್ವಿನಿ ಹತ್ತಿಮತ್ತೂರ ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರದಲ್ಲಿ 100ರಷ್ಟು ಅಂಕ ಪಡೆದಿದ್ದಾಳೆ. ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆ ಬರೆದ 94 ವಿದ್ಯಾರ್ಥಿಗಳಲ್ಲಿ 37 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 49 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ನಂದಿತಾ ವಾಲಿಕಾರ (576), ಗುಲ್ ವಿಶ್ವಾ ನಾಯಕ (576), ಮಹಾಂತೇಶ ಡೊಳ್ಳಿನ (575), ನಂದಾ ಉಜ್ಜಯಿನಿಕೊಪ್ಪ (575), ವೈಷ್ಣವಿ ಚನ್ನಪ್ಪಗೌಡರ (574), ತೇಜಸ್ವಿನಿ ಸಂಶಿ (573), ಭುವಿಕಾ ಹನಮಕ್ಕನವರ (573), ನಂದೀಶ ತಿರ್ಲಾಪೂರ (572), ಕಿರಣಕುಮಾರ ನಾಗಬಾ (570), ಮಧುಶ್ರೀ ಸಂಬಾಲಮಠ (564), ಚಂದ್ರಪ್ರಿಯ ಉಪ್ಪಾರ (563), ಬಸವರಾಜ ಗುಲೇದಕೊಪ್ಪ (562), ವಿನುತಾ ಅಣ್ಣಿಗೇರಿ (562), ಭೂಷಣ ಇಸ್ಲಾಪೂರ (562), ಪ್ರವೀಣಗೌಡ ನಿಸ್ಸಿಮ್ಮನವರ (568), ಶರಾವತಿ ಮಾಲಶೆಟ್ಟಿ (566), ಇಂಚರಾ ಹೊನ್ನಳ್ಳಿ (555), ಗೌತಮ (552), ಪಲ್ಲವಿ ಪೂಜಾರ (552), ಆದರ್ಶ ಆಗೆರ (551), ಜಗದೀಶ ಭೋರಶೆಟ್ಟರ (550), ಮಧು ಬೈರಣ್ಣವರ (548) ಅಂಕ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ವಿಕಾಸ ಸೊಬರದ (584), ಶಿವಾನಿ ಜುಜರೆ (582), ಸೌಜನ್ಯ ಪಾಟೀಲ (579), ಅಭಿಷೇಕ ಸಿ (573), ಸೃಷ್ಟಿ ಶಿವಬಸಯ್ಯನವರ (572), ಭುವನೇಶ್ವರಿ ಆರ್ ಪಾಟೀಲ (572), ದರ್ಶಿನಿ ಬಳ್ಳಾರಿ (570), ಆಶಾ ಮಾಳಿ (568), ಪೂಜಾ ಸಾದರ (568), ಶಾಂತಲಾ ಕೋರಿ (567), ಅಭಿರಥ ಅಯ್ಯರ (563), ನಿರಂಜನ ಜೋರಾಪೂರ (559), ಕೀರ್ತಿ ಹೊಸಮನಿ (559), ಬಾಗೇಶ ಯಾದವ (559), ವಚನಾ (559), ಭುವನೇಶ್ವರಿ ಮಂಗೋಳಿ (558), ಭರತಕುಮಾರ (558), ಶ್ರೇಯಸ್ ವಾಲಿಕಾರ (554), ಸರ್ವೇಶ ಎಮ್ (554), ಶಿವಾ ಮೊಕಾಶಿ (553), ಓಂಕಾರ (552) ಅಂಕ ಗಳಿಸಿದ್ದಾರೆ.



ಉಚಿತ ಸಾಮೂಹಿಕ ವಿವಾಹದಿಂದ ಸೌಹಾರ್ದತೆ: ಅಸೂಟಿ

ನವಲಗುಂದ: ಸತೀಶ ಜಾರಕಿಹೊಳಿ ಅವರ ಅಭಿಮಾನಿ ಬಳಗ ಹಾಗೂ ವಿನೋದ ಅಸೂಟಿ ಅವರ ಅಭಿಮಾನಿ ಬಳಗದ ವತಿಯಿಂದ ನವಲಗುಂದ ತಾಲೂಕಿನ ಶಾನವಾಡ ಗ್ರಾಮದಲ್ಲಿ 2ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಿತು.

ಕೆಪಿಸಿಸಿ ಸದಸ್ಯ ವಿನೋದ ಅಸೂಟಿ ಮಾತನಾಡಿ, ಈ ಮಹತ್ವದ ಕಾರ್ಯಕ್ರಮವು ಸಮಾಜದಲ್ಲಿ ಸಮಾನತೆ, ಸಹಕಾರ ಮತ್ತು ಸೌಹಾರ್ದತೆಯ ಸಂದೇಶವನ್ನು ಸಾರುತ್ತದೆ. ಸಾಮೂಹಿಕ ವಿವಾಹದಲ್ಲಿ ಸಂಸಾರ ಜೀವನಕ್ಕೆ ಪಾದಾರ್ಪಣೆ ಆದರ್ಶ. ಇದು ಕುಟುಂಬಕ್ಕೆ ಮಾತ್ರವಲ್ಲದೇ ದೇಶದ ಅಭಿವೃದ್ಧಿಗೂ ಸಹಕಾರಿಯಾಗುತ್ತದೆ ಎಂದರು.

ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಡಾ.ಪ್ರಸನ್ನಾನಂದಶ್ರೀಗಳು ಮಾತನಾಡಿ, ಸತೀಶ ಜಾರಕಿಹೊಳಿ ಹಾಗೂ ವಿನೋದ ಅಸೂಟಿ ಅಭಿಮಾನಿ ಬಳಗದವರು 2ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಸ್ಮರಣೀಯವಾದದ್ದು. ಮದುವೆ ಪ್ರತಿಯೊಬ್ಬರ ಜೀವನದ ಮಹತ್ತರ ಘಟ್ಟ. ಇದಕ್ಕಾಗಿ ಅನಗತ್ಯ ಹಣ ವ್ಯರ್ಥ ಮಾಡುವ ಅಗತ್ಯವಿಲ್ಲ. ಸಾಮೂಹಿಕ ವಿವಾಹ ಎಂದರೆ ಅದು ಕೇವಲ ಬಡ ಜನರ ಮದುವೆ ಕಾರ್ಯಕ್ರಮ ಎಂದು ಭಾವಿಸುವುದು ತಪ್ಪು. ಪವಿತ್ರವಾದ ಧಾರ್ಮಿಕ ಕ್ಷೇತ್ರ, ಸಹಸ್ರಾರು ಭಕ್ತರ ಮತ್ತು ಮಠಾಧೀಶರ ಆಶೀರ್ವಾದದೊಂದಿಗೆ ಸಾಮೂಹಿಕ ವಿವಾಹ ಬಂಧನಕ್ಕೊಳಗಾಗುವ ಭಾಗ್ಯ ಜೀವನದ ಸಾರ್ಥಕತೆಯ ಕ್ಷಣವಾಗಿದೆ ಎಂದರು.

ಶಾಸಕ ಎನ್.ಎಚ್.ಕೋನರಡ್ಡಿ ಮಾತನಾಡಿ, ಹೊಸ ದಾಂಪತ್ಯಕ್ಕೆ ಕಾಲಿಟ್ಟ ವಧು-ವರರು ಪರಸ್ಪರ ಒಬ್ಬರೊನ್ನೊಬ್ಬರು ಅರಿತು ಸಹಬಾಳ್ವೆ ನಡೆಸಿದಾಗಲೇ ದಾಂಪತ್ಯ ಜೀವನಕ್ಕೆ ಉತ್ತಮ ಅರ್ಥ ಸಿಗುತ್ತದೆ ಎಂದರು.

ಈ ಸಂದರ್ಭದಲ್ಲಿ ನವಲಗುಂದ ಗವಿಮಠದ ಬಸವಲಿಂಗ ಶ್ರೀಗಳು, ಸಂಸ್ಥಾನ ಪಂಚಗೃಹ ಹಿರೇಮಠ ನವಲಗುಂದ ಉತ್ತರಾಧಿಕಾರಿ ವೀರಬಸವದೇವರು, ಧಾರವಾಡ ಜಿಲ್ಲಾ ವಾಲ್ಮೀಕಿ ಮಹಾಸಭಾ ಅಧ್ಯಕ್ಷರಾದ ಮೋಹನ ಗುಡಿಸಲಮನಿ, ವರ್ಧಮಾನಗೌಡ ಹಿರೇಗೌಡ್ರ, ಸದುಗೌಡ ಪಾಟೀಲ, ಮಂಜುನಾಥ ವೀರಪ್ಪನವರ ಸೇರಿದಂತೆ ವಾಲ್ಮೀಕಿ ಸಮಾಜದ ಮುಖಂಡರು, ಶಾನವಾಡ ಗ್ರಾಮಸ್ಥರು ಉಪಸ್ಥಿತರಿದ್ದರು.




BVVS
ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ, ಬಾಗಲಕೋಟೆ
ಸ್ಥಾಪನೆ : 1906
ಸತತವಾಗಿ ಅತ್ಯುತ್ತಮ ಫಲಿತಾಂಶ ನೀಡುತ್ತಿರುವ ಉತ್ತರ ಕರ್ನಾಟಕದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ
7th STATE RANK
SAKSHI M 593/600
2nd DISTRICT RANK
Science Section
DISTINCTION
Science-139
Commerce-37
Arts-23
11th STATE RANK
VEENA H 589/600
7th DISTRICT RANK
DISTINCTION
Science-60
11th STATE RANK
ANUSHA AKKERI 589/600
7th DISTRICT RANK
ARTS , SCIENCE AND COMMERCE INDEPENDENT PU COLLEGE, VIDYAGIRI
BASAVESHWAR SCIENCE P.U. COLLEGE, BAGALKOTE
ARTS , SCIENCE AND COMMERCE INDEPENDENT PU COLLEGE, VIDYAGIRI
Science Section
POOJA B 582
VINUTA G 581
VINUTA B 579
ANIL N 578
PUSHPA B 577
JYOTSNA M 577
PRASHANTK 576
NINGAPPA N 576
ARUNDHATIH 574
BASAVARAJ D 574
JYOTI S 574
YASHAVANT L 571
SANJANA M 570
DUNDAVVA C 570
CHINMAYI H 569
MANJUNATH H 569
PAVITRA T 568
IRAMMA C 566
MALLIKARJUNAYYA H 565
PRAGATI K 564
RASHMI H 564
MADAN Y 562
NAHIDAAFASHA M 562
SHRAVANA P 562
Commerce Section
RADHIKA S 579
JAKKAVVA K 577
TEJASHWINI D 577
AKSHATA A 574
ADITI S 573
ABHINAV K 571
NIVEDITA S 570
Arts Section
SHWETA H 579
REKHA L 570
TEJASHWINI S 561
VINOD L 561
BHAGAMMA K 555
HANAMANTAGOUDA G 555
BASAVESHWAR SCIENCE P.U. COLLEGE, BAGALKOTE
MALAPPA A 581
PRASHANT B 576
VIJAY S. L 576
SHRUSTI G 575
LAXMI B 574
MANJUNATH J 573
DEEPA K 565
JATTEPPA 565
MOUNESH 565
SHILPA L 564
SHAGUPTANAZ B 563
ANAND L 562
AISHWARYA H 562
BASAVESHWAR P.U. ARTS COLLEGE, BAGALKOTE
PRIYANKA N 587
LAKASHMI P 563
POOJA K 555
POOJA N 550
BHOOMIKA M 547
JAGADISH M 545
TAGEMMA T 532
KAVERI H 527
SACHIN K 524
SWATI T 521
BASAVESHWAR PU COMMERCE COLLEGE, BAGALKOTE
MANTHAN P 580
SHRUTI K 578
KRISHA P 576
LAKSH A 576
RANJITA D 574
SHARAVANI 571
SUNANDA V 564
CHINMAYI P 564
VARSHA B 564
NIRAV G 560
BAGALKOT UNIVERSITY RANK HOLDERS
Basaveshwar Arts College
Anil D.Teggi 1 Rank MA Kannada
Laxman B. M 2 Rank MA Kannada
Manjula Mutturu 2 Rank MA English
Basaveshwar Commerce College
Nishmita Choori 1 Rank M.Com
Asha Gadadinni 2 Rank M.Com.
Basaveshwar Science College
Rajeshwari D. H 1 Rank M.Sc. Chemistry
Pratibha S. Patil 2 Rank M.Sc. Chemistry
Pallavi Tambur 3 Rank M.Sc. Chemistry
Sanmati J.K 1 Rank M.Sc. Physics
Shwetha B. N 2 Rank M.Sc. Physics
Shashista R. K 3 Rank M.Sc. Physics
B.Ed. College
Vajrakumar K 1 Rank M.Ed
BIMS (MBA) College
Sathwika 1 Rank
Bhagyashree B 2 Rank
Priyanka S G 3 Rank
Basaveshwar College of Physical Education Vidyagiri, Bagalkot
Gururaj Goudar 1 Rank M.P.Ed
Sunil Kanthi 2 Rank M.P.Ed
Arunkumar Y 3rd Rank M.P.Ed
Rajakumar A 1 Rank B.P.Ed
Anand Teli 2 Rank B.P.Ed
Vishvanath S A 3 Rank B.P.Ed
S R. Kanthi College Mudhol
Aayisha Alas 1 Rank M.A English
Akkamahadevi Women's College, Bagalkot
Sangeeta J 5th Rank M.Sc Botany
ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯ
9448876176, 9731363148, 9480596549, 9448302144
BVVS VIDYAGIRI
SCIENCE COLLEGE, BAGALKOTE
ARTS COLLEGE, BAGALKOTE
COMMERCE COLLEGE, BAGALKOTE
Shri. Gurubasava S. Sulibhavi
Chairman, College Governing Council
B.V.V.Sangha, Bagalkote
Shri. M. N. Athani
Honorary Secretary
B.V.V.Sangha, Bagalkote
Dr. V.C. Charantimath
Chairman
B.V.V.Sangha, Bagalkote

ಸರ್ಕಾರದ ತೆರಿಗೆ ಸುಲಿಗೆಗೆ ಕೊನೆಯಿಲ್ಲವೇ?: ಛಲವಾದಿ

ಬೆಂಗಳೂರು: ಕರ್ನಾಟಕದಲ್ಲಿ ಎಲೆಕ್ಟ್ರಿಕ್ ವಾಹನಗಳಿಗೆ ರಸ್ತೆ ತೆರಿಗೆ ವಿನಾಯ್ತಿಯನ್ನು ಹಿಂಪಡೆದಿರುವುದನ್ನು ಖಂಡಿಸಿರುವ ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸರ್ಕಾರದ ತೆರಿಗೆ ಸುಲಿಗೆಗೆ ಕೊನೆಯಿಲ್ಲವೇ? ಎಂದು ಪ್ರಶ್ನಿಸಿದ್ದಾರೆ.



ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಕರ್ನಾಟಕದ ಜನತೆಗೆ ಬೆಲೆ ಏರಿಕೆಯ ಮೇಲೆ ಬೆಲೆ ಏರಿಕೆಯ ಬರೆ ಎಳೆಯುತ್ತಾ ಸಂಕಷ್ಟದ ಗ್ಯಾರಂಟಿ ನೀಡುತ್ತಿರುವ ಕಾಂಗ್ರೆಸ್ ಸರ್ಕಾರ, ಈಗ ಪರಿಸರ ಸ್ನೇಹಿ ಎಲೆಕ್ಟ್ರಿಕ್ ವಾಹನ(ಇವಿ)ಗಳ ಮೇಲೂ ತನ್ನ ಬೆಲೆ ಏರಿಕೆಯ ಕಣ್ಣು ಹಾಕಿದೆ. ಕಳೆದ ಎಂಟು ವರ್ಷಗಳಿಂದ ಇದ್ದ ಶೇ.100 ರಸ್ತೆ ತೆರಿಗೆ ವಿನಾಯಿತಿಗೆ ರಾಜ್ಯ ಸರ್ಕಾರ ಈಗ ಅಧಿಕೃತವಾಗಿ ತಿಲಾಂಜಲಿ ಹಾಡಿದೆ! ಎಂದಿದ್ದಾರೆ.

ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ... ಎನ್ನುವಂತೆ, ಪರಿಸರ ಉಳಿಸುವ ಮಾತುಗಳನ್ನಾಡುವ ಸರ್ಕಾರ, ತನ್ನ ಬೊಕ್ಕಸ ತುಂಬಿಸಿಕೊಳ್ಳಲು ಪರಿಸರ ಸ್ನೇಹಿ ವಾಹನಗಳನ್ನೇ ದುಬಾರಿ ಮಾಡುತ್ತಿರುವುದು ವಿಪರ್ಯಾಸವೇ ಸರಿ ಎಂದು ಟೀಕಿಸಿದ್ದಾರೆ. ಕರ್ನಾಟಕದಲ್ಲಿ 2016 ರಿಂದ ಎಲೆಕ್ಟ್ರಿಕ್ ವಾಹನಗಳ ಬಳಕೆಯನ್ನು ಪ್ರೋತ್ಸಾಹಿಸಲು ಎಲ್ಲಾ ಇವಿಗಳಿಗೆ ರಸ್ತೆ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ನೀಡಲಾಗಿತ್ತು. ಇದನ್ನು 2024 ರಲ್ಲಿ ಬದಲಾಯಿಸಿ, ಕೇವಲ 25 ಲಕ್ಷ ರೂ. ಮೇಲ್ಪಟ್ಟ ವಾಹನಗಳಿಗೆ ತೆರಿಗೆ ವಿಧಿಸಲು ಕಾಂಗ್ರೆಸ್ ಸರ್ಕಾರವೇ ಆರಂಭಿಸಿತು.

ರಾಮ ಬಾಣ



ಮಹಿಳಾ ಮೀಸಲು ಜಾರಿಗೆ ಸಕಾಲ

ಪುಟ ೧➡ ಈ ಪ್ರಸ್ತಾವನೆಯಲ್ಲಿ ಲೋಕಸಭೆಯ ಒಟ್ಟು ಸ್ಥಾನಗಳ ಸಂಖ್ಯೆ 816ಕ್ಕೆ ಏರಿಕೆಯಾಗಲಿದ್ದು, ಅದರಲ್ಲಿ 273 ಸ್ಥಾನಗಳು ಮಹಿಳೆಯರಿಗೆ ಮೀಸಲಿಡಲಾಗುವುದು. 2023ರ ಸಾಂವಿಧಾನಿಕ ತಿದ್ದುಪಡಿಯ ಮೂಲಕ ಜಾರಿಗೆ ಬಂದ ಮೂಲ ನಿಬಂಧನೆ ಶೇ.33ರಷ್ಟು ಮೀಸಲಾತಿಯನ್ನು ಕಡ್ಡಾಯಗೊಳಿಸುತ್ತದೆ. ಆದರೆ, ಇದರ ಜಾರಿ, 2027ರ ಜನಗಣತಿಯ ಆಧಾರದ ಮೇಲೆ ನಡೆಯುವ ಕ್ಷೇತ್ರ ಮರು ವಿಂಗಡಣೆಗೆ ಒಳಪಟ್ಟಿರುತ್ತದೆ.

ಇಂದು ಮೋದಿ ಭಾಷಣ

ಹೊಸದಿಲ್ಲಿಯ ವಿಜ್ಞಾನ ಭವನದಲ್ಲಿ ಸೋಮವಾರ ಆಯೋಜಿಸಿರುವ ರಾಷ್ಟ್ರ ಮಟ್ಟದ ನಾರೀಶಕ್ತಿ ವಂದನ ಸಮ್ಮೇಳನ ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಲಿದ್ದಾರೆ.

ಬದಲಾವಣೆಯ ಅಗತ್ಯತೆ

ಅಸ್ತಿತ್ವದಲ್ಲಿರುವ ಚೌಕಟ್ಟಿನ ಪ್ರಕಾರ, ಈ ಮೀಸಲಾತಿ 2034ಕ್ಕಿಂತ ಮೊದಲು ಜಾರಿಯಾಗುವ ಸಾಧ್ಯತೆ ಇರಲಿಲ್ಲ. ಆದ್ದರಿಂದ 2029ರ ಚುನಾವಣೆಯಿಂದಲೇ ಇದನ್ನು ಜಾರಿಗೆ ತರಲು ಸರ್ಕಾರ ಈಗ ತಿದ್ದುಪಡಿ ತರುತ್ತಿದೆ. ತಜ್ಞರು ಮತ್ತು ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಲಾಗಿದ್ದು, ಈ ಕಾನೂನನ್ನು ಆದಷ್ಟು ಬೇಗ ಜಾರಿಗೆ ತರಬೇಕು ಎಂಬ ಬಗ್ಗೆ ಒಮ್ಮತವಿದೆ ಎಂದು ಮೋದಿ ಉಲ್ಲೇಖಿಸಿದ್ದಾರೆ.

ಟಿಸಿಎಸ್‌ನ ಸಿಬ್ಬಂದಿ ಅಮಾನತು

ಪುಟ ೧➡ **ಎಸ್‌ಐಟಿ ತನಿಖೆ:** ಕಳೆದ ವಾರ ನಾಸಿಕ್ ಪೊಲೀಸರು ಈ ಪ್ರಕರಣದ ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದ್ದಾರೆ. ಮಹಾರಾಷ್ಟ್ರ ಮುಖ್ಯಮಂತ್ರಿ ಹಾಗೂ ಗೃಹ ಮಂತ್ರಿ ದೇವೇಂದ್ರ ಫಡ್ನವೀಸ್ ಈ ಘಟನೆಯನ್ನು ಅತ್ಯಂತ ಗಂಭೀರ ಎಂದು ಬಣ್ಣಿಸಿ, ಇದನ್ನು ಬಯಲು ಮಾಡಿದ ನಾಸಿಕ್ ಪೊಲೀಸರನ್ನು ಶ್ಲಾಘಿಸಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೇಜಿ

◈ ನಾನು ಯುಗಾದಿ, ಶಿವರಾತ್ರಿಯಂದು ಮಾಂಸ ತಿನ್ನುತ್ತೇನೆ, ಅದರಲ್ಲಿ ಏನು ತಪ್ಪು?
- ಸಿದ್ದರಾಮಯ್ಯ

-ಯಾರಾದರೂ ನಾನು ಮದ್ಯಪಾನ ಮಾಡುತ್ತೇನೆ ಅಥವಾ ಧೂಮಪಾನ, ಗುಟ್ಕಾ ಸೇವನೆ ಮಾಡುತ್ತೇನೆ , ಅದರಲ್ಲಿ ಏನು ತಪ್ಪು ಅಂತ ವಾದಿಸಿದರೆ ಉತ್ತರಿಸುವ ಅಗತ್ಯವಿಲ್ಲ. ಮುಂದೆ ಅದರ ಫಲವನ್ನು ಅನುಭವಿಸುವಾಗ ಉತ್ತರ ಅವರಿಗೇ ಸಿಗುತ್ತೆ!

ದಿನ ಭವಿಷ್ಯ

ಮೇಷ
ನಿಮ್ಮ ವ್ಯವಹಾರದಲ್ಲಿ ದೊಡ್ಡ ಹೆಜ್ಜೆ ಇಡಲು ಸಕಾಲ. ಗ್ರಹಗತಿ ನಿಮಗೆ ಪೂರಕವಾಗಿದೆ. ಕೌಟುಂಬಿಕ ಸಹಕಾರ. ಆರ್ಥಿಕ ಉನ್ನತಿ ಸಾಧ್ಯ.

ವೃಷಭ
ಶಾಂತ ಮನಸ್ಸು. ಹಾಗಾಗಿ ಸೂಕ್ತ ನಿರ್ಧಾರ ತಾಳಲು ಪೂರಕ ಪರಿಸ್ಥಿತಿ. ಹಣದ ವ್ಯವಹಾರ ಲಾಭ ತರಲಿದೆ. ಕೌಟುಂಬಿಕ ಸಮಸ್ಯೆ ಪರಿಹಾರ.

ಮಿಥುನ
ಎಂದಿನಂತಲ್ಲದೆ ವಿಭಿನ್ನವಾದ ದಿನ. ಹೊಸತನಕ್ಕೆ ತುಡಿತ. ನಿಮ್ಮ ಯೋಜನೆ ಜಾರಿಗೆ ತರಲು ಅಡ್ಡಿಗಳು ಬರಲಾರವು. ಎಲ್ಲ ಸುಸೂತ್ರವಾಗಲಿದೆ.

ಕಟಕ
ನಿಮಗೆ ಪೂರಕ ದಿನ. ತ್ವರಿತ ಕಾರ್ಯಸಿದ್ಧಿ. ವೈಯಕ್ತಿಕ ಬದುಕಲ್ಲಿ ಸಂತೋಷ, ನೆಮ್ಮದಿ. ವೃತ್ತಿಯಲ್ಲೂ ಬಯಸಿದ ಗುರಿ ನೆರವೇರುವುದು.

ಸಿಂಹ
ನಿಮ್ಮ ಬದುಕಲ್ಲಿ ಕೆಲವಾರು ಬೆಳವಣಿಗೆ ಸಂಭವಿಸಬಹುದು. ಅನಿರೀಕ್ಷಿತ ಧನಲಾಭ. ಹಳೆ ಸ್ನೇಹಿತರ ಭೇಟಿ. ಏಕಾಂಗಿಗಳಿಗೆ ಸಂಗಾತಿ ಲಭ್ಯ.

ಕನ್ಯಾ
ಎಂದಿಗಿಂತ ಕಡಿಮೆ ಕಾರ್ಯದೊತ್ತಡ. ನಿಮ್ಮ ನಿರ್ವಹಣೆಗೆ ಶ್ಲಾಘನೆ. ಆದರೆ ಖಾಸಗಿ ಚಿಂತೆ ಕಾಡಲಿದೆ. ಆರೋಗ್ಯ ಸಮಸ್ಯೆ ಕಡೆಗಣಿಸಬೇಡಿ.

ತುಲಾ
ಮಹತ್ತರ ಕಾರ್ಯದ ಹೊಣೆ ಬೀಳಲಿದೆ. ಆರಂಭಿಕ ಅಡ್ಡಿ ಬಂದರೂ ಬಳಿಕ ಎಲ್ಲ ಸುಗಮ. ಆದರೂ ಮನದೊಳಗೆ ಏನೋ ಕೊರತೆ ಕಾಡಲಿದೆ.

ವೃಶ್ಚಿಕ
ಸಾಧನೆಯಲ್ಲಿ ಸ್ವಂತ ಗುರುತು ಮೂಡಿಸಲು ಸೂಕ್ತ ಅವಕಾಶ ಸಿಗಲಿದೆ. ಇತರರ ಹಂಗಿಗೆ ಬೀಳದಂತೆ ವರ್ತಿಸಿ. ಎಲ್ಲರ ಸಹಕಾರ.

ಧನು
ಇಂದು ಸುಗಮವಾಗಿ ಕಾರ್ಯ ಸಾಗದು. ಪದೇಪದೇ ಅಡ್ಡಿ. ಮುಖ್ಯ ಕಾರ್ಯಕ್ಕೆ ಕೈ ಹಾಕಬೇಡಿ. ದಂಪತಿಗಳ ಮಧ್ಯೆ ಭಿನ್ನಮತ ಸಾಧ್ಯತೆ.

ಮಕರ
ನಿಮ್ಮ ಕಾರ್ಯದ ಮೇಲೆ ನಂಬಿಕೆ ಇರಲಿ. ಇತರರನ್ನು ಮೆಚ್ಚಿಸುವ ವ್ಯರ್ಥ ಪ್ರಯತ್ನ ಬಿಡಿ. ಮನೆಯಲ್ಲಿ ವಾಗ್ವಾದಕ್ಕೆ ಅವಕಾಶ ಕೊಡದಿರಿ.

ಕುಂಭ
ಕೆಲವು ವಿಷಯ ಚಿಂತೆಗೆ ಕಾರಣವಾಗಲಿದೆ. ಸಣ್ಣ ವಿಷಯವನ್ನೂ ಅಧಿಕವಾಗಿ ಚಿಂತಿಸುವಿರಿ. ಗುರಿಯಿಂದ ಲಕ್ಷ್ಯ ವಿಚಲಿತವಾಗದಿರಲಿ.

ಮೀನ
ಹಣದ ಕೊರತೆ ಎದುರಿಸುವಿರಿ. ಕೆಲಸ ವಿಳಂಬ. ಒತ್ತಡ ಅಧಿಕ. ಇದರಿಂದ ದೇಹಾಲಸ್ಯ. ಧ್ಯಾನ, ದೇವರ ಪ್ರಾರ್ಥನೆ ನೆಮ್ಮದಿ ತಂದೀತು.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00
ಅದೃಷ್ಟ ಸಂಖ್ಯೆ: 5,1,7,3

ಬಿಜೆಪಿಯಿಂದ ಮಿಸ್ಡ್ ಕಾಲ್ ಅಭಿಯಾನ | ಮಹಿಳೆಯರ ಸಹಿ ಸಂಗ್ರಹ

ಜಾಲತಾಣದಲ್ಲಿ ನಾರೀಶಕ್ತಿ ವಿಧೇಯಕದ ಬಗ್ಗೆ ಅರಿವು

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಮಹಿಳೆಯರ ದಶಕಗಳ ಕಾಲದ ಕನಸನ್ನು ನನಸು ಮಾಡಲು ಹೊರಟಿದ್ದು, ನಾರಿ ಶಕ್ತಿ ವಂದನಾ ಅಧಿನಿಯಮವನ್ನು ಬೆಂಬಲಿಸಿ ರಾಜ್ಯ ಬಿಜೆಪಿ ವಿವಿಧ ಅಭಿಯಾನ ನಡೆಸುತ್ತಿದೆ. ಅಲ್ಲದೇ ಸಾಮಾಜಿಕ ಜಾಲತಾಣದಲ್ಲಿ ಮಸೂದೆಯ ಕುರಿತು ಮಾಹಿತಿ ಹಂಚುತ್ತಿದೆ.

ಮಹಿಳೆಯರಿಗೆ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮೀಸಲಾತಿ ನೀಡಲು ಪ್ರಧಾನಿ ನರೇಂದ್ರ ಮೋದಿ ಸರ್ಕಾರವೇ ಬರಬೇಕಾಯಿತು. ದಶಕಗಳ ಕಾಲ ಧೂಳು ಹಿಡಿಯುತ್ತಿದ್ದ ಮಹಿಳಾ ಮೀಸಲಾತಿ ವಿಧೇಯಕಕ್ಕೆ ನಾರಿ ಶಕ್ತಿ ವಂದನ್ ಅಧಿನಿಯಮ ಮೂಲಕ ಜೀವ ತುಂಬುತ್ತಿದ್ದು ಪ್ರಧಾನಿ ಮೋದಿ ಸರ್ಕಾರದ ಬದ್ಧತೆಗೆ ಸಾಕ್ಷಿ. ನಾರಿ ಶಕ್ತಿ ವಂದನಾ ಅಧಿನಿಯಮ ಜಾರಿಗೆ ತರುವ ಮೂಲಕ ಇನ್ನು ಮುಂದೆ ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಶೇ.33 ರಷ್ಟು ಸ್ಥಾನಗಳು ಮಹಿಳೆಯರಿಗೆ ಮೀಸಲಾಗಲಿವೆ ಎಂದು ರಾಜ್ಯ ಬಿಜೆಪಿ ತಿಳಿಸಿದೆ. ಇತಿಹಾಸವು ಕೇವಲ ದಿನಾಂಕಗಳಿಂದಲ್ಲ, ದೃಢ ನಿರ್ಧಾರಗಳಿಂದ ಬರೆಯಲ್ಪಡುತ್ತದೆ. ದಶಕಗಳ ಕಾಲ ಮಹಿಳಾ ಮೀಸಲಾತಿ ಮಸೂದೆ ಕೇವಲ ಭರವಸೆ ಹಾಗೂ ಚರ್ಚೆಗಳಿಗೆ ಸೀಮಿತವಾಗಿತ್ತು. 1996ರಿಂದ 2014ರ ವರೆಗೆ ಎಷ್ಟೇ ಪ್ರಯತ್ನಗಳಾದರೂ ಮಂಡನೆಯಾದರೂ ಫಲಿತಾಂಶ ಮಾತ್ರ ಶೂನ್ಯವಾಗಿತ್ತು. ಆದರೆ, 2023ರಲ್ಲಿ ನಾರಿ ಶಕ್ತಿ ವಂದನ ಅಧಿನಿಯಮ ಜಾರಿಗೆ ತರುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ 30 ವರ್ಷಗಳ ಕಾಯುವಿಕೆಗೆ ಅಂತ್ಯ ಹಾಡಲಾಗುತ್ತಿದೆ. ಇದು ಕೇವಲ ಸಮಯ ಅಥವಾ ಬಹುಮತದ ಪ್ರಶ್ನೆಯಲ್ಲ, ಇದು ಬಲವಾದ ಸಂಕಲ್ಪದ ಪ್ರಶ್ನೆಯಾಗಿತ್ತು. ಇಂದು ಮಹಿಳೆಯರ ಕನಸು ನನಸಾಗುತ್ತಿದೆ ಎಂದು ಬಣ್ಣಿಸಿದೆ.

ದೇಶಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಸಂಸತ್ತು ಮತ್ತು ವಿಧಾನಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ನಿಟ್ಟಿನಲ್ಲಿ ಯಾವುದೇ ಪ್ರಧಾನಿಯೂ ಗಮನಾರ್ಹವಾಗಿ ಕೆಲಸ ಮಾಡಿಲ್ಲ, ಆದರೆ, ಪ್ರಧಾನಿ ಮೋದಿ ಅವರು ಬೇಟಿ ಬಚಾವೋ ಬೇಟಿ ಪಢಾವೋನಿಂದ ಹಿಡಿದು ನಾರಿ ಶಕ್ತಿ ವಂದನಾ ಅಧಿನಿಯಮದ ತನಕ ಮಹಿಳಾ ಸಶಕ್ತೀಕರಣಕ್ಕಾಗಿ ಶ್ರಮಿಸಿದ್ದಾರೆ ಎಂದು ಬಿಜೆಪಿ ಹೇಳಿದೆ.

ಸಹಿ ಸಂಗ್ರಹ ಅಭಿಯಾನ

ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ಖಚಿತಪಡಿಸಲು ಮತ್ತು ಆಡಳಿತ ಮತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಅವರ ಪಾತ್ರವನ್ನು ಬಲಪಡಿಸಲು ನಾರಿ ಶಕ್ತಿ ವಂದನಾ ಅಧಿನಿಯಮವನ್ನು ಬೆಂಬಲ ವ್ಯಕ್ತಪಡಿಸಿ ಮಹಿಳಾ ಮೋರ್ಚಾದಿಂದ ಭಾನುವಾರ ಸಹಿ ಸಂಗ್ರಹ ಅಭಿಯಾನ ಪ್ರಾರಂಭವಾಯಿತು. ಬೆಂಗಳೂರಿನ ಕೆ.ಆರ್. ಪುರದಲ್ಲಿ ಕೇಂದ್ರ ಸಚಿವ ಶೋಭಾ ಕರಂದ್ಲಾಜೆ ಅವರ ನೇತೃತ್ವದಲ್ಲಿ ಈ ಸಹಿ ಸಂಗ್ರಹ ಅಭಿಯಾನ ಶುರುವಾಗಿದ್ದು, ರಾಜ್ಯಾದ್ಯಂತ ನಡೆಯಿತು.

"ಪ್ರಧಾನಿ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ಈ ಸುಧಾರಣೆಯು, ವಿವಿಧ ಕ್ಷೇತ್ರಗಳಲ್ಲಿ ನಾಯಕತ್ವದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುತ್ತದೆ. ದೇಶಾದ್ಯಂತ ಮಹಿಳೆಯರು ಮುಂದೆ ಬಂದು ಈ ಐತಿಹಾಸಿಕ ಹೆಜ್ಜೆಯನ್ನು ಬೆಂಬಲಿಸಬೇಕೆಂದು ನಾನು ಒತ್ತಾಯಿಸುತ್ತೇನೆ.
■ ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

"ಪ್ರಧಾನಿ ನರೇಂದ್ರ ಮೋದಿ ಅವರು ವಿಕಸಿತ ಭಾರತದಲ್ಲಿ ಮಹಿಳೆಯರಿಗೂ ಅವಕಾಶ, ಅಧಿಕಾರ ಕಲ್ಪಿಸುವ ಸಂಕಲ್ಪ ಹೊಂದಿದ್ದಾರೆ. ಈ ನಿಟ್ಟಿನಲ್ಲಿ ನಾರಿ ಶಕ್ತಿ ವಂದನಾ ಅಧಿನಿಯಮ ಹೆಸರಿನಲ್ಲಿ ಮಹಿಳೆಯರಿಗೆ ವಿಶೇಷ ಆದ್ಯತೆ ನೀಡುತ್ತಿದ್ದಾರೆ. ಮಹಿಳಾ ಮೀಸಲಾತಿಗೆ ದಿಟ್ಟ ಹೆಜ್ಜೆ ಇಟ್ಟಿರುವ ಮೋದಿ ಸರ್ಕಾರಕ್ಕೆ ವಂದನೆಗಳು.
■ ಸಿ. ಮಂಜುಳಾ, ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ

2028ಕ್ಕೆ ಮೊದಲ ಅಂತರಿಕ್ಷ ನಿಲ್ದಾಣ

ಬೆಂಗಳೂರು: ಭಾರತೀಯ ಅಂತರಿಕ್ಷ ನಿಲ್ದಾಣದ ಮೊದಲ ಮಾಡ್ಯೂಲ್ 2028ಕ್ಕೆ ಸಿದ್ಧಗೊಳ್ಳಲಿದೆ ಎಂದು ಇಸ್ರೋ ಅಧ್ಯಕ್ಷ ಡಾ.ವಿ.ನಾರಾಯಣನ್ ವಿಶ್ವಾಸ ವ್ಯಕ್ತಪಡಿಸಿದರು.



ಅಂಚೆ ಇಲಾಖೆ ವತಿಯಿಂದ ಭಾನುವಾರ ಮೇಘದೂತ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಭಾರತದ ಮಾನವ ಸಹಿತ ಬಾಹ್ಯಾಕಾಶ ಕಾರ್ಯಕ್ರಮದ ಅಂಗವಾಗಿ ವಿಶೇಷ ಅಂಚೆ ಚೀಟಿ ಬಿಡುಗಡೆ ಮಾಡಿ ಬಳಿಕ ಮಾತನಾಡಿದ ಅವರು, ಭಾರತವು 2035ರ ವೇಳೆಗೆ ಭಾರತೀಯ ಅಂತರಿಕ್ಷ ನಿಲ್ದಾಣದ ಐದು ಮಾಡ್ಯೂಲ್‌ಗಳನ್ನು ಸ್ಥಾಪಿಸಲು ಯೋಜಿಸಿದೆ. ಸುಮಾರು 52 ಟನ್ ತೂಕದ ಭಾರತೀಯ ಬಾಹ್ಯಾಕಾಶ ನಿಲ್ದಾಣವಾಗಲಿದೆ. ಮೊದಲ ಮಾಡ್ಯೂಲ್ 2028ರ ವೇಳೆಗೆ ಸಿದ್ಧಗೊಳ್ಳಲಿದೆ ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಬಹಳಷ್ಟು ಚಟುವಟಿಕೆಗಳು ನಡೆಯುತ್ತಿವೆ. ಸಧ್ಯ ನಾವು ಗಗನಯಾನ ಕಾರ್ಯಕ್ರಮದಲ್ಲಿ ಕೆಲಸ ಮಾಡುತ್ತಿದ್ದೇವೆ. ದಯವಿಟ್ಟು ದಿನಾಂಕ ಯಾವಾಗ ಎಂದು ನನ್ನನ್ನು ಕೇಳಬೇಡಿ. ಇದು ತಂತ್ರಜ್ಞಾನ-ತೀವ್ರ ಕಾರ್ಯಕ್ರಮವಾಗಿದೆ. ನಾವು ಸಮಸ್ಯೆಗಳನ್ನು ಪರಿಹರಿಸುತ್ತಿದ್ದೇವೆ, ಮುಂದುವರಿಯುತ್ತಿದ್ದೇವೆ ಮತ್ತು ಪ್ರತಿ ಹಂತದಲ್ಲೂ ಯಶಸ್ವಿಯಾಗುತ್ತಿದ್ದೇವೆ. ನಾವು ಮೊದಲು ಸಿಬ್ಬಂದಿ ಇಲ್ಲದ ಮೂರು ಕಾರ್ಯಾಚರಣೆಗಳನ್ನು ಪೂರ್ಣಗೊಳಿಸಿದ ನಂತರ, ಸಿಬ್ಬಂದಿ ಇರುವ ಕಾರ್ಯಾಚರಣೆಗೆ ಹೋಗಲು ಯೋಜಿಸಿದ್ದೇವೆ ಎಂದರು.

ಸಾಧನೆಗೆ ಮಿತಿಯಿಲ್ಲ: ಶುಭಾಂಶು ಶುಕ್ಲಾ

ಆಕಾಶಕ್ಕೆ ಮಿತಿ ಇಲ್ಲ. ನನಗೂ, ನಿಮಗೂ, ಭಾರತಕ್ಕೂ ಸಾಧನೆ ಮಾಡಲು ಮಿತಿಯಿಲ್ಲ. ಆದರಿಂದ ಮಕ್ಕಳೇ ನೀವೇ ಮಿತಿ ಹಾಕಿಕೊಳ್ಳದೇ, ವಿಶಾಲವಾಗಿ ಚಿಂತನೆಯನ್ನು ಇಟ್ಟುಕೊಂಡು ಸಾಧನೆ ಮಾಡಬೇಕು. ನಾನು ಬಾಹ್ಯಾಕಾಶಯಾನ ಮುಗಿಸಿ ಬಂದಾಗ ಬಹುತೇಕರ ಪ್ರಶ್ನೆ ಏನು ತಿಂದ್ರಿ? ಹೇಗೆ ನಿದ್ರೆ ಮಾಡಿದ್ದೀರಿ ಎಂಬುದೇ ಆಗಿತ್ತು. ಪ್ರಶ್ನೆ ತಪ್ಪಲ್ಲ. ಅದರ ಜೊತೆಗೆ ನಮ್ಮ ಯೋಚನೆಗಳು ಇನ್ನಷ್ಟು ವಿಸ್ತಾರ ಇರಬೇಕು. ಒಂದು ಹಳ್ಳಿಗಾಡಿನಿಂದ ಬಂದ ನಿಮಗೆ ಬಾಹ್ಯಾಕಾಶ ಯಾನ ಮಾಡಲು ಹೇಗೆ ಸಾಧ್ಯವಾಯಿತು ಎಂದು ಕೆಲವರು ಕೇಳಿದರು. ಮೊದಲ ಪ್ರಶ್ನೆಗಳಿಗಿಂತ ಇದುವೇ ಸ್ಫೂರ್ತಿಯಾಗಬಲ್ಲದು ಎಂದು ಗಗನಯಾನ ಯಾತ್ರಿ ಶುಭಾಂಶು ಶುಕ್ಲಾ ಹೇಳಿದರು.

ಆನೆ ದಾಳಿಗೆ ವ್ಯಕ್ತಿ ಬಲಿ

ಪುಟ ೧➡ ತೋಟದಲ್ಲಿ ಕೆಲಸ ಮಾಡಲು ಮುಂದಾ ದಾಗ, ಹಿಂದಿನಿಂದ ಬಂದ ಕಾಡಾನೆಯೊಂದು ದಾಳಿ ನಡೆಸಿದೆ. ದಾಳಿಯ ವೇಳೆ ಕಾಡಾನೆ ತನ್ನ ಸೊಂಡಿಲಿನಿಂದ ಎತ್ತಿ ಬಿಸಾಡಿ, ನಂತರ ತುಳಿದು ಹತ್ಯೆ ಮಾಡಿರುವುದಾಗಿ ತಿಳಿದುಬಂದಿದೆ

ಘಟನೆಯ ಬಳಿಕ ರಾಜಶೆಟ್ಟಿಯ ಮೃತದೇಹದ ಸ್ವಲ್ಪ ದೂರದಲ್ಲೇ ಕಾಡಾನೆ ನಿಂತಿರುವುದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಸುದ್ದಿ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಘಟನೆ ಅರೇಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಬೇಲೂರು ವಲಯ ಅರಣ್ಯಾಧಿಕಾರಿಗಳು ಪ್ರಕರಣ ದಾಖಲಿಸಿಕೊಂಡಿದ್ದಾರೆ.

6 ತಿಂಗಳಲ್ಲಿ ಎರಡನೇ ಸಾವು: ಕಳೆದ 6 ತಿಂಗಳ ಹಿಂದೆ ಇದೇ ಗ್ರಾಮದಲ್ಲಿ ಕಾಡಾನೆ ದಾಳಿಗೆ ದ್ಯಾವಮ್ಮ ಎಂಬುವರು ಮೃತಪಟ್ಟಿದ್ದರು. ಈ ವೇಳೆ ಕಾಡಾನೆಗಳನ್ನು ಸ್ಥಳಾಂತರ ಮಾಡಬೇಕೆಂದು ಅರೆಹಳ್ಳಿ ರಸ್ತೆ ತಡೆ ಚಳವಳಿ ಮಾಡಿ ಪ್ರತಿಭಟನೆ ಮಾಡಿದ್ದೆವು. ಅದಾದ ಬಳಿಕ ರೈತರ ಕಣ್ಣೊರೆಸುವ ನಿಟ್ಟಿನಲ್ಲಿ 4 ಕಾಡಾನೆಗಳನ್ನು ಹಿಡಿಯವು ಮೂಲಕ ಸರ್ಕಾರ ಸುಮ್ಮನಾಗಿ ಬಿಟ್ಟಿತು. ಆದರೇ ಈ ಭಾಗದಲ್ಲಿ 40ಕ್ಕೂ ಹೆಚ್ಚು ಕಾಡಾನೆಗಳು ಹಿಂಡು ಹಿಂಡಾಗಿ ಸಂಚಾರ ಮಾಡುತ್ತವೆ. ಅರಣ್ಯ ಸಚಿವ ಈಶ್ವರ್ ಖಂಡ್ರೆ ಈ ಪ್ರಕರಣದಲ್ಲಿ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದು, ರೈತರು ಬದುಕಲು ಸಾಧ್ಯವಾಗುತ್ತಿಲ್ಲ ಎಂದು ಗಂಭೀರವಾಗಿ ಆರೋಪ ಮಾಡಿದ್ದಾರೆ

ಒಟ್ಟಿನಲ್ಲಿ ಕೊಡಗು ಭಾಗದಿಂದ ಸಕಲೇಶ ಪುರದ ಭಾಗದಲ್ಲಿ ಓಡಾಡುತ್ತಿದ್ದ ಕಾಡಾನೆ ಗಳು ಈಗ ಆಹಾರ ಹುಡುಕಿಕೊಂಡು, ಅಲೆಮಾರಿ ಜೀವನ ನಡೆಸುತ್ತಿರುವ ಕಾಡಾನೆಗಳು ಬೇಲೂರು ಭಾಗದಲ್ಲಿ ಬೀಡುಬಿಟ್ಟಿದ್ದು, ಬೇಲೂರು ತಾಲ್ಲೂಕಿನಲ್ಲಿ ಕಳೆದ 2 ವರ್ಷದ ಅಂತರದಲ್ಲಿ 4 ಮಂದಿಯನ್ನು ಬಲಿ ಪಡೆದಿರುವುದು ನಿಜಕ್ಕೂ ದುರ್ದೈವದ ಸಂಗತಿಯೇ ಸರಿ. ಏ.10ರಂದು ಜಿಲ್ಲಾ ಉಸ್ತುವಾರಿ ತಾಲ್ಲೂಕಿನಲ್ಲಿ ಜನಸ್ಪಂದನ ಕಾರ್ಯಕ್ರಮ ಮಾಡುವ ಮೂಲಕ ಕಾಡಾನೆ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸುವುದಾಗಿ ಹೇಳಿದ್ದರು. ಆದರೇ ಕೇವಲ ಒಂದು ದಿನದ ಅಂತರದಲ್ಲಿಯೇ ಕಾಡಾನೆಗೆ ಮತ್ತೊಂದು ಜೀವ ಬಲಿಯಾಗಿದೆ. ಸರ್ಕಾರ ಕೂಡಲೇ ಆನೆಗಳ ಸ್ಥಳಾಂತರಕ್ಕೆ ಮುಂದಾಗದಿದ್ದರೇ, ಮತ್ತಷ್ಟು ಜೀವಗಳು ಬಲಿಯಾಗುತ್ತವೆ. ಈ ನಿಟ್ಟಿನಲ್ಲಿ ಸರ್ಕಾರ ಯಾವ ನಿರ್ಧಾರ ಕೈಗೊಳ್ಳಲಿದೆ ಎಂಬುದನ್ನು ಕಾದುನೋಡಬೇಕಿದೆ.

"ಬೇಲೂರು ಭಾಗದಲ್ಲಿ ಕಾಡಾನೆ ಹಾವಳಿ ಮಿತಿ ಮೀರಿದೆ. ಅರಣ್ಯಾಧಿಕಾರಿಗಳು ಆನೆಗಳು ಇವೆ ಎಚ್ಚರಿಕೆ ಎಚ್ಚರಿಕೆ ಎಂದು ಹೇಳಿಕೊಂಡು ತಿರುಗುವುದು ಬಿಟ್ಟರೇ, ಯಾವ ಜಾಗದಲ್ಲಿ ನಿಖರವಾಗಿ ಆನೆಗಳಿವೆ ಎಂಬುದನ್ನು ಹೇಳುವುದಿಲ್ಲ. ಕಾಡಾನೆಗೆ ಶಾಶ್ವತವಾದ ಪರಿಹಾರ ದೊರಕಿಸಿಕೊಡುವ ನಿಟ್ಟನಲ್ಲಿ ಸರ್ಕಾರ ಕ್ರಮ ಜರುಗಿಸಬೇಕು. ಇಲ್ಲದಿದ್ದಲ್ಲಿ ಅಹೋರಾತ್ರಿ ಪ್ರತಿಭಟನೆ ಮಾಡುವ ಮೂಲಕ ಶವ ಎತ್ತಲು ಬಿಡುವುದಿಲ್ಲ,
■ ಕೆ.ಜಿ.ಕುಮಾರ್, ಮಾಜಿ ಅಧ್ಯಕ್ಷ, ಟಿಎಪಿಸಿಎಂಎಸ್, ಬೇಲೂರು.

ಹಾರ್ಮುಜ್ ದಿಗ್ಬಂಧನ

ಪುಟ ೧➡ ಅಮೆರಿಕ ಅಧ್ಯಕ್ಷ ಟ್ರಂಪ್‌ರ ಮೂಲ ಗುರಿ ಇರಾನ್ ಅಣ್ವಸ್ತ್ರ ಹೊಂದದಂತೆ ತಡೆಯುವುದೇ ಆಗಿದೆ.

ಅದನ್ನು ಈ ಮಾತುಕತೆಯ ಮೂಲಕ ಸಾಧಿಸಲು ಪ್ರಯತ್ನಿಸಿದ್ದೆವು ಎಂದು ವ್ಯಾನ್ಸ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ನಾವು ನಮ್ಮ ಅಂತಿಮ ಮತ್ತು ಉತ್ತಮ ಪ್ರಸ್ತಾಪ ಮಂಡಿಸಿದ್ದೇವೆ. ಇರಾನ್ ಅದನ್ನು ಒಪ್ಪಲಿಲ್ಲ. ಇದು ಅಮೆರಿಕಕ್ಕಿಂತ ಇರಾನ್‌ಗೇ ಹೆಚ್ಚು ನಷ್ಟದ ಸುದ್ದಿ ಎಂದು ಅವರು ಇಸ್ಲಾಮಾಬಾದ್ ತೊರೆಯುವ ಮೊದಲು ಹೇಳಿದರು. ಅಮೆರಿಕ ವಿಶೇಷ ಅಧಿಕಾರಿ ಸ್ಟೀವ್ ವಿಟ್‌ಕಾಫ್ ಮತ್ತು ಟ್ರಂಪ್‌ರ ಅಳಿಯ ಜಾರೆಡ್ ಕುಶ್ನರ್ ಕೂಡ ಅಮೆರಿಕ ತಂಡದ ಭಾಗವಾಗಿದ್ದರು.

ಮೈನ್ ತೆರವು ಕಾರ್ಯಾಚರಣೆ

ಮಾತುಕತೆ ವಿಫಲವಾದ ತಕ್ಷಣ ಟ್ರಂಪ್, ಜಾಗತಿಕ ತೈಲ ಸರಬರಾಜಿನ ಶೇ.20ರಷ್ಟನ್ನು ನಿಯಂತ್ರಿಸುವ ಹಾರ್ಮುಜ್ ಜಲಸಂಧಿಯಲ್ಲಿ ಅಮೆರಿಕ ನೌಕಾಪಡೆ ತಕ್ಷಣ ದಿಗ್ಬಂಧನ ಹೇರಲಿದೆ ಎಂದು ಘೋಷಿಸಿದರು. ಇರಾನ್‌ಗೆ ಅಕ್ರಮ ಶುಲ್ಕ ನೀಡಿ ಸಂಚರಿಸುವ ಯಾವ ಹಡಗಿಗೂ ಸಮುದ್ರದಲ್ಲಿ ಸುರಕ್ಷಿತ ಹಾದಿ ಸಿಗದು ಎಂದು ಟ್ರಂಪ್ ಎಚ್ಚರಿಕೆ ನೀಡಿದರು. ಅಮೆರಿಕ ಸೇನೆ ಎರಡು ವಿಧ್ವಂಸಕ ಹಡಗುಗಳನ್ನು ಜಲಸಂಧಿಗೆ ಕಳಿಸಿ ಮೈನ್ ತೆರವು ಕಾರ್ಯಾಚರಣೆ ಶುರು ಮಾಡಿದ್ದು, ನೀರೊಳಗಿನ ಡ್ರೋನ್‌ಗಳ ಸೇರ್ಪಡೆ ಮುಂದಿನ ದಿನಗಳಲ್ಲಿ ಆಗಲಿದೆ ಎಂದು ಅಮೆರಿಕ ಕೇಂದ್ರ ತಂಡದ ಕಮಾಂಡರ್ ಅಡ್ಮಿರಲ್ ಬ್ರ್ಯಾಡ್ ಕೂಪರ್ ತಿಳಿಸಿದರು. ಆದಾಗ್ಯೂ, ಇರಾನ್‌ನ ಸರ್ಕಾರದ ಮಾಧ್ಯಮ ಮೈನ್ ತೆರವಿಗೆ ಒಪ್ಪಿಗೆ ನೀಡಿಲ್ಲ ಎಂದು ಸ್ಪಷ್ಟಪಡಿಸಿದೆ. ಯುದ್ಧವಿರಾಮ ಶುರುವಾದ ಬಳಿಕ ಜಲಸಂಧಿ ದಾಟಿದ ಹಡಗುಗಳ ಸಂಖ್ಯೆ ದಿನಕ್ಕೆ 100ರಿಂದ ಕೇವಲ 12ಕ್ಕೆ ಇಳಿದಿದ್ದು, ಜಾಗತಿಕ ಇಂಧನ ಬೆಲೆ ಗಗನಕ್ಕೇರಿದೆ.

ಆಶಾಗಾನ ಅನಂತಯಾನ

ಪುಟ ೧➡ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಆಶಾ ಭೋಸ್ಲೆ ಅವರ ನಿಧನಕ್ಕೆ ಸಂತಾಪ ಸೂಚಿಸಿ, ಅವರ ಸಂಗೀತಯಾತ್ರೆ ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿದೆ ಎಂದು ಹೇಳಿದ್ದಾರೆ. ಎಂಟು ದಶಕಗಳಿಗೂ ಹೆಚ್ಚು ಕಾಲ ಗಾನ ಸೇವೆ ಸಲ್ಲಿಸಿದ ಆಶಾ ಭೋಸ್ಲೆ ಸುಮಾರು 12,000ಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. 1943ರಲ್ಲಿ ಮರಾಠಿ ಚಿತ್ರ ಮಾಜಾ ಬಾಲ ಮೂಲಕ ಬಾಲ್ಯದಲ್ಲೇ ಗಾಯನ ಪ್ರಾರಂಭಿಸಿದ ಅವರು 2010ರ ದಶಕದವರೆಗೂ ಸಕ್ರಿಯರಾಗಿದ್ದರು. ಕನ್ನಡಲ್ಲೂ ಕೂಡ ಮೂರು ಹಾಡುಗಳಿಗೆ ಧ್ವನಿಯಾಗಿದ್ದಾರೆ. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ, ಪದ್ಮ ವಿಭೂಷಣ ಸೇರಿದಂತೆ ಅನೇಕ ಗೌರವಗಳನ್ನು ಆಶಾ ಬೋಸ್ಲೆ ಪಡೆದಿದ್ದಾರೆ. ಗಾಯಕಿ ಉಷಾ ಉತ್ತುಪ್, ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಹಾಗೂ ನಟಿ ಕಾಜೋಲ್ ಸೇರಿದಂತೆ ಅನೇಕ ಗಣ್ಯರು ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಇಂದು ಅಂತ್ಯಸಂಸ್ಕಾರ

ಪುಟ ೧➡ **ಸೊಮವಾರ ಬೆಳಗ್ಗೆ 11 ಗಂಟೆಯಿಂದ ಲೋಯರ್ ಪರೇಲ್‌ನಲ್ಲಿರುವ ಕಾಸಾ ಗ್ರಾಂಡೆ ನಿವಾಸದಲ್ಲಿ ಅಮ್ಮನಿಗೆ ಅಂತಿಮ ನಮನ ಸಲ್ಲಿಸಬಹುದು ಎಂದು ಆಶಾ ಭೋಸ್ಲೆ ಅವರ ಪುತ್ರ ಆನಂದ್ ಹೇಳಿದ್ದಾರೆ.**

ಅಲ್ಪಸಂಖ್ಯಾತರ ಸಮಿತಿ ರದ್ದು

ಪುಟ ೧➡ ಅದರ ಬೆನ್ನಲ್ಲೇ ಅಲ್ಪಸಂಖ್ಯಾತ ಘಟಕದ ಸಮಿತಿಯನ್ನೂ ವಿಸರ್ಜನೆ ಮಾಡಿದ್ದು, ಹೊಸ ಸಮಿತಿ ರಚನೆಗೆ ಚಾಲನೆ ನೀಡಿದ್ದಾರೆ.

ಹೊಸ ಸಮಿತಿ ರಚನೆ ಶೀಘ್ರ: ಅಬ್ದುಲ್ ಜಬ್ಬಾರ್ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ಅಲ್ಪಸಂಖ್ಯಾತ ವಿಭಾಗದ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಿಸರ್ಜಿಸಲಾಗಿದೆ. ನೂತನ ಸಮಿತಿ ಶೀಘ್ರ ರಚನೆಗೆ ಕ್ರಮ ವಹಿಸಲಾಗಿದೆ ಎಂದು ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ.

ಬಂಡಾಯಕ್ಕೆ ತಲೆದಂಡ: ದಾವಣಗೆರೆ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಷಡ್ಯಂತ್ರದ ಆರೋಪಕ್ಕೆ ಮೊದಲ ತಲೆದಂಡವಾಗಿದೆ. ಈ ನಡುವೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡುವಂತೆ ನಸೀರ್ ಅಹ್ಮದ್ ಅವರಿಗೂ ಎಐಸಿಸಿ ಹೈಕಮಾಂಡ್ ಸೂಚನೆ ನೀಡಿದ್ದು, ಮಂಗಳವಾರ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ ನಂತರ ಮುಂದಿನ ನಿರ್ಧಾರ ಕೈಗೊಳ್ಳಲಿದ್ದಾರೆ ಎನ್ನಲಾಗಿದೆ.

ಅಬ್ದುಲ್ ಜಬ್ಬಾರ್ ವಿರುದ್ಧ ರಿಜ್ವಾನ್ ಕಿಡಿ: ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ನೀಡಿರುವ ಹೇಳಿಕೆಗೆ ಶಾಸಕ ರಿಜ್ವಾನ್ ಅರ್ಷದ್ ಕಿಡಿಕಾರಿದ್ದಾರೆ. ಜಬ್ಬಾರ್ ಅವರ ರಾಜೀನಾಮೆ ಪತ್ರದಲ್ಲಿ ಮೂರನೇ ತಾರೀಕು ಅಂತ ಇದೆ. ಬಹುಶಃ ಕಾಗ್ರೆಸ್‌ಗೆ ಹಿನ್ನಡೆ ಆಗಲಿ ಅಂತ ಆಗಲೇ ರಾಜೀನಾಮೆ ಬರೆದಿಟ್ಟುಕೊಂಡಿದ್ದೇನೋ ಗೊತ್ತಿಲ್ಲ. ನಾವು ಹೈಕಮಾಂಡ್ ಬಳಿ ಅಬ್ದುಲ್ ಜಬ್ಬಾರ್‌ಗೆ ಟಿಕೆಟ್ ಕೊಡಿ ಅಂತ ಕೇಳಿದ್ದು ತಪ್ಪಾಗಿದೆ. ಅವರ ಹೆಸರು ಹೇಳಬಾರದಿತ್ತು. ಆ ಸಭೆಯಲ್ಲಿ ಅಲ್ಪಸಂಖ್ಯಾತರ ಚಾಂಪಿಯನ್ ಅಂತ ಅನಿಸಿಕೊಂಡವರು ಟಿಕೆಟ್ ಕೊಟ್ರೆ ಅಬ್ದುಲ್ ಜಬ್ಬಾರ್‌ಗೆ ಕೊಡಿ ಅಂದರು. ಇಲ್ಲಾ ಅಂದರೆ, ಯಾರಿಗಾದ್ರೂ ಕೊಡಿ ಅಂತ ಹೇಳಿದ್ದರು, ಇದಕ್ಕೆ ಎಲ್ಲರೂ ಸಾಕ್ಷಿ ಎಂದು ಹೇಳಿದರು.

"ಉಪ ಚುನಾವಣೆಯಲ್ಲಿ ಯಾವ ಮುಸ್ಲಿಂ ನಾಯಕರು ಹೇಗೆ ಕೆಲಸ ಮಾಡಿದ್ರು ಅಂತ ಹೈಕಮಾಂಡ್‌ಗೆ ಗೊತ್ತಿದೆ. ಯಾರು ಮತ ವಿಭಜಿಸಿ ಬಿಜೆಪಿ ಗೆಲ್ಲಿಸಬೇಕು ಅಂತ ಪ್ರಯತ್ನಪಟ್ಟರು ಎನ್ನುವುದೂ ಗೊತ್ತಿದೆ. ಅವರ ಪ್ರಯತ್ನ ಯಾವುದೂ ಪರಿಣಾಮ ಬೀರಿಲ್ಲ.
■ ರಿಜ್ವಾನ್ ಅರ್ಷದ್, ಶಾಸಕ

ಅಲ್ಪಸಂಖ್ಯಾತರ ಘಟಕದಲ್ಲಿ ಸಾಮೂಹಿಕ ರಾಜೀನಾಮೆ?

ದಾವಣಗೆರೆ: ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸ್ಥಾನಕ್ಕೆ ವಿಧಾನ ಪರಿಷತ್ ಸದಸ್ಯ ಕೆ.ಅಬ್ದುಲ್‌ಜಬ್ಬಾರ್ ರಾಜೀನಾಮೆ ನೀಡಿದ ಬೆನ್ನಲ್ಲೇ ರಾಜ್ಯ ಘಟಕದ ಪದಾಧಿಕಾರಿಗಳು, ಜಿಲ್ಲಾ ಘಟಕದವರು ಸಾಮೂಹಿಕ ರಾಜೀನಾಮೆಗೆ ಮುಂದಾಗಿದ್ದಾರೆ.

ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಉಪಾಧ್ಯಕ್ಷ ಮೊಹಮ್ಮದ್ ಸಿರಾಜ್, ಕಾರ್ಯದರ್ಶಿಗಳಾದ ಅಬ್ದುಲ್ ಗನಿ ತಾಹೀರ್, ಹುಸೇನ್ ಉಕ್ಕಡಗಾತ್ರಿ, ಉಬೇದುಲ್ಲಾ ಅತ್ತಾರ್, ಜಿಲ್ಲಾ ಕಾರ್ಯಾಧ್ಯಕ್ಷ ಎ.ಅಬ್ದುಲ್‌ಜಬ್ಬಾರ್, ಜಿಲ್ಲಾ ಕಾರ್ಯದರ್ಶಿ ಆಸಿಫ್ ಜುನ್ನೈದಿ ಸೇರಿದಂತೆ ಅನೇಕರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ರಾಜೀನಾಮೆ ಪತ್ರ ರವಾನಿಸುವುದಾಗಿ ತಿಳಿಸಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮೊಹಮ್ಮದ್ ಸಿರಾಜ್ ಮಾತನಾಡಿ, ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಉಪ ಚುನಾವಣೆಯಲ್ಲಿ ಅಲ್ಪಸಂಖ್ಯಾತ ವಿಭಾಗದವರು ಕೆ.ಅಬ್ದುಲ್ ಜಬ್ಬಾರ್ ಸಾಹೇಬರ ಮಾರ್ಗದರ್ಶನದಲ್ಲಿ ಪಕ್ಷದ ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡಿದ್ದೇವೆ. ಆದರೂ ನಮ್ಮ ರಾಜ್ಯಾಧ್ಯಕ್ಷರ ವಿರುದ್ಧ ಕೆಲ ನಾಯಕರು ಆರೋಪ ಮಾಡುವ ಮೂಲಕ ಪಕ್ಷನಿಷ್ಠೆಗೆ ಮಸಿ ಬಳಿದಿದ್ದಾರೆ. ಇದರಿಂದ ಮನನೊಂದು ಅಲ್ಪಸಂಖ್ಯಾತ ವಿಭಾಗದ ನಾಲ್ವರು ರಾಜ್ಯ ಪದಾಧಿಕಾರಿಗಳು ಹಾಗೂ ಜಿಲ್ಲಾ ಘಟಕದ ಎಲ್ಲಾ ಪದಾಧಿಕಾರಿಗಳು ಸ್ವಯಂ ರಾಜಿನಾಮೆ ನೀಡುತ್ತಿದ್ದೇವೆ ಎಂದರು.

ಎಂಎಲ್ಸಿ ಅಬ್ದುಲ್ ಜಬ್ಬಾರ್ ಕಳೆದ ಏ.3ರಂದೇ ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದು,



ಅದಯ ಚುನಾವಣೆ ಮೇಲೆ ದುಷ್ಪರಿಣಾಮ ಬೀರಬಾರದೆಂಬ ಕಾರಣಕ್ಕೆ ಮತದಾನದ ನಂತರ ಬಹಿರಂಗಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾವೆಲ್ಲರೂ ಸಾಮೂಹಿಕವಾಗಿ ರಾಜೀನಾಮೆ ಕೊಡಲು ನಿರ್ಧರಿಸಿದ್ದೇವೆ. ಪಕ್ಷದ ಸಾಮಾನ್ಯ ಕಾರ್ಯಕರ್ತ, ಶಿಸ್ತಿನ ಸಿಪಾಯಿಗಳಾಗಿ ಮುಂದುವರೆಯುತ್ತೇವೆ. ಜಿಲ್ಲಾ ಅಲ್ಪಸಂಖ್ಯಾತರ ಘಟಕದ ಎಲ್ಲಾ 50 ಜನ ರಾಜೀನಾಮೆ ಕೊಡುತ್ತಿದ್ದು, ಇದೇ ರೀತಿ ರಾಜ್ಯಾದ್ಯಂತ ರಾಜೀನಾಮೆ ಪರ್ವ ನಡೆಯುವ ಸಾಧ್ಯತೆ ಇದೆ ಎಂದು ಅವರು ತಿಳಿಸಿದರು.


ಜಿಲ್ಲಾ ಮಂತ್ರಿ ಎಸ್.ಎಸ್.ಮಲ್ಲಿಕಾರ್ಜುನ್ ಜೊತೆಗೆ 2013ರಿಂದಲೂ ಅಬ್ದುಲ್ ಜಬ್ಬಾರ್ ವೈಮನಸ್ಸು ಇದೆ. ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ದೊಡ್ಡ ಸಭೆ ಮಾಡಿದರೂ ಶಾಮನೂರು ಕುಟುಂಬದವರು ಬರಲಿಲ್ಲ. ಉಪಚುನಾವಣೆ ಪ್ರಚಾರಕ್ಕೂ ಕರೆಯಲಿಲ್ಲ. ಮುಸ್ಲಿಂ ಸಮಾಜವನ್ನು ಕಡೆಗಣಿಸಿದ್ದರಿಂದ ಅಬ್ದುಲ್ ಜಬ್ಬಾರ್ ರಾಜೀನಾಮೆ ನೀಡಿದ್ದಾರೆ. 20 ದಿನ ಇಲ್ಲೇ ಇದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಶಾಸಕ ರಿಜ್ವಾನ್ ಅರ್ಷದ್ ಎಸ್.ಡಿ.ಪಿ.ಐ ಬೆಳೆಯಲು ಯಾಕೆ ಬಿಟ್ಟರು? ನಾವು ಪಕ್ಷವಿರೋಧಿ ಚಟುವಟಿಕೆ ನಡೆಸಿದ್ದನ್ನು ಸಾಬೀತು ಮಾಡಿ ಕ್ರಮ ಕೈಗೊಳ್ಳಲಿ ಎಂದು ಅವರು ಸವಾಲು ಹಾಕಿದರು.

ಅಬ್ದುಲ್ ಗನಿ ತಾಹೀರ್ ಮಾತನಾಡಿ, ಮೊದಲಿನಿಂದಲೂ ಶೇ.90ರಷ್ಟು ಮುಸ್ಲಿಮರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿಕೊಂಡು ಬಂದಿದ್ದಾರೆ. ಕಾಂಗ್ರೆಸ್ ಪಕ್ಷದ ಮೇಲೆ ಮುಸ್ಲಿಂ ಸಮಾಜದ ಋಣವಿದೆ. ಅದನ್ನು ತೀರಿಸಬೇಕಾದರೆ ಸಮುದಾಯಕ್ಕೆ ಟಿಕೆಟ್ ಕೊಡಬೇಕಿತ್ತು. ಮುಸ್ಲಿಂ ಸಮಾಜವು ಪಕ್ಷದ ಋಣವನ್ನು ಹೆಚ್ಚಾಗಿಯೇ ತೀರಿಸಿದೆ. ಕಳೆದ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಎಂಎಲ್ಸಿ ಅಬ್ದುಲ್ ಜಬ್ಬಾರ್ ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಪಕ್ಷ ಸಂಘಟನೆ ಮಾಡಿದ್ದಾರೆ. ಸಾಮಾಜಿಕ ನ್ಯಾಯದಡಿ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ಕೇಳಿದ್ದೇ ತಪ್ಪಾಗಿದೆ. ಸಲೀಂ ಅಹಮದ್, ರಿಜ್ವಾನ್ ಅರ್ಷದ್ ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ್ದು ಖಂಡನೀಯ. ರಾಜೀನಾಮೆ ಪರ್ವವು ಮುಂಬರುವ ಚುನಾವಣೆಗಳ ಮೇಲೆ ಪರಿಣಾಮ ಬೀರಲಿದೆ ಎಂದು ಎಚ್ಚರಿಸಿದರು.

ಪಕ್ಷದ ಮುಖಂಡರಾದ ಹುಸೇನ್ ಉಕ್ಕಡಗಾತ್ರಿ, ಉಬೇದುಲ್ಲಾ ಅತ್ತಾರ್, ಆಸಿಫ್ ಜುನ್ನೈದಿ, ಎ.ಅಬ್ದುಲ್ ಜಬ್ಬಾರ್, ಎಸ್.ಕೆ.ಏಜಾಜ್ ಅಹಮದ್, ಪಿ.ಖಾಸಿಂಸಾಬ್, ನೂರುಲ್ಲಾ ಸುದ್ದಿಗೋಷ್ಠಿಯಲ್ಲಿದ್ದರು.

ಯುವಕನ ಲಿಂಗ ಬದಲಾವಣೆಗೆ ಯತ್ನ

• ಮೈಸೂರು: ಯುವಕನೊಬ್ಬನನ್ನ ಕಿಡ್ನಾಪ್ ಮಾಡಿ ಬಲವಂತವಾಗಿ ಮಂಗಳಮುಖಿ ವೇಷ ಹಾಕಿಸಿ ಕಲೆಕ್ಷನ್ ಹಾಗೂ ಸೆಕ್ಸ್ ವರ್ಕ್, ರೀಲ್ಸ್ ಗಳಲ್ಲಿ ಬಳಸಿ, ಲಕ್ಷಾಂತರ ಹಣ ಗಳಿಸಿದಲ್ಲೆ, ಆತನಿಗೆ ಬಲವಂತವಾಗಿ ಲಿಂಗ ಬದಲಾವಣೆಗೆ ನಡೆಸಿದ ಹುನ್ನಾರ ನಡೆಸಿದ ಘಟನೆ ನಡೆದಿದೆ. ಇದರಿಂದ ಬೇಸತ್ತು ಖದೀಮರ ಕಪಿಮುಷ್ಠಿಯಿಂದ ಹೊರಬಂದ ಯುವಕನಿಗೆ ವಾಪಸ್ ದಂಧೆಗೆ ಬರುವಂತೆ ಮಾನಸಿಕವಾಗಿ ಕಿರುಕುಳ ನೀಡುತ್ತಿರುವಆಘಾತಕಾರಿ ಪ್ರಕರಣವೊಂದು ಬೆಳಕಿಗೆ ಬಂದಿದೆ.



ಕರಾಳ ದಂಧೆಯಿಂದ ತಪ್ಪಿಸಿಕೊಂಡು ಬಂದರೂ ನಿಲ್ಲದ ಕಿರುಕುಳ

ಮಂಗಳಮುಖಿಯ ಕಿರುಕುಳಕ್ಕೆ ಬೇಸತ್ತ ಯುವಕ ಇದೀಗ ನ್ಯಾಯಕ್ಕಾಗಿ ಮೈಸೂರು ಪೊಲೀಸರ ಮೊರೆ ಹೋಗಿದ್ದಾನೆ. ಮತ್ತೆ ಕರಾಳ ದಂಧೆಗೆ ತೊಡಗಿಸಲು ಹುನ್ನಾರ ನಡೆಸುತ್ತಿರುವ ಮಂಗಳಮುಖಿ ವಿರುದ್ದ ಯುವಕ ಮೈಸೂರಿನ ಲಷ್ಕರ್ ಠಾಣೆಯ ಪೊಲೀಸರಿಗೆ ದೂರು ನೀಡಿದ್ದಾನೆ. ನಂಜನಗೂಡಿನ ತ್ಯಾಗರಾಜ ಕಾಲೋನಿಯ ಯುವಕ ಅನಿಲ್ ಕುಮಾರ್ ಅಕ್ಷತಾ ನೊಂದ ಯುವಕ. ಮಂಗಳೂರು ಮೂಲದ ಅನಿತಾ ಆರೋಪ ಹೊತ್ತ ಮಂಗಳಮುಖಿ.

ನಾಲ್ಕು ತಿಂಗಳ ಹಿಂದೆ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಅನಿಲ್ ಕುಮಾರ್ ಬಸ್ ಗಾಗಿ ಕಾಯುತ್ತಿದ್ದಾಗ ಮಂಗಳಮುಖಿ ಅನಿತಾ ಮತ್ತು ತಂಡ ಅನಿಲ್ ಕುಮಾರ್‌ಗೆ ಮುಸುಕು ಹಾಕಿ ಮತ್ತು ಬರುವಂತೆ ಮಾಡಿ, ಬಲವಂತವಾಗಿ ಕಿಡ್ನಾಪ್ ಮಾಡಿ, ಮಂಗಳೂರಿಗೆ ಕರೆದೊಯ್ದಿದ್ದಾರೆ. ಬಳಿಕ ಆತನಿಗೆ ಸೀರೆ, ನೈಟಿ, ಕಿವಿಗೆ ಓಲೆ, ಮೂಗಿಗೆ ಬಟ್ಟು ಹಾಕಿಸಿದ್ದಾರೆ. ಮಂಗಳಮುಖಿಯಾಗಿ ವೇಷ ಹಾಕಿಸಿ ಬಲವಂತವಾಗಿ ಬೀದಿಗಳಲ್ಲಿ ಅಂಗಡಿಗಳ ಮುಂದೆ ಕಲೆಕ್ಷನ್ ಮಾಡಿಸಿದ್ದಾರೆ. ಪ್ರತಿದಿನ 2 ರಿಂದ 3 ಸಾವಿರ ಕಲೆಕ್ಷನ್ ಮಾಡಿಸಿದ್ದಾರೆ.

ರೀಲ್ಸ್‌ಗಳನ್ನ ತಯಾರಿಸಿ ಸಾಮಾಜಿಕ ಜಾಲತಾಣದಲ್ಲೂ ಅಪ್ ಲೋಡ್ ಮಾಡಿದ್ದಾರೆ. ಅಲ್ಲದೆ ಮಂಗಳೂರು, ಕೇರಳಾ ಭಾಗಗಳಿಗೆ ಕಳಿಸಿ ಸೆಕ್ಸ್ ವರ್ಕ್ ಗೂ ಬಳಸಿದ್ದಾರೆ.ಇದರಲ್ಲೂ ಅನಿಲ್ ಕುಮಾರ್ ಅಕ್ಷತಾರಿಂದ ಸಾವಿರಾರು ರೂ. ಹಣ ವಸೂಲಿಯಾಗಿದೆ. ನಂತರ ಆಧಾರ್ ಕಾರ್ಡ್ ನಲ್ಲಿ ಟ್ರಾನ್ಸ್‌ಜೆಂಡರ್ ಎಂದು ನಮೂದಿಸಿ, ಸಮಾಜ ಕಲ್ಯಾಣ ಇಲಾಖೆಯಿಂದ ಸಹ ಅಧಿಕೃತ ಸರ್ಟಿಫಿಕೇಟ್ ಕೊಡಿಸಿದ್ದಾರೆ. ಮುಂದಿನ ತಿಂಗಳು ಬಾಂಬೆಗೆ ಕರೆದೊಯ್ದು ಶಸ್ತ್ರಚಿಕಿತ್ಸೆ ಮೂಲಕ ಶಾಶ್ವತವಾಗಿ ಮಂಗಳಮುಖಿಯಾಗಿ ಕನ್ವರ್ಟ್ ಮಾಡಲು ಸ್ಕೆಚ್ ಹಾಕುತ್ತಿದ್ದ ಮಾಹಿತಿ ಅರಿತ ಅನಿಲ್ ಕುಮಾರ್ ಕರಾಳ ದಂಧೆಯ ಕಪಿಮುಷ್ಠಿಯಿಂದ ಹೊರಬರಲು ನಿರ್ಧರಿಸಿ ತನ್ನ ಸಂಪಾದನೆಯಲ್ಲಿ 3 ಲಕ್ಷ ಕೊಡುವಂತೆ ಕೇಳಿದಾಗ ಅನಿತಾ ಉಲ್ಟಾ ಹೊಡೆದಿದ್ದಾರೆ. ತನ್ನ ಮನೆಯಿಂದ 5 ಲಕ್ಷ ನಗದು ಚಿನ್ನಾಭರಣ ಕಳ್ಳತನ ಮಾಡಿರುವುದಾಗಿ ಸುಳ್ಳು ಕಂಪ್ಲೇಂಟ್ ದಾಖಲಿಸಿ, ಜೈಲಿಗೆ ಹಾಕಿಸುತ್ತೇನೆಂದು ಅನಿತಾ ಬೆದರಿಸಿದ್ದಾರೆ. ಮನನೊಂದ ಅನಿಲ್ ಕುಮಾರ್ ದಾಖಲೆಗಳು ಸರ್ಟಿಫಿಕೇಟ್ ಸಮೇತ ಮಂಗಳೂರು ತೊರೆದು ನಂಜನಗೂಡು ಸೇರಿಕೊಂಡಿದ್ದಾನೆ. ಮತ್ತೆ ದಂಧೆ ಮಾಡಿಸಲು ಹವಣಿಸಿದ ಅನಿತಾ ಮಂಗಳಮುಖಿಯರನ್ನ ಅನಿಲ್ ಕುಮಾರ್ ಮನೆಗೆ ಕಳಿಸಿ ಗಲಾಟೆ ಮಾಡಿಸಿದ್ದಾರೆ. ಆಗಾಗ ಅನಿತಾ ತನಗೆ ಮಾನಸಿಕವಾಗಿ ಕಿರುಕುಳ ಕೊಡುತ್ತಿದ್ದಾರೆ. ದಂಧೆಗೆ ಹಿಂದಿರುಗುವಂತೆ ಒತ್ತಡ ಹೇರುತ್ತಿದ್ದಾರೆ ಎಂದು ಆರೋಪಿಸಿ ಅನಿಲ್ ಕುಮಾರ್ ಮೈಸೂರಿನ ಲಷ್ಕರ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ನಂಜನಗೂಡು ಪೊಲೀಸರು ತನ್ನ ಮನವಿಗೆ ಸ್ಪಂದಿಸುತ್ತಿಲ್ಲವೆಂದು ಸಹ ಆರೋಪಿಸಿದ್ದಾರೆ.

ಸ್ವಾಗತ



ಚಿಕ್ಕಮಗಳೂರಲ್ಲಿ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಸ್ವಾಗತಿಸಿದರು.

ಕಿರುಸುದ್ದಿ

ಗರ್ಭದಲ್ಲೇ ನೀರಾನೆ ಮರಿ ಸಾವು

• ಶಿವಮೊಗ್ಗ: ತ್ಯಾವರೆಕೊಪ್ಪ ಹುಲಿ ಮತ್ತು ಸಿಂಹಧಾಮದಲ್ಲಿ ನೀರಾನೆ ಹಂಸಿಣಿಯ ಗರ್ಭದಲ್ಲೇ ಮರಿ ಮೃತಪಟ್ಟಿರುವುದನ್ನು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಮರಾಕ್ಷರ ದೃಢಪಡಿಸಿದ್ದಾರೆ. ಹಂಸಿಣಿ ಹೆರಿಗೆ ಅವಧಿ ಮುಗಿದ್ದರೂ ಮರಿ ಹಾಕಿರಲಿಲ್ಲ. ಹಾಗಾಗಿ ಹಂಸಿಣಿ ಮೇಲೆ ತೀವ್ರ ನಿಗಾ ಇರಿಸಲಾಗಿತ್ತು. ಮೈಸೂರು ಮತ್ತು



ಬನ್ನೇರುಘಟ್ಟ ಝೂನಿಂದ ತಜ್ಞ ಪಶು ವೈದ್ಯರ ತಂಡ ಆಗಮಿಸಿ ತಪಾಸಣೆ ನಡೆಸಿತ್ತು. ಇದೀಗ ಹಂಸಿಣಿಯ ಮರಿ ಸೋಂಕಿನಿಂದಾಗಿ ಗರ್ಭದಲ್ಲೇ ಮೃತಪಟ್ಟಿರುವುದನ್ನು ದೃಢಪಡಿಸಲಾಗಿದೆ. ಮಾ.17ರಿಂದಲೇ ಆಹಾರ ಸೇವನೆ ಮಾಡುತ್ತಿರಲಿಲ್ಲ ಮತ್ತು ನೀರಿನಿಂದ ಮೇಲೆ ಬಂದಿರಲಿಲ್ಲ. ಹೀಗಾಗಿ ತರಬೇತಿ ವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಮಾ.19ರಂದು ರಾತ್ರಿ ತಪಾಸಣೆ ತೆರಳಿದ್ದಾಗ ನೀರಾನೆ ಏಕಾಏಕಿ ದಾಳಿ ಮಾಡಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಸಮೀಕ್ಷಾ ರೆಡ್ಡಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದರು. ಎರಡು ಮರಿಗಳು ಮೃತಪಟ್ಟಿದ್ದರಿಂದ 3ನೇ ಮರಿಯನ್ನು ಉಳಿಸುವ ಯತ್ನವನ್ನು ನಡೆಸಲಾಗಿತ್ತಾದರೂ ಅದು ಫಲಕಾರಿಯಾಗಲಿಲ್ಲ. ಈ ಬಾರಿಯಾದರೂ ಮರಿ ಉಳಿಯಬಹುದೆಂಬ ನಿರೀಕ್ಷೆಯಲ್ಲಿದ್ದ ಸಫಾರಿ ಸಿಬ್ಬಂದಿಗೆ ಮತ್ತೆ ನಿರಾಸೆಯಾಗಿದೆ.

ಶಿಕ್ಷಕನಿಂದ ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ

• ಚಿತ್ರದುರ್ಗ: ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಜೀವನದ ಸರಿ ದಾರಿ ತೋರಿಸಬೇಕಾದ ಶಿಕ್ಷಕನೊಬ್ಬ ಅಪ್ರಾಪ್ತ ಬಾಲಕಿಯ ಮೇಲೆ ಕಾಮದ ದೃಷ್ಟಿ ಬೀರಿರುವ ಘಟನೆ ಚಳ್ಳಕೆರೆ ತಾಲೂಕಿನಲ್ಲಿ ಬೆಳಕಿಗೆ ಬಂದಿದೆ. ಗಣಿತ ಶಿಕ್ಷಕ ತನ್ನ ಶಾಲೆಯ 16 ವರ್ಷದ ಅಪ್ರಾಪ್ತ ಬಾಲಕಿಯನ್ನು ಪುಸಲಾಯಿಸಿ ತನ್ನ ಕಾಮ ತೃಷೆಗೆ ಬಳಸಿಕೊಂಡಿದ್ದಾನೆ. ಇದರಿಂದಾಗಿ ಬಾಲಕಿ ಗರ್ಭವತಿಯಾಗಿದ್ದು, ನಾಗರೀಕ ಸಮಾಜದಲ್ಲಿ ಹೆಣ್ಣುಮಕ್ಕಳ ಪೋಷಕರು ಬೆಚ್ಚಿ ಬೀಳುವಂತಾಗಿದೆ. ಬಂಗಾರು ದೇವರಹಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಓ. ರಾಜಣ್ಣ ಶಾಲಾ ಆವರಣದಲ್ಲೇ ವಿದ್ಯಾರ್ಥಿಯ ಮೇಲೆ ನಿರಂತರ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ ಎಂಬ ಆರೋಪ ಕೇಳಿಬಂದಿದೆ. ಬಾಲಕಿಯ ಪೋಷಕರಿಗೆ ವಿಷಯ ತಿಳಿಯಬಾರದೆಂಬ ದುರುದ್ದೇಶದಿಂದ ಬಾಲಕಿಗೆ ಗರ್ಭಪಾತ ಮಾಡಿಸಿದ್ದಾನೆ ಎನ್ನಲಾಗಿದೆ. ಪ್ರಕರಣ ಮುಚ್ಚಿಹಾಕುವ ದುರುದ್ದೇಶದಿಂದ ಚಳ್ಳಕೆರೆ ನಗರದ ಖಾಸಗಿ ನರ್ಸಿಂಗ್ ಹೋಂನ ವೈದ್ಯೆಯ ನೆರವಿನಿಂದ ಬಾಲಕಿಗೆ ಗರ್ಭಪಾ ಮಾಡಿಸಲಾಗಿದೆ ಎಂನ ಗಂಭೀರ ಆರೋಪ ಕೇಳಿಬಂದಿದೆ. ಈ ಕುರಿತು ಮಕ್ಕಳ ರಕ್ಷಣಾಧಿಕಾರಿ ರೇಖಾ ಎಂಬುವರು ನೀಡಿದ ದೂರಿನ ಪರಿಣಾಮ ತಳಕು ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಿಸಲಾಗಿದೆ. ಪ್ರಕರಣ ದಾಖಲಿಸಿದ ಪೊಲೀಸರು ಆರೋಪಿ ಶಿಕ್ಷಕ ಹಾಗೂ ನರ್ಸಿಂಗ್ ಹೋಂನ ವೈದ್ಯೆ ವಿರುದ್ಧ ತನಿಖೆ ಕೈಗೊಂಡಿದ್ದಾರೆ. ಘಟನೆ ಸಂಬಂಧಿಸಿದಂತೆ ಹೆಣ್ಣು ಮಕ್ಕಳ ಪೋಷಕರಿಗೆ ಆಘಾತ ಉಂಟು ಮಾಡಿದ್ದು, ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಆತಂಕಪಡುವಂತಾಗಿದೆ. ಹಾಗಾಗಿ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು ಮತ್ತೆ ಇಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರ ವಹಿಸಬೇಕೆಂದು ಕಾನೂನು ಕ್ರಮ ಜರುಗಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕಾನಿಪ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ನಿರ್ಧಾರ

ರಾಯಚೂರಲ್ಲಿ ಸಮ್ಮೇಳನ

• ಬೀದರ್: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 41ನೇ ಪತ್ರಕರ್ತರ ರಾಜ್ಯ ಸಮ್ಮೇಳನ ರಾಯಚೂರಿನಲ್ಲಿ ನಡೆಯಲಿದೆ.

ನಗರದ ಝೀರಾ ಕನ್ವೆನ್ಷನ್ ಹಾಲ್ ನಲ್ಲಿ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನದ ಎರಡನೇ ದಿನವಾದ ಭಾನುವಾರ ನಡೆದ ಪ್ರತಿನಿಧಿಗಳ ಸಮಾವೇಶ, ಸರ್ವ ಸದಸ್ಯರ ಸಭೆಯಲ್ಲಿ ಈ ಕುರಿತು ಒಕ್ಕೊರಲ ತೀರ್ಮಾನ ಕೈಗೊಳ್ಳಲಾಯಿತು.

ರಾಯಚೂರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲಾ ಘಟಕಗಳು ಮುಂದಿನ ರಾಜ್ಯ ಸಮ್ಮೇಳನ ಆಯೋಜನೆಗೆ ಮುಂದೆ ಬಂದಿದ್ದವು. ರಾಯಚೂರಿನಲ್ಲಿ ಸಮ್ಮೇಳನ ನಡೆಸಲು ನಿರ್ಣಯಿಸಲಾಗಿದೆ ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರು ಘೋಷಿಸಿದರು. ಸಂಘದ ಬೈಲಾ ತಿದ್ದುಪಡಿಗೆ ಸಂಬಂಧಿಸಿದಂತೆ ಚರ್ಚೆ ನಡೆದಿದೆ. ಈ ಕುರಿತು ಜಿಲ್ಲಾ ಘಟಕಗಳಿಗೆ ಪತ್ರ ಬರೆದು ಅಭಿಪ್ರಾಯ ಪಡೆಯಲಾಗುವುದು. ಬಳಿಕ ರಾಜ್ಯ ಘಟಕದ ವಿಶೇಷ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಮ್ಮೇಳನಕ್ಕೆ ಮೆಚ್ಚುಗೆ

40ನೇ ಪತ್ರಕರ್ತರ ರಾಜ್ಯ ಸಮ್ಮೇಳನವನ್ನು ಅಚ್ಚುಕಟ್ಟಾಗಿ ಆಯೋಜಿಸಿದ್ದಕ್ಕೆ ಸರ್ವ ಸದಸ್ಯರ ಸಭೆಯಲ್ಲಿ ಮೆಚ್ಚುಗೆ ವ್ಯಕ್ತವಾಯಿತು. ಸಮ್ಮೇಳನವನ್ನು ಬಹಳ ವ್ಯವಸ್ಥಿತವಾಗಿ ಸಂಘಟಿಸಲಾಗಿದೆ. ಹೀಗಾಗಿ ಬೀದರ್ ಜಿಲ್ಲೆಯ ಸಂಘದ ಪ್ರಮುಖರು ಹಾಗೂ ಸದಸ್ಯರಿಗೆ ಧನ್ಯವಾದ ಅರ್ಪಿಸಲಾಗುವುದು ಎಂದು ಸಭೆಯಲ್ಲಿ ಮಾತನಾಡಿದ ಸದಸ್ಯರು ಹೇಳಿದರು.

ಕಳೆ ತಂದ ಸುಕನ್ಯಾ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನಕ್ಕೆ ಪತ್ರಕರ್ತೆ, ನಿರೂಪಕಿ ಸುಕನ್ಯಾ ಕಳೆ ತಂದರು. ಉದ್ಘಾಟನಾ ಸಮಾರಂಭ, ವಿವಿಧ ಗೋಷ್ಠಿ, ಸಮಾರೋಪ ಸಮಾರಂಭದ ಅತ್ಯುತ್ತಮ ನಿರೂಪಣೆ ಮೂಲಕ ಎಲ್ಲರ ಗಮನ ಸೆಳೆದರು.

> **ಬೀದರ್‌ನಲ್ಲಿ ನಡೆದ ಪತ್ರಕರ್ತರ ರಾಜ್ಯ ಸಮ್ಮೇಳನ ಅದ್ದೂರಿ ಯಶಸ್ಸು ಕಂಡಿದೆ. ಇದು ಸಂಘಟಿತ ಪ್ರಯತ್ನದ ಫಲ. ರಾಜ್ಯ ಪದಾಧಿಕಾರಿಗಳು, ಜಿಲ್ಲಾ ಅಡಾಕ್ ಸಮಿತಿ ಸದಸ್ಯರು, ಸ್ವಾಗತ ಸಮಿತಿ, ವಿವಿಧ ಉಪ ಸಮಿತಿಗಳು, ಸಂಘದ ಸದಸ್ಯರು ಹಾಗೂ ಜಿಲ್ಲೆಯ ಎಲ್ಲ ಪತ್ರಕರ್ತರ ಸಹಕಾರದಿಂದ ಅದು ಸಾಕಾರವಾಗಿದೆ.**
> ■ **ಆನಂದ ದೇವಪ್ಪ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ**

ಸಂಘದ ಬೈಲಾ ತಿದ್ದುಪಡಿ ಮಾಡಿ ಪದಾಧಿಕಾರಿಗಳ ಅವಧಿಯನ್ನು ಮೂರು ವರ್ಷದಿಂದ ಐದು ವರ್ಷಕ್ಕೆ ವಿಸ್ತರಿಸಬೇಕೇ ಅಥವಾ ಈಗಿರುವಂತೆ ಮೂರು ವರ್ಷಗಳಿಗೆ ಸೀಮಿತಗೊಳಿಸಬೇಕೇ ಎನ್ನುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು. ಬೈಲಾ ತಿದ್ದುಪಡಿ ಸಂಬಂಧಿಸಿದಂತೆ ಸದಸ್ಯರಿಂದ ಪರ-ವಿರೋಧದ ಅಭಿಪ್ರಾಯಗಳು ವ್ಯಕ್ತವಾದವು. ಸದಸ್ಯರ ಗುರುತಿನ ಚೀಟಿಯ ಅವಧಿಯನ್ನು ಮೂರು ವರ್ಷಕ್ಕೆ ವಿಸ್ತರಣೆ ಮಾಡಬೇಕು. ಗ್ರಾಮೀಣ ಪತ್ರಕರ್ತರ ಉಚಿತ ಬಸ್ ಪಾಸ್ ವಿತರಣೆಯಲ್ಲಿನ ಸಮಸ್ಯೆ ಬಗೆಹರಿಸಬೇಕು. ನಕಲಿ ಪತ್ರಕರ್ತರ ಹಾವಳಿ ತಪ್ಪಿಸಬೇಕು ಎಂಬ ಒತ್ತಾಯ ಕೇಳಿ ಬಂದವು.

ಸಂಘದ ರಾಜ್ಯ ಘಟಕದ ಉಪಾಧ್ಯಕ್ಷರಾದ ಮದನ್ ಪಾಟೀಲ, ಮತ್ತಿಕೆರೆ ಜೈರಾಮ್, ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್, ಕಾರ್ಯದರ್ಶಿಗಳಾದ ಪುಂಡಲೀಕ ಬಾಳೋಜಿ, ಸೋಮಶೇಖರ ಕೆರೆಗೋಡು, ಲಿಂಗಪ್ಪ ಚಾವಡಿ, ಖಜಾಂಚಿ ವಾಸುದೇವ ಹೊಳ್ಳಾ, ಜಿಲ್ಲಾ ಘಟಕದ ಅಧ್ಯಕ್ಷ ಆನಂದ ದೇವಪ್ಪ, ಅಡಾಕ್ ಸಮಿತಿ ಸದಸ್ಯರಾದ ಅಪ್ಪಾರಾವ್ ಸೌದಿ, ಶಿವಕುಮಾರ ಸ್ವಾಮಿ ಇದ್ದರು.

ನಜೀರ್ ರಾಜೀನಾಮೆ ಕೊಟ್ಟಿಲ್ಲ: ಸಿದ್ದರಾಮಯ್ಯ

• ಚಿಕ್ಕಮಗಳೂರು: ತಮ್ಮ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್ ಇನ್ನೂ ರಾಜೀನಾಮೆ ಕೊಟ್ಟಿಲ್ಲ. ಕೊಡಬ ಹುದು ಎಂದುಕೊಂಡಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಹೊನ್ನೆ ಕೊಡಿಗೆ ಸೇತುವೆ ಉದ್ಘಾಟನೆಗಾಗಿ ಭಾನುವಾರ ಸಂಜೆ ನರಸಿಂಹರಾಜಪುರಕ್ಕೆ ಆಗಮಿಸಿದ ಅವರು, ಸುದ್ದಿಗಾರರ ಜೊತೆ ಮಾತನಾಡಿದ ಸಂದರ್ಭ, ದಾವಣಗೆರೆ ಉಪಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದರೆಂಬ ಹಿನ್ನೆಲೆ ಯಲ್ಲಿ ನಿಮ್ಮ ರಾಜಕೀಯ ಕಾರ್ಯದರ್ಶಿ ರಾಜೀನಾಮೆ ನೀಡುತ್ತಾರೆಂಬ ಸುದ್ದಿ ಹರಡಿದೆ ಎಂಬ ಪ್ರಶ್ನೆಗೆ ಅವರು ಮೇಲಿನಂತೆ ಪ್ರತಿಕ್ರಿಯಿಸಿದರು. ಉಪ ಚುನಾವಣೆಗೆ ಸಂಬಂಧಿಸಿದಂತೆ ಹೈಕಮಾಂಡ್‌ನಿಂದ ಉಸ್ತುವಾರಿಯನ್ನು ನೇಮಿಸಲಾಗಿದ್ದು, ಅವರ ವರದಿ ಆಧರಿಸಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದರು.

ಸೋಲೊಪ್ಪಿಕೊಂಡಿಲ್ಲ: ಉಪ ಚುನಾವಣೆಯಲ್ಲಿ ಫಲಿತಾಂಶಕ್ಕೆ ಮುನ್ನವೇ ಕಾಂಗ್ರೆಸ್ ಪಕ್ಷ ಸೋಲೊಪ್ಪಿಕೊಳ್ಳುತ್ತಿದೆಯಾ ಎನ್ನುವ ಪ್ರಶ್ನೆ ಉದ್ಭವವಾಗಿದೆ ಎಂದಾಗ, ಸೋಲನ್ನು ಎಲ್ಲಿ ಒಪ್ಪಿಕೊಂಡಿದ್ದೇವೆ? ಗೆಲ್ಲುವವರು ನಾವೇ. ತಲೆದಂಡ ಆದ ಕೂಡಲೇ ಸೋಲುತ್ತೇವೆ ಎಂದು ಕೊಳ್ಳಬೇಕಾ? ನಿಮ್ಮ ಪ್ರಕಾರ ಸೋಲುತ್ತೇವೆ ಎಂದು ಹೇಳಿದವರು ಯಾರು ಎಂದು ಮರುಪ್ರಶ್ನೆ ಹಾಕಿದರು. ನಮ್ಮವರೇ ಪಕ್ಷ ವಿರೋಧಿ ಕೆಲಸ ಮಾಡಿದ್ದಾರೆ ಎಂದರು.

ಆರೋಪ ಸತ್ಯಕ್ಕೆ ದೂರ

ಪ್ರವಾಸೋದ್ಯಮಕ್ಕೆ ಕರ್ನಾಟಕ ಸುರಕ್ಷಿತವಲ್ಲ ಎನ್ನುವುದು ಸರಿಯಲ್ಲ. ಅದು ಸತ್ಯಕ್ಕೆ ದೂರವಾದ ವಿಚಾರ ಎಂದು ಮುಖ್ಯಮಂತ್ರಿಗಳು ಹೇಳಿದರು. ನಾಪತ್ತೆಯಾಗಿದ್ದ ಕೇರಳದ ಬಾಲಕಿ ಶ್ರೀನಂದಾ ಮಾಣಿಕ್ಯಧಾರ ಬಳಿ ಶವವಾಗಿ ಪತ್ತೆಯಾದ ಹಿನ್ನೆಲೆಯಲ್ಲಿ ಕೇರಳದ ಮಾಧ್ಯಮವೊಂದರಲ್ಲಿ ಕರ್ನಾಟಕ ಪ್ರವಾಸೋದ್ಯಮಕ್ಕೆ ಸುರಕ್ಷಿತವಲ್ಲ ಎಂದು ಆರೋಪಿಸಿರುವ ಕುರಿತು ಅವರು ಮೇಲಿನಂತೆ ಪ್ರತಿಕ್ರಿಯಿಸಿದರು. ಬಾಲಕಿ ಯಾಕೆ ಸತ್ತಿದ್ದಾಳೆ ಎನ್ನುವುದು ಗೊತ್ತಿಲ್ಲ. ಆ ಬಗ್ಗೆ ತನಿಖೆ ಆಗಬೇಕು. ಆದರೆ ಕರ್ನಾಟಕ ಪ್ರವಾಸೋದ್ಯಮಕ್ಕೆ ಸುರಕ್ಷಿತವಲ್ಲ ಎನ್ನುವ ವಿಚಾರ ಸತ್ಯಕ್ಕೆ ದೂರ ಎಂದರಲ್ಲದೆ, ಪ್ರವಾಸೋದ್ಯಮ ಅಭಿವೃದ್ಧಿ ಕುರಿತು ಸಭೆ ನಡೆಸುವುದಾಗಿ ತಿಳಿಸಿದರು.

ಫೈರೋಜ್ ಹಂತಕರ ಬಂಧನ

• ಧಾರವಾಡ: ಯೂತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಫೈರೋಜ್ ಖಾನ್ ಪಠಾಣ ಹತ್ಯೆಯ ಪ್ರಕರಣದಡಿ 8 ಜನ ಆರೋಪಿಗಳನ್ನು ಉಪನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಧಾರವಾಡ ತಾಲೂಕಿನ ಉಪ್ಪಿನಬೆಟಗೇರಿ ಸಮೀಪದಲ್ಲಿ ಪ್ರಮುಖ ಆರೋಪಿಗಳಾದ ಮೊಹ್ಮದ್ ಶಾ, ಖೈಪ್, ಗೌಸ್, ಸಮೀರ್, ಸದ್ದಾಂ ಜತೆ ಹತ್ಯೆ ಸಂಚು ರೂಪಿಸಿದ ಮೂವರನ್ನು ಬಂಧಿಸಲಾಗಿದೆ. ಮೂಲಗಳ ಪ್ರಕಾರ ಒಂಭತ್ತು ಜನರ ಗ್ಯಾಂಗ್ ಫೈರೋಜ್ ಹತ್ಯೆ ಮಾಡಿದ್ದು, ಸಂಚು ರೂಪಿಸಿದ್ದ ಆರ್ಬಾಜ್ ಪಠಾಣ್ ಮತ್ತು ಗುಲಾಬ್ ಎಂಬುವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿತ್ತು. ಹತ್ಯೆಯಲ್ಲಿ ಭಾಗಿಯಾಗಿದ್ದ ಮೊಹ್ಮದ್ ಶಾ, ಖೈಪ್, ಗೌಸ್, ಸಮೀರ್, ಸದ್ದಾಂ ಉಪ್ಪಿನ ಬೆಟಗೇರಿ ಸಂಬಂಧಿಕರಮನೆಯಲ್ಲಿಇರುವಖಚಿತಮಾಹಿತಿ ಮೇರೆಗೆ ತೆರಳಿ ಪೊಲೀಸರು ಬಂಧಿಸಿದ್ದಾರೆ. ಧಾರವಾಡ-ಬೆಳಗಾವಿ ಗಡಿಯಲ್ಲಿ ಫೈರೋಜ್ ಮೊಬೈಲ್ ಬಿಸಾಕಿದ ಹಂತಕರ ಮೊಬೈಲ್ ಲೋಕೇಷನ್ ಆಧರಿಸಿ ಬಂಧಿಸಿದ್ದು, ಸಂಚು ರೂಪಿಸಿದ ಇನ್ನೊಬ್ಬ ಆರೋಪಿ ಬಂಧನಕ್ಕೆ ಬಲೆ ಬೀಸಲಾಗಿದೆ.

ಘಟನೆ ಹಿನ್ನೆಲೆ

ಶುಕ್ರವಾರ ರಾತ್ರಿ ಫೈರೋಜ್ ಖಾನ್ ಪಠಾಣ ಮನೆಗೆ ನುಗ್ಗಿದ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಮನ ಬಂದಂತೆ ದಾಳಿ ನಡೆಸಿತ್ತು. ತೀವ್ರ ರಕ್ತಸ್ರಾವದಿಂದಾಗಿ ಫೈರೋಜ್ ಸ್ಥಳದಲ್ಲೇ ಮೃತಪಟ್ಟಿದ್ದರು. ಮದುವೆಗೆ 15 ದಿನಗಳ ಬಾಕಿ ಇದ್ದಾಲೇ ನಡೆದ ಈ ಘಟನೆ ಅವಳಿನಗರ ಬೆಚ್ಚಿ ಬೀಳಿಸಿದೆ. ಹಾಶ್ಮಿ ನಗರದಲ್ಲಿ ಬಿಗುವಿನ ವಾತಾವರಣವಿದ್ದು, ಮುಂಜಾಗ್ರತೆಗಾಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಿದೆ.

ಹತ್ಯೆಗೆ ಕಾರಣ

ಪ್ರಾಥಮಿಕ ತನಿಖೆಯ ಪ್ರಕಾರ, ಈ ಕೊಲೆಗೆ ಹಳೆಯ ವೈಯಕ್ತಿಕ ದ್ವೇಷ ಹಾಗೂ ರಾಜಕೀಯ ವೈಷಮ್ಯವೇ ಪ್ರಮುಖ ಕಾರಣ ಎಂದು ತಿಳಿದುಬಂದಿದೆ. ಫೈರೋಜ್ ಬೆಳೆವಣಿಗೆ ವಿರೋಧಿಗಳ ಕಣ್ಣು ಕೆಂಪಾಗಿಸಿತ್ತು.

> **ಪ್ರಕರಣ ಗಂಭೀರವಾಗಿ ಪರಿಗಣಿಸಿ, ಶೀಘ್ರ ಕಾರ್ಯಾಚರಣೆಯಿಂದ ಆರೋಪಿಗಳನ್ನು ಬಂಧಿಸಿ, ವಿಚಾರಣೆಗೊಳಪಡಿಸಿದೆ. ಹತ್ಯೆ ಹಿಂದಿನ ಸಂಪೂರ್ಣ ಸತ್ಯಾಸತ್ಯತೆ ಶೀಘ್ರವೇ ಹೊರಬರಲಿದೆ.**
> ■ **ಎನ್.ಶಶಿಕುಮಾರ, ಹು-ಧಾ ಪೊಲೀಸ್ ಆಯುಕ್ತರು**

ಹೆದ್ದಾರಿ ಡಾಬಾ ಮಾಲೀಕರಿಗೆ ದಂಡ

• ಬೆಂಗಳೂರು: ಹೆದ್ದಾರಿ ಬದಿಯ ಡಾಬಾಗಳಲ್ಲಿ ಗ್ರಾಹಕರಿಗೆ ಬಡಿಸುವ ಊಟದ ಗುಣಮಟ್ಟ ಹಾಗೂ ನೈರ್ಮಲ್ಯವನ್ನು ಪರಿಶೀಲಿಸಲು ಆರೋಗ್ಯ ಮತ್ತು ಆಹಾರ ತಪಾಸಣಾ ಅಧಿಕಾರಿಗಳು ದಿಢೀರ್ ಕಾರ್ಯಾಚರಣೆ ನಡೆಸಿದ್ದು, ಶುಚಿತ್ವ ಕಾಪಾಡದ ಡಾಬಾ ಮಾಲೀಕರಿಗೆ ಬರೋಬ್ಬರಿ 3.69 ಲಕ್ಷ ರೂಪಾಯಿ ದಂಡ ವಿಧಿಸಿದ್ದಾರೆ. ಏ. 10 ಹಾಗೂ 11ರಂದು ರಾಜ್ಯದ ವಿವಿಧ ಹೆದ್ದಾರಿ ಮಾರ್ಗಗಳಲ್ಲಿ ಆಹಾರ ಸುರಕ್ಷತಾ ಅಧಿಕಾರಿಗಳು ಎರಡು ದಿನಗಳ ಬೃಹತ್ ತಪಾಸಣಾ ಅಭಿಯಾನ ನಡೆಸಿದ್ದಾರೆ. ಈ ಕಾರ್ಯಾಚರಣೆಯ ವೇಳೆ ಒಟ್ಟು 99 ಡಾಬಾಗಳ ಮೇಲೆ ಅಧಿಕಾರಿಗಳು ದಿಢೀರ್ ದಾಳಿ ನಡೆಸಿದ್ದು, ಅಡುಗೆ ಮನೆಯ ನೈರ್ಮಲ್ಯ ಕೊರತೆ, ಕಳಪೆ ಗುಣಮಟ್ಟದ ಆಹಾರ ಮತ್ತು ನಿಯಮಗಳ ಉಲ್ಲಂಘನೆಯನ್ನು ಪತ್ತೆಹಚ್ಚಿರುವ ಅಧಿಕಾರಿಗಳು, ಒಟ್ಟಾರೆಯಾಗಿ 3,69,500 ರೂ.ಗಳ ದಂಡ ಸ್ಥಳದಲ್ಲೇ ವಸೂಲಿ ಮಾಡಿದ್ದಾರೆ. ಜತೆಗೆ ಕಳಪೆ ಗುಣಮಟ್ಟದ ಶಂಕೆ ಇರುವ ಒಟ್ಟು 41 ಆಹಾರದ ಮಾದರಿಗಳನ್ನು ಸಂಗ್ರಹಿಸಿ ಹೆಚ್ಚಿನ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ರವಾನಿಸಿದ್ದಾರೆ. ಅಧಿಕಾರಿಗಳು 5 ಪ್ರಮುಖ ಹೆದ್ದಾರಿ ಮಾರ್ಗಗಳಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ.

ಹೈಕಮಾಂಡ್ ಭೇಟಿಗೆ ಹೊರಟ 20 ಸಚಿವ ಸ್ಥಾನಕ್ಕಾಗಿ ಶಾಸಕರು

• ಬೆಂಗಳೂರು: ಎರಡು ಕ್ಷೇತ್ರಗಳ ಉಪ ಚುನಾವಣೆ ಮುಗಿದ ಬೆನ್ನಲ್ಲೇ, ಸಂಪುಟ ಪುನಾರಚನೆ ವಿಚಾರ ಮತ್ತೆ ಗರಿಗೆದರಿದೆ. ಹಲವು ಶಾಸಕರು ಸಚಿವ ಸಂಪುಟ ಸೇರಿಕೊಳ್ಳಲು ಕಸರತ್ತು ನಡೆಸಿದ್ದು, ಹೈಕಮಾಂಡ್ ಭೇಟಿಗೆ ಹೊಸದಿಲ್ಲಿಗೆ ತೆರಳಿದ್ದಾರೆ.

ಈ ಕುರಿತು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ, ಶಾಸಕ ಅಶೋಕ್ ಪಟ್ಟಣ್, ನಾವು ಮೂರ್ನಾಲ್ಕು ದಿನ ದೆಹಲಿಯಲ್ಲಿ ಉಳಿಯುತ್ತೇವೆ. ನಮ್ಮ ಹೈಕಮಾಂಡ್ ನಾಯಕರಾದ ವೇಣು ಗೋಪಾಲ್, ಸುರ್ಜೇವಾಲಾ ಸೇರಿದಂತೆ ಹಲವು ಹೈಕಮಾಂಡ್ ನಾಯಕರನ್ನು ಭೇಟಿ ಆಗುತ್ತಿದ್ದೇವೆ. ಈ ವಿಚಾರವನ್ನು ಕಳೆದ ಅಧಿವೇಶನ ಸಮಯದಲ್ಲೇ ಸಿಎಂ, ಡಿಸಿಎಂ ಗಮನಕ್ಕೆ ತಂದಿದ್ದೇವೆ. ಈಗ ಒಂದೇ ಅಜೆಂಡಾ ಇಟ್ಟಕೊಂಡು ಹೋಗುತ್ತಿದ್ದೇವೆ ಎಂದು ಪಟ್ಟಣ್ ತಿಳಿಸಿದರು. ಅಲ್ಲದೇ, ನಾಯಕತ್ವ ನಮಗೆ ಸಂಬಂಧಿಸಿಲ್ಲ, ಕೂಡಲೇ ಸಂಪುಟ ಪುನಾರಚನೆಗೆ ಆಗಬೇಕು ಎನ್ನುವುದಷ್ಟೇ ನಮ್ಮ ಒತ್ತಾಯ. ನಾಲ್ಕೈದು ಬಾರಿ ಮಂತ್ರಿ ಆದವರೇ ಮತ್ತೆ ಆದರೆ ಹೇಗೆ ? ಹೀಗಾಗಿ ಉಳಿದ ಎರಡು ವರ್ಷದಲ್ಲಿ ನಮಗೆ ಅವಕಾಶ ಕೊಡಿ ಎಂದು ಕೇಳಿದ್ದೇವೆ. ಈ ವಿಚಾರವಾಗಿ ಹೈಕಮಾಂಡ್ ಮೇಲೆ ಒತ್ತಡ ಹಾಕಬೇಕಿದೆ ಎಂದರು.

> **ಹೊಸದಿಲ್ಲಿಗೆ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು ಸಿಎಂ ಬೆಂಬಲಿಗರೂ ಹೋಗ್ತಿದಾರೆ, ಡಿಕೆಶಿ ಬೆಂಬಲಿಗರೂ ಹೋಗ್ತಿದಾರೆ ಏನೇ ಆದರೂ ನಮ್ಮದು ಒನ್ ಲೈನ್ ಅಜೆಂಡಾ ಅಷ್ಟೇ.**
> ■ **ಅಶೋಕ್ ಪಟ್ಟಣ್, ವಿಧಾನಸಭೆ ಸರ್ಕಾರಿ ಮುಖ್ಯ ಸಚೇತಕ**

ನಮಗೂ ಸಚಿವ ಸ್ಥಾನ ಬೇಕು: ಪುಟ್ಟರಂಗಶೆಟ್ಟಿ

ಇನ್ನು ಶಾಸಕ ಪುಟ್ಟರಂಗಶೆಟ್ಟಿ ಮಾತನಾಡಿ, ನಾವೆಲ್ಲ ಹಿರಿಯ ಶಾಸಕರು. ಎರಡು ವರ್ಷಗಳ ನಂತರ ನಾಯಕರು ಅನುಕೂಲ ಮಾಡಿ ಕೊಡುತ್ತೇವೆ ಎಂದಿದ್ದರು. ಎರಡು ವರ್ಷ ಕಳೆದರೂ ಇನ್ನೂ ಏನೂ ಆಗಿಲ್ಲ. ಹೀಗಾಗಿ ಹೈಕಮಾಂಡ್ ನಾಯಕರನ್ನ ಭೇಟಿ ಮಾಡುತ್ತಿದ್ದೇವೆ. ನನಗೆ ಒಂದು ವರ್ಷದ ಬಳಿಕ ಸಚಿವ ಸ್ಥಾನ ಕೊಡುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದರು. ನಮ್ಮಲ್ಲೂ ಕೆಲವು ವ್ಯತ್ಯಾಸಗಳು ಇವೆ, ಹೀಗಾಗಿ ದೆಹಲಿಗೆ ಹೋಗುತ್ತಿದ್ದೇವೆ. ಸಂಪುಟದಿಂದ ಯಾರನ್ನ ಬಿಡಬೇಕು, ಯಾರಿಗೆ ಕೊಡಬೇಕು ಅನ್ನೋದು ಹೈಕಮಾಂಡ್‌ಗೆ ಗೊತ್ತಿರುತ್ತದೆ ಎಂದು ಪುಯಟ್ಟರಂಗಶೆಟ್ಟಿ ಹೇಳಿದರು.

ಬದುಕಿನ ಹಾದಿಯಲ್ಲಿ ಪರಿಶ್ರಮದ ಚಿತ್ತಾರ

▸ ಸುಬ್ರಾಯ ನಂದೋಡಿ

ಹೊಸ ಜೀವನದ ಕನಸುಗಳೊಂದಿಗೆ ಹಣೆಯಲ್ಲಿ ಸಿಂಧೂರ, ಕೈಗಳಲ್ಲಿ ಮೆಹಂದಿ ಮತ್ತು ಕೆಂಪು ಬಣ್ಣದ ಮದುವೆಯ ಉಡುಪಿನಲ್ಲಿ ಕಂಗೊಳಿಸುತ್ತಿದ್ದ ರಾಖಿ, ಉಷಾ ಮತ್ತು ಸೀಮಾರ ಮುಖದಲ್ಲಿ ಇಂದು ಸಂಭ್ರಮ ಮನೆ ಮಾಡಿತ್ತು. ಈ ಯುವತಿಯರುಅನೂಪಗಢದಸೇವಾ ಭಾರತಿಯು ಆಯೋಜಿಸಿದ್ದ ಸಾಮೂಹಿಕ ವಿವಾಹ ಕಾರ್ಯ ಕ್ರಮದಲ್ಲಿ ವಧುಗಳಾಗಿನಿಂತಿದ್ದರು.ಒಂದುಕಾಲದಲ್ಲಿಭಿಕ್ಷೆ ಬೇಡಲು ಹೋಗುತ್ತಿದ್ದ ಅದೇ ಗಲ್ಲಿಗಳಿಂದ ಈ ಯುವತಿಯರ ಮದುವೆಯ ಮೆರವಣಿಗೆಹೊರಟುಸಂಭ್ರಮಿಸಿದಾಗ ಅವರ ತಾಯಿತಂದೆಯರು ಮಾತ್ರವಲ್ಲದೆ ಆ ಮೊಹಲ್ಲಾದಲ್ಲಿರುವ ಎಲ್ಲರೂ ಸೇವಾಭಾರತಿಯ ಕಾರ್ಯಕರ್ತರಿಗೆ ಆಶೀರ್ವಾದದ ಸುರಿಮಳೆ ಗೈಯ್ದರು. ರಾಜಸ್ಥಾನದಅನೂಪಗಢದ ಸೇವಾ ಭಾರತಿಯ ಸ್ವಾವಲಂಬನಾ ಕೇಂದ್ರವು ಭಿಕ್ಷೆ ಬೇಡುತ್ತಿದ್ದ ಈ ಕುಟುಂಬದ ಯುವತಿಯರಿಗೆ ಹೊಲಿಗೆ, ಬ್ಯೂಟಿಷೀಯನ್ ಮತ್ತು ಇತರ ಉದ್ಯೋಗ ತರಬೇತಿಗಳನ್ನು ನೀಡಿ ಆತ್ಮನಿರ್ಭ ರತೆಯ ದಾರಿ ತೋರಿಸಿದೆ.



ಸೇವಾಗಾಥ
ಕಥೆ-3

ಆಹಾರಕ್ಕಾಗಿ ಕೈ ಚಾಚುತ್ತಿದ್ದ ಸೀಮಾ ಯಾರ ಮನೆಯಲ್ಲಿ ಅಪಮಾನವನ್ನು ಸಹಿಸುತ್ತಿದ್ದಳೋ ಅದೇ ಮನೆಯವಧುವಿನಕೈಗಳನ್ನು ಮೆಹಂದಿಯಿಂದ ಸಿಂಗರಿಸಲು ಹೋಗುತ್ತಿದ್ದಾಳೆ. ಹಲವಾರು ವರ್ಷಗಳಿಂದಮನೆಮನೆಯಿಂದಧಾನ್ಯಗಳನ್ನು ಬೇಡುತ್ತಿದ್ದ ಪೂನಂಗೆ 'ಧಾನ್ಯ' ಎಂದೇ ಹೆಸರಾಗಿ ಹೋಗಿತ್ತು. ಇಂದು ಅದೇ ಪೂನಂ ಸ್ವಾವಲಂಬನಾ ಕೇಂದ್ರದಲ್ಲಿ ಹೊಲಿಗೆ ಕಲಿತ ನಂತರ ಪೂನಂ ಬೊಟಿಕ್ ತೆರೆಯಲು ತಯಾರಿ ನಡೆಸಿರುವಳು.

ಅನೂಪಗಢದಲ್ಲಿ ಸಾನ್ಸಿ, ಬಿಹಾರಿ, ಧೋಲಿ, ಬಾಜಿಗರ್ ವಸತಿಯ ಸುಮಾರು 110 ಕುಟುಂಬಗಳಿವೆ. ಈ ಕುಟುಂಬಗಳುಒಂದು ಕಾಲದಲ್ಲಿ ಶಿಕ್ಷಣ, ಉದ್ಯೋಗ ಮತ್ತು ಸಭ್ಯ ನಾಗರಿಕ ಸಮಾಜದಿಂದ ದೂರವಿದ್ದು, ಬೀದಿಬದಿಗಳಲ್ಲಿ ಅಕ್ಕಿದವಸಧಾನ್ಯಗಳನ್ನುಕಸದರಾಶಿಯಲ್ಲಿಹುಡುಕುತ್ತಾ, ಬರಿದಾದ ಜೀವನವನ್ನು ಸಾಗಿಸುತ್ತಿದ್ದರು. ಸೇವಾಭಾರತಿ ಜೋಧ್ಪುರ್ ಪ್ರಾಂತದ, ಸ್ವಾವಲಂಬನ್ ಪ್ರಮುಖರಾದ ದಿನಕರ್ ಪಾರೀಕ್ ಮತ್ತು ಕ್ಷೇತ್ರೀಯ ಪ್ರಶಿಕ್ಷಣ ಪ್ರಮುಖ ಗೋವಿಂದ್ ಕುಮಾರ್ ಜಿ ಅವರ ಏಳೆಂಟು ವರ್ಷಗಳ ಪ್ರಯತ್ನದಿಂದ, ಈ ಎಲ್ಲಾ ಕುಟುಂಬಗಳು ಜೀವನದಲ್ಲಿ ಶ್ರಮವಹಿಸಿ ಸ್ವಾಭಿಮಾನದಿಂದ ಬದುಕಲು ಕಲಿತಿದ್ದಾರೆ.

ಅಜ್ಞಾನದ ಅಂಧಕಾರದಲ್ಲಿ ಮದ್ಯದಅಮಲಿನಲ್ಲಿ ಮುಳುಗಿ, ಎರಡು ಹೊತ್ತಿನ ಊಟದ ಹುಡುಕಾಟದಲ್ಲಿದ್ದ ಈ ಸೇವಾಬಸ್ತಿಯ ಜನರುತಮ್ಮ ಮಕ್ಕಳಿಗೆ ಶಿಕ್ಷಣನೀಡುವ ಆಲೋಚನೆಯಿಂದ ದೂರವಾಗಿದ್ದರು ಎಂದು ಗೋವಿಂದಜೀ ನುಡಿಯುತ್ತಾರೆ. ಕಾರ್ಯಕರ್ತರ ನಿರಂತರ ಪ್ರಯತ್ನದಿಂದ, 250ಕ್ಕೂ ಹೆಚ್ಚು ಮಕ್ಕಳು ಈಗ ಹತ್ತಿರದ ಸರ್ಕಾರಿ ಶಾಲೆಗಳಲ್ಲಿ ಓದುತ್ತಿದ್ದಾರೆ. ಕಿಶೋರಿ ಕೇಂದ್ರಗಳಲ್ಲಿ ಹದಿಹರೆಯದ ಬಾಲಕಿಯರ ತರಬೇತಿಯ ಬಗ್ಗೆ ವಿಶೇಷ ಗಮನ ಹರಿಸುತ್ತಿರುವ ಅನೂಪಗಢ ತಾಲೂಕಿನ ಮಹಿಳಾ ಮಂಡಲಿಯ ಅಧ್ಯಕ್ಷೆಯಾದ ಜಯ ವಿಜಯ ಚೌಧರಿಯವರು ತಮ್ಮ ಸೇವಾಕಾರ್ಯದ ಓಡಾಟದಲ್ಲಿ ಅನೇಕ ಸೇವಾಬಸ್ತಿಯ ಮಹಿಳೆಯರಲ್ಲಿ ಉಂಟಾದ ಸುಧಾರಣೆಗೆ ಸಾಕ್ಷಿಯಾಗಿದ್ದಾರೆ. ಸೇವಾಭಾರತಿಯ ಸ್ವಾವಲಂಬನಾ ಕೇಂದ್ರದ ಮೂಲಕ ವರ್ಷಪೂರ್ತಿ 17 ಪ್ರಕಲ್ಪಗಳು ಇಲ್ಲಿ ನಡೆಯುತ್ತಿವೆ. ಇಲ್ಲಿ ಮಹಿಳೆಯರು ಹೊಲಿಗೆಯನ್ನು ಕಲಿಯುತ್ತಾ, ಬ್ಯಾಗ್, ಡೈಪರ್ಸ್, ಬಂಟಿಗ್ಸ್, ಧ್ವಜ ಮೊದಲಾದವುಗಳನ್ನು ತಯಾರಿಸುತ್ತಾರೆ. ಸೇವಾಬಸ್ತಿಯ ಮಹಿಳೆಯರು ಮಳೆಗಾಲದಲ್ಲಿ ರಕ್ಷೆಗಳನ್ನು, ದೀಪಾವಳಿಯ ಸಂದರ್ಭದಲ್ಲಿ ದೀಪ ಮತ್ತು ಲಕ್ಷ್ಮೀ, ಗಣೇಶರ ವಿಗ್ರಹಗಳನ್ನು ತಯಾರಿಸುತ್ತಾ ಕುಟುಂಬಕ್ಕೆ ಆರ್ಥಿಕ ಕೊಡುಗೆ ನೀಡುತ್ತಿದ್ದಾರೆ.

ಶ್ರೀಗಂಗಾನಗರ ವಿಭಾಗದ ಮಾತೃಮಂಡಳಿಯ ಸಹವಿಭಾಗ ಸಂಯೋಜಕಿ ಭಗವತೀಜೀ ಪಾರೀಕ್ ಅವರ ಉಪಕ್ರಮ ಮತ್ತು ಚಿಂತನೆಯಿಂದಾಗಿ ಇಂದು ಈ ಯುವಕರು ಸ್ವಾಭಿಮಾನದಿಂದ ಕೈಗಾಡಿಯನ್ನು ನಡೆಸುವ ಮೂಲಕ ತಮ್ಮ ಕುಟುಂಬಗಳಿಗೆ ಆಧಾರವಾಗಿದ್ದಾರೆ. ಕಬ್ಬಿಣದ ಕೆಲಸಗಳನ್ನು ಮಾಡಿ ಜೀವನ ಸಾಗಿಸುತ್ತಿದ್ದ ಲೋಹಾರ್ಸಮುದಾಯದಜನರಿಗೆ ಕಿಸಾನ್ ಕಾರ್ಡ್ ಮಾಡಿಸಿ ಕೊಡಲಾಯಿತು. ಈಗ ಅವರು ಕೃಷಿ ಯಂತ್ರೋಪಕರಣಗಳನ್ನು ತಯಾರಿಸುವ ಮೂಲಕ ಸ್ವಾಭಿಮಾನದ ಬದುಕು ಸಾಗಿಸುತ್ತಿದ್ದಾರೆ.

ಮನಸ್ಸಿನಲ್ಲಿ ಒಳ್ಳೆಯ ಸಂಕಲ್ಪ ಮತ್ತು ಪೂರ್ಣ ಪರಿಶ್ರಮ ಇದ್ದರೆ, ಸಂಕಲ್ಪ ಈಡೇರಲು ಹೆಚ್ಚು ಸಮಯ ಹಿಡಿಸುವುದಿಲ್ಲ. ಯಾರ ಪರಿಸ್ಥಿತಿಯನ್ನೇ ಆಗಲಿ ಬದಲಾಯಿಸಲು ಸಮಾಜದ ಸಹಭಾಗಿತ್ವ ಮತ್ತು ಉತ್ತಮ ಮಾರ್ಗದರ್ಶನ ಸಾಕು. 2019 ರ ಡಿಸೆಂಬರ್‌ನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಥಮಿಕ ಶಿಕ್ಷಾವರ್ಗವನ್ನು ಅನೂಪಗಢದಲ್ಲಿ ನಡೆಸಿದಾಗ, ಇತರರ ಮುಂದೆ ಆಹಾರಕ್ಕಾಗಿ ಕೈ ಚಾಚುತ್ತಿದ್ದ ಅದೇ ಸ್ವಾವಲಂಬಿ ಕುಟುಂಬಗಳು 100 ಸ್ವಯಂಸೇವಕರಿಗೆ 7 ದಿನಗಳ ಕಾಲ ಬಹಳ ಉತ್ಸಾಹದಿಂದ ಭೋಜನ ತಯಾರಿಸಿದರು. ಈ ಸೇವಾಬಸ್ತಿಯು ಎಲ್ಲಾ ಭೇದಭಾವಗಳನ್ನು ಮರೆತು ಸಾಮರಸ್ಯ ಮತ್ತು ಸ್ವಾವಲಂಬನೆಯಲ್ಲಿ ಮುಂಚೂಣಿಯಲ್ಲಿದೆ.

ಸಂಪಾದಕೀಯ

ಮಾತುಕತೆಗೆ ವಿಶ್ವಾಸಾರ್ಹ ರಾಷ್ಟ್ರ ಮುಖ್ಯ

ಅಮೆರಿಕಾ-ಇರಾನ್ ಮಾತುಕತೆಗಳು ಇಸ್ಲಾಮಾಬಾದ್‌ನಲ್ಲಿ ಫಲಕಾರಿಯಾಗದೇ ಮುಕ್ತಾಯಗೊಂಡಿರುವುದು ಮಧ್ಯಪ್ರಾಚ್ಯದಲ್ಲಿ ಶಾಂತಿಯ ಸಾಧ್ಯತೆ ಇನ್ನೂ ದೂರದಲ್ಲಿದೆ ಎಂಬುದನ್ನು ಸ್ಪಷ್ಟಪಡಿಸಿದೆ. ಸುಮಾರು 21 ಗಂಟೆಗಳ ಕಾಲ ನಡೆದ ಈ ಉನ್ನತ ಮಟ್ಟದ ಮಾತುಕತೆಗಳು ಯಾವುದೇ ಒಪ್ಪಂದವಿಲ್ಲದೆ ಅಂತ್ಯಗೊಂಡಿದ್ದು, ಯುದ್ಧ ವಿರಾಮದ ಭವಿಷ್ಯವೂ ಅನುಮಾನಾಸ್ಪದವಾಗಿದೆ.

ಈ ಮಾತುಕತೆಗಳು ಸಾಮಾನ್ಯ ರಾಜತಾಂತ್ರಿಕ ಪ್ರಯತ್ನವಲ್ಲ. ಇವು 1979ರ ಬಳಿಕ ಅಮೆರಿಕಾ-ಇರಾನ್ ನಡುವೆ ನಡೆದ ಅತ್ಯಂತ ಮಹತ್ವದ ನೇರ ಸಂವಾದವೆಂದು ಪರಿಗಣಿಸಲಾಗಿದೆ. ಆದರೆ ಪರಸ್ಪರ ಅವಿಶ್ವಾಸ, ತಂತ್ರಜ್ಞಾನ ಹಾಗೂ ಪ್ರಾದೇಶಿಕ ಪ್ರಾಬಲ್ಯದ ಪ್ರಶ್ನೆಗಳು ಒಪ್ಪಂದಕ್ಕೆ ಅಡ್ಡಿಯಾದವು.

ಮುಖ್ಯವಾಗಿ, ಇರಾನ್ ತನ್ನ ಅಣು ಕಾರ್ಯಕ್ರಮವನ್ನು ಕೈಬಿಡಲು ಸಮ್ಮತಿಸದಿರುವುದು ಮತ್ತು ಅಮೆರಿಕಾ ತನ್ನ ನಿರ್ಬಂಧಗಳನ್ನು ಸಡಿಲಿಸಲು ಹಿಂಜರಿದಿರುವುದು ಸಂಘರ್ಷದ ಕೇಂದ್ರಬಿಂದುವಾಗಿದೆ. ಜೊತೆಗೆ, ಹಾರ್ಮುಝ್ ಜಲಸಂಧಿ ಮೇಲಿನ ನಿಯಂತ್ರಣ, ಲೆಬನಾನ್‌ನಲ್ಲಿ ಯುದ್ಧ ವಿರಾಮ ಮತ್ತು ಯುದ್ಧ ಪರಿಹಾರ ಮೊತ್ತದಂತಹ ವಿಷಯಗಳು ಮಾತುಕತೆಯನ್ನು ಇನ್ನಷ್ಟು ಸಂಕೀರ್ಣಗೊಳಿಸಿವೆ. ಇದಲ್ಲದೆ, ಇಸ್ರೇಲ್-ಇರಾನ್ ಸಂಘರ್ಷದ ಹಿನ್ನೆಲೆಯಲ್ಲಿ ಈ ಮಾತುಕತೆಗಳು ನಡೆದಿದ್ದು, ಮಧ್ಯಪ್ರಾಚ್ಯ ರಾಜಕೀಯದ ತೀವ್ರತೆ ಮತ್ತಷ್ಟು ಹೆಚ್ಚಿಸಿದೆ. ಯುದ್ಧದ ಪರಿಣಾಮವಾಗಿ ಜಾಗತಿಕ ತೈಲ ಸರಬರಾಜು ಅಸ್ಥಿರಗೊಂಡಿದ್ದು, ಆರ್ಥಿಕ ಅಲೆಮಾರಿ ಉಂಟಾಗಿದೆ.ಈ ಸ್ಥಿತಿಯಲ್ಲಿ ಪಾಕಿಸ್ತಾನದ ಮಧ್ಯಸ್ಥಿಕೆ ಬಗ್ಗೆಯೂ ಗಮನ ಹರಿಸಬೇಕಾದುದು ಮುಖ್ಯ. ಇಂಥ ಸಂದರ್ಭಗಳಲ್ಲಿ ಒಂದು ವಿಶ್ವಾಸಾರ್ಹ ಅಥವಾ ಜಾಗತಿಕವಾಗಿ ಉತ್ತಮ ಹೆಸರು ಇರಿಸಿಕೊಂಡಿರುವ ದೇಶದ ಮಧ್ಯಸ್ಥಿಕೆ ಬೇಕಾಗಿತ್ತು. ಆದರೆ, ತಾನು ಹೇಳಿದಂತೆ ಕೇಳುವ ಮತ್ತು ವಿಫಲವಾದರೆ ಅದೇ ದೇಶವನ್ನು ಹೊಣೆ ಮಾಡುವ ಟ್ರಂಪ್ ಅವರ ಆಲೋಚನೆಯಿಂದಾಗಿ ಈ ದೇಶವನ್ನು ಆರಿಸಿಕೊಳ್ಳಲಾಗಿದೆ ಎಂಬುದೂ ಸ್ಪಷ್ಟ. ಹೀಗಾಗಿ, ಶಾಶ್ವತ ಶಾಂತಿಗಾಗಿ ಸದೃಢ ಮತ್ತು ವಿಶ್ವಾಸಾರ್ಹ ದೇಶಗಳನ್ನು ಆರಿಸಿಕೊಳ್ಳಬೇಕು. ಜತೆಗೆ, ಮಧ್ಯಸ್ಥಿಕೆಗೆ ಬಂದವರಿಗೆ ಗೌರವ ಕೊಡುವುದನ್ನು ಟ್ರಂಪ್ ಕಲಿತರೆ ಮಾತ್ರ ಈ ಯುದ್ಧ ನಿಲ್ಲಬಹುದೇನೋ.

ಇದರ ನಡುವೆಯೇ, ಟ್ರಂಪ್ ಮತ್ತಷ್ಟು ದ್ವೇಷದ ಕ್ರಮಕ್ಕೆ ಮುಂದಾಗಿದ್ದಾರೆ. ಹಾರ್ಮುಝ್ ಜಲಸಂಧಿಯಿಂದ ಯಾವುದೇ ಹಡಗನ್ನು ಬಿಡುವುದಿಲ್ಲ, ನಮ್ಮ ನೌಕಾ ಪಡೆ ನಿರ್ಬಂಧ ಹಾಕಲಿದೆ ಎಂದಿದ್ದಾರೆ. ಈ ಮೂಲಕ ಇಡೀ ಜಗತ್ತಿನ ತೈಲ ಬೇಡಿಕೆಗೆ ದೊಡ್ಡ ಅಡ್ಡಿಯಾಗುವ ಎಲ್ಲ ಸಾಧ್ಯತೆಗಳನ್ನೂ ತೋರಿದ್ದಾರೆ. ಇದು ಬೇಕಿಲ್ಲದ ಯುದ್ಧಕ್ಕೆ ಕೈ ಹಾಕಿ, ಈಗ ತನಗೆ ತಿಳಿದ ಅತಿರೇಕದ ಹಾದಿ ತುಳಿಯುವ ನಿಟ್ಟಿನಲ್ಲಿ ಟ್ರಂಪ್ ಹೆಜ್ಜೆ ಇಟ್ಟಿದ್ದಾರೆ ಎಂದು ಹೇಳಬಹುದು. ಒಟ್ಟಿನಲ್ಲಿ, ಈ ಬೆಳವಣಿಗೆಗಳು ಜಾಗತಿಕ ರಾಜಕೀಯದಲ್ಲಿ ಶಾಂತಿ ಎನ್ನುವುದು ಕೇವಲ ಮಾತುಕತೆಗಳಿಂದ ಸಾಧ್ಯವಿಲ್ಲ ಎಂಬುದನ್ನು ತೋರಿಸುತ್ತವೆ. ಪರಸ್ಪರ ವಿಶ್ವಾಸ, ತ್ಯಾಗ ಮತ್ತು ದೀರ್ಘಕಾಲಿಕ ರಾಜತಾಂತ್ರಿಕ ದೃಷ್ಟಿಕೋನವೇ ಶಾಶ್ವತ ಪರಿಹಾರಕ್ಕೆ ದಾರಿ ಮಾಡಿಕೊಡಬಲ್ಲದು.

ಪ್ರಾಣದೀವಿಗೆಯಾದರು ಕವಿ ಶಿವರಾಮು

ನೇರ ನೋಟ

ದು.ಗು. ಲಕ್ಷ್ಮಣ
dugulakshman@yahoo.com



ರಾಷ್ಟ್ರ ದೇವಗೆ ಪ್ರಾಣ ದೀವಿಗೆ, ಸೇವೆಯಾಗಲಿ ನಾಡಿಗೆ
ಮೃತ್ಯು ಭೃತ್ಯನು ಹಿಂದು ಭೂಮಿಗೆ
ಮರಣ ಕಾದಿದೆ ಸಾವಿಗೆ ।

ಅದು 1962 ರಲ್ಲಿ ಭಾರತದ ಅರುಣಾಚಲ ಪ್ರದೇಶ ಗಡಿಯಲ್ಲಿ ಚೀನಾ ಕಾಲು ಕೆದರಿ ಆಕ್ರಮಣ ಮಾಡಿದ ಸಂದರ್ಭ. ಇಡೀ ದೇಶದಲ್ಲಿ ಯುದ್ಧದ ಪರಿಣಾಮ ಕಂಡುಬಂದಿತ್ತು. ಅದೇ ವರ್ಷ ಡಿಸೆಂಬರ್ 8, 9 ರಂದು ಬೆಂಗಳೂರಿನಲ್ಲಿ ಆರ್‌ಎಸ್‌ಎಸ್‌ನ ಪ್ರಾಂತ ತರುಣ ಶಿಬಿರ. ಆ ಶಿಬಿರದಲ್ಲಿ ಆಗಿನ ಸರಸಂಘಚಾಲಕರಾಗಿದ್ದ ಶ್ರೀ ಗುರೂಜಿಯವರು ಪಾಲ್ಗೊಂಡಿದ್ದರು. ಡಿ. 9ರಂದು ಸಂಜೆ ಸಾರ್ವಜನಿಕ ಸಮಾರಂಭದಲ್ಲಿ 'ರಾಷ್ಟ್ರ ದೇವಗೆ...' ಎಂಬ ದೇಶಭಕ್ತಿ ಗೀತೆ ಮೊಳಗಿತು. ಅದಕ್ಕೆ ರಾಗ ಹಾಕಿ ಸುಶ್ರಾವ್ಯವಾಗಿ ಹಾಡಿದವರು ಧಾರವಾಡ ಆಕಾಶವಾಣಿಯ ಕಲಾವಿದ ಕೇಶವ ಗುರ್ರಂ ಅವರು. ಸಮಾಜದಲ್ಲಿನ ಸುಪ್ತ ಪೌರುಷವನ್ನು ಬಡಿದೆಬ್ಬಿಸುವಂತಹ ಭಾವ ಗರ್ಭಿತ ಈ ಹಾಡು ಚೀನಾ ವಿರುದ್ಧ ನಡೆದ ಯುದ್ಧದ ಹಿನ್ನೆಲೆಯಲ್ಲಿ ಅತ್ಯಂತ ಸಮಯೋಚಿತವಾಗಿತ್ತು. ವೀರೋಚಿತ ವಿಚಾರ, ಪೌರುಷ ಆವಾಹಿಸುವ ರಾಗ ಸಂಯೋಜನೆ ಹಾಗೂ ಹಾಡುಗಾರರ ಕಂಠಸಿರಿ ಇವುಗಳ ತ್ರಿವೇಣಿ ಸಂಗಮದಿಂದಾಗಿ ಆ ಹಾಡು ಬಹುಬೇಗನೆ ಜನಪ್ರಿಯವಾಯಿತು.

ಅಷ್ಟಕ್ಕೂ ಆ ಗೀತೆ ರಚಿಸಿದ ಕವಿಯನ್ನೇ ಸ್ಮರಿಸದಿದ್ದರೆ ಹೇಗೆ ? ಪೌರುಷ ಉಕ್ಕಿಸುವ, ದೇಶದ ಬಗ್ಗೆ ಹೆಮ್ಮೆ ಮೂಡಿಸುವ ಆ ಗೀತೆ ರಚಿಸಿದವರು ತರುಣ ಕವಿ ಶಿವರಾಮು. ನಾಲ್ಕು ಚರಣಗಳ ಆ ಗೀತೆಯ ಕೊನೆಯ ಚರಣದ ಕೊನೆಯ ಎರಡು ಸಾಲುಗಳು ''ಬಾಳಬಲ್ಲೆವು ಆಳಬಲ್ಲೆವು ಸೋಲಲೊಲ್ಲೆವು ಒಲ್ಲೆವು। ವಿಶ್ವವೆಲ್ಲವು ಮುನಿದು ನಿಂತರು ನಾಡನುಳಿಸಲು ಬಲ್ಲೆವು'' ಇಡೀ ಗೀತೆಯ ಸಂದೇಶದಂತಿತ್ತು. ಹಾಡಿನ ಪಲ್ಲವಿಯಲ್ಲಿ ಬರುವ 'ಮರಣ ಕಾದಿದೆ ಸಾವಿಗೆ' ಎಂಬ ಸಾಲನ್ನು ಗಮನಿಸಿದ ಪ್ರಖ್ಯಾತ ಕವಿ ದ.ರಾ. ಬೇಂದ್ರೆ ಅಜ್ಜ ''ಅದೇನು ಕಲ್ಪನಾರೀ ಈ ಕವೀದು. ಸಾವಿಗೇ ಮರಣ ಕಾದಿದೆ ಎಂದು ಬರೆದಿದ್ದಾನಲ್ರೀ, ಶಭಾಷ್'' ಎಂದು ಕೊಂಡಾಡಿದ್ದರಂತೆ (ಕೆಲವು ಉಗ್ರ ಹಿಂದು ದೇಶಭಕ್ತರು 'ಅದು ಮರಣ ಕಾದಿದೆ ಸಾಬಿಗೆ' ಎಂದಾಗಬೇಕು ಎಂದು ತಮ್ಮ ತಮ್ಮಲ್ಲಿ ಹೇಳಿಕೊಂಡಿದ್ದರಂತೆ! ಬಿಡಿ, ಆ ಮಾತು ಬೇರೆ)

ಈ ದೇಶಭಕ್ತಿ ಗೀತೆಯು ಅನಂತನ ಅದೆಷ್ಟು ಅಗಣಿತ ಮಂದಿ ಸ್ವಯಂಸೇವಕರ, ಸಾರ್ವಜನಿಕರ ಬಾಯಲ್ಲಿ ಮಾರ್ದನಿಸಿತೋ ಲೆಕ್ಕವಿಟ್ಟವರಾರು? ಈಗಲೂ ಸಂಘವಲಯದಲ್ಲಿ ಅದೊಂದು ಅತ್ಯಂತ ಜನಪ್ರಿಯ ಗೀತೆ. ಆ ಗೀತೆಯನ್ನು ಗುನುಗುತ್ತಾ ಮೈಮನಗಳಲ್ಲಿ ದೇಶ ಪ್ರೇಮದ ಕಾವು ತುಂಬಿಕೊಂಡವರು ಅದೆಷ್ಟೋ. ಶಿವರಾಮು ಅದೊಂದೇ ಗೀತೆ ಬರೆದುದಲ್ಲ. 'ತೆರೆದು ಬಿಡು ಹೃದಯ ದ್ವಾರ, ಬರಲಿ ಬಿಡು ಸಮಿರ ನೇರ', 'ರಣಮಂತ್ರದುಚ್ಚಾರ ಘನಶೌರ್ಯದೋಂಕಾರ', 'ಉಘೇ ವೀರಭೂಮಿಗೆ', 'ಓ ಏಳುಮೈತಾಳು', 'ಐಕ್ಯತೆಯ ಮಣ್ಣೂಡಿ ಭಾರತಿಯು ಬಳಲಿರಲು', 'ಓ ಬೆಳಗಲಿಹುದದೋ ಭಾರತದ ಬಾನಂಚು' ಮುಂತಾದ ಹಲವಾರು ದೇಶಭಕ್ತಿ ಗೀತೆಗಳನ್ನು ರಚಿಸಿದ್ದಾರೆ. ಅವುಗಳನ್ನು ಲಕ್ಷಾಂತರ ಕಂಠಗಳು ಭಕ್ತಿಯಿಂದ ಪಠಿಸಿವೆ. ತಮ್ಮ ಅದ್ಭುತ, ಮೈ ನವಿರೇಳಿಸುವ ಸಾಹಿತ್ಯ ಬಳಸಿ ಅವರು ಬರೆದ ದೇಶಭಕ್ತಿ ಗೀತೆಗಳು ಕನ್ನಡದ ದೇಶಭಕ್ತಿ ಗೀತೆಗಳ ಘನತೆ ಗೌರವ ಹೆಚ್ಚಿಸಿವೆ.

ಶಿವರಾಮು ಎಂದೇ ಪ್ರಸಿದ್ಧರಾಗಿದ್ದ ಎಂ.ಎಸ್. ಶಿವರಾಮಯ್ಯ ಜನಿಸಿದ್ದು ಮಳವಳ್ಳಿಯಲ್ಲಿ, 1936ರ ಜುಲೈ 8 ರಂದು. ತಂದೆ ಸೀತಾರಾಮಯ್ಯ, ತಾಯಿ ಸೀತಮ್ಮ. ಪ್ರಾರಂಭಿಕ ವಿದ್ಯಾಭ್ಯಾಸ ಮಳವಳ್ಳಿಯಲ್ಲಿ. ಇಂಜಿನಿಯರಿಂಗ್ ಓದಲು ಬೆಂಗಳೂರಿನ ಬಿಎಂಎಸ್ ಕಾಲೇಜಿಗೆ ಸೇರಿದರು. ಅನಾರೋಗ್ಯ, ಬಡತನ ಕಾರಣಗಳಿಂದ ಓದನ್ನು ಅರ್ಧಕ್ಕೆ ನಿಲ್ಲಿಸಬೇಕಾಯಿತು.

ನಂತರ ಶಿವರಾಮು ಅವರನ್ನು ಕೈಬೀಸಿ ಕರೆದದ್ದು ಆರ್‌ಎಸ್‌ಎಸ್. ಸಂಘದ ಕಾರ್ಯಕರ್ತರಾಗಿ, ಪ್ರಚಾರಕರಾಗಿ ಊರೂರು ಸುತ್ತಿದರು. ಅನಾರೋಗ್ಯ ಆರಂಭದಿಂದಲೂ ಕಾಡುತ್ತಿದ್ದುದರಿಂದ ಕೊನೆಗೆ ಬೆಂಗಳೂರಿನ ಕೇಶವ ಕೃಪಾದಲ್ಲಿ ನೆಲೆ ನಿಂತು ವಿಕ್ರಮ ಪತ್ರಿಕೆ, ರಾಷ್ಟ್ರೋತ್ಥಾನ ಸಾಹಿತ್ಯ ಮಾಲೆಗಳಿಗೆ ಬರೆದರು. 'ಉತ್ಥಾನ' ಮಾಸಪತ್ರಿಕೆಯ ಗೌರವ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದರು. ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಾಶನ ಕರ್ನಾಟಕದಲ್ಲಿ ತನ್ನದೇ ಛಾಪು ಮೂಡಿಸಿದರೆ ಅದಕ್ಕೆ ಶಿವರಾಮು ರಚಿಸಿದ 'ಆತ್ಮಾಹುತಿ', 'ನೆತ್ತರು ತಾವರೆ', 'ಒಂದು ಕಥೆ -ಒಂದು ವ್ಯಥೆ', ಭಾರತೀಯ ಸೈನಿಕರ ಹೋರಾಟದ ಕಥೆ 'ರಣವೀಳ್ಯ', ಸ್ವಧರ್ಮ, ಸ್ವದೇಶ ಸೇವೆಗಾಗಿ ಕೆಚ್ಚಿನಿಂದ ಹೋರಾಡಿದ ಅಮೋಘವರ್ಷ ನೃಪತುಂಗ, ಗಂಡುಗಲಿ ಕುಮಾರರಾಮ, ಕಿತ್ತೂರು ರಾಣಿ ಚೆನ್ನಮ್ಮ, ಮುಂಡರಗಿ ಭೀಮರಾಯ ಮುಂತಾದ 13 ಮಂದಿ ಕನ್ನಡ ವೀರಪುರುಷ, ಮಹಿಳೆಯರ ಸಂಸ್ಮರಣೆಯ ಕೃತಿ 'ಕನ್ನಡದ ಕಡುಗಲಿಗಳು' 'ಅಕ್ಕ ನಿವೇದಿತಾ' ಮೊದಲಾದ ಅದ್ಭುತ ಕೃತಿಗಳೇ ಕಾರಣ. ರಾಷ್ಟ್ರೋತ್ಥಾನ ಸಾಹಿತ್ಯಕ್ಕೆ ಬ್ರ್ಯಾಂಡ್ ವ್ಯಾಲ್ಯೂ ತಂದುಕೊಟ್ಟದ್ದು ಇದೇ ಕೃತಿಗಳು ಎಂದರೆ ಅದು ಉತ್ಪ್ರೇಕ್ಷೆಯಲ್ಲ.



ಅವರು ಆತ್ಮಾಹುತಿ (ಸಾವರ್ಕರ್ ಕುರಿತ ಅದ್ಭುತ ಕಾದಂಬರಿ) ಕೃತಿ ರಚಿಸುತ್ತಿದ್ದ ಸಂದರ್ಭ. ಮಲೆನಾಡು ಕೊಪ್ಪ ತಾಲೂಕಿನ ಜಯಪುರ ಸಮೀಪದ ಮಾಚಿಕೊಪ್ಪ ಎಂಬ ಸಣ್ಣ ಗ್ರಾಮದ ದಕ್ಷಿಣಾಮೂರ್ತಿ ಎಂಬ ಹಿರಿಯ ಕಾರ್ಯಕರ್ತರ ಮನೆಯಲ್ಲಿ ತಂಗಿದ್ದರು. ಒಂದು ಮಳೆಗಾಲದ ರಾತ್ರಿ. ಹೊರಗೆ ವಿಪರೀತ ಮಳೆ. ಶಿವಮೊಗ್ಗದ ಜಿಲ್ಲಾ ಪ್ರಚಾರಕರಾಗಿದ್ದ ಜಡೆ ಚಂದ್ರಶೇಖರ್ ವಿದ್ಯಾರ್ಥಿಯಾಗಿದ್ದ ನನ್ನನ್ನು ಜೊತೆಗೆ ಕರೆದುಕೊಂಡು ಶಿವರಾಮು ಇದ್ದ ಮಾಚಿಕೊಪ್ಪಕ್ಕೆ ಬಂದಿದ್ದರು. ಸಣಕಲು ಶರೀರದ ಕುಳ್ಳಗಿದ್ದ ಶಿವರಾಮ ಮೂಲೆಯಲ್ಲಿ ನೆಲದ ಮೇಲೆ ಕುಳಿತು ತಲೆತಗ್ಗಿಸಿ ಬರೆಯುತ್ತಿದ್ದರು. ಜಡೆಯವರು ''ಏನ್ ಶಿವರಾಮು, ಎಲ್ಲಿವರೆಗೆ ಬಂತು ಬರವಣಿಗೆ?'' ಎಂದು ಪ್ರಶ್ನಿಸಿದಾಗ, ಶಿವರಾಮು ಸಣ್ಣಗಿನ ಧ್ವನಿಯಲ್ಲಿ ''ಸಾವರ್ಕರ್‌ರನ್ನು ಈಗ ಜೈಲಿಗೆ ಹಾಕಿದ್ದೇನೆ. ಇನ್ನೂ ಬರೆಯುವುದಿದೆ'' ಅಂದಿದ್ದರು! ನನಗಾಗ ಆ ಕೃತಿಯ ತುದಿಬುಡ ಕೂಡ ತಿಳಿದಿರಲಿಲ್ಲ. ಆದರೆ ಅದು ಪ್ರಕಟವಾಗಿ ಅದ್ಭುತ ಜನಮೆಚ್ಚುಗೆ ಪಡೆದಾಗ ಶಿವರಾಮು ಇಂತಹ ಅದ್ಭುತ ಸಾಹಿತಿಯೆ ಎಂದು ಬೆರಗಾಗಿದ್ದೆ. ಆತ್ಮಾಹುತಿ ಓದಿ ರೋಮಾಂಚನಗೊಂಡಿದ್ದೆ. ಅದನ್ನೋದಿದ ಬಹುತೇಕರ ಅನುಭವವೂ ಇದಕ್ಕಿಂತ ಭಿನ್ನವಾಗಿರಲಿಲ್ಲ.

ಸಣಕಲು ಶರೀರ, ಸದಾ ಕಾಡುತ್ತಿದ್ದ ಅನಾರೋಗ್ಯ, ಬೆಂಗಳೂರಿನ ಹವೆ ಯಾಕೋ ಅವರಿಗೆ ಹೊಂದಿಕೆಯಾಗಲಿಲ್ಲ. ಆರೋಗ್ಯ ಮತ್ತಷ್ಟು ಹದಗೆಟ್ಟು 1996-97ರ ಹೊತ್ತಿಗೆ ವೈದ್ಯರ ಸಲಹೆಯಂತೆ ಶಿವರಾಮು ಬೆಂಗಳೂರು ಬಿಟ್ಟರು. ಅವರು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಇಂದಬೆಟ್ಟು ಗ್ರಾಮಕ್ಕೆ ಬಂದು ನೆಲೆಸಿದರು. ಅನಂತರ ಗೃಹಸ್ಥರೂ ಆದರು. ಕಾಸರಗೋಡು ತಾಲೂಕಿನಲ್ಲೂ ಕೆಲವು ಕಾಲ ನೆಲೆಸಿದ್ದರು.

1974ರಲ್ಲಿ ನನ್ನ ಒಬ್ಬಳೇ ತಂಗಿಯ ವಿವಾಹ ಶೃಂಗೇರಿ ಸಮೀಪ ಮೇಗೂರಿನ ಗುಡ್ಡದ ಮೇಲಿರುವ ದುರ್ಗತೋಟ ಮನೆಯಲ್ಲಿ ಏರ್ಪಾಡಾಗಿತ್ತು. ನನ್ನ ಕೋರಿಕೆಯಂತೆ ಶಿವರಾಮು ಎಲ್ಲೆಲ್ಲೋ ಸುತ್ತಿ, ಮೈಲುಗಟ್ಟಲೆ ನಡೆದು ಅಲ್ಲಿಗೆ ಬಂದಿದ್ದರು. ನನಗೋ ಶಿವರಾಮು ಬಂದಿದ್ದಾರೆಂದು ಖುಷಿ, ಸಂಭ್ರಮ. ''ಶಿವರಾಮು ಅವರೇ ನಿಮಗೇನು ಕೊಡಲಿ?'' ಎಂದೆ. ಗುಡ್ಡಹತ್ತಿ ಸುತ್ತಿ ಬಂದಿದ್ದ, ಏದುಸಿರು ಬಿಡುತ್ತಿದ್ದ ಶಿವರಾಮು ''ನನಗೆ ಸ್ವಲ್ಪ ಉಸಿರು ಕೊಡು'' ಎಂದರು. ನನಗೋ ಗಾಬರಿ. ತಕ್ಷಣ ತಣ್ಣಗಿನ ಜಾಗದಲ್ಲಿ ಹಾಸಿಗೆ ಹಾಸಿ ಅವರನ್ನು ಮಲಗಿಸಿ ಸುಧಾರಿಸಿಕೊಳ್ಳಲು ಹೇಳಿದ್ದೆ. ಅವರಿಗೆ ಪ್ರತಿ ಬಾರಿ ನಾನು ಪತ್ರ ಬರೆಯುತ್ತಿದ್ದಾಗಲೂ 'ನಿಮ್ಮ ಅನಾರೋಗ್ಯ ಈಗ ಹೇಗಿದೆ ? ' ಎಂದೇ ಕುಶಲೋಪರಿ ವಿಚಾರಿಸುತ್ತಿದ್ದೆ

'ಹಿಂದೂ ಬಂಡಾಯ', 'ಅರಳು-ಸುರಳಿ', 'ತಾಯೇ ವಂದಿಸುವೆ', 'ನನ್ನ ಜನ ನನ್ನ ಮನ' ಕವನ ಸಂಕಲನಗಳನ್ನು ಶಿವರಾಮು ರಚಿಸಿದ್ದಾರೆ. 'ಚಿನ್ನದ ಕತ್ತಿ' ಎಂಬ ಅವರ ವಿಡಂಬನಾ ಕೃತಿಯನ್ನು ಸಾಹಿತ್ಯ ದಿಗ್ಗಜ ಶಿವರಾಮ ಕಾರಂತರೂ ಮುಕ್ತವಾಗಿ ಪ್ರಶಂಸಿಸಿದ್ದರು. ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಟಿಸಿದ ಭಾರತ -ಭಾರತಿ ಮಕ್ಕಳ ಕೃತಿ ಮಾಲಿಕೆಗಾಗಿ ವಲ್ಲಭಭಾಯ್ ಪಟೇಲ್, ಭಕ್ತ ನಂದನಾರ್, ಬಾಜಿಪ್ರಭು ದೇಶಪಾಂಡೆ, ಸುಶೀಲಕುಮಾರ್ ಸೇನ್ ಮುಂತಾದವರ ಜೀವನ ಚರಿತ್ರೆಯನ್ನೂ ಶಿವರಾಮು ರಚಿಸಿದ್ದಾರೆ. ವೀರ ಸಾವರ್ಕರ್ ಕುರಿತ ಅವರ ಸ್ವತಂತ್ರ ಕೃತಿ 'ಆತ್ಮಾಹುತಿ'ಯನ್ನು ಓದಿದ ಬಂಡಾಯ ಸಾಹಿತಿ ಚಂಪಾ ''ಎಂಥಾ ಅದ್ಭುತ ಕೃತಿ ಇದು. ಸಾವರ್ಕರ್ ಕುರಿತು ನನಗೆ ಭಿನ್ನಾಭಿಪ್ರಾಯವಿದೆ ನಿಜ. ಆದರೆ ಈ ಕೃತಿಯ ಶೈಲಿ ಅಮೋಘ'' ಎಂದು ಕೊಂಡಾಡಿದ್ದರು.

ಇಂಥ ಒಬ್ಬ ಮೇರು ಸಾಹಿತಿ, ಕವಿಗೆ ಸರಕಾರ ಹಾಗೂ ಸಂಘ ಸಂಸ್ಥೆಗಳ ಹತ್ತು ಹಲವು ಪ್ರಶಸ್ತಿ ಪುರಸ್ಕಾರಗಳು ತಾನಾಗಿಯೇ ಒಲಿದು ಬಂದಿವೆ ಎಂದು ನೀವು ಭಾವಿಸಿದ್ದರೆ ಅದು ಶುದ್ಧ ತಪ್ಪು. ಉನ್ನತ ಪ್ರಶಸ್ತಿಗಳಿರಲಿ, ಸಾಧಾರಣ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ದೊರಕಲಿಲ್ಲ. ದೇಶಭಕ್ತಿಯ, ರಾಷ್ಟ್ರೀಯ ಸಾಹಿತ್ಯದ ಕವಿ, ಲೇಖಕ ಎಂಬುದೇ ಪ್ರಶಸ್ತಿ ವಿಷಯದಲ್ಲಿ ಅವರಿಗೆ 'ಮೈನಸ್ ಪಾಯಿಂಟ್' ಆಗಿ ಕಾಡಿದ್ದಿರಬಹುದು. ಪ್ರಶಸ್ತಿ, ಪುರಸ್ಕಾರಗಳೆಂದರೆ ಅದು ಎಡಪಂಥೀಯರಿಗೇ ಮೀಸಲು ಎಂಬ ಅಲಿಖಿತ ನಿಯಮ ಆಗಲೂ ಇತ್ತು. ಈಗಲೂ ಅದು ಬದಲಾಗಿಲ್ಲ. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಈ ಅಲಿಖಿತ ನಿಯಮ ಬದಲಾಗುವುದಿಲ್ಲ. (ಎಡಪಂಥೀಯರ ಕಬಂಧ ಹಿಡಿತ ಆ ಮಟ್ಟಕ್ಕಿದೆ)

ಶಿವರಾಮು ಅವರ ಕೊನೆಯ ದಿನಗಳು ಏನೇನೂ ಚೆನ್ನಾಗಿರಲಿಲ್ಲ. ನಿಶ್ಚಿತ, ನಿಗದಿತ ಆದಾಯ ಎಂಬುದೇ ಅವರಿಗಿರಲಿಲ್ಲ. ತಾರುಣ್ಯದಲ್ಲಿ ರಾಷ್ಟ್ರ ಸೇವೆಗೆ ತಮ್ಮ ತನು, ಮನ, ಸಾಹಿತ್ಯ ಕೃಷಿ ಎಲ್ಲವನ್ನೂ ಮೀಸಲಾಗಿಟ್ಟ ಅವರನ್ನು ಬದುಕಿನ ಸಂಧ್ಯಾಕಾಲದಲ್ಲಿ ಆಧರಿಸುವವರೇ ಇರಲಿಲ್ಲ. ಅವರ ಸಾಹಿತ್ಯ, ಕವನಗಳಿಗೆ ಮನಸೋತಿದ್ದ ಕೆಲವೇ ಕೆಲವು ಅಭಿಮಾನಿಗಳು ಒಂದಿಷ್ಟು ನೆರವು ನೀಡಿದ್ದರಷ್ಟೆ. ಅವರನ್ನು ಕೈಹಿಡಿದು ಕಾಪಾಡಬೇಕಾದವರೇ ಕೈಬಿಟ್ಟರು. ಭಾರತೀಯ ಧರ್ಮ, ಪರಂಪರೆ, ದೇಶಪ್ರೇಮ ಮುಂತಾದವುಗಳ ಬಗ್ಗೆ ಚಿಂತಿಸುತ್ತಿದ್ದ, ಉಜ್ವಲ ರಾಷ್ಟ್ರಪ್ರೇಮಿಯೂ ಆಗಿದ್ದ ಶಿವರಾಮು 1999ರ ನವಂಬರ್ 14ರಂದು ನಿಧನರಾದಾಗ ಹಲವು ಮಂದಿ ಅಭಿಮಾನಿಗಳು, ಪರಿಚಿತರಿಗೇ ಈ ಸುದ್ದಿ ತಕ್ಷಣ ತಿಳಿದಿರಲಿಲ್ಲ.


ಶಿವರಾಮು ಅವರು ಕವಿಯಾಗಿ, ಚರಿತ್ರಕಾರರಾಗಿ, ವಿಚಾರ ಸಾಹಿತ್ಯದ ನಿರ್ಮಾಪಕರಾಗಿ, ಹಾಸ್ಯ- ವಿಡಂಬನೆ -ಪ್ರಬಂಧಕಾರರಾಗಿ ಆರಿಸಿಕೊಂಡ ಎಲ್ಲ ಪ್ರಕಾರಗಳಲ್ಲೂ ಅಚ್ಚೊತ್ತಿದ್ದು ಭಾರತೀಯ ಸಂಸ್ಕೃತಿಯ ಸಾಕಾರ ರೂಪವನ್ನೆ. 'ರಾಷ್ಟ್ರದೇವಗೆ..'' ದೇಶಭಕ್ತಿ ಗೀತೆ ಈಗಲೂ ಶಾಖೆಗಳಲ್ಲಿ, ಸಂಘದ ಕಾರ್ಯಕ್ರಮಗಳಲ್ಲಿ ಅನುರಣಿಸಿ ದೇಶಪ್ರೇಮದ ಉನ್ಮಾದ ಮೂಡಿಸುತ್ತದೆ. ಶಿವರಾಮು ಅವರ ಸಾಹಿತ್ಯ ಸಾರ್ವಕಾಲಿಕ ಹಾಗೂ ಜೀವಂತ ಎನ್ನುವುದಕ್ಕೆ ಇದು ಸಾಕ್ಷಿ.

ಸಂಘದ ಶತಮಾನೋತ್ಸವ ಸಂದರ್ಭದಲ್ಲಿ, ರಾಷ್ಟ್ರ ದೇವಗೆ ಪ್ರಾಣ ದೀವಿಗೆ ಯಾದ ಕವಿ, ಸಾಹಿತಿ ಶಿವರಾಮು ಅವರಿಗೆ ಇದು ನಮ್ಮೆಲ್ಲರ ಮೌನ ಶ್ರದ್ಧಾಂಜಲಿ. ಅಷ್ಟೂ ಮಾಡದಿದ್ದರೆ ನಾವೆಲ್ಲ ಕೃತಘ್ನರಾಗಿ ಬಿಡುತ್ತೇವೆ.

ಸಾಮಾನ್ಯ ಮಾನಸಿಕ ಕಾಯಿಲೆಗಳು-1

ತಾರುಣ್ಯ ತಲ್ಲಣ

ಡಾ.ಕೆ,ಆರ್, ಶ್ರೀಧರ್
drkrsridhar208@gmail.com




ಹರೆಯದವರಲ್ಲಿ ಸಾಮಾನ್ಯವಾಗಿ ಆತಂಕ, ಭಯ, ಖಿನ್ನತೆ, ಆತ್ಮಹತ್ಯೆ, ನಡವಳಿಕೆ ಕಾಯಿಲೆ, ವರ್ತನಾ ಕಾಯಿಲೆ, ಹರೆಯದ ಪ್ರತಿಭಟನಾ ಕಾಯಿಲೆ, ಮದ್ಯ ಮಾದಕ ವಸ್ತುಗಳ ಚಟ, ಮೊಬೈಲ್ ಫೋನ್ ಮತ್ತು ವಿಡಿಯೋ ಆಟಗಳ ವ್ಯಸನ ಇವನ್ನು ನೋಡಬಹುದು. ಉಳಿದಂತೆ ಚಿತ್ತ ಭ್ರಮಣೆ, ಸಮಾಜ ಬಾಹಿರ ಕೃತ್ಯಗಳು, ಉನ್ಮಾದ ಇವು ಕಾಣಿಸಿಕೊಳ್ಳುತ್ತವೆ.

ಆತಂಕದ ಕಾಯಿಲೆ: ಸುಮಾರು ಹನ್ನೆರಡರಿಂದ ಹದಿನೇಳು ವರ್ಷವಯಸ್ಸಿನ ಹರೆಯದವರಲ್ಲಿ ಪ್ರಚಲಿತವಾಗಿರುವುದು ಆತಂಕದ ಕಾಯಿಲೆ. ಆತಂಕದ ಕಾಯಿಲೆಯನ್ನು ಮೂರು ವಿಧಗಳಾಗಿ ವಿಂಗಡಿಸಬಹುದು. (1) ಸಾಮಾನ್ಯ ಆತಂಕದ ಕಾಯಿಲೆ (Generalised, Anxiety disorder) (2) ಸಾಮಾಜಿಕ ಆತಂಕ (Social Anxiety) ಮತ್ತು ಆಧಾರವಿಲ್ಲದ ಭಯ (Phobia).

ಸಾಮಾನ್ಯ ಆತಂಕದ ಕಾಯಿಲೆ

ಈ ಕಾಯಿಲೆಯಿಂದ ಬಳಲುವ ವ್ಯಕ್ತಿಯು ದಿನನಿತ್ಯದ ಆಗು ಹೋಗುಗಳಿಗೆ, ಅದು ಕೆಲಸವಿರಬಹುದು, ಆರೋಗ್ಯವಿರಬಹುದು, ಕೌಟುಂಬಿಕ ಸಮಸ್ಯೆ ಇರಬಹುದು, ಪ್ರತಿಯೊಂದಕ್ಕೂ ಅತಿಯಾದ ಚಿಂತೆ ಮಾಡುತ್ತಾನೆ. ಉದಾಹರಣೆಗೆ ಒಂದು ಕೆಲಸ ಮಾಡಬೇಕೆಂದರೆ ಅದು ಆಗುವುದೋ ಇಲ್ಲವೋ, ತನ್ನಿಂದ ಆಗದೇ ಹೋದರೆ ಬೇರೆಯವರು ನಗಬಹುದು, ಏನಾದರೂ ಟೀಕೆ ಮಾಡಬಹುದು ಎಂಬ ಆತಂಕ ಆ ವ್ಯಕ್ತಿಯನ್ನು ಕಾಡುತ್ತದೆ. ಪರೀಕ್ಷೆ ಕುರಿತು ಏನಾಗುತ್ತದೋ ಏನು ಮತ್ತು ಹೇಗೆ ಬರೆಯುವುದು, ಹೇಗೆ ಇಷ್ಟೆಲ್ಲಾ ಓದುವುದು ಎಂದು ಚಿಂತಿಸಬಹುದು. ಈ ವಿಧದ ಚಿಂತೆಯಿಂದ ನಿದ್ದೆ ಮಾಡುವುದೇ ಇಲ್ಲ. ಇದರಿಂದ ಯಾವಾಗಲೂ ಒಂದು ವಿಧದ ಚಡಪಡಿಕೆ, ಸ್ನಾಯುಗಳ ಸೆಳೆತ, ಓದುವುದರಲ್ಲಿ ಅಥವಾ ಯಾವ ಕೆಲಸ ಮಾಡಲೂ ಏಕಾಗ್ರತೆ ಇರುವುದಿಲ್ಲ. ಎದೆ ಬಡಿತ, ಮೈ ಜುಂ ಎನ್ನುವುದು, ಮನಸ್ಸಿನಲ್ಲಿ ಒಂದು ವಿಧದ ಕಿರಿಕಿರಿ ಹೀಗೆ ಹಲವಾರು ಆತಂಕದ ಲಕ್ಷಣಗಳು ದಿನವಿಡೀ ಮನಸ್ಸನ್ನು ಕಾಡುತ್ತಿರುತ್ತವೆ. ಕೆಲವರಿಗೆ ಹಸಿವಿಲ್ಲದಿರಬಹುದು, ಮೈಕೈ ಬೆವರಬಹುದು, ವಿನಾಕಾರಣ ಬೇರೆಯವರ ಮೇಲೆ ರೇಗಬಹುದು, ಕೆಲವೊಮ್ಮೆ ಹತಾಶೆ, ನಿರಾಸೆಗಳು ಸಾಮಾನ್ಯ. ಮನಸ್ಸು ಶಾಂತವಾಗಿರುವುದಿಲ್ಲ. ಯಾವಾಗಲೂ ಒಂದು ರೀತಿಯ ಚಿಂತೆ. ಕೆಲವೊಮ್ಮೆ ಮುಂದೆ ಏನಾಗುವುದೋ ಎಂಬ ಭಯ.



ದೈಹಿಕವಾಗಿಯೂ ಆತಂಕದ ಲಕ್ಷಣಗಳನ್ನು ಇವರಲ್ಲಿ ಕಾಣಬಹುದು. ಮೈಕೈ ನೋವು, ನಿದ್ರಾಹೀನತೆ ಅಥವಾ ನಿದ್ದೆಯಲ್ಲಿ ಪದೇ ಪದೇ ಎಚ್ಚರಗೊಳ್ಳುವಿಕೆ, ದೇಹಕ್ಕೆ ಒಂದು ವಿಧದ ಸುಸ್ತು, ಆಯಾಸ ಕಾಣಿಸಿಕೊಳ್ಳಬಹುದು. ಕೆಲವರಿಗೆ ಅತಿಯಾದ ಬೆವರುವಿಕೆ, ಕೈಕಾಲು ನಡುಕ, ಎದೆ ಬಡಿದುಕೊಳ್ಳುವುದು ಆಗಬಹುದು. ಕೆಲವರಿಗೆ ಪದೇ ಪದೇ ವಾಂತಿ, ಭೇದಿ ಆಗುವುದು ಸಾಮಾನ್ಯ.

ಶಾಲೆಯಲ್ಲಿ ಕಲಿಕೆಯ ಗೊಂದಲ, ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಭಯ, ತಾನು ಗೆಲ್ಲುತ್ತೇನೋ ಇಲ್ಲವೋ ಎಂಬ ಆತಂಕ, ಹೀಗೆ ಹಲವಾರು ಆತಂಕ, ಭಯಗಳು ನಿರಂತರವಾಗಿ ಕಾಡುತ್ತವೆ. ಆತಂಕದ ಲಕ್ಷಣಗಳು ಸಾಮಾನ್ಯವಾಗಿ ಎರಡು ಮೂರು ತಿಂಗಳಿಗೆಲ್ಲ ಮರೆಯಾದರೆ, ಅದು ಕಾಯಿಲೆ ಎನಿಸುವುದಿಲ್ಲ. ಆರು ತಿಂಗಳುಗಳಿಗಿಂತ ಹೆಚ್ಚು ಅವಧಿಗೆ ಇದ್ದಾಗ ಅದನ್ನು ಸಾಮಾನ್ಯ ಆತಂಕದ ಕಾಯಿಲೆ ಎಂದು ಕರೆಯಲಾಗುತ್ತದೆ. ಇದಕ್ಕೆ ಕಾರಣ ಮತ್ತು ಚಿಕಿತ್ಸೆಯ ಕುರಿತು ಕೊನೆಯ ಒಂದು ಅಧ್ಯಾಯದಲ್ಲಿ ತಿಳಿಸಲಾಗಿದೆ.

ಸಾಮಾಜಿಕ ಆತಂಕ (Social Anxiety Disorder)

ಸಾಮಾಜಿಕ ಆತಂಕದಿಂದ ಬಳಲುವವರು ಜನಸಮೂಹದಲ್ಲಿ ಬೆರೆಯಲು ಇಚ್ಛಿಸುವುದಿಲ್ಲ. ಯಾರಾದರೂ ತನ್ನ ಕುರಿತು ಟೀಕೆ ಮಾಡಬಹುದೆಂಬ ಭಯ ಇವರನ್ನು ಸದಾ ಕಾಡುತ್ತಿರುತ್ತದೆ. ಯಾವಾಗಲೂ ತಮ್ಮ ಕುರಿತೇ ಯೋಚಿಸುತ್ತಿರುತ್ತಾರೆ. ತನ್ನನ್ನು ಯಾರಾದರೂ ನೋಡಿ ಟೀಕೆ ಮಾಡಬಹುದು. ಅವರಿಂದ ತನಗೆ ಅವಮಾನವಾಗಬಹುದು. ತನ್ನನ್ನು ಎಲ್ಲರೂ ನೋಡುತ್ತಾರೆ. ಅವರು ತನ್ನನ್ನು ನೋಡಿ ನಗಬಹುದು. ಪಾರ್ಟಿಗಳಿಗಾಗಲೀ, ಸ್ನೇಹಿತರ ಗುಂಪಿಗೆ ಸೇರಲು ಆತಂಕದ ಕಾರಣ ಇವರಿಂದ ಸಾಧ್ಯವಿಲ್ಲ. ಶಾಲೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದರೆ, ಸ್ಪರ್ಧಿಸಲು ಭಯಪಡುತ್ತಾರೆ. ಕೆಲವು ದಿನಗಳ ಮೊದಲೇ ಕಾರ್ಯಕ್ರಮಗಳ ಕುರಿತು ಚಿಂತೆ ಇವರನ್ನು ಕಾಡುತ್ತದೆ. ಸಾರ್ವಜನಿಕವಾಗಿ ಮಾತನಾಡಲು ಭಯ, ವೇದಿಕೆಯ ಮೇಲೆ ಯಾವುದೇ ಕಾರ್ಯಕ್ರಮ ನೀಡಲು, ಮಾತನಾಡಲು ಇಷ್ಟಪಡುವುದಿಲ್ಲ. ಇವು ಹರೆಯದವರಲ್ಲಿ ಸಾಮಾನ್ಯವಾದರೂ ಮೇಲಿನ ಲಕ್ಷಣಗಳು ನಿರಂತರವಾಗಿ ಆರು ತಿಂಗಳಿಗಿಂತ ಹೆಚ್ಚಾದರೆ ಅದು ಸಾಮಾಜಿಕ ಆತಂಕದ ಕಾಯಿಲೆ ಎಂದು ಕರೆಯುತ್ತಾರೆ.

ಆಧಾರವಿಲ್ಲದ ಭಯದ ಆತಂಕ (Phobic anxiety disorder)

ಈ ವಿಧದ ಆತಂಕದ ಭಯದಲ್ಲಿ ವ್ಯಕ್ತಿಯು ಯಾವ ಕಾರಣವೂ ಇಲ್ಲದೆ ಭಯ ಪಡುತ್ತಾನೆ. ತೀವ್ರ ಭಯದಿಂದ ಎದೆಬಡಿತ ಪ್ರಾರಂಭವಾಗುತ್ತದೆ. ತೀವ್ರ ಭಯದಿಂದ ಮೈ ಕೈ ಬೆವರಬಹುದು, ನಡುಗಬಹುದು, ಕೆಲವೊಮ್ಮೆ ಉಸಿರುಗಟ್ಟಿದಂತಾಗಬಹುದು. ಕೆಲವೊಮ್ಮೆ ತಲೆ ಸುತ್ತಿಬಂದಂತಾಗಬಹುದು. ಒಂದು ವಿಧದ ನಿರಂತರ ಚಿಂತೆ ಮನಸ್ಸನ್ನು ಆವರಿಸಬಹುದು. ಮೈ ಕೈ ಜುಂ ಎನ್ನಬಹುದು. ಆಧಾರವಿಲ್ಲದ ಭಯವು ಕೆಲವು ಸಂದರ್ಭಗಳಲ್ಲಿ ಅತಿಯಾಗಿ ತಡೆಯಲಾರದಷ್ಟು ಗಾಬರಿಯಾಗುತ್ತದೆ. ಕೆಲವರು ಮಹಡಿಗೆ ಹೋಗಲು ಭಯವೆನಿಸಿ, ಮಹಡಿಗೆ ಹೋಗಲು ನಿರಾಕರಿಸುತ್ತಾರೆ. ರೂಮಿನ ಬಾಗಿಲು ಹಾಕಿದರೆ ಭಯ ಎನಿಸಿ ಬಾಗಿಲು ಹಾಕುವುದೇ ಇಲ್ಲ. ಸುಮಾರು ಐವತ್ತು ವರ್ಷದ ಮಹಿಳೆಯೊಬ್ಬರಿಗೆ ವಿಮಾನದಲ್ಲಿ ಹೋಗಲು ಭಯವಿತ್ತು. ಕಾರಣ ಅದು ಮೇಲೆ ಎತ್ತರಕ್ಕೆ ಹೋದಾಗ ತಾನೆಲ್ಲಿ ಬಿದ್ದುಬಿಡುತ್ತೇನೋ ಎಂಬ ಭಯ. ಎ.ಸಿ ರೈಲ್ವೇ ಬೋಗಿಯಲ್ಲಿ ಪ್ರಯಾಣಿಸಲು ಹೆದರುತ್ತಿದ್ದರು. ಅಲ್ಲಿ ಬಾಗಿಲು ಹಾಕಿದರೆ, ತಾನೆಲ್ಲಿ ಸತ್ತು ಹೋಗುತ್ತೇನೋ ಎಂಬ ಭಯದಿಂದ ಅವರು ಎ.ಸಿ. ರೈಲ್ವೇ ಭೋಗಿಯಲ್ಲಿ ಪ್ರಯಾಣಿಸುತ್ತಿರಲಿಲ್ಲ. ಸುಮಾರು 40 ವರ್ಷ 'ಆಧಾರವಿಲ್ಲದ ಭಯದಿಂದ' ಎಲ್ಲಿಗೂ ಪ್ರಯಾಣಿಸುತ್ತಿರಲಿಲ್ಲ. ಐವತ್ತು ವರ್ಷ ವಯಸ್ಸಿಗೆ ಚಿಕಿತ್ಸೆಯ ನಂತರ ಅವರು ಎ.ಸಿ. ಭೋಗಿಯಲ್ಲಿ ಪ್ರಯಾಣಿಸಲು ಪ್ರಾರಂಭಿಸಿದರು. ಎರಡು ಮೂರು ಬಾರಿ ಆಸ್ಟ್ರೇಲಿಯ ಮತ್ತು ಅಮೇರಿಕಾಕ್ಕೆ ಏರೋಪ್ಲೇನಿನಲ್ಲಿ ಪ್ರಯಾಣಿಸಿ ಬಂದರು. ಆ ಮಹಿಳೆಗೆ ಆಧಾರವಿಲ್ಲದ ಭಯವು ಪ್ರಾರಂಭವಾದದ್ದು ಅವರೇ ಹೇಳಿದ ಹಾಗೆ, ಪ್ರೌಢಶಾಲೆಯಲ್ಲಿ ಅವರು ಒಮ್ಮೆ ಓದುವಾಗ ಕೆಳಗೆ ಬಿದ್ದದ್ದು. ಅವರಿಗೆ ಸುಮಾರು ಮೂವತ್ತೈದು ವರ್ಷಗಳು ಸಂದರೂ, ಅದು ಒಂದು ಕಾಯಿಲೆ ಎಂದು ತಿಳಿದಿರಲಿಲ್ಲ. ಹಾಗಂತ ಅವರಿಗೆ ಮದುವೆಯಾಗಿ ಮೂರು ಮಕ್ಕಳಿದ್ದರು. ಎಲ್ಲರಿಗೂ ಮದುವೆಯಾಗಿತ್ತು. ಮಾನಸಿಕ ಕಾಯಿಲೆಗಳ ಕುರಿತು ಸಮಾಜದಲ್ಲಿ ವಿದ್ಯಾವಂತರೂ ಸೇರಿದಂತೆ ಎಲ್ಲರಿಗೂ ಎಷ್ಟು ಅಜ್ಞಾನ ಇದೆ ಎಂಬುದಕ್ಕೆ ಇದು ಒಂದು ಉದಾಹರಣೆ.

ಪ್ಯಾನಿಕ್ ಆತಂಕ (Panic disorder)

ಒಂದೇ ಬಾರಿಗೆ ಡಬ್ ಡಬ್ ಎಂದು ಎದೆಬಡಿತ ಪ್ರಾರಂಭವಾಗಿ ಉಸಿರು ಗಟ್ಟಿದಂತಾಗುತ್ತದೆ. ಮೈ ಬೆವರಿ ಇನ್ನೇನು ತನ್ನ ಜೀವವೇ ಹೋಗುತ್ತದೆ ಎಂಬ ಭಾವನೆ ಉಂಟಾಗುತ್ತದೆ. ಎದೆನೋವು ಕಾಣಿಸಿಕೊಳ್ಳಬಹುದು. ಮೈಯೆಲ್ಲಾ ಬೆವರುತ್ತದೆ. ಒಮ್ಮೊಮ್ಮೆ ಉಸಿರಾಟ ಜೋರಾಗುತ್ತದೆ. ಕೈಕಾಲು ನಡುಕ ಉಂಟಾಗಿ ಇನ್ನೇನು ತಾನು ಎಲ್ಲಿ ಬಿದ್ದು ಬಿಡುತ್ತೇನೋ ಎನ್ನಿಸಬಹುದು. ಕೆಲವು ಸಾರಿ ಹೊಟ್ಟೆಯಲ್ಲಿ ಒಂದು ವಿಧದ ಸಂಕಟ, ಕೆಲವೊಮ್ಮೆ ಹೊಟ್ಟೆ ನೋವು, ತಲೆ ಸುತ್ತುವುದು ಕಾಣಿಸಿಕೊಳ್ಳಬಹುದು. ಕೆಲವು ವೇಳೆ ತಾನೆಲ್ಲಿದ್ದೇನೆ, ತನಗೇನೋ ಆಗಿದೆ ಎಂಬ ಭಾವನೆ ಉಂಟಾಗಬಹುದು. ಇಂತಹ ಆತಂಕದ ಲಕ್ಷಣಗಳು ರಾತ್ರಿ ವೇಳೆ ನಿದ್ದೆ ಮಾಡುತ್ತಿರುವಾಗ ಕಾಣಿಸಿಕೊಂಡು, ರೋಗಿಯು ಒಂದೇ ಬಾರಿಗೆ ಎಚ್ಚರಗೊಂಡು ಘಾಬರಿಗೊಳ್ಳುತ್ತಾನೆ. ಕೆಲವೇ ನಿಮಿಷಗಳಲ್ಲಿ ಅಥವಾ ಅರ್ಧ ತಾಸಿನಲ್ಲಿ ಮೇಲಿನ ಎಲ್ಲ ಲಕ್ಷಣಗಳೂ ಮರೆಯಾಗಿ ವ್ಯಕ್ತಿಯು ಮೊದಲಿನಂತಾಗುತ್ತಾನೆ. ಹೆಚ್ಚಿನವರಿಗೆ ಇದು ಒಂದೆರಡು ಬಾರಿ ಆಗಬಹುದು. ನಂತರದಲ್ಲಿ ಕೆಲವು ಕಾಲ ಇದರ ಸುಳಿವೇ ಇಲ್ಲದಿರಬಹುದು.

ಪ್ಯಾನಿಕ್ ಆತಂಕದ ಕಾಯಿಲೆಯು ಯಾವ ಕಾರಣವೂ ಇಲ್ಲದೇ ಪುನಃ ಪುನಃ ಮರುಕಳಿಸಿದಾಗ, ತನಗೇನೋ ಆಗುತ್ತಿದೆ ಎಂಬ ಭಯ ಉಂಟಾಗಿ ಪ್ರತಿ ಬಾರಿಯೂ ರೋಗಿಯು ವೈದ್ಯರ ಹತ್ತಿರ ಹೋಗುತ್ತಾನೆ. ವೈದ್ಯರು ಇವರ ತೊಂದರೆಗಳನ್ನು ಕೇಳಿ ಪರೀಕ್ಷಿಸಿದಾಗ ಎಲ್ಲವೂ ಸಹಜವಾಗಿರುತ್ತವೆ. ಎಷ್ಟೋ ವೇಳೆ ಇ.ಸಿ.ಜಿ. ಮತ್ತು ಇನ್ನಿತರೇ ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಸುತ್ತಾ, ಕ್ರಮೇಣ ವೈದ್ಯರ ಶಾಪಿಂಗ್ ಪ್ರಾರಂಭವಾಗುತ್ತದೆ. ಆದರೆ ಇದು ಮಾನಸಿಕ ಕಾಯಿಲೆ, ಇದಕ್ಕೆ ಮನೋವೈದ್ಯರಿಂದ ಚಿಕಿತ್ಸೆ ಪಡೆಯಬೇಕೆಂಬುದರ ಅರಿವುಂಟಾಗುವುದಿಲ್ಲ.

(ಮುಂದುವರೆಯುವುದು....)

ವಾರ್ ಸಾರ್ ವಾರ್...

ವಾರದ ವರಸೆ


ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಅಯ್ಯೋ, ಮನುಷ್ಯರೋ ಪರಮ ಧನದಾಹಿಗಳು' ಎಂದು ಹೇಳುತ್ತಿದ್ದರು. ಆದರೆ ಅವರು ಅದಷ್ಟೇ ಅಲ್ಲ, 'ಕದನ'-ದಾಹಿಗಳೂ ಹೌದು ಎನ್ನುವುದನ್ನು ಯುದ್ಧದ ಕುರಿತಾಗಿ ಆಗಾಗ ಭುಗಿಲೇಳುವ ಚರ್ಚೆಗಳು ಸಾಬೀತುಪಡಿಸುತ್ತಲೇ ಇರುತ್ತವೆ. 'ಯುದ್ಧ ಬಂದಿತು ಸಿದ್ಧರಾಗಿರಿ...' ಎಂಬ ಹಾಡಿನ ಸಾಲೊಂದು ಆಗಾಗ ಕಿವಿಗೆ ಬೀಳುವಾಗ, ಅದನ್ನು ಇಂದಿನ ಕಾಲಕ್ಕೆ ಅನ್ವಯಿಸಿಕೊಂಡು, ''ಅರ್ರೇ.. ಅಲ್ಲೆಲ್ಲೋ ಯುದ್ಧವಾದರೆ ನಾವೇಕೆ ಸಿದ್ಧರಾಗಬೇಕು?'' ಎಂದು ಅಂದುಕೊಂಡವರೇ ಹೆಚ್ಚು. ಆದರೆ ಕದನ ಅದೆಲ್ಲೇ ನಡೆದರೂ, ಆ ಕದನದ ಪರಿಣಾಮಗಳು ಹೇಗೆಲ್ಲ ನಮ್ಮ-ನಿಮ್ಮ ಮನೆಯ ಕದವನ್ನೂ ತಟ್ಟೀತು ಎನ್ನುವುದನ್ನು ಈಗಿನ ಯುದ್ಧ ಸನ್ನಿವೇಶ ನಮ್ಮ ಮನ ಮುಟ್ಟುವಂತೆ, ತಟ್ಟುವಂತೆ ಅರ್ಥೈಸುತ್ತಿದೆ. ಯುದ್ಧಭೂಮಿಯೆನ್ನುವುದು ಭೂಮಿಯ ಯಾವುದೋ ಒಂದು ಭಾಗದಲ್ಲೇ ಏರ್ಪಟ್ಟರೂ ಅದರ ಪರಿಣಾಮ ಮಾತ್ರ ಇಡೀ ಭೂಮಿಯ ಮೇಲೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಇದ್ದೇ ಇರುತ್ತದೆ ಎನ್ನುವುದು ನಿಸ್ಸಂಶಯ. ಹೋಟೆಲ್‌ನಲ್ಲಿ ಸಿಗೋ ಪೂರಿಯಿಂದ ಹಿಡಿದು ಅಮೇಜಾನ್‌ಲಿ ಮಾಡಿದ ಆರ್ಡರ್‌ನ ಡೆಲಿವರಿಯವರೆಗೆ ಅದರ ಪರಿಣಾಮ ಹತ್ತು ಹಲವು. ಇಂತಿಪ್ಪ ಯುದ್ಧದ ಪರಿಣಾಮದ ಕುರಿತಂತೆ ಹಲವರ ಅಭಿಪ್ರಾಯಗಳು ಈ ಕೆಳಗಿನಂತಿವೆ.

ಈ ಕುರಿತು ಅಭಿಪ್ರಾಯ ಕೇಳಲೆಂದು 'ವಾ.ವ' ತಂಡ ಬೀದಿಗೆ ಬಿದ್ದಾಕ್ಷಣ, ಮೊದಲು ಕಣ್ಣಿಗೆ ಬಿದ್ದದ್ದೇ ಆ್ಯಂಕರ್ ಆಜ್ಞೇಶ್. ಕರುನಾಡಿನ ಜನಪ್ರಿಯ ಆ್ಯಂಕರರು ಈತ ಎಂದರೆ ತಪ್ಪಾಗಲಿಕ್ಕಿಲ್ಲ. ವಿಷಯದಿಂದ ವಿಷಯಕ್ಕ ಚೆಂಗನೆ ಜಿಗಿಯುವ, ಹಿರಿಯ ಆ್ಯಂಕರ್ ಜೊತೆ ಪಳಗುತ್ತಾ ಬೆಳೆಯಲು ಹವಣಿಸುತ್ತಿರುವ ಕಾರಣಕ್ಕೂ ಆತನನ್ನು ಆ್ಯಂ'ಕರು' ಎಂದು ಕರೆದಿರುವುದು ಸರಿಯಿದೆ. ನಾವು ಕೇಳಿದ್ದಕ್ಕೆ, ಯುದ್ಧದ ಕುರಿತು ಆಜ್ಞೇಶ ಆಡಿದ ಮಾತುಗಳೇನು ಗೊತ್ತೇ?

ಆ್ಯಂಕರ್ ಆಜ್ಞೇಶ್- ನಾವೂ ಯುದ್ಧ ಬಂದಿದೆ ಎಂಬ ಕಾರಣಕ್ಕೆ ಸಿದ್ಧರಾಗುತ್ತೇವೆ. ಅದರ ಬಗ್ಗೆ ಇಲ್ಲದ್ದು ಸಲ್ಲದ್ದನ್ನೆಲ್ಲಾ ಕಲರ್ ಕಲರ್ ಆಗಿ ಹೇಳುವುದನ್ನು ಕರಗತ ಮಾಡಿಕೊಳ್ಳಲು ಇದೊಂದು ಅವಕಾಶ. ಇನ್ನು AI ಆಪ್ತ ಇರುವ ಕಾರಣಕ್ಕಂತೂ ಕಣ್ಣಿಗೆ ಕಟ್ಟುವಂತೆ ಹೇಳುವುದು ನಮಗೆ ಇನ್ನೂ ಸಲೀಸು.



ಹೌದೌದು. ಕಣ್ಣಿಗೆ ಕಟ್ಟಿದಂತೆ ಹೇಳ್ತೀರೋ ಇಲ್ಲ ಕಣ್ಕಟ್ಟನ್ನೆಲ್ಲಾ ನಿಜವೆಂಬಂತೆ ಹೇಳ್ತೀರೋ ಒಂದೂ ಅರ್ಥವಾಗಲ್ಲ ಕೆಲವೊಮ್ಮೆ ಎಂದು ಗೊಣಗುತ್ತಾ ಮುಂದೆ ನಡೆದ ತಂಡ ಗುರುತಿಸಿದ್ದು, ಕಾಯಿಪಲ್ಲೆ ಖರೀದಿಗೆ ಹೊರಟಿದ್ದ ಗೃಹಿಣಿ ಘಾಮಿನಿ. ಸದಾ ಘಮ್ ಎನ್ನುವ ಸೆಂಟ್ ಪೂಸಿಕೊಂಡು ಘಮ ಘಮಿಸುವುದರಿಂದಲೇ ಆ ಹೆಸರಿರಬೇಕು. ಯುದ್ಧ ಎಂದಾಕ್ಷಣ ವಿಲಕ್ಷಣ ಮುಖಭಾವ ಮೆರೆದ ಆಕೆ ಹೇಳಿದ್ದು ಹೀಗೆ.

ಗೃಹಿಣಿ ಘಾಮಿನಿ: ಶಾಲಾ ದಿನಗಳಲ್ಲಿ ಕಲಿತಿದ್ದ, ಬೆಂಕಿ ಇಲ್ಲದ ಅಡುಗೆಯನ್ನು ಮತ್ತೆ ನೆನಪಿಸಿಕೊಂಡು ಪ್ರಯೋಗಿಸುವಂತಾಗಿದೆ. ಗ್ಯಾಸ್ ಇಲ್ಲವೆಂಬ ಕಾರಣಕ್ಕೆ ಅಡುಗೆಯೇ ಇಲ್ಲವೆಂದಾಗಿದ್ದರೆ ನಾವೂ ಈ ಯುದ್ಧದ ಕಾರಣಕ್ಕೆ ಸ್ವಲ್ಪ ನೆಮ್ಮದಿಯಾಗಿರುತ್ತಿದ್ದೆವು. ಆದರೆ ಹಾಗೆ ಆಗುತ್ತಿಲ್ಲ. ಇದು ನಮ್ ಜೀವನವನ್ನು ಇನ್ನೂ ಸವಾಲಾಗಿಸುತ್ತಿದೆ.

ಈಗಲೂ ಹಾಲು, ಸಾಂಬಾರು ಸುಮ್ಮನೆ ಕುದಿದು ಉಕ್ಕಿ ಹೊರಚೆಲ್ಲಿ ವ್ಯರ್ಥವಾಗದಂತೆ ತಡೆಯದಿದ್ದರೆ, ಗ್ಯಾಸ್ ವೇಸ್ಟ್ ಮಾಡಿದ್ದಕ್ಕೆ ಬೈಸಿಕೊಳ್ಳುವುದೇ ಜಾಸ್ತಿಯಾಗುತ್ತದಷ್ಟೇ ಎಂದು ಹೇಳುತ್ತಾ ನಡೆದ ವಾ.ವ ತಂಡ ಮುಂದೆ ಮಾತನಾಡಿಸಿದ್ದು, ಕಿರಾಣಿ ಅಂಗಡಿಯ ಕಿಟ್ಟಪ್ಪನನ್ನು. ಆತನನ್ನು ಈ ಬಗ್ಗೆ ಕೇಳಿದ್ದಕ್ಕೆ -

ಕಿರಾಣಿ ಅಂಗಡಿ ಕಿಟ್ಟಪ್ಪ : ಈ ನಡುವೆ ವ್ಯವಹಾರವೇ ಡಲ್ ಹೊಡಿತಿದೆ. ಎಲ್ಲರೂ ಬಂದು ಟೂ-ಮಿನಿಟ್ ರೆಡಿ ಮ್ಯಾಗಿ ಪಾಕೀಟು ಕೇಳುವವರೇ ಹೆಚ್ಚು, ಸಮಯವೂ ಉಳಿತಾಯ, ಗ್ಯಾಸೂ ಉಳಿತಾಯ ಎಂಬ ಅವರ ಮನಸ್ಥಿತಿಗೆ ಇನ್ನೇನು ಕಾರಣವಿದೆ?

ಅವರ ಪ್ರಶ್ನೆಗೆ ಏನೆಂದು ಉತ್ತರಿಸುವುದು ಎಂದು ತೋಚದ ವಾ.ವ ತಂಡ ಹೀಗೇ ಆದರೆ ದಿನಸಿ ಹೋಗಿ 'ವಾರ'ಸಿ, 'ತಿಂಗಳು'ಸಿ, 'ವರ್ಷ'ಸಿ ಎಂದು ಹೇಳಬೇಕಾಗುತ್ತದೇನೋ ಅನಿಸುತ್ತದೆ ಎಂದು ಹೇಳಿದ್ದು ಎಲ್ಲರಿಗೂ ಕೇಳಿಸುವಂತಿತ್ತು. ಆಗ ದೂರದಲ್ಲಿ ಬರುತ್ತಿರುವುದು, ಯುದ್ಧಪ್ರಿಯ ಯಮನೇಶ ಎನ್ನುವುದು ಗೊತ್ತಾಗಿ ಅವನನ್ನು ಮಾತಿಗೆಳೆಯಲು ಅತ್ತ ದೌಡಾಯಿಸಿದರು.

ಯುದ್ಧಪ್ರಿಯ ಯಮನೇಶ್: ಯುದ್ಧ ನಡೆಯದೇ ಹೋದರೆ ಈ ಹೋರಾಟ, ಪರಾಕ್ರಮ, ಬಲಾಬಲ ಇತ್ಯಾದಿಗಳೆಲ್ಲ ಹೊರಬರುವುದಾದರೂ ಹೇಗೆ ಹೇಳಿ. ಅಲ್ಲದೇ ಇನ್ನೊಂದು 8-10 ದಶಕ ಹೋದ ಮೇಲೆ, ಇತಿಹಾಸದಲ್ಲಿ ಹೇಳೋಕೆ, ಟೆಕ್ಸ್ಟ್ ಬುಕ್‌ಗಳಲ್ಲಿ ಸೇರಿಸೋದಕ್ಕೆ ಯುದ್ಧಗಳೇ ಇಲ್ಲದಂತಾಗಿ, ಆ ಸಬ್ಜೆಕ್ಟ್‌ಗಳೆಲ್ಲ ಡ್ರೈ ಆಗಲ್ವಾ?

ಅದಕ್ಕೆ ವಾ.ವ ತಂಡದವರು ಥಟ್ಟನೇ ಪ್ರತಿಕ್ರಿಯಿಸುತ್ತಾ, ''ಅಯ್ಯೋ, ಹೀಗೆ ಯುದ್ಧಗಳ ಮೇಲೆ ಯುದ್ಧ ನಡೆಯುತ್ತಿದ್ದರೆ ಮುಂದೆ ವಿದ್ಯಾರ್ಥಿಗಳು ಯಾವ ಯುದ್ಧ ಯಾವಾಗ ನಡೆಯಿತು, ಯಾವ್ಯಾವ ದೇಶಗಳ ನಡುವೆ ನಡೆಯಿತು ಎಂಬೆಲ್ಲಾ ಪ್ರಶ್ನೆಗಳಿಗೆ ಉತ್ತರಿಸುತ್ತಾ ಬೇಸ್ತು ಬೀಳುತ್ತಾರೆ, ಅದಕ್ಕೆ ಕಾರಣರಾದವರಿಗೆ ಹಿಡಿ ಶಾಪವನ್ನೂ ಹಾಕಿಯಾರು'' ಎಂದರು.

ಮುಂದೆ ಮಾತಿಗೆ ಸಿಕ್ಕಿದ್ದು ರಿಕ್ಷಾ ರಘುಪತಿ. ಯುದ್ಧದ ಬಗ್ಗೆ ಕೇಳಿದ್ದಕ್ಕೆ ರಘುಪತಿಯ ಉತ್ತರ ಏನು ಗೊತ್ತಾ?

ರಿಕ್ಷಾ ರಘುಪತಿ: ಮುಂಚೆಲ್ಲಾ ಜಾಸ್ತಿ ರೇಟ್ ಹೇಳೋಕೆ ಏನೇನೋ ಸರ್ಕಸ್ ಮಾಡಬೇಕಿತ್ತು. ಆದರೂ ಗ್ರಾಹಕರ ಮನವೊಲಿಸಲು ಆಗುತ್ತಿರಲಿಲ್ಲ. ಆದರೆ ಈಗ ಹಾಗೇನಿಲ್ಲ, ಎರಡು ಪಟ್ಟೋ ಮೂರು ಪಟ್ಟೋ ಎಷ್ಟೇ ಜಾಸ್ತಿಯೇ ಚಾರ್ಜ್ ಮಾಡಿದಾಗಲೂ, ''ಅಯ್ಯೋ ವಾರ್ ಸಾರ್ ವಾರ್, ಗ್ಯಾಸ್ ಇಲ್ಲ, ಅದ್ಕೇ ರೇಟ್ ಜಾಸ್ತಿ'' ಎಂದರೆ ಸಾಕು. ಗ್ರಾಹಕರು ಸುಮ್ಮನಾಗುತ್ತಾರೆ.

ಯುದ್ಧ ಇರಲಿ ಇಲ್ಲದೇ ಇರಲಿ, ನಿಮ್ ರಿಕ್ಷಾ ಎಲ್ಲಿ ಬರೀ ಗ್ಯಾಸ್‌ನಿಂದ ಓಡಿದೆ? ಮೀಟರ್ ಮೇಲೆ ಏನಾದರೂ ತಗೊಂಡರೇ ಅಷ್ಟೇ ತಾನೇ ನಿಮ್ಮ ರಿಕ್ಷಾ ಓಡೋದು, ಎಂದು ಕೊಂಕು ಮಾತಿನಿಂದ ಕುಟುಕಲು ಮರೆಯಲಿಲ್ಲ ವಾ.ವ ತಂಡದ ಪ್ರತಿನಿಧಿಗಳು.

ಇನ್ಯಾರನ್ನು ಮಾತಾಡಿಸೋದು ಎಂದು ಯೋಚನಾಮಗ್ನರಾಗಿ ತಂಡದವರು ಅತ್ತಿತ್ತ ನಿಲುಕುತ್ತಿರುವಾಗ ವಿದ್ಯಾರ್ಥಿಯೊಬ್ಬ ಬ್ಯಾಗ್ ನೇತುಹಾಕಿಕೊಂಡು ಬರುವುದು ಕಾಣಿಸಿತು. ಅವನಲ್ಲಿ ಯುದ್ಧದ ಬಗ್ಗೆ ಕೇಳಿದರೆ ಇವನು ಅದೇನು ಹೇಳುತ್ತಾನೆ ನೋಡೇ ಬಿಡೋಣ ಎಂದು ಮಾತನಾಡಿಸಿದಾಗ,

ವಿದ್ಯಾರ್ಥಿ ವೀರೇಶ್: ನಾವು ಯುದ್ಧ ಬಗ್ಗೆ ಅದೆಷ್ಟೇ ಓದಿದರೂ, ಚಿತ್ರ ನೋಡಿದರೂ, ವಿವರಣೆ ಕೇಳಿದರೂ ಅದನ್ನೊಂದು ನೋಡಬೇಕಲ್ಲ ಲೈವ್ ಆಗಿ ಅಂತ ಅನಿಸುತ್ತಿತ್ತು. ಹೀಗೆ ಆಗಾಗ ಯುದ್ಧ ನಡೆದು, ಅದರ ವೀಡಿಯೋಗಳು ನ್ಯೂಸ್ ಚಾನೆಲ್‌ಗಳಲ್ಲಿ ಪ್ರಸಾರ ಆಗುವುದರಿಂದ ನಮಗೆ ಅದರ ಬಗ್ಗೆ ಹೆಚ್ಚು ತಿಳಿಯುತ್ತದೆ. ಇನ್ನು ಯುದ್ಧದ ಬಗ್ಗೆ ಪರೀಕ್ಷೆಯಲ್ಲಿ ಬರುವ ಎಲ್ಲಾ ಪ್ರಶ್ನೆಗಳಿಗೂ ಈ ಯುದ್ಧದ ವಿವರಗಳನ್ನೇ ಉತ್ತರವಾಗಿ ಬರೆದರಾಯ್ತು. ಎಂಥಾ ಚಾನ್ಸ್ ನೋಡಿ.

ಆತನ ಮಾತು ಕೇಳಿದ ನಮ್ಮ ವಾ.ವ ತಂಡದವರು ಅಯ್ಯೋ ವೀಡಿಯೋ ಗೇಮ್ ಕ್ಲಿಪ್ಪಿಂಗ್‌ಗಳನ್ನೂ ಯುದ್ಧದ ಫೂಟೇಜ್ ಎಂದು ಸುಖಾಸುಮ್ಮನೆ ಪ್ರಸಾರ ಮಾಡಿಯಾರು ಸ್ವಲ್ಪ ಚೆಕ್ ಮಾಡಿ ನೋಡಿಕೊಳ್ಳಪ್ಪ ಎಂದರು. ಇಷ್ಟೆಲ್ಲಾ ನೋಡುತ್ತಿದ್ದ ಸೋಷಿಯಲ್ ಮೀಡಿಯಾ ಸುಭಗ ಕುಮಾರ್ ನಾನೂ ಮಾತಾಡ್ತೀನಿ ಅಂತ ಹತ್ತಿರ ಬಂದ. ಬೇಡ ಅಂದರೆ ಅದಕ್ಕೇ ಲೈವ್ ಬಂದು ಗೋಳಾಡಿದರೆ ಕಷ್ಟವೆಂದು ಮಾತಾಡಲು ಬಿಟ್ಟರು.

ಸೋಷಿಯಲ್ ಮೀಡಿಯ ಸುಭಗ ಕುಮಾರ್: ಯಾರು ಏನೇ ಹೇಳಲಿ ಇದರಿಂದ ಕಂಟೆಂಟೋ ಕಂಟೆಂಟ್. ಎಲ್ಲವನ್ನೂ ಶಾರ್ಟ್ಸ್, ರೀಲ್ಸ್, ವೀಡಿಯೋ ಎಡಿಟ್ ಅಪ್‌ಲೋಡ್ ಮಾಡುತ್ತಿದ್ದರೆ, ರೀಚ್ ಸದಾ ಅಪ್ಪರ್ ಲೆವೆಲ್ ಹೋಗ್ತಿರುತ್ತೆ. ಮತ್ತೆ ಬೇಕಿದ್ದರೆ ವಾರ್ ಅಲ್ಲ ಬೇಕಿರುವುದು ಪೀಸ್ ಅಂತ ಒಂದು ಲೈನ್ ಬರೆದರೆ ಆಯಿತು.

ರೀಚ್‌ನ ರೊಚ್ಚಿನಲ್ಲಿ ಇರುವ ಅವನಿಗೆ ಇನ್ನು ಜಾಸ್ತಿ ಮಾತಾಡಲು ಬಿಟ್ಟರೆ ಕಷ್ಟ ಎಂದು ತಿಳಿದ ತಂಡದವರು ಅವನನ್ನು ಹೇಗೋ ಸಾಗ ಹಾಕಿದರು. ತುಂಬಾ ಹಿಂದೆ ವಾರಾಂತ್ಯ ಅಂತಿತ್ತು. ಆದರೆ ಈಗ ಕೆಲವರು ವಾರ್‌ನ ಹೆಸರಲ್ಲೂ ಹೇಗೇಗೋ ತಮ್ಮ ಅನ್ನವನ್ನು ಗಳಿಸಿಕೊಳ್ಳುವ ಈ war ಅನ್ನ ಬಹಳ ಲೇಟೆಸ್ಟ್ ಎಂದುಕೊಳ್ಳುತ್ತಾ ಅವರು ತಮ್ಮ ಮನೆ ಕಡೆಗೆ ಹೆಜ್ಜೆ ಹಾಕಿದರು.

ಓವರ್‌ಡೋಸ್: ಎಲ್ಲೋ ಹೋಗಬೇಕು, ಏನೋ ಮುಖ್ಯವಾದುದನ್ನು ಮಾಡಬೇಕು ಎಂದರೆ ಮೊದಲು ವಾರಾಂತ್ಯಕ್ಕೆ ಕಾಯುತ್ತಿದ್ದರು, ಅಲ್ಲಲ್ಲಿ ಯುದ್ಧದ ಸದ್ದು ಸುದ್ದಿ ಕೇಳಿಬರುತ್ತಿರುವುದರಿಂದ ಈಗ war-ಅಂತ್ಯಕ್ಕೆ ಕಾಯುವಂತಾಗಿದೆ

ಒಪ್ಪಂದವಿಲ್ಲದೆ ಅಂತ್ಯಗೊಂಡ ತ್ರಿಪಕ್ಷೀಯ ಮಾತುಕತೆ

ಅಮೆರಿಕ-ಇರಾನ್ ಮಾತುಕತೆ ವಿಫಲ



• ಹೊಸದಿಲ್ಲಿ: ಪಾಕಿಸ್ತಾನದಲ್ಲಿ ನಡೆದ ಸಂಧಾನ ಸಭೆಯಲ್ಲಿ ಅಮೆರಿಕದ ಬೇಡಿಕೆಗಳ ಕುರಿತಾದ ಭಿನ್ನಾಭಿಪ್ರಾಯಗಳಿಂದಾಗಿ ಮಾತುಕತೆಗಳು ವಿಫಲವಾಗಿವೆ ಎಂದು ಇರಾನ್ ತಿಳಿಸಿದೆ.

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷವನ್ನು ಕೊನೆಗಾಣಿಸುವ ಉದ್ದೇಶದಿಂದ ಪಾಕಿಸ್ತಾನದಲ್ಲಿ ನಡೆದ ಸುದೀರ್ಘ ಚರ್ಚೆಯ ನಂತರ, ಅಮೆರಿಕದೊಂದಿಗಿನ ಮಾತುಕತೆ ಬಿಕ್ಕಟ್ಟಿನಲ್ಲಿ ಅಂತ್ಯಗೊಂಡಿದೆ, ಎಂದು ಇರಾನ್ ಭಾನುವಾರ ಘೋಷಿಸಿದೆ. ಇರಾನ್‌ನ ಸರ್ಕಾರಿ ಪ್ರಸಾರ ಸಂಸ್ಥೆ ಐಆರ್‌ಐಬಿ ಪ್ರಕಾರ, ಇರಾನ್ ನಿಯೋಗ ಸತತ 21 ಗಂಟೆಗಳ ಕಾಲ ಮಾತುಕತೆಯಲ್ಲಿ ತೊಡಗಿಸಿಕೊಂಡಿತ್ತು. ಆದರೆ ಅಮೆರಿಕದ ಕಡೆಯಿಂದ ಬಂದ ಅಸ್ವೀಕಾರಾರ್ಹ ಬೇಡಿಕೆಗಳ ಕಾರಣದಿಂದಾಗಿ ಯಾವುದೇ ಪ್ರಗತಿ ಸಾಧಿಸಲು ಸಾಧ್ಯವಾಗಲಿಲ್ಲ, ಎಂದು ಅದು ವಿವರಿಸಿದೆ. ಇರಾನ್ ಹಲವಾರು ಯೋಜನೆಗಳನ್ನು ಪ್ರಸ್ತಾವಿಸಿದರೂ ಸಹ, ಚರ್ಚೆಗಳು ಯಾವುದೇ ಒಪ್ಪಂದವಿಲ್ಲದೆ ಮುಕ್ತಾಯ ಗೊಂಡವು.

ಷರತ್ತುಗಳ ಕುರಿತು ಭಿನ್ನಾಭಿಪ್ರಾಯ



ಒಂದೇ ಸಭೆಯಲ್ಲಿ ಪರಿಹಾರ ಸಿಗುತ್ತದೆ ಎಂಬ ನಿರೀಕ್ಷೆ ಮೊದಲಿನಿಂದಲೂ ಇರಲಿಲ್ಲ, ಎಂದು ಇರಾನ್ ವಿದೇಶಾಂಗ ಸಚಿವಾಲಯ ಸೂಚಿಸಿದೆ. ಇಂತಹ ಸಂಕೀರ್ಣ ಮಾತುಕತೆಗಳಿಗೆ ಹೆಚ್ಚಿನ ಸಮಯದ ಅಗತ್ಯವಿರುತ್ತದೆ ಎಂದು ವಕ್ತಾರ ಎಸ್ಮಾಯಿಲ್ ಬಕೈ ತಿಳಿಸಿದ್ದು, ಪಾಕಿಸ್ತಾನ ಮತ್ತು ಇತರ ಪ್ರಾದೇಶಿಕ ಪಾಲುದಾರರೊಂದಿಗೆ ರಾಜತಾಂತ್ರಿಕ ಸಂಪರ್ಕಗಳು ಮುಂದುವರಿಯಲಿವೆ ಎಂದು ಪುನರುಚ್ಚರಿಸಿದ್ದಾರೆ.

ಸಂಘರ್ಷದ ಹಿನ್ನೆಲೆ

ಫೆಬ್ರವರಿ 28ರಂದು ಪ್ರಾರಂಭವಾದ ಮಧ್ಯಪ್ರಾಚ್ಯದ ಸಂಘರ್ಷದ ನಂತರ ಈ ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿವೆ. ಅಮೆರಿಕ ಮತ್ತು ಇಸ್ರೇಲ್‌ನ ಜಂಟಿ ಮಿಲಿಟರಿ ಕ್ರಮಗಳು ಇರಾನ್ ಅನ್ನು ಗುರಿಯಾಗಿಸಿಕೊಂಡು ನಡೆದಾಗ ಈ ಸಂಘರ್ಷ ಆರಂಭವಾಯಿತು, ಇದರಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಲಿ ಖಮೇನಿ ಮತ್ತು ಇತರ ಹಿರಿಯ ಅಧಿಕಾರಿಗಳು ಹತರಾಗಿದ್ದರು. ಪ್ರತೀಕಾರವಾಗಿ ಇರಾನ್ ಕೂಡ ಇಸ್ರೇಲ್ ಮತ್ತು ಕೊಲ್ಲಿ ರಾಷ್ಟ್ರಗಳಲ್ಲಿನ ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ದಾಳಿ ನಡೆಸಿತ್ತು. ಈ ವಾರದ ಆರಂಭದಲ್ಲಿ ಅಧ್ಯಕ್ಷ ಟ್ರಂಪ್ ಎರಡು ವಾರಗಳ ಕದನ ವಿರಾಮ ಘೋಷಿಸುವವರೆಗೆ ಎರಡೂ ಕಡೆಯಿಂದ ಮಿಲಿಟರಿ ಕ್ರಮಗಳು ಮುಂದುವರಿದಿದ್ದವು. ಈ ಸಂಘರ್ಷ ಮಧ್ಯ ಏಷ್ಯಾ ಭಾಗದಲ್ಲಿ ಸಾವಿರಾರು ಜನರ ಸಾವಿಗೆ ಕಾರಣವಾಗಿದ್ದು, ಅಂತರಾಷ್ಟ್ರೀಯ ಕಳವಳವನ್ನು ಹೆಚ್ಚಿಸಿದೆ. ಆದರೆ ರಾಜತಾಂತ್ರಿಕ ಪ್ರಯತ್ನಗಳಿಂದ ಹೆಚ್ಚು ಲಾಭವಾದಂತೆ ಕಾಣುತ್ತಿಲ್ಲ. ಮಾತುಕತೆ ವಿಫಲವಾಗಿದ್ದರೂ, ಪ್ರಾದೇಶಿಕ ನಾಯಕರೊಂದಿಗೆ ಸಂಪರ್ಕ ಮುಂದುವರಿಯಲಿದೆ, ಎಂದು ಇರಾನ್ ಸೂಚಿಸಿದೆ. ಇದು ರಾಜತಾಂತ್ರಿಕ ಪ್ರಯತ್ನಗಳು ನಡೆಯುವ ಸಾಧ್ಯತೆಯನ್ನು ತೋರಿಸುತ್ತಿದೆ.



ದಶಕಗಳ ನಂತರದ ಉನ್ನತ ಮಟ್ಟದ ಸಂವಾದ

ಈ ಮಾತುಕತೆ, ಕಳೆದ ಒಂದು ದಶಕಕ್ಕೂ ಹೆಚ್ಚು ಕಾಲದ ನಂತರ ಅಮೆರಿಕ ಮತ್ತು ಇರಾನ್ ಅಧಿಕಾರಿಗಳ ನಡುವೆ ನಡೆದ ಮೊದಲ ನೇರ ಸಂವಹನವಾಗಿದ್ದು, ಇದು ಮಹತ್ವದ ರಾಜತಾಂತ್ರಿಕ ಬೆಳವಣಿಗೆ ಎನ್ನಲಾಗಿದೆ. 1979ರ ಇಸ್ಲಾಮಿಕ್ ಕ್ರಾಂತಿಯ ನಂತರ ಉಭಯ ದೇಶಗಳ ನಡುವೆ ನಡೆದ ಅತ್ಯಂತ ಉನ್ನತ ಮಟ್ಟದ ಚರ್ಚೆ ಇದಾಗಿದೆ. ಈ ಹಿಂದೆ ಸಂವಹನಕ್ಕಾಗಿ ಮಧ್ಯವರ್ತಿಗಳನ್ನು ಅವಲಂಬಿಸಲಾಗುತ್ತಿತ್ತು. ಆದರೆ ಈ ಬಾರಿ ಪಾಕಿಸ್ತಾನಿ ಅಧಿಕಾರಿಗಳ ಸಮ್ಮುಖದಲ್ಲಿ ಉಭಯ ನಿಯೋಗಗಳು ನೇರವಾಗಿ ಮುಖಾಮುಖಿಯಾಗಿ ಮಾತುಕತೆ ನಡೆಸಿದವು. ಅಮೆರಿಕದ ನಿಯೋಗದಲ್ಲಿ ವ್ಯಾನ್ಸ್, ವಿಶೇಷ ಪ್ರತಿನಿಧಿ ಸ್ಟೀವ್ ವಿಟ್ಕಾಫ್ ಮತ್ತು ಜ್ಯಾರೆಡ್ ಕುಶ್ನರ್ ಇದ್ದರು. ಇರಾನ್‌ನ 71 ಸದಸ್ಯರ ನಿಯೋಗದ ನೇತೃತ್ವವನ್ನು ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಗರ್ ಗಾಲಿಬಾಫ್ ಮತ್ತು ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಗ್ಚಿ ವಹಿಸಿದ್ದರು. ಮಾತುಕತೆಯ ಸಮಯದಲ್ಲಿ ತಾವು ಅಧ್ಯಕ್ಷ ಟ್ರಂಪ್ ಅವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದೆವು ಎಂದು ವ್ಯಾನ್ಸ್ ತಿಳಿಸಿದ್ದಾರೆ.

ಪ್ರಮುಖ ವಿಷಯಗಳ ಕುರಿತು ವಿವಾದ

ಅಮೆರಿಕ ಕಾರ್ಯತಂತ್ರದ ಮತ್ತು ಪರಮಾಣು ವಿಷಯಗಳಿಗೆ ಸಂಬಂಧಿಸಿದಂತೆ ಕೆಲವು ರಿಯಾಯಿತಿಗಳನ್ನು ಕೋರಿದೆ ಎಂದು ತಸ್ನಿಮ್ ಸುದ್ದಿ ಸಂಸ್ಥೆ ಸೇರಿದಂತೆ ಇರಾನ್ ಮಾಧ್ಯಮಗಳು ವರದಿ ಮಾಡಿವೆ. ಜಾಗತಿಕ ತೈಲ ಸಾಗಣೆಯ ಪ್ರಮುಖ ಮಾರ್ಗವಾದ ಹಾರ್ಮುಜ್ ಜಲಸಂಧಿಗೆ ಸಂಬಂಧಿಸಿದ ಷರತ್ತುಗಳು ಮತ್ತು ಪರಮಾಣು ಸಂಪನ್ಮೂಲಗಳನ್ನು ತೆಗೆದುಹಾಕುವುದು ಸೇರಿದಂತೆ ಇರಾನ್‌ನ ಪರಮಾಣು ಸಾಮರ್ಥ್ಯಗಳಿಗೆ ಸಂಬಂಧಿಸಿದ ಬೇಡಿಕೆಗಳು ಇದರಲ್ಲಿ ಸೇರಿವೆ ಎಂದು ವರದಿಯಾಗಿದೆ. ಅಮೆರಿಕದ ಪರವಾಗಿ ನಿಯೋಗದ ನೇತೃತ್ವ ವಹಿಸಿದ್ದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್, ಇಸ್ಲಾಮಾಬಾದ್ ಮಾತುಕತೆಯ ವೇಳೆ ಅಮೆರಿಕ ತನ್ನ ಅಂತಿಮ ಪ್ರಸ್ತಾವನೆಯನ್ನು ಮಂಡಿಸಿದೆ ಎಂದು ಖಚಿತಪಡಿಸಿದ್ದಾರೆ. ಈ ಷರತ್ತುಗಳಿಗೆ ಇರಾನ್ ನೀಡುವ ಪ್ರತಿಕ್ರಿಯೆಯ ಮೇಲೆ ಮುಂದಿನ ಫಲಿತಾಂಶ ನಿರ್ಧಾರವಾಗಲಿದೆ ಎಂದು ಅವರು ಸೂಚಿಸಿದ್ದಾರೆ.

ಇರಾನ್ ಪರಮಾಣು ಶಸ್ತ್ರಾಸ್ತ್ರ ಹೊಂದುವಂತಿಲ್ಲ: ಅಮೆರಿಕ

ಇರಾನ್‌ನ ಪರಮಾಣು ಕಾರ್ಯಕ್ರಮದ ಬಗ್ಗೆ ಭರವಸೆಗಳನ್ನು ಪಡೆಯುವುದು ಈ ಮಾತುಕತೆಯ ಕೇಂದ್ರ ಗುರಿ ಎಂದು ಅಮೆರಿಕ ಪ್ರತಿಪಾದಿಸಿದೆ. ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವುದಿಲ್ಲ ಅಥವಾ ಅವುಗಳನ್ನು ವೇಗವಾಗಿ ತಯಾರಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದಿಲ್ಲ ಎಂಬ ಸ್ಪಷ್ಟ ಬದ್ಧತೆಯನ್ನು ವಾಷಿಂಗ್ಟನ್ ನಿರೀಕ್ಷಿಸುತ್ತಿದೆ ಎಂದು ವ್ಯಾನ್ಸ್ ತಿಳಿಸಿದ್ದಾರೆ. ಈ ಷರತ್ತುಗಳು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕಾರ್ಯತಂತ್ರದ ಆದ್ಯತೆಗಳಿಗೆ ಅನುಗುಣವಾಗಿವೆ ಎಂದು ಅವರು ಹೇಳಿದ್ದಾರೆ. ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಾಗಿಲ್ಲ ಮತ್ತು ಈ ಫಲಿತಾಂಶ ಅಮೆರಿಕಕ್ಕೆ ಹೋಲಿಸಿದರೆ ಇರಾನ್‌ಗೆ ಹೆಚ್ಚು ಕೆಟ್ಟ ಸುದ್ದಿ ಎಂದು ವ್ಯಾನ್ಸ್ ಹೇಳಿಕೊಂಡಿದ್ದಾರೆ. ಅಲ್ಲದೆ, ಮಾತುಕತೆಯ ಉದ್ದಕ್ಕೂ ಅಮೆರಿಕದ ಮಿತಿಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿದೆ ಎಂದು ಅವರು ಒತ್ತಿ ಹೇಳಿದ್ದಾರೆ.

ಸಂಘರ್ಷದ ನಡುವೆ ಭಾರತದಿಂದ ಇಂಧನ ಪೂರೈಕೆ ಪ್ರಮಾಣ ಹೆಚ್ಚಳ


• ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಇಂಧನ ವ್ಯತ್ಯಯದ ನಡುವೆ ದೇಶೀಯ ಇಂಧನ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಭಾರತ 5 ಕೆಜಿ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯನ್ನು ಹೆಚ್ಚಿಸಿದೆ ಮತ್ತು ಪೈಪ್ಡ್ ನೈಸರ್ಗಿಕ ಅನಿಲ (ಪಿಎನ್‌ಜಿ) ಸರಬರಾಜನ್ನು ವೇಗಗೊಳಿಸಿದೆ.

ಎಲ್‌ಪಿಜಿ ,ಪಿಎನ್‌ಜಿ ವಿಸ್ತರಣೆ: ಮಾ.23ರಿಂದ ಇದುವರೆಗೆ ಅಧಿಕಾರಿಗಳು 13 ಲಕ್ಷಕ್ಕೂ ಹೆಚ್ಚು 5 ಕೆಜಿ ಎಲ್‌ಪಿಜಿ ಸಿಲಿಂಡರ್‌ಗಳನ್ನು ಮಾರಾಟ ಮಾಡಿದ್ದು, ದೈನಂದಿನ ಮಾರಾಟ 1,00,000 ಯುನಿಟ್‌ಗಳನ್ನು ಮೀರಿದೆ. ಇದರೊಂದಿಗೆ 4,24,000 ಕ್ಕೂ ಹೆಚ್ಚು ಹೊಸ ಪಿಎನ್‌ಜಿ ಸಂಪರ್ಕಗಳನ್ನು ಸಕ್ರಿಯಗೊಳಿಸಲಾಗಿದ್ದು, 30,000 ಗ್ರಾಹಕರು ತಮ್ಮ ಹಳೆಯ ಎಲ್‌ಪಿಜಿ ಸಂಪರ್ಕಗಳನ್ನು ಬಿಟ್ಟುಕೊಟ್ಟಿದ್ದಾರೆ. ಏ.11ರಂದು ಒಂದೇ ದಿನ 52 ಲಕ್ಷಕ್ಕೂ ಹೆಚ್ಚು ಮನೆಬಳಕೆ ಸಿಲಿಂಡರ್‌ಗಳನ್ನು ವಿತರಿಸಲಾಗಿದೆ.

ಪ್ರಮುಖ ಕ್ರಮಗಳು : ಸರ್ಕಾರ ವಾಣಿಜ್ಯ ಬಳಕೆದಾರರಿಗಿಂತ ದೇಶೀಯ ಬಳಕೆದಾರರಿಗೆ ಅನಿಲ ಹಂಚಿಕೆಯಲ್ಲಿ ಆದ್ಯತೆ ನೀಡಿದೆ. ಇದರ ಪರಿಣಾಮವಾಗಿ, ವಾಣಿಜ್ಯ ಎಲ್‌ಪಿಜಿ ಲಭ್ಯತೆ ಪ್ರಸ್ತುತ ಬಿಕ್ಕಟ್ಟಿನ ಮೊದಲಿನ ಮಟ್ಟದ ಶೇ. 70 ರಷ್ಟಿದೆ. ಬೆಲೆ ನಿಯಂತ್ರಣಕ್ಕಾಗಿ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ 10 ರೂ.ಗಳಷ್ಟು ಕಡಿತಗೊಳಿಸಿದೆ ಮತ್ತು ಡೀಸೆಲ್ ಹಾಗೂ ವಿಮಾನ ಇಂಧನದ ಮೇಲಿನ ರಫ್ತು ಸುಂಕವನ್ನು ಹೆಚ್ಚಿಸಿದೆ.

ಇಂಡಿಯನ್ ಆಯಿಲ್ ಮತ್ತು ಭಾರತ್ ಪೆಟ್ರೋಲಿಯಂ ಸೇರಿದಂತೆ ಸರ್ಕಾರಿ ಸ್ವಾಮ್ಯದ ಕಂಪನಿಗಳು ಗೇಲ್ ಗ್ಯಾಸ್ ಲಿಮಿಟೆಡ್ ನಂತಹ ನಗರ ಅನಿಲ ವಿತರಕರೊಂದಿಗೆ ಸಮನ್ವಯ ಸಾಧಿಸುತ್ತಿದ್ದು, ವಾಣಿಜ್ಯ ಪಿಎನ್‌ಜಿ ಸಂಪರ್ಕಗಳಿಗೆ ಆದ್ಯತೆ ನೀಡುತ್ತಿವೆ. ಸಂಸ್ಕರಣಾಗಾರಗಳ ಗರಿಷ್ಠ ಬಳಕೆಯ ಮೂಲಕ ದಾಸ್ತಾನು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುತ್ತಿವೆ.

ಲೆಬನಾನ್‌ನಲ್ಲಿ 10 ಲಕ್ಷಕ್ಕೂ ಹೆಚ್ಚು ನಿರಾಶ್ರಿತರು



• ಸಿಡಾನ್(ಲೆಬನಾನ್): ಇಸ್ರೇಲ್‌ನ ಸ್ಥಳಾಂತರ ಆದೇಶಗಳು ಮತ್ತು ಮಿಲಿಟರಿ ಕಾರ್ಯಾಚರಣೆಗಳಿಂದಾಗಿ ಲೆಬನಾನ್‌ನಾದ್ಯಂತ 10 ಲಕ್ಷಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. ಈ ಸಂಘರ್ಷದಲ್ಲಿ ಇದುವರೆಗೆ 2,000ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದಾರೆ. ದಕ್ಷಿಣ ಭಾಗದ ಸ್ಮಶಾನಗಳ ಮೇಲೆ ದಾಳಿಗಳು ನಡೆಯುತ್ತಿರುವುದರಿಂದ 13 ಭದ್ರತಾ ಅಧಿಕಾರಿಗಳನ್ನು ಹರೆತ್ ಸೈದಾದ ತಾತ್ಕಾಲಿಕ ಗೋರಿಗಳಲ್ಲಿ ಹೂಳಲಾಗಿದೆ.

ಲೆಬನಾನ್ ಸೇನೆ ಈ ಸಂಘರ್ಷದಲ್ಲಿ ತಟಸ್ಥ ನಿಲುವನ್ನು ಹೊಂದಿದ್ದರೂ, ಈ ವಾರ ನಡೆದ ಇಸ್ರೇಲ್ ದಾಳಿಯಲ್ಲಿ ನಾಲ್ವರು ಲೆಬನಾನ್ ಸೈನಿಕರು ಮೃತಪಟ್ಟಿದ್ದಾರೆ. ರಾಜಧಾನಿ ಬೈರೂತ್ ನಲ್ಲಿ ಸರ್ಕಾರಿ ವಿರೋಧಿ ಪ್ರತಿಭಟನಾಕಾರರು ಜಮಾಯಿಸಿದ್ದು, ಮಾತುಕತೆಗೆ ಮತ್ತು ಆಕ್ರಮಣದ ಸಮಯದಲ್ಲಿ ಜನರಿಗೆ ರಕ್ಷಣೆ ನೀಡಲು ಸರ್ಕಾರ ವಿಫಲವಾಗಿದೆ, ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಧಿಕಾರಿಗಳ ಅಂತ್ಯಸಂಸ್ಕಾರ: ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಮೃತಪಟ್ಟ ಲೆಬನಾನ್‌ನ 13 ಭದ್ರತಾ ಅಧಿಕಾರಿಗಳ ಅಂತ್ಯಸಂಸ್ಕಾರ ಶನಿವಾರ ನೆರವೇರಿತು. ಈ ಬೆಳವಣಿಗೆಯ ನಡುವೆಯೇ ಪ್ರಧಾನ ಮಂತ್ರಿ ನವಾಫ್ ಸಲಾಮ್, ಮಾತುಕತೆಗಾಗಿ ಹಮ್ಮಿಕೊಂಡಿದ್ದ ತಮ್ಮ ವಾಷಿಂಗ್ಟನ್ ಪ್ರವಾಸವನ್ನು ಮುಂದೂಡಿದ್ದಾರೆ.

ದಕ್ಷಿಣದ ಪಟ್ಟಣವಾದ ನಬತಿಯಾದಲ್ಲಿರುವ ಭದ್ರತಾ ಪ್ರಧಾನ ಕಚೇರಿಯನ್ನು ಗುರಿಯಾಗಿಸಿಕೊಂಡು ಶುಕ್ರವಾರ ಇಸ್ರೇಲ್ ನಡೆಸಿದ ದಾಳಿಯಲ್ಲಿ ಈ ಅಧಿಕಾರಿಗಳು ಸಾವನ್ನಪ್ಪಿದ್ದಾರೆ. ಬಂಧಿತರನ್ನು ಸಿಡಾನ್ ನಗರಕ್ಕೆ ವರ್ಗಾಯಿಸುವ ಕಾರ್ಯಾಚರಣೆ ಮುಗಿಸಿ ಅಧಿಕಾರಿಗಳು ಕಚೇರಿಗೆ ಮರಳಿದ ಕೆಲವೇ ನಿಮಿಷಗಳಲ್ಲಿ ಈ ದಾಳಿ ನಡೆದಿದೆ. ಘಟನೆಯಲ್ಲಿ ಒಬ್ಬ ಅಧಿಕಾರಿ ಬದುಕುಳಿದಿದ್ದು, ತೀವ್ರ ಸುಟ್ಟ ಗಾಯಗಳಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೆಜ್ಬೊಲ್ಲಾ ಮೂಲಸೌಕರ್ಯಗಳನ್ನು ಗುರಿಯಾಗಿಸಿ ಈ ದಾಳಿ ನಡೆಸಲಾಗಿದೆ, ಎಂದು ತಿಳಿಸಿರುವ ಇಸ್ರೇಲ್ ಮಿಲಿಟರಿ, ಭದ್ರತಾ ಸಿಬ್ಬಂದಿಗೆ ಆಗಿರುವ ಹಾನಿಯ ಬಗ್ಗೆ ತನಿಖೆ ನಡೆಸುತ್ತಿರುವುದಾಗಿ ಹೇಳಿದೆ.

ರಾಜತಾಂತ್ರಿಕ ಮಾತುಕತೆಗಳು: ಮುಂದಿನ ವಾರ ಅಮೆರಿಕದಲ್ಲಿ ಲೆಬನಾನ್ ಮತ್ತು ಇಸ್ರೇಲ್ ನಡುವೆ ನೇರ ಮಾತುಕತೆ ನಡೆಯಲಿದ್ದು, ಅದರ ಮುನ್ನವೇ ಈ ಸಾವುಗಳು ಸಂಭವಿಸಿವೆ. ಮಾತುಕತೆಗೆ ಕದನ ವಿರಾಮವನ್ನೇ ಷರತ್ತನ್ನಾಗಿ ವಿಧಿಸಿದ್ದ ಪ್ರಧಾನಿ ಸಲಾಮ್, ಆಂತರಿಕ ಭದ್ರತೆಯ ಕಾರಣ ನೀಡಿ ತಮ್ಮ ವಾಷಿಂಗ್ಟನ್ ಪ್ರವಾಸವನ್ನು ಮುಂದೂಡಿದ್ದಾರೆ. ಆರಂಭಿಕ ಹಂತದ ಮಾತುಕತೆಗಳು ರಾಯಭಾರಿ ಮಟ್ಟದಲ್ಲಿ ನಡೆಯುವ ನಿರೀಕ್ಷೆಯಿದೆ. ಈ ಮಾತುಕತೆಗಳು ಕದನ ವಿರಾಮದ ಬಗ್ಗೆ ಅಲ್ಲದೆ, ಹೆಜ್ಬೊಲ್ಲಾ ಸಂಘಟನೆಯನ್ನು ನಿಶ್ಶಸ್ತ್ರೀಕರಣಗೊಳಿಸುವ ಬಗ್ಗೆ ಮಾತ್ರ ಇರಲಿವೆ, ಎಂದು ಇಸ್ರೇಲ್ ಸ್ಪಷ್ಟಪಡಿಸಿದೆ.

ಕಿರುಸುದ್ದಿ


ಭಾರತ-ಉಜ್ಬೇಕಿಸ್ತಾನ್ ಜಂಟಿ ಸಮರಾಭ್ಯಾಸ

• ಹೊಸದಿಲ್ಲಿ: ಭಾರತ ಮತ್ತು ಉಜ್ಬೇಕಿಸ್ತಾನ್ ಪಡೆಗಳು ಏಪ್ರಿಲ್ ಭಾನುವಾರ ಪ್ರಾರಂಭಗೊಂಡಿದ್ದು, ಏ.25ರವರೆಗೆ ಜಂಟಿ ಸಮರಾಭ್ಯಸದಲ್ಲಿ ಭಾಗವಹಿಸಲಿದ್ದು, ಸಹಕಾರವನ್ನು ಬೆಳೆಸುತ್ತವೆ. ಅರೆ-ಪರ್ವತ ಭೂಪ್ರದೇಶದಲ್ಲಿ ಸಂಯೋಜಿತ ಕಾರ್ಯಾಚರಣೆಗಳನ್ನು ನಡೆಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಭಾರತ-ಉಜ್ಬೇಕಿಸ್ತಾನ್ ಜಂಟಿ ಮಿಲಿಟರಿ ವ್ಯಾಯಾಮ 'ಡಸ್ಟ್ಲಿಕ್' ನ ಏಳನೇ ಆವೃತ್ತಿಗಾಗಿ ಭಾರತೀಯ ತಂಡವು ಭಾನುವಾರ ಹೊರಟಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾನೂನುಬಾಹಿರ ಸಶಸ್ತ್ರ ಗುಂಪುಗಳನ್ನು ತಟಸ್ಥಗೊಳಿಸಲು ವಿಶೇಷ ಕಾರ್ಯಾಚರಣೆಗಳ ಸಿದ್ಧತೆ ಮತ್ತು ಕಾರ್ಯಗತಗೊಳಿಸುವಿಕೆಯ ಮೇಲೆ ಕೇಂದ್ರೀಕರಿಸಿ, ಜಂಟಿ ಕಾರ್ಯಾಚರಣೆಗಳಿಗಾಗಿ ಯುದ್ಧತಂತ್ರದ ಡ್ರಿಲ್ಗಳನ್ನು ಮೌಲ್ಯೀಕರಿಸುವ ಗುರಿಯನ್ನು ಹೊಂದಿರುವ 48 ಗಂಟೆಗಳ ವ್ಯಾಯಾಮದೊಂದಿಗೆ ಜಂಟಿ ತರಬೇತಿಯು ಮುಕ್ತಾಯಗೊಳ್ಳುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ.ಬಂಗಾಳ ಮೊದಲ ಹಂತ: 3.6 ಕೋಟಿ ಮತದಾರರು

• ಕೋಲ್ಕತ್ತಾ: ಏ.23ರಂದು ನಡೆಯಲಿರುವ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ 16 ಜಿಲ್ಲೆಗಳ 3.6 ಕೋಟಿಗೂ ಹೆಚ್ಚು ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅರ್ಹರಾಗಿದ್ದಾರೆ. ಎಂದು ಚುನಾವಣಾ ಆಯೋಗದ ಅಂಕಿ ಅಂಶದಿಂದ ಬಹಿರಂಗಗೊಂಡಿದೆ. ಮೊದಲ ಹಂತದ ಮತದಾರರ ಪಟ್ಟಿಯಲ್ಲಿ 1.84 ಕೋಟಿ ಪುರುಷರು, 1.75 ಕೋಟಿ ಮಹಿಳೆಯರು ಮತ್ತು 465 ತೃತೀಯ ಲಿಂಗಿಗಳಿದ್ದಾರೆ. ಜಿಲ್ಲೆಗಳ ಪೈಕಿ, ಮುರ್ಷಿದಾಬಾದ್‌ನಲ್ಲಿ ಅತಿ ಹೆಚ್ಚು 50.26 ಲಕ್ಷ ಮತದಾರರಿದ್ದರೆ, ನಂತರದ ಸ್ಥಾನದಲ್ಲಿ ಪೂರ್ವ ಮೇದಿನಿಪುರ (41.60 ಲಕ್ಷ) ಮತ್ತು ಪಶ್ಚಿಮ ಮೇದಿನಿಪುರ (37.7 ಲಕ್ಷ) ಮತದಾರರಿದ್ದಾರೆ. ಕಾಲಿಂಪಾಂಗ್ 2.01 ಲಕ್ಷ ಮತದಾರರನ್ನು ಹೊಂದಿರುವ ಅತಿ ಕಡಿಮೆ ಸಂಖ್ಯೆಯ ಮತದಾರರನ್ನು ಹೊಂದಿದೆ.

ಬಿಹಾರ ಶಾಸಕಾಂಗ ಪಕ್ಷದ ಕೇಂದ್ರ ವೀಕ್ಷಕರಾಗಿ ಚೌಹಾಣ್



• ಹೊಸದಿಲ್ಲಿ: ಬಿಹಾರದಲ್ಲಿ ತನ್ನ ಶಾಸಕಾಂಗ ಪಕ್ಷದ ನಾಯಕನ ಚುನಾವಣೆಗೆ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಕೇಂದ್ರ ವೀಕ್ಷಕರಾಗಿ ಬಿಜೆಪಿ ಭಾನುವಾರ ನೇಮಿಸಿದೆ. ಬಿಹಾರ ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ರಾಜ್ಯಸಭೆಗೆ ತೆರಳಿದ ನಂತರ ಪಕ್ಷ ಬಿಹಾರದಲ್ಲಿ ಹೊಸ ಸರ್ಕಾರ ರಚನೆ ಪ್ರಕ್ರಿಯೆ ಪ್ರಾರಂಭಿಸಿದೆ.

ಜೈಶಂಕರ್ ಯುಎಇ ಭೇಟಿ: ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಚರ್ಚೆ



• ಅಬುಧಾಬಿ: ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಭಾನುವಾರ ಯುನೈಟೆಡ್ ಅರಬ್ ಎಮಿರೇಟ್ಸ್‌ನ ಅಧ್ಯಕ್ಷ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರನ್ನು ಭೇಟಿಯಾಗಿ ಪಶ್ಚಿಮ ಏಷ್ಯಾದ ಬಿಕ್ಕಟ್ಟು ಮತ್ತು ಅದರ ಆರ್ಥಿಕ ಪರಿಣಾಮದ ಬಗ್ಗೆ ಚರ್ಚಿಸಿದರು. ಜೈಶಂಕರ್ ಅವರು ಶನಿವಾರದಿಂದ ಗಲ್ಫ್ ರಾಷ್ಟ್ರಕ್ಕೆ ಎರಡು ದಿನಗಳ ಭೇಟಿ ನೀಡಿದ್ದರು. ಪಶ್ಚಿಮ ಏಷ್ಯಾ ಸಂಘರ್ಷದ ವೇಳೆ ಭಾರತೀಯ ಸಮುದಾಯದ ಯೋಗಕ್ಷೇಮವನ್ನು ಖಾತ್ರಿಪಡಿಸಿದ್ದಕ್ಕಾಗಿ ಪ್ರಧಾನ ಮಂತ್ರಿಯವರ ಆತ್ಮೀಯ ಶುಭಾಶಯಗಳನ್ನು ಮತ್ತು ನಮ್ಮ ಕೃತಜ್ಞತೆಯನ್ನು ತಿಳಿಸಿದ್ದೇನೆ ಎಂದು ಅಬುಧಾಬಿಯಲ್ಲಿ ನಡೆದ ಸಭೆಯ ನಂತರ ವಿದೇಶಾಂಗ ವ್ಯವಹಾರಗಳ ಎಕ್ಸ್‌ನಲ್ಲಿ ತಿಳಿಸಿದ್ದಾರೆ. ಭಾರತ-ಯುಎಇ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ಮಾರ್ಗದರ್ಶನ ನೀಡಿದ್ದಕ್ಕಾಗಿ ಅಲ್ ನಹ್ಯಾನ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುವುದಾಗಿ ಜೈಶಂಕರ್ ಹೇಳಿದರು. ಯುಎಇ ಅಧ್ಯಕ್ಷರೊಂದಿಗಿನ ಜೈಶಂಕರ್ ಅವರ ಭೇಟಿಯ ವೇಳೆ ದುಬೈ ಕ್ರೌನ್ ಪ್ರಿನ್ಸ್ ಮತ್ತು ಯುಎಇ ಉಪ ಪ್ರಧಾನಿ ಹಮ್ದಾನ್ ಬಿನ್ ಮೊಹಮ್ಮದ್ ಅಲ್ ಮಕ್ತೂಮ್ ಸಹ ಇದ್ದರು ಎಂದು ತಿಳಿದುಬಂದಿದೆ.

ತುಷ್ಟೀಕರಣ ನೀತಿಗಳನ್ನು ಅನುಸರಿಸುತ್ತಿರುವ ಟಿಎಂಸಿ

• ಕೋಲ್ಕತ್ತಾ: ಪಶ್ಚಿಮಬಂಗಾಳದಲ್ಲಿ ಟಿಎಂಸಿ ತುಷ್ಟೀಕರಣ ನೀತಿಗಳನ್ನು ಅನುಸರಿಸುತ್ತಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆರೋಪಿಸಿದ್ದಾರೆ. ಬಂಕುರಾ ಜಿಲ್ಲೆಯ ಸೋನಾಮುಖಿಯಲ್ಲಿ ನಡೆದ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಆದಿತ್ಯನಾಥ್, ಬಂಗಾಳವನ್ನು ದೇಶದ ಆಧ್ಯಾತ್ಮಿಕ ಅನ್ವೇಷಣೆಯನ್ನು ಶ್ರೀಮಂತಗೊಳಿಸಿದ ಸ್ವಾಮಿ ವಿವೇಕಾನಂದ ಮತ್ತು ರಾಮಕೃಷ್ಣರ ಭೂಮಿ ಎಂದು ಕರೆಯಲಾಗುತ್ತದೆ. ಆದರೆ ಟಿಎಂಸಿ ಸರ್ಕಾರವು ವಿಶ್ವದಾದ್ಯಂತ ಪೂಜ್ಯ ಆಧ್ಯಾತ್ಮಿಕ ಪ್ರತಿಮೆಗಳನ್ನು ಅಗೌರವಗೊಳಿಸುತ್ತದೆ. ಇದು ರಾಜ್ಯದ ಹಿಂದು ಅಸ್ಮಿತೆಗೆ ಅಪಾಯವನ್ನುಂಟುಮಾಡುತ್ತದೆ ಎಂದು ಯೋಗಿ ಆರೋಪಿಸಿದ್ದಾರೆ. ನಿಜವಾದ ಅಂತರ್ಗತ ಆಡಳಿತವನ್ನು ತರಲು ಇಲ್ಲಿ ಡಬಲ್ ಎಂಜಿನ್ ಸರ್ಕಾರಕ್ಕೆ ಮತ ಚಲಾಯಿಸುವಂತೆ ಜನರನ್ನು ಒತ್ತಾಯಿಸಿದರು. ಒಂಬತ್ತು-ಹತ್ತು ವರ್ಷಗಳ ಹಿಂದೆ ಉತ್ತರ ಪ್ರದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಮೊದಲು ಸಾಮಾನ್ಯವಾಗಿದ್ದ ಗೂಂಡಾ ಗರ್ದಿಯ ತಾಣವಾಗಿ ಪಶ್ಚಿಮ ಬಂಗಾಳ ಈಗ ಮಾರ್ಪಟ್ಟಿದೆ. ಉತ್ತರಪ್ರದೇಶದಲ್ಲಿ ಅಭಿವೃದ್ಧಿ ಮತ್ತು ಬೆಳವಣಿಗೆಯ ಕೊರತೆ ಇತ್ತು. ಆದರೆ ಈಗ ಬದಲಾವಣೆಗಳನ್ನು ನೋಡಿ ಎಂದು ಅವರು ಹೇಳಿದರು. ಉತ್ತರ ಪ್ರದೇಶದಲ್ಲಿ ಯಾವುದೇ ತುಷ್ಟೀಕರಣವಿಲ್ಲ, ಆದರೆ ಅಂತರ್ಗತ ಹಿಂದು ಧರ್ಮ ಇದೆ. ಅಲ್ಲಿ ಪ್ರತಿ ಸಮುದಾಯವು ಸುರಕ್ಷಿತ ವಾತಾವರಣದಲ್ಲಿ ಶಾಂತಿಯುತವಾಗಿ ಬದುಕಬಹುದು ಎಂದು ಆದಿತ್ಯನಾಥ್ ಹೇಳಿದರು. ಪ್ರತಿ ತಿಂಗಳು, ಕರ್ಫ್ಯೂ ಇತ್ತು. ಆದರೆ 2017ರಿಂದ, ಉತ್ತರಪ್ರದೇಶದಲ್ಲಿ ಬಿಜೆಪಿ ಅಧಿಕಾರದಲ್ಲಿರುವುದರಿಂದ, ಯಾವುದೇ ಕರ್ಫ್ಯೂ ಅಥವಾ ಗಲಭೆಗಳು ನಡೆದಿಲ್ಲ ಎಂದರು.

ಭಾರತೀಯ ಭೂಪ್ರದೇಶಗಳಿಗೆ ನಾಮಕರಣ:ತಿರಸ್ಕರಿಸಿದ ಎಂಇಎ


• ಹೊಸದಿಲ್ಲಿ: ಅರುಣಾಚಲ ಪ್ರದೇಶ ಸೇರಿದಂತೆ ಭಾರತೀಯ ಭೂಪ್ರದೇಶದ ಸ್ಥಳಗಳಿಗೆ ಕಾಲ್ಪನಿಕ ಹೆಸರುಗಳನ್ನು ನೀಡಿದ್ದಕ್ಕಾಗಿ ಭಾರತವು ಭಾನುವಾರ ಚೀನಾವನ್ನು ತರಾಟೆಗೆ ತೆಗೆದುಕೊಂಡಿದೆ.



ಭಾರತದ ಭೂಪ್ರದೇಶದ ಭಾಗವಾಗಿರುವ ಸ್ಥಳಗಳಿಗೆ ಕಾಲ್ಪನಿಕ ಹೆಸರುಗಳನ್ನು ನೀಡುವ ಚೀನಾದ ಯಾವುದೇ ಪ್ರಯತ್ನಗಳನ್ನು ಭಾರತ ಸ್ಪಷ್ಟವಾಗಿ ತಿರಸ್ಕರಿಸುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಹೇಳಿಕೆಯಲ್ಲಿ ಹೇಳಿದೆ. ಸುಳ್ಳು ಹೇಳಿಕೆಗಳನ್ನು ನೀಡುವ ಮತ್ತು ಆಧಾರರಹಿತ ನಿರೂಪಣೆಗಳನ್ನು ಮಾಡುವ ಚೀನಾದ ಇಂತಹ ಪ್ರಯತ್ನಗಳು ಅರುಣಾಚಲ ಪ್ರದೇಶ ಸೇರಿದಂತೆ ಈ ಸ್ಥಳಗಳು ಯಾವಾಗಲೂ ಭಾರತದ ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಭಾಗವಾಗಿ ಉಳಿದಿವೆ ಎಂಬ ವಾಸ್ತವವನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಎಂಇಎ ಹೇಳಿದೆ. ಈ ಕ್ರಮಗಳು ಭಾರತ-ಚೀನಾ ದ್ವಿಪಕ್ಷೀಯ ಸಂಬಂಧಗಳನ್ನು ಸ್ಥಿರಗೊಳಿಸಲು ನಡೆಯುತ್ತಿರುವ ಪ್ರಯತ್ನಗಳಿಗೆ ಹಾನಿಕಾರಕವಾಗಿವೆ ಎಂದು ಸಚಿವಾಲಯ ಹೇಳಿದೆ. ಸಂಬಂಧಗಳಲ್ಲಿ ನಕಾರಾತ್ಮಕತೆಯನ್ನು ಉಂಟುಮಾಡುವ ಮತ್ತು ಉತ್ತಮ ತಿಳುವಳಿಕೆಯನ್ನು ಸೃಷ್ಟಿಸುವ ಪ್ರಯತ್ನಗಳನ್ನು ದುರ್ಬಲಗೊಳಿಸುವ ಕ್ರಮಗಳಿಂದ ದೂರವಿರಲು ಚೀನಾವನ್ನು ಒತ್ತಾಯಿಸಿತು. ಅರುಣಾಚಲ ಪ್ರದೇಶದ ಹಲವಾರು ಸ್ಥಳಗಳಿಗೆ ಚೀನಾದ ಹೆಸರುಗಳನ್ನು ಚೀನಾ ಘೋಷಿಸಿದ್ದಕ್ಕೆ ಪ್ರತಿಕ್ರಿಯೆಯಾಗಿ ಭಾರತದ ಪ್ರತಿಕ್ರಿಯೆ ಬಂದಿದೆ. ಈ ಹಿಂದೆ 2025ರ ಮೇ ತಿಂಗಳಲ್ಲಿ, 27 ಸ್ಥಳಗಳ ಮರುನಾಮಕರಣದ ಚೀನಾದ ಅಸಂಬದ್ಧ ಪ್ರಯತ್ನವನ್ನು ಭಾರತವು ಇದೇ ರೀತಿ ತಿರಸ್ಕರಿಸಿತ್ತು. ನಮ್ಮ ತಾತ್ವಿಕ ನಿಲುವಿಗೆ ಅನುಗುಣವಾಗಿ, ನಾವು ಅಂತಹ ಪ್ರಯತ್ನಗಳನ್ನು ಸ್ಪಷ್ಟವಾಗಿ ತಿರಸ್ಕರಿಸುತ್ತೇವೆ ಎಂದಿತ್ತು.

ಅಮರನಾಥ ಯಾತ್ರೆ ಜುಲೈ 3ರಿಂದ ಆರಂಭ

• ಶ್ರೀನಗರ: ವಾರ್ಷಿಕ ಅಮರನಾಥ ಯಾತ್ರೆ ಜುಲೈ 3ರಿಂದ ಆರಂಭಗೊಳ್ಳಲಿದೆ. ಮುಂಗಡ ನೋಂದಣಿ ಏ.15ರಂದು ದೇಶದಾದ್ಯಂತ 554 ಗೊತ್ತುಪಡಿಸಿದ ಬ್ಯಾಂಕ್ ಶಾಖೆಗಳಲ್ಲಿ ಪ್ರಾರಂಭವಾಗಲಿದೆ. ಯಾತ್ರಾರ್ಥಿಗಳ ಪರಿಶೀಲನೆ ಮತ್ತು ಪರವಾನಗಿ ವಿತರಣೆಯನ್ನು ಸುಗಮಗೊಳಿಸಲು ಆಧಾರ ಆಧಾರಿತ ನೈಜ-ಸಮಯದ ನೋಂದಣಿ ವ್ಯವಸ್ಥೆ ಪರಿಚಯಿಸಲಾಗಿದೆ.



ಅಮರನಾಥ ದೇವಾಲಯ ಮಂಡಳಿಯ ಮೇಲ್ವಿಚಾರಣೆಯ ಈ ಪ್ರಕ್ರಿಯೆಯನ್ನು ಪಹಲ್ಗಾಮ್ ಮತ್ತು ಬಾಲ್ತಾಲ್ ಮಾರ್ಗಗಳೆರಡಕ್ಕೂ ದೈನಂದಿನ ಕೋಟಾಗಳಿಗೆ ಒಳಪಟ್ಟು, ಮೊದಲು ಬಂದವರಿಗೆ ಮೊದಲ ಆದ್ಯತೆ ಆಧಾರದ ಮೇಲೆ ನಡೆಸಲಾಗುತ್ತದೆ. ನೋಂದಣಿ ನಡೆಸಲು ಆಧಾರ್ ಚಾಲಿತ ಬಯೋಮೆಟ್ರಿಕ್ ದೃಢೀಕರಣ ಕಡ್ಡಾಯವಾಗಿ ಮಾಡಬೇಕು. ಅದೇರೀತಿ ಆರೋಗ್ಯ ತಪಸಣಾ ಪ್ರಮಾಣಪತ್ರ, ಹಾಗೂ ನೋಂದಣಿಗೆ 150 ರೂ.ಗಳನ್ನು ನೀಡಬೇಕಾಗುತ್ತದೆ. ಇನ್ನುಳಿದಂತೆ 13-70 ವರ್ಷದೊಳಗಿನವರು ಮಾತ್ರ ಯಾತ್ರೆಗೆ ಅರ್ಹರಾಗಿರುತ್ತಾರೆ. ಈ ಪೈಕಿ 6 ವಾರಗಳಿಗಿಂತ ಹೆಚ್ಚಿನ ಗರ್ಭಿಣಿಯರು ಯಾತ್ರೆ ನಡೆಸಲು ಅನರ್ಹರಾಗಿರುತ್ತಾರೆ.

ತುಕ್ಡೆ-ತುಕ್ಡೆ ಗ್ಯಾಂಗ್‌ಗೆ ಟಿಎಂಸಿಯಿಂದ ಸಂಸತ್ತಿನವರೆಗೆ ಸಹಕಾರ: ಮೋದಿ

ಕಾರಿಡಾರ್‌ಗೆ ಬೆದರಿಕೆ: ಟಿಎಂಸಿ ಬೆಂಬಲ



• ಸಿಲಿಗುರಿ: ಈಶಾನ್ಯ ಭಾರತವನ್ನು ದೇಶದ ಉಳಿದ ಭಾಗಗಳಿಂದ ಪ್ರತ್ಯೇಕಿಸಲು ಆಯಕಟ್ಟಿನ ಸಿಲಿಗುರಿ ಕಾರಿಡಾರ್ ಅನ್ನು ಕಡಿತಗೊಳಿಸುವುದಾಗಿ ಬೆದರಿಕೆ ಹಾಕಿದ ಗುಂಪುಗಳಿಗೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಬೆಂಬಲ ನೀಡುತ್ತಿದೆ, ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಆರೋಪಿಸಿದ್ದಾರೆ.

ಕವಾಖಾಲಿ ಮೈದಾನದಲ್ಲಿ ಚುನಾವಣಾ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ತುಕ್ಡೆ-ತುಕ್ಡೆ ಗ್ಯಾಂಗ್‌ಗೆ ಟಿಎಂಸಿ ಬೀದಿಯಿಂದ ಸಂಸತ್ತಿನವರೆಗೆ ಬೆಂಬಲ ನೀಡುತ್ತಿದೆ. ಈ ಬೆಂಬಲಕ್ಕೆ ತುಷ್ಟೀಕರಣ ರಾಜಕಾರಣವೇ ಕಾರಣ ಎಂದು ಅವರು ಪ್ರತಿಪಾದಿಸಿದರು. ಈ ಭಾಗದಲ್ಲಿ ನಡೆಯುತ್ತಿರುವ ಅಕ್ರಮ ನುಸುಳುವಿಕೆ ಜನಸಂಖ್ಯಾ ಬದಲಾವಣೆಗೆ ಕಾರಣವಾಗುತ್ತಿದೆ ಎಂದು ದೂರಿದ ಪ್ರಧಾನಿ, ಕೇವಲ 20-22 ಕಿಮೀ ಅಗಲವಿರುವ ಸಿಲಿಗುರಿ ಕಾರಿಡಾರ್ ದೇಶದ ರಕ್ಷಣೆ ಮತ್ತು ಸಮೃದ್ಧಿಯ ದೃಷ್ಟಿಯಿಂದ ಅತ್ಯಂತ ನಿರ್ಣಾಯಕ ಭೂಸಂಪರ್ಕ ಎಂದು ಮೋದಿ ಬಣ್ಣಿಸಿದರು.

ಪ್ರಾದೇಶಿಕ ಅಭಿವೃದ್ಧಿ: ವ್ಯಾಪಾರ ಮತ್ತು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಸಿಕ್ಕಿಂ ಮತ್ತು ಸಿಲಿಗುರಿಯನ್ನು ಸಂಪರ್ಕಿಸುವ ಸೇವೋಕ್-ರಂಗ್ಪೋ ರೈಲು ಮಾರ್ಗವನ್ನು ಕೇಂದ್ರ ಸರ್ಕಾರ ನಿರ್ಮಿಸುತ್ತಿದೆ ಎಂದು ಪ್ರಧಾನಿ ತಿಳಿಸಿದರು. ಇದೇ ವೇಳೆ ರಾಜ್ಯ ಸರ್ಕಾರದ ವೈಫಲ್ಯಗಳನ್ನು ಉಲ್ಲೇಖಿಸಿದ ಅವರು, ಬುಡಕಟ್ಟು ಪ್ರದೇಶಗಳಿಗೆ ಪೈಪ್ ಮೂಲಕ ಕುಡಿಯುವ ನೀರು ಪೂರೈಸುವ ಕೇಂದ್ರದ ಯೋಜನೆಗಳನ್ನು ಟಿಎಂಸಿ ತಡೆದಿದೆ, ಇದರಿಂದಾಗಿ ಕೇವಲ ಶೇ. 25 ಕ್ಕಿಂತ ಕಡಿಮೆ ಕೆಲಸ ಪೂರ್ಣಗೊಂಡಿದೆ ಎಂದು ಆರೋಪಿಸಿದರು. ಉತ್ತರ ಬಂಗಾಳದ ಅಭಿವೃದ್ಧಿಗೆ ರಾಜ್ಯ ಬಜೆಟ್ ನಲ್ಲಿ ಸಾಕಷ್ಟು ಹಣ ಮೀಸಲಿಟ್ಟಿಲ್ಲ ಎಂದು ಅವರು ದೂರಿದರು.

ಚುನಾವಣಾ ವೇಳಾಪಟ್ಟಿ: ಏಪ್ರಿಲ್ 23 ರಂದು ಮೊದಲ ಹಂತದ ಮತದಾನ ನಡೆಯಲಿರುವ ದಾರ್ಜಿಲಿಂಗ್, ಜಲ್ಪೈಗುರಿ ಮತ್ತು ಕಾಲಿಂಪಾಂಗ್ ಜಿಲ್ಲೆಗಳ ಬಿಜೆಪಿ ಅಭ್ಯರ್ಥಿಗಳ ಪರ ಮೋದಿ ಪ್ರಚಾರ ನಡೆಸಿದರು. ಎರಡನೇ ಹಂತದ ಮತದಾನ ಏಪ್ರಿಲ್ 29 ರಂದು ನಿಗದಿಯಾಗಿದ್ದು, ಮೇ 4 ರಂದು ಮತ ಎಣಿಕೆ ನಡೆಯಲಿದೆ.

ಭಾರತ ಕಾನೂನುಗಳ ಕೊರತೆ ಎದುರಿಸುತ್ತಿಲ್ಲ: ಸಿಜೆಐ

ಸೀಮಿತ ಪ್ರವೇಶ ನ್ಯಾಯಕ್ಕೆ ಸವಾಲು

• ಶಿಮ್ಲಾ: ದೇಶದ ಕಾನೂನು ವ್ಯವಸ್ಥೆಯು ಎದುರಿಸುತ್ತಿರುವ ಅತಿದೊಡ್ಡ ಸವಾಲು ಕಾನೂನುಗಳ ಕೊರತೆಯಲ್ಲ, ಬದಲಿಗೆ ಸಾಮಾನ್ಯ ನಾಗರಿಕರಿಗೆ ಇರುವ ಸೀಮಿತ ಪ್ರವೇಶವಾಗಿದೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಭಾನುವಾರ ಹೇಳಿದ್ದಾರೆ.

ಕಾನೂನು ಹಕ್ಕುಗಳು ಮತ್ತು ಅವುಗಳ ಪ್ರಾಯೋಗಿಕ ಲಭ್ಯತೆಯ ನಡುವಿನ ಅಂತರವನ್ನು ಕಡಿಮೆ ಮಾಡುವ ತುರ್ತು ಅಗತ್ಯದ ಬಗ್ಗೆ ಹೇಳಿದ ಸಿಜೆಐ ಸೂರ್ಯ ಕಾಂತ್, ಭಾರತವು ಹಕ್ಕುಗಳು ಮತ್ತು ನೀತಿಗಳ ಬಲವಾದ ಚೌಕಟ್ಟನ್ನು ಹೊಂದಿದ್ದರೂ, ದೂರ, ವಿಳಂಬ ಮತ್ತು ಅನುಷ್ಠಾನದ ಅಂತರದಿಂದಾಗಿ ಈ ಪ್ರಯೋಜನಗಳು ಅಗತ್ಯವಿರುವವರನ್ನು ತಲುಪಲು ವಿಫಲವಾಗುತ್ತವೆ ಎಂದು ಹೇಳಿದರು.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ನಲ್ಸಾ), ಉತ್ತರಾಖಂಡ್ ಹೈಕೋರ್ಟ್ ಮತ್ತು ಉತ್ತರಾಖಂಡ್ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಜಂಟಿಯಾಗಿ ಆಯೋಜಿಸಿದ್ದ 'ಜಸ್ಟಿಸ್ ಬಿಯಾಂಡ್ ಬ್ಯಾರಿಯರ್ಸ್: ರೈಟ್ಸ್, ರಿಹ್ಯಾಬಿಲಿಟೇಶನ್ ಅಂಡ್ ರಿಫಾರ್ಮ್ ಫಾರ್ ದಿ ಮೋಸ್ಟ್ ವಲ್‌ನೆರಬಲ್' ಎಂಬ ಶೀರ್ಷಿಕೆಯ ಎರಡು ದಿನಗಳ ಉತ್ತರ ವಲಯ ಪ್ರಾದೇಶಿಕ ಸಮ್ಮೇಳನವನ್ನು ಉದ್ದೇಶಿಸಿ ಸಿಜೆಐ ಭಾಷಣ ಮಾಡಿದರು. ಕೇವಲ ನ್ಯಾಯದ ಅಸ್ತಿತ್ವವು ಸಾಕಾಗುವುದಿಲ್ಲ, ಬದಲಿಗೆ, ಇದು ಪ್ರತಿ ಕೊನೆಯ ನಾಗರಿಕನ ಮನೆ ಬಾಗಿಲನ್ನು ಸಮಯೋಚಿತವಾಗಿ ತಲುಪಬೇಕು. ಗಣರಾಜ್ಯದ ಬಲವನ್ನು ಅದರ ಘೋಷಿತ ಹಕ್ಕುಗಳಿಂದ ಅಳೆಯಬಾರದು, ಆದರೆ ನಿಜವಾಗಿ ಸಾಧಿಸಲಾದ ಹಕ್ಕುಗಳಿಂದ ಅಳೆಯಬೇಕು ಎಂದರು.

ಮೂಲಸಂಪರ್ಕಗಳು ನ್ಯಾಯ ಪ್ರವೇಶಕ್ಕೆ ಅಡ್ಡಿ: ಉತ್ತರಾಖಂಡದಂತಹ ಗುಡ್ಡಗಾಡು ರಾಜ್ಯಗಳು ಎದುರಿಸುತ್ತಿರುವ ವಿಶಿಷ್ಟ ಸವಾಲುಗಳನ್ನು ಎತ್ತಿ ತೋರಿಸಿದ ಅವರು, ಒರಟಾದ ಭೌಗೋಳಿಕ ಭೂಪ್ರದೇಶ ಮತ್ತು ಸೀಮಿತ ಸಂಪರ್ಕ ಮೂಲಸೌಕರ್ಯಗಳು ನ್ಯಾಯದ ಪ್ರವೇಶಕ್ಕೆ ಅಡ್ಡಿಯಾಗುತ್ತವೆ ಎಂದು ಹೇಳಿದರು. ಅಂತಹ ಪ್ರದೇಶಗಳಲ್ಲಿ, ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ನ್ಯಾಯಾಂಗ ವ್ಯವಸ್ಥೆಯನ್ನು ಹೆಚ್ಚು ಸುಲಭವಾಗಿ ಮತ್ತು ಸ್ಪಂದಿಸುವಂತೆ ಮಾಡುವುದು ಅನಿವಾರ್ಯ ಎಂದರು.

ಕಿರುಸುದ್ದಿ



ಕೊನೆಗೂ ಗೆದ್ದ ಸಿಎಸ್‌ಕೆ

ಚೆನ್ನೈ: ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಕೊನೆಗೂ ಖಾತೆ ತೆರೆಯಿತು.

ಸಂಜು ಸ್ಯಾಮ್ಸನ್ ಅವರ ಸ್ಫೋಟಕ ಶತಕ ಮತ್ತು ಜಾಮ್ಮಿ ಓವರ್‌ಟನ್ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್, ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ 23 ರನ್‌ಗಳ ಜಯಭೇರಿ ಬಾರಿಸಿತು. ಇದರೊಂದಿಗೆ ಹ್ಯಾಟ್ರಿಕ್ ಸೋಲಿನ ನಂತರ ಮೊದಲ ಪಂದ್ಯ ಗೆದ್ದ ಚೆನ್ನೈ ತವರಲ್ಲಿ ಸತತ ಆರು ಸೋಲುಗಳ ಸರಪಳಿ ಮುರಿಯಿತು. ಮೊದಲು ಬ್ಯಾಟಿಂಗ್ ಮಾಡುವಾಗ ಪವರ್ ಪ್ಲೇನಲ್ಲಿ 45 ರನ್ ಮಾಡಿದ್ದ ಸಂಜು ಸ್ಯಾಮ್ಸನ್ ಕೊನೆಯ ಓವರ್‌ವರೆಗೂ ಬ್ಯಾಟಿಂಗ್ ಮಾಡಿ 115 ರನ್ ಬಾರಿಸಿದರು. ಇದಕ್ಕೂ ಮುನ್ನ ಆಯುಷ್ ಮಾಥ್ರೆ ಅರ್ಧಶತಕ ಬಾರಿಸಿ ನಿವೃತ್ತರಾಗಿದ್ದರು. ಇವರಿಬ್ಬರ ಬ್ಯಾಟಿಂಗ್‌ನೊಂದಿಗೆ ಚೆನ್ನೈ ಸೂಪರ್ ಕಿಂಗ್ಸ್ 211 ರನ್‌ಗಳ ದೊಡ್ಡ ಗುರಿ ನೀಡಿತ್ತು. ದಿಲ್ಲಿ ತಂಡಕ್ಕೆ ಆಲ್‌ರೌಂಡರ್ ಓವರ್‌ಟನ್ ಕಡಿವಾಣ ಹಾಕಿದರು. ಅನ್ಶುಲ್ ಕಂಬೋಜ್ ಕೂಡ ಗಮನಾರ್ಹ ಕೊಡುಗೆ ನೀಡಿದರು. ಪಾಳಯ ಪರ ಸ್ಫೋಟಕ ಬ್ಯಾಟರ್ ಟ್ರೈಸನ್ ಸ್ಟಬ್ಸ್ ಏಕಾಂಗಿ ಹೋರಾಟ ನಡೆಸಿದರು. ನಿಸ್ಸಂಕಾ ಅಲ್ಪ ಪ್ರಯತ್ನ ಪಟ್ಟಿದ್ದರು. ಪರಿಣಾಮ ದಿಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 189 ರನ್‌ಗಳಿಗೆ ಆಲೌಟ್ ಆಯಿತು.

ಚೆನ್ನೈ ಪವರ್‌ಪ್ಲೇನಲ್ಲಿ 61 ರನ್‌ಗಳಿಸಿದರೆ, ದಿಲ್ಲಿ 66 ರನ್ ಗಳಿಸಿತ್ತು. ಮಧ್ಯಮ ಓವರ್‌ಗಳಲ್ಲಿ ಚೆನ್ನೈ 107, ದಿಲ್ಲಿ 90 ರನ್‌ಗಳಿಸಿತು. ಈ ಓವರ್‌ಗಳಲ್ಲಿ ದಿಲ್ಲಿ 5 ವಿಕೆಟ್ ಕಳೆದುಕೊಂಡಿತು. ಇದೇ ಹೊಡೆತ ನೀಡಿತು. ಅಂತಿಮ ಓವರ್ ಗಳಲ್ಲಿ ಚೆನ್ನೈ 44 ರನ್, ದಿಲ್ಲಿ 33 ರನ್‌ಗಳಿಸಿದವು. ಅಲ್ಲೂ ದಿಲ್ಲಿ 3 ವಿಕೆಟ್ ಕಳೆದುಕೊಂಡಿತು.

ಓವರ್‌ಟನ್ ದಾಳಿ: ಆರಂಭಿಕ ಓವರ್‌ಗಳಲ್ಲಿ ಅದೆಲ್ಲಾ ಸ್ಫೋಟಕ ಬ್ಯಾಟಿಂಗ್ ಮಾಡಿ ಗೆಲುವಿನ ಹಂತಕ್ಕೆ ಸಾಗುತ್ತಿದ್ದ ದಿಲ್ಲಿ ಕ್ಯಾಪಿಟಲ್ಸ್, ಪವರ್‌ಪ್ಲೇನ ಕೊನೆ ಓವರ್‌ಗಳಲ್ಲಿ ಸರಸರನೇ ಎರಡು ವಿಕೆಟ್ ಕಳೆದುಕೊಂಡಿತು. ಅಲ್ಲಿಂದ ಪಂದ್ಯವನ್ನು ಜಗ್ಗಿದ ಚೆನ್ನೈ ಮಧ್ಯಮ ಓವರ್‌ಗಳಲ್ಲಿ ಕರಾರುವಾಕ್ ದಾಳಿ ನಡೆಸಿತು. ಅಲ್ಲೇ ಓವರ್‌ಟನ್ 3 ವಿಕೆಟ್ ಪಡೆದರು. ಡೆತ್ ಓವರ್‌ಗಳಲ್ಲಿ ದಿಲ್ಲಿಗೆ ದೊಡ್ಡ ಗುರಿಯಿತ್ತು. ಆದಾಗ್ಯೂ ಸ್ಟಬ್ಸ್ (60) ರನ್ ಆಸರೆಯಾದರು. 18ನೇ ಓವರ್‌ನಲ್ಲಿ ಓವರ್‌ಟನ್ ಸ್ಟಬ್ಸ್ ವಿಕೆಟ್ ಕಿತ್ತು ಗೆಲುವು ಖಚಿತಪಡಿಸಿದರು. ಕಂಬೋಜ್ ಕೂಡ ವಿಕೆಟ್ ಪಡೆದು ಪಂದ್ಯವನ್ನು ಸಮಾಪ್ತಗೊಳಿಸಿದರು.

ರಾಜಸ್ಥಾನಕ್ಕಿಂದು ಹೈದರಾಬಾದ್ ಸವಾಲು

ಹೈದರಾಬಾದ್: ಪಂದ್ಯಾವಳಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿರುವ ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಗೆಲುವಿನ ಹಳಿಯಲ್ಲಿರುವ ರಾಜಸ್ಥಾನ ತಂಡಗಳು ಸೋಮವಾರದ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ವೈಭವ್ ಸೂರ್ಯವಂಶಿ ಹಾಗೂ ಜೈಸ್ವಾಲ್ ಅವರ ಬ್ಯಾಟಿಂಗ್‌ನೊಂದಿಗೆ ಪಂದ್ಯಾವಳಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿರುವ ರಾಜಸ್ಥಾನ ಇದುವರೆಗೂ ಯಾವುದೇ ಪಂದ್ಯದಲ್ಲಿ ಸೋತಿಲ್ಲ. ಇತ್ತ ಕಿಶನ್ ನಾಯಕತ್ವದ ಹೈದರಾಬಾದ್ ಕೇವಲ ಒಂದು ಪಂದ್ಯದಲ್ಲಿ ಮಾತ್ರ ಗೆಲುವು ಸಾಧಿಸಿದೆ. ಬಲಿಷ್ಠ ಆರಂಭಿಕರನ್ನು ಹೊಂದಿರುವ ಎರಡೂ ತಂಡಗಳು ರನ್ ಹೊಳೆ ಹರಿಸಲು ಸಿದ್ಧವಾಗಿವೆ. ಹೈದರಾಬಾದ್‌ನಲ್ಲಿ ಪಂದ್ಯ ನಡೆಯಲಿದೆ. ಪಾಯಿಂಟ್ಸ್ ಟೇಬಲ್ ವಿಚಾರದಲ್ಲಿ ರಾಜಸ್ಥಾನ ಮೊದಲನೇ ಸ್ಥಾನದಲ್ಲಿದ್ದರೆ ಹೈದರಾಬಾದ್ ಏಳನೇ ಸ್ಥಾನದಲ್ಲಿ ಕಾಣಿಸಿಕೊಂಡಿದೆ. ಉಭಯ ತಂಡದಲ್ಲೂ ಸಮಾನ ಬ್ಯಾಟಿಂಗ್ ಮತ್ತು ಬೌಲಿಂಗ್ ಪಡೆಗಳಿದ್ದು ಕುತೂಹಲ ಮೂಡಿಸಿದೆ.

ನಿತಿಶ್ ರಾಣಾಗೆ ದಂಡ

ಹೊಸದಿಲ್ಲಿ: ದಿಲ್ಲಿ ಕ್ಯಾಪಿಟಲ್ಸ್ ತಂಡದ ಬ್ಯಾಟರ್ ನಿತಿಶ್ ರಾಣಾಗೆ ನಿರ್ಣಾಯಕರೊಂದಿಗೆ ವಿವಾದಕ್ಕಿಳಿದ ಕಾರಣ ಪಂದ್ಯ ಶುಲ್ಕದ ಶೇ.25 ರಷ್ಟು ರೂ. ದಂಡ ವಿಧಿಸಲಾಗಿದೆ. ಇಂಡಿಯನ್ ಪ್ರೀಮಿಯರ್ ಲೀಗ್‌ಪಂದ್ಯಾವಳಿಯ ಪಂದ್ಯದಲ್ಲಿ ಚೆನ್ನೈ ವಿರುದ್ಧದ ಪಂದ್ಯದ ವೇಳೆ ನಾಲ್ಕನೇ ಅಂಪೈರ್‌ನೊಂದಿಗೆ ವಾದಕ್ಕಿಳಿದ ಅವರು, ಹತಾಶೆ ಹೊರಹಾಕಿದ್ದರು. ಇತ್ತ ನಿಧಾನಗತಿ ಓವರ್ ಮಾಡಿಸಿದ್ದಕ್ಕಾಗಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ರುತುರಾಜ್ ಗಾಯಕ್ವಾಡ್ ಅವರಿಗೂ ದಂಡ ವಿಧಿಸಲಾಗಿದೆ ಎಂದು ಬಿಸಿಸಿಐ ತಿಳಿಸಿದೆ. ಪಂದ್ಯದ 19ನೇ ಓವರ್‌ನಲ್ಲಿ ಸ್ಟಬ್ಸ್ ಗ್ಲೌಸ್ ಬದಲಾಯಿಸುವ ಅವಕಾಶ ಕೇಳಿದರು. ಇತ್ತ ನಿತಿಶ್ ಅವುಗಳನ್ನು ಕೊಡಲು ಮೈದಾನಕ್ಕೆ ಹೋಗಲು ಸಜ್ಜಾದರು. ಮೊದಲೇ ತಿಳಿಸದ ಕಾರಣ ನಾಲ್ಕನೇ ಅಂಪೈರ್ ಅವರನ್ನು ತಡೆದರು. ಇದಕ್ಕೆ ಆಕ್ರೋಶಗೊಂಡ ನಿತಿಶ್ ರಾಣಾ ವಾದಕ್ಕಿಳಿದರು.

ಗಿಲ್ ಪಡೆಗೆ 7 ವಿಕೆಟ್ ಜಯ | ಬಟ್ಲರ್–ಗಿಲ್ ಮಿಂಚಿನಾಟ

ಕೃಷ್ಣ ದಾಳಿಗೆ ಕುಗ್ಗಿದ ಲಖನೌ

ಲಖನೌ: ಲಖನೌ ಗೆಲುವಿನೋಟಕ್ಕೆ ಬ್ರೇಕ್ ಹಾಕಿರುವ ಗುಜರಾತ್ ಟೈಟಾನ್ಸ್ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಎರಡನೇ ಗೆಲುವು ದಾಖಲಿಸಿದೆ. ಪ್ರಸಿದ್ಧ ಕೃಷ್ಣ ಅವರ ಕರಾರುವಾಕ್ ಬೌಲಿಂಗ್ ದಾಳಿಯ ಮುಂದೆ ಕುಗ್ಗಿದ ಸೂಪರ್ ಜೇಂಟ್ಸ್ ಬಳಿಕ ಗಿಲ್–ಬಟ್ಲರ್ ಆಟದ ಮುಂದೆ ಶರಣಾಯಿತು.


ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬ್ಯಾಟಿಂಗ್ ಮಾಡುವ ವೇಳೆ ತೀವ್ರ ಕುಸಿತ ಕಂಡ ಪಂತ್ ಪಡೆ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 164 ರನ್ ಗಳಿಸಿತು. ಏಡನ್ ಮಾರ್ಕ್ರಂ ಗಳಿಸಿದ್ದ 30 ರನ್ ತಂಡದ ಪರ ಬ್ಯಾಟರ್ ಗಳಿಸಿದ್ದ ಅತಿ ಹೆಚ್ಚು ಸ್ಕೋರ್ ಆಗಿತ್ತು. ಶಾರ್ಟ್ ಬಾಲ್ ಮೂಲಕ ಬೆವರಳಿಸಿದ ಕೃಷ್ಣ 28 ರನ್ ಮಾತ್ರ ನೀಡಿ 4 ವಿಕೆಟ್ ಕಬಳಿಸಿದರು. ಗುರಿ ಬೆನ್ನತ್ತಿದ ಗುಜರಾತ್ ಶುಭಮನ್ ಗಿಲ್ ಅವರ ಆಸರೆ ಪಡೆದ ನಂತರ ಜಾಸ್ ಬಟ್ಲರ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ 18.4 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 165 ರನ್ ಗಳಿಸಿ 7 ವಿಕೆಟ್‌ಗಳಿಂದ ಜಯಭೇರಿ ಬಾರಿಸಿತು.

ಬಟ್ಲರ್ ಮತ್ತು ಶುಭಮನ್ ಗಿಲ್ ಪಂದ್ಯದ ಬೆಸ್ಟ್ ಬ್ಯಾಟರ್ಸ್ ಅನ್ನಿಸಿಕೊಂಡರೆ, ಕೃಷ್ಣ ಪಂದ್ಯ ಗೆಲ್ಲಿಸಿದ ಹೀರೋ ಎನಿಸಿಕೊಂಡರು. ಲಖನೌ ಪರ ಯಾವುದೇ ಬ್ಯಾಟರ್ ಅರ್ಧ ಶತಕ ಬಾರಿಸಲಾಗಲಿಲ್ಲ. ಈ ಬೌಲಿಂಗ್ ದಾಳಿಯೊಂದಿಗೆ ಪ್ರಸಿದ್ಧ ಕೃಷ್ಣ ಪರ್ಪಲ್ ಕ್ಯಾಪ್ ಪಡೆದುಕೊಂಡರು.

ಲಖನೌ V/S ಗುಜರಾತ್ ಏರಿಳಿತ: ಬ್ಯಾಟಿಂಗ್‌ಗಿಳಿದ ಲಖನೌ ಆರಂಭಿಕ ಹಿನ್ನಡೆ ಅನುಭವಿಸಿತು. ಆದಾಗ್ಯೂ ಪಂತ್ ಮತ್ತು ಮಾರ್ಕ್ರಂ ಕೊಂಚ ಹೊತ್ತು ಆಸರೆಯಾದರು. ಇದರೊಂದಿಗೆ ಪವರ್‌ಪ್ಲೇನಲ್ಲಿ 2 ವಿಕೆಟ್ ನಷ್ಟಕ್ಕೆ 60 ರನ್‌ಗಳಿಸಿತು. ಇತ್ತ ಗುಜರಾತ್ ಕೂಡ ಆರಂಭಿಕ ಆಘಾತ ಎದುರಿಸಿತು. ಗಿಲ್ ಹಾಗೂ ಸುದರ್ಶನ್ ನಿಧಾನವಾಗಿ ಪಿಚ್‌ಗೆ ಹೊಂದಿಕೊಳ್ಳುವತ್ತ ಸಾಗಿದರು. ಸುದರ್ಶನ್ ತಮ್ಮ ವಿಕೆಟ್ ಕೂಡ ಕಳೆದುಕೊಂಡರು. ಗಿಲ್ ಶಮಿ ಸೇರಿದಂತೆ ಪ್ರಮುಖರನ್ನು ದಂಡಿಸಿದರು. ಇದರೊಂದಿಗೆ ಗುಜರಾತ್ 1 ವಿಕೆಟ್ ಮಾತ್ರ ಕಳೆದುಕೊಂಡು 52 ರನ್ ಗಳಿಸಿತು.

ಮಧ್ಯಮ ಓವರ್‌ಗಳಲ್ಲಿ (7–15) ಲಖನೌ ಬ್ಯಾಟಿಗರು ದೊಡ್ಡ ಹೊಡೆತಗಳಿಗೆ ಮುಂದಾಗಿ ವಿಕೆಟ್ ಕೊಡುತ್ತಾ ಬಂದರು. ಇಲ್ಲೇ ಕೃಷ್ಣ ತಮ್ಮ ಅನುಭವದೊಂದಿಗೆ ಮಿಂಚಿದರು. ಮಾರ್ಕ್ರಂ 30, ಪೂರಣ್, 19, ಬದೋನಿ 9 ಹೀಗೆ ಮಧ್ಯಮ ಕ್ರಮಾಂಕ ಉರುಳಿಬಿದ್ದಿತು. ಪರಿಣಾಮ ಈ ಓವರ್‌ಗಳಲ್ಲಿ ಪಂತ್ ಪಡೆ 3 ವಿಕೆಟ್ ನಷ್ಟಕ್ಕೆ 57 ರನ್ ಮಾತ್ರ ಗಳಿಸಿತು. ಅದೆ ಗುಜರಾತ್ ಮುನ್ನಡೆಯ ನಾಗಾಲೋಟದೊಂದಿಗೆ ಮಧ್ಯಮ ಓವರ್‌ಗಳಲ್ಲಿ ಮಿಂಚಿತು. ಏಕಾನಾ ಪಿಚ್‌ಗೆ ತಕ್ಕಂತೆ ಬ್ಯಾಟಿಂಗ್ ಮಾಡುತ್ತಾ ನಿಧಾನವಾಗಿ ಗೆಲುವಿನತ್ತ ಸಾಗಿತು. ಗಿಲ್(56 ರನ್, 40 ಬಾ, 6 ಬೌ, 1 ಸಿ)–ಬಟ್ಲರ್(60 ರನ್, 37 ಬಾ, 11 ಬೌ) ಇಬ್ಬರೇ ಪಂದ್ಯದ ಮೇಲೆ ಹಿಡಿತ ಸಾಧಿಸಿದರು. ಇಬ್ಬರೂ ಅರ್ಧ ಶತಕ ಬಾರಿಸಿದರು. ಪ್ರಿನ್ಸ್ ಯಾದವ್ ಮತ್ತು ಶಮಿ ಈ ಇಬ್ಬರ ವಿಕೆಟ್ ಪಡೆದರೂ ಅಷ್ಟೊತ್ತಿಗಾಗಲೇ ಪಂದ್ಯ ಬಾಚಿಕೊಂಡಿತ್ತು ಗುಜರಾತ್. ಮಧ್ಯಮ ಓವರ್‌ಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡಿಯೇ ಪಂದ್ಯ ಗೆದ್ದಿತು.

ಅಂತಿಮ ಓವರ್‌ಗಳಲ್ಲಿ (16–20) ಲಖನೌ ಮತ್ತೊಮ್ಮೆ ಆತುರ ಪಟ್ಟಿತು. ಅಲ್ಲೂ ದೊಡ್ಡ ಹಿಟ್ಟರ್‌ಗಳು ವಿಕೆಟ್ ಕಳೆದುಕೊಂಡರು. ಶಮಿ ಮತ್ತು ಜಾರ್ಜ್ ಲಿಂಡೆ ಒಂದೆರಡು ಬೌಂಡರಿಗಳನ್ನು ಬಾರಿಸಿದ ನಂತರ ಡೆತ್ ಓವರ್‌ಗಳಲ್ಲಿ ಲಖನೌ 47 ರನ್ ಜೋಡಿಸಿತು. ಒಟ್ಟು ಸ್ಕೋರ್ 164 ಆಯಿತು. ಇತ್ತ ಗುಜರಾತ್ ಹೆಚ್ಚಿನ ರನ್‌ಗಳನ್ನು ಮಧ್ಯಮ ಓವರ್‌ಗಳಲ್ಲೇ ಬಾರಿಸಿದ್ದರಿಂದ ಡೆತ್‌ನಲ್ಲಿ ನಿಂತು ಬಂದರೆ ಸಾಕಿತ್ತು. ಆಗ ವಾಷಿಂಗ್ಟನ್ ಸುಂದರ್ (21 ರನ್, 13 ಬಾ, 2 ಬೌ, 1 ಸಿ) ಪಂದ್ಯ ಗೆಲ್ಲಿಸಿದರು. 16ನೇ ಓವರ್‌ನಿಂದ 18.4 ಅನ್ನುವಷ್ಟರಲ್ಲಿ ಗುಜರಾತ್ 29 ರನ್ ಗಳಿಸಿ ಪಂದ್ಯ ಗೆದ್ದಿತು.



ಸಂಕ್ಷಿಪ್ತ ಸ್ಕೋರ್

ಲಖನೌ: 20 ಓವರ್‌ಗಳಲ್ಲಿ 164/8: ಮಾರ್ಕ್ರಂ 30, ಪೂರಣ್ 19; ಕೃಷ್ಣ 28/4

ಗುಜರಾತ್: 18.4 ಓವರ್‌ಗಳಲ್ಲಿ 165: ಬಟ್ಲರ್ 60, ಗಿಲ್ 56; ಪ್ರಿನ್ಸ್ 31/1

ಆರ್‌ಸಿಬಿಯಿಂದ ಮುಂಬೈಗೆ 241 ರನ್ ಗುರಿ

ಸಾಲ್ಟ್ ಆಟಕ್ಕೆ ಮುಂಬೈ ತತ್ತರ

ಮುಂಬೈ: ತಮ್ಮ ಅಸಲು ಲಯಕ್ಕೆ ಮರಳಿದ ಫಿಲ್ ಸಾಲ್ಟ್(78) ಹಾಗೂ ರಜತ್ ಪಾಟಿದಾರ್ (53) ಕೊಹ್ಲಿಯ(50) ಸಾಥ್ ಪಡೆದು ಮುಂಬೈ ತಂಡವನ್ನು ದಂಡಿಸಿದ ನಂತರ ಬೆಂಗಳೂರು ದೊಡ್ಡ ಗುರಿ ಕಲೆಹಾಕಿತು. ಅನುಭವಿ ಬೌಲರ್‌ಗಳನ್ನು ಹೊಂದಿರುವ ಮುಂಬೈ ಇಂಡಿಯನ್ಸ್ ಪಂದ್ಯಾವಳಿಯಲ್ಲಿ ಮತ್ತೊಮ್ಮೆ ದಂಡಿಸಿಕೊಂಡಿತು. ಪಾಂಡ್ಯ, ಬೂಮ್ರಾ, ಬೋಲ್ಟ್ ಹೀಗೆ ಬಂದ ಬೌಲರ್‌ಗಳನ್ನೆಲ್ಲಾ ದಂಡಿಸಿದ ಬೆಂಗಳೂರಿನ ಬ್ಯಾಟಿಗರು 20 ಓವರ್‌ಗಳಲ್ಲಿ 240 ರನ್ ಗಳಿಸಿತು. ಮುಂಬೈ ಪರ ಬೂಮ್ರಾ ಮತ್ತು ಪಾಂಡ್ಯ ಮಾತ್ರ 12ಕ್ಕೂ ಕಡಿಮೆ ಎಕನಾಮಿ ಹೊಂದ ಬೌಲರ್‌ಗಳಾಗಿದ್ದರು. ಜಿತೇಶ್ ಅವರೇ ಕಡಿಮೆ ಸ್ಟ್ರೈಕ್‌ರೇಟ್(111) ಹೊಂದಿದ ಆಟಗಾರ ಅನ್ನಿಸಿಕೊಂಡರು.

ಆರ್‌ಸಿಬಿ ಅಬ್ಬರ: ಮುಂಬೈ ಇಂಡಿಯನ್ಸ್ ತಂಡದ ಪ್ರತಿಯೊಬ್ಬ ಬೌಲರ್ ಕೂಡ ಸಾಲ್ಟ್, ಪಾಟಿದಾರ್ ಮತ್ತು ಕೊಹ್ಲಿ ಆಟಕ್ಕೆ ತತ್ತರಿಸಿದರು. ಕಳೆದ ಪಂದ್ಯಗಳಲ್ಲಿ ಅಲ್ಪ ಹಿನ್ನಡೆ ಅನುಭವಿಸಿದ್ದ ಫಿಲ್ ಸಾಲ್ಟ್ ತಮ್ಮ ಸ್ವಾಭಾವಿಕ ಲಯಕ್ಕೆ ಮರಳಿದರು. ಪವರ್‌ಪ್ಲೇನಲ್ಲಿ ಮುಂಬೈ ಪಡೆಯಲ್ಲಿರುವ ದಿಗ್ಗಜ ಬೌಲರ್‌ಗಳಾದ ಬೋಲ್ಟ್, ಪಾಂಡ್ಯ ಅವರನ್ನು ದಂಡಿಸುತ್ತಾ ಬಂದರು. ಸಾಲ್ಟ್ ಯಾವುದೇ ಕ್ಷಣಕ್ಕೂ ಸೆಟ್ ಆಗುವ ಮುಲಾಜಿಗೆ ಬೀಳಲೇ ಇಲ್ಲ. ಬಂದ ಬಾಲ್‌ಗಳನ್ನೆಲ್ಲಾ ಬೌಂಡರಿಗಟ್ಟುವ ಅವರ ನಿರ್ಧಾರ ಸ್ಪಷ್ಟವಾಗಿ ಗೋಚರಿಸಿತು. ಇತ್ತ ಪವರ್‌ಪ್ಲೇನಲ್ಲಿ ಸಿಂಗಲ್‌ಗಳ ಮೂಲಕ ಕೊಹ್ಲಿ ಸಾಲ್ಟ್‌ಗೆ ಸಾಥ್ ನೀಡಿದರು. ಅಲ್ಲಿಗೆ ಆರ್‌ಸಿಬಿ 6 ಓವರ್‌ಗಳಲ್ಲಿ 71 ರನ್ ಬಾರಿಸಿತ್ತು. ಪವರ್‌ಪ್ಲೇ ಮುಗಿದ ನಂತರವೂ ಸಾಲ್ಟ್ ವೇಗಕ್ಕೆ ಬ್ರೇಕ್ ಬೀಳಲೇ ಇಲ್ಲ. ಅರ್ಧ ಶತಕ ಬಾರಿಸಿದ ನಂತರ ಇತ್ತ ಕೊಹ್ಲಿ ಕೂಡ ಬೌಂಡರಿಗಳ ಮೂಲಕ ಸಿಡಿದರು. ಮುಂಬೈ ಬೌಲರ್‌ಗಳ ಪಾಲಿಗೆ ದು:ಸ್ವಪ್ನವೇ ಎದುರಾಯಿತು. 10 ಓವರ್‌ಗಳಲ್ಲಿ 120 ರನ್ ದಾಟಿದ ಆರ್‌ಸಿಬಿ ಮೊದಲ ವಿಕೆಟ್ ಕಳೆದುಕೊಂಡರು. ಸಾಲ್ಟ್ 36 ಬಾಲ್ ಮಾತ್ರದಲ್ಲಿ 78 ರನ್ ಬಾರಿಸಿ ಔಟಾದರು. ಈ ಇನ್ನಿಂಗ್ಸ್‌ನಲ್ಲಿ 6 ಬೌಂಡರಿ ಮತ್ತು 6 ಸಿಕ್ಸರ್‌ಗಳು ಸೇರಿವೆ.

ಪಾಟಿದಾರ್ ಮಿಂಚಿನಾಟ: ಸಾಲ್ಟ್ ವಿಕೆಟ್ ಬಿದ್ದಂತೆ ಮುಂಬೈ ಅಲ್ಪ ಸಂಭ್ರಮಪಟ್ಟಿತು. ಆದರೆ ಸಾಲ್ಟ್‌ಗಿಂತಲೂ ಸ್ಫೋಟಕ ಬ್ಯಾಟಿಂಗ್ ಮಾಡಿದ ನಾಯಕ ರಜತ್ ಪಾಟಿದಾರ್ ಮುಂಬೈ ತಂಡದ ವಿಶ್ವಾಸ ಕೆಡವಿದರು. ಮೊದಲನೇ ಎಸೆತದಿಂದಲೂ ಸ್ಫೋಟಕ ಸಿಕ್ಸರ್‌ಗಳನ್ನು ಬಾರಿಸುತ್ತಾ ಬಂದ ಅವರು ಮಧ್ಯಮ ಓವರ್‌ಗಳಲ್ಲಿ ಸ್ಪಿನ್ನರ್‌ಗಳನ್ನು ದಂಡಿಸಿದರು. ಆರ್‌ಸಿಬಿ ಹಿರಿಹಿರಿ ಹಿಗ್ಗಿತು. ಅಲ್ಲಿಗೆ 38 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದ್ದ ಕೊಹ್ಲಿ ವಿಕೆಟ್ ಒಪ್ಪಿಸಿದರು. ಪಾಟಿದಾರ್ 20 ಬಾಲ್‌ಗಳಲ್ಲಿ 53 ರನ್ ಬಾರಿಸಿ 265 ಸ್ಟ್ರೈಕ್‌ರೇಟ್ ಬ್ಯಾಟಿಂಗ್ ನಿಲ್ಲಿಸಿದರು. ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲಿ ಬರೋಬ್ಬರಿ 123 ರನ್ ಗಳಿಸಿತು. ಡೆತ್ ಓವರ್‌ಗಳಲ್ಲಿ ಡೆವಿಡ್ ಮತ್ತೊಮ್ಮೆ ಸ್ಫೋಟಕ ಬ್ಯಾಟಿಂಗ್ ಮಾಡಿದರು. 16 ಬಾಲ್ ಮಾತ್ರದಲ್ಲಿ 34 ರನ್ ಗಳಿಸಿದ ಅವರು ಸ್ಕೋರ್ ಹಿಗ್ಗಿಸಿದರು. ಈ ಓವರ್‌ಗಳಲ್ಲಿ ಬೆಂಗಳೂರು 46 ರನ್ ಗಳಿಸಿತು.



ಆಶಾ ಭೋಸ್ಲೆ ನಿಧನಕ್ಕೆ ಸಂತಾಪ

ದಿಗ್ಗಜ ಗಾಯಕಿ ಆಶಾ ಭೋಸ್ಲೆ ಅವರ ನಿಧನಕ್ಕೆ ಐಪಿಎಲ್ ಪಂದ್ಯದ ವೇಳೆ ಸಂತಾಪ ಸಲ್ಲಿಸಲಾಯಿತು. ಮುಂಬೈನ ವಾಂಖೆಡೆ ಕ್ರೀಡಾಂಗಣದ ಬೆಂಗಳೂರು ಹಾಗೂ ಮುಂಬೈ ವಿರುದ್ಧದ ಪಂದ್ಯಕ್ಕೂ ಮುನ್ನ ಆಟಗಾರರು, ಮೈದಾನದಲ್ಲಿದ್ದ ಸಾವಿರಾರು ಅಭಿಮಾನಿಗಳು ಮೌನ ಆಚರಣೆ ಮಾಡಿ ಸಂತಾಪ ಸೂಚಿಸಿದರು.

ಆಯುಷ್‌ಗೆ ಐತಿಹಾಸಿಕ ರಜತ

ನಿಂಗ್ಬೋ(ಚೀನಾ): ವಿಶ್ವದ ನಂಬರ್ 1 ಆಟಗಾರ ಕೆ. ವಿಟಿಡ್ಸರ್ನ್, ಏಳನೇ ಶ್ರೇಯಾಂಕದ ಫೆಂಗ್ ಹೀಗೆ ಬಂದ ದಿಗ್ಗಜ ಆಟಗಾರರನ್ನೆಲ್ಲಾ ಸೋಲಿಸುತ್ತಾ ಇತಿಹಾಸ ಸೃಷ್ಟಿಸುತ್ತಿದ್ದ ಭಾರತದ ಪ್ರತಿಭಾನ್ವಿತ ಆಟಗಾರ, ಕನ್ನಡಿಗ ಆಯುಷ್ ಶೆಟ್ಟಿ ಬೆಳ್ಳಿ ಪದಕಕ್ಕೆ ತೃಪ್ತರಾದರು.

ಸೆಮಿಫೈನಲ್‌ನಲ್ಲಿ ವಿಶ್ವ ಬ್ಯಾಡ್ಮಿಂಟನ್ ಅಭಿಮಾನಿಗಳಿಗೆ ನಿಬ್ಬೆರಗಾಗುವಂತೆ ಮಾಡಿದ್ದ ಅವರು, ಭಾನುವಾರ ನಡೆದ ಫೈನಲ್‌ನಲ್ಲಿ 2ನೇ ಶ್ರೇಯಾಂಕಿತ ಚೀನಾದ ಶಿ ಯುಕಿ ಅವರೊಂದಿಗೆ ಸೋತರು. ಪಂದ್ಯಾವಳಿಯುದ್ದಕ್ಕೂ ಸಂಚಲನ ಮೂಡಿಸಿದ್ದ ಆಯುಷ್ ಸೋಲಿಸಲು ಶಿ 42 ನಿಮಿಷ ತೆಗೆದುಕೊಂಡರು. ಮೊದಲಿನಿಂದಲೂ ಹಿಡಿತ ಸಾಧಿಸಿದರೂ ಗೆಲುವು ಅಷ್ಟು ಸರಳವಾಗಿ ಬಿಟ್ಟುಕೊಡಲಿಲ್ಲ.



ಆಯುಷ್ ವಿರುದ್ಧ ಚೀನಾ ಆಟಗಾರ ಶಿ ಗೆ 21–8, 21–10ರಿಂದ ಗೆಲುವು.

ಭಾನುವಾರದ ಪಂದ್ಯದ ಬಹುತೇಕ ಸಮಯದಲ್ಲಿ ಎದುರಾಳಿಯೇ ಪಾರಮ್ಯ ಸಾಧಿಸಿದರು. ಮೊದಲನೇ ಸೆಟ್‌ನಿಂದ ಹಿಡಿದು ಪಂದ್ಯ ಮುಕ್ತಾಯವಾಗುವ ಹಂತದಲ್ಲೂ ಆಯುಷ್ ಮುನ್ನಡೆ ಸಾಧಿಸಲಾಗಲಿಲ್ಲ. ನಿರಂತರ ಪ್ರಯತ್ನ ಹೊರತಾಗ್ಯೂ ಚೀನಾ ಆಟಗಾರ 21–8, 21–10ರಿಂದ ಗೆದ್ದು ಬೀಗಿದರು. ಮೊದಲನೇ ಸೆಟ್‌ನಲ್ಲಿ ಆರಂಭಿಕ ಮುನ್ನಡೆ ಸಾಧಿಸಿದ ಶಿ ಶೆಟ್ಟಿ ಮೇಲೆ ಸರ್ವ್‌ಗಳ ಮೂಲಕ ಒತ್ತಡ ಹಾಕಿದರು. 6 ಅಂಕಗಳ ಮುನ್ನಡೆಯ ನಂತರ ಆಯುಷ್ ಕಂಬ್ಯಾಕ್ ಸೂಚನೆ ಕೊಟ್ಟರೂ ಎದುರಾಳಿ ತಮ್ಮ ಮುನ್ನಡೆ ವಿಸ್ತರಿಸುತ್ತಾ ಸೆಟ್ ಅನ್ನು 21–8ರಿಂದ ಗೆದ್ದುಕೊಂಡರು. ಮುನ್ನಡೆಯೊಂದಿಗೆ ಎರಡನೇ ಸೆಟ್‌ಗೆ ಕಾಲಿಟ್ಟ ಅವರು, ಅಲ್ಲೂ ಆರಂಭಿಕ ಪ್ರಾಬಲ್ಯ ಸಾಧಿಸಿದರು. ಶೆಟ್ಟಿ ಈ ಬಾರಿ ಕಠಿಣ ಪ್ರಯತ್ನ ಪಟ್ಟರು. ಆದರೆ ಎದುರಾಳಿ 10 ಅಂಕಗಳ ಮುನ್ನಡೆ ಸಾಧಿಸಿದರು. ಸ್ಮ್ಯಾಷ್, ಸರ್ವ್ ಹಾಗೂ ಡ್ರಾಪ್‌ಗಳ ಮೂಲಕ ಕ್ರಮೇಣವಾಗಿ ಪಂದ್ಯ ಜಯಸುತ್ತಾ ಬಂದರು ಶಿ. ಆಯುಷ್ 10 ಅಂಕ ಗಳಿಸುವಷ್ಟರಲ್ಲಿ ಎದುರಾಳಿ ಪಂದ್ಯ ಗೆದ್ದು ಚಾಂಪಿಯನ್ ಪಟ್ಟಕ್ಕೇರಿದರು.

ಆಯುಷ್ ದಾಖಲೆ: 25ನೇ ಶ್ರೇಯಾಂಕದ ಆಯುಷ್ ಈ ಗೆಲುವಿನೊಂದಿಗೆ ದಾಖಲೆ ಮಾಡಿದ್ದಾರೆ. ಏಷ್ಯನ್ ಚಾಂಪಿಯನ್‌ಶಿಪ್ ಕೂಟದುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿರುವ ಅವರು, ಕೂಟದಲ್ಲಿ ಸಿಂಗಲ್ಸ್ ಪದಕ ಗೆದ್ದ ಏಳನೇ ಭಾರತೀಯ ಅನ್ನಿಸಿಕೊಂಡರು. ಇದಕ್ಕೂ ಮುನ್ನ ದಿನೇಶ್‌ಖನ್ನಾ, ಸುರೇಶ್ ಗೋಯಲ್, ಪ್ರಕಾಶ್ ಪಡುಕೋಣೆ, ಪುಲ್ಲೇಲಾ ಗೋಪಿಚಂದ, ಅನುಪ್ ಶ್ರೀಧರ ಹಾಗೂ ಪ್ರಣೊಯ್ ಈ ದಾಖಲೆ ಮಾಡಿದ್ದಾರೆ.

ಏಷ್ಯನ್ ಕುಸ್ತಿ: ಭಾರತಕ್ಕೆ ಹಲವು ಪದಕ

ಹೊಸದಿಲ್ಲಿ: ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಅಮನ್ ಸೆಹ್ರಾವತ್ (61 ಕೆಜಿ) ಮತ್ತು ಮುಕುಲ್ ದಹಿಯಾ (86 ಕೆಜಿ) ಬೆಳ್ಳಿ ಪದಕಗಳನ್ನು ಗೆದ್ದರೆ, ಭಾನುವಾರ ಕಿರ್ಗಿಸ್ತಾನ್‌ನ ಬಿಷ್ಕೆಕ್‌ನ ಚಾಂಪಿಯನ್‌ಶಿಪ್‌ನಲ್ಲಿ ದಿನೇಶ್ (125 ಕೆಜಿ) ಕಂಚಿನ ಪದಕವನ್ನು ಗೆದ್ದರು. ತನ್ನ ನಿಯಮಿತ 57 ಕೆಜಿಯಿಂದ 61 ಕೆಜಿಗೆ ಜಿಗಿದ ಅಮನ್ ಅವರನ್ನು ಉತ್ತರ ಕೊರಿಯಾದ ಯುವ ಕಿಮ್ ಕ್ವಾಂಗ್ ಮ್ಯೊಂಗ್ 13–10 ಅಂತರದಿಂದ ಸೋಲಿಸಿದರೆ, ಮುಕುಲ್ ಅವರನ್ನು ಆಯಾ ಫೈನಲ್‌ಗಳಲ್ಲಿ ಇರಾನಿನ ಕಮ್ರಾನ್ ಘಾಸೆಂಪೂರ್ ಸೋಲಿಸಿದರು. ಕಂಚಿನ ಪದಕ ಸ್ಪರ್ಧೆಯಲ್ಲಿ ದಿನೇಶ್ ತವರಿನ ನೆಚ್ಚಿನ ಅರ್ಸ್ಲಾನ್‌ಬೆಕ್ ತುರ್ಡುಬೆಕೊವ್ ಅವರನ್ನು 12–1 ಅಂತರದಿಂದ ಸೋಲಿಸಿದರು. ಇದರೊಂದಿಗೆ ಭಾರತ ಎರಡು ಚಿನ್ನ, ಮೂರು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳೊಂದಿಗೆ, ಭಾರತವು ಫ್ರೀಸ್ಟೈಲ್‌ನಲ್ಲಿ ಎರಡನೇ ಸ್ಥಾನ ಗಳಿಸಿತು.

ಏಷ್ಯಾ ಕಿರಿಯರ ಟೆನಿಸ್: ಭಾರತ ರನ್ನರ್–ಅಪ್

ಬೆಂಗಳೂರು: ಕನ್ನಡಿಗರಾದ ಸೃಷ್ಟಿ ಕಿರಣ್, ಪುನೀತ್ ಮನೋಹರ್ ಮತ್ತು ಪದ್ಮಪ್ರಿಯಾ ರಾಮೇಶ್ ಕುಮಾರ್ ಅವರ ಅಮೋಘ ಪ್ರದರ್ಶನಕ್ಕೆ ಪಂಜಾಬ್‌ನ ತಾನಿಷ್ ನಂದಾ ಅವರ ಸಾಥ್ ಸಿಕ್ಕ ನಂತರ ಶ್ರೀಲಂಕಾದ ಕೊಲಂಬೊದಲ್ಲಿ ನಡೆದ ಐಟಿಎಫ್ ಏಷ್ಯಾ ಅಂಡರ್ –14 ಡೆವಲಪ್‌ಮೆಂಟ್ ಚಾಂಪಿಯನ್‌ಶಿಪ್‌ನಲ್ಲಿ ಭಾರತ ರನ್ನರ್‌ಅಪ್ ಸ್ಥಾನ ಪಡೆಯಿತು.

14 ರಾಷ್ಟ್ರಗಳು ಭಾಗವಹಿಸಿದ್ದ ಟೂರ್ನಿಯಲ್ಲಿ, ಮೊದಲಿಗೆ ಅಗ್ರಸ್ಥಾನ ಪಡೆದಿದ್ದ ಭಾರತ ಗೆಲುವಿನ ನಿರೀಕ್ಷೆಯಲ್ಲಿತ್ತು. ಆದರೆ ಅಂತಿಮವಾಗಿ ತೈವಾನ್ ಭಾರತವನ್ನು ಹಿಂದಿಕ್ಕಿತು. ಎರಡನೇ ಸ್ಥಾನ ಪಡೆಯಿತು.

ಕನ್ನಡಿಗರ ಆರ್ಭಟ: ಪುನೀತ್ ಮನೋಹರ್ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಮೊದಲ ವಾರದ ಚಾಂಪಿಯನ್ ಆಗಿ ಹೊರಹೊಮ್ಮಿದರು. ಹಾಂಗ್ ಕಾಂಗ್‌ನ ಹಿಮ್ ವಾಂಗ್ ವಿರುದ್ಧ 2–6, 7–5, 6–2 ಅಂತರದಲ್ಲಿ ಹಿನ್ನಡೆಯಿಂದ ಮರಳಿ ಗೆದ್ದು ಪ್ರಶಸ್ತಿ ತಮ್ಮದಾಗಿಸಿಕೊಂಡರು. ನಂತರ ಎರಡನೇ ವೀಕ್‌ನ ಡಬಲ್ಸ್‌ನಲ್ಲಿ ರನ್ನರ್‌ಅಪ್ ಸ್ಥಾನ ಪಡೆದರು. ಮಹಿಳಾ ವಿಭಾಗದಲ್ಲಿ ಸೃಷ್ಟಿ ಕಿರಣ್ ಎರಡು ವಾರಗಳಲ್ಲೂ ಸಿಂಗಲ್ಸ್ ಫೈನಲ್ ತಲುಪಿ ನಿರಂತರ ಪ್ರದರ್ಶನ ನೀಡಿದರು. ಅವರು ಮೊದಲ ವಾರದ ಫೈನಲ್‌ನಲ್ಲಿ ತೈವಾನ್‌ನ ಕೆ ಚಿಯೆ ಹ್ಸು ವಿರುದ್ಧ ಸೋತು ರನ್ನರ್ ಅಪ್ ಸ್ಥಾನ ಪಡೆದರು. ಜೊತೆಗೆ ಕೂಟದ ಮೊದಲ ವೀಕ್‌ನ ಡಬಲ್ಸ್‌ನಲ್ಲಿ ಕೂಡ ರನ್ನರ್‌ಅಪ್ ಆಗಿದರು. ಪದ್ಮಪ್ರಿಯಾ ರಾಮೇಶ್ ಕುಮಾರ್ ಅವರು ಸೃಷ್ಟಿಯ ಜೊತೆಗೂಡಿ ಡಬಲ್ಸ್‌ನಲ್ಲಿ ರನ್ನರ್‌ಅಪ್ ಆಗಿ ಸಾಧನೆ ಮಾಡಿದರು. ತಾನಿಷ್ ನಂದಾ ಎರಡನೇ ವಾರದ ಬಾಲಕರ ಡಬಲ್ಸ್‌ನಲ್ಲಿ ರನ್ನರ್‌ಅಪ್ ಆಗಿದ್ದಾರೆ.



ಅಂತಾರಾಷ್ಟ್ರೀಯ ಟೂರ್ನಿಗಳಿಗೆ ಆಯ್ಕೆ


ಈ ಸಾಧನೆಯ ಆಧಾರದಲ್ಲಿ ಕರ್ನಾಟಕದ ಈ ಮೂವರು ಆಟಗಾರರು ಯುರೋಪ್ ಅಂಡರ್–14 ಡೆವಲಪ್‌ಮೆಂಟ್ ತಂಡಕ್ಕೆ ಆಯ್ಕೆಯಾಗಿದ್ದು, ಜೊತೆಗೆ ಸೃಷ್ಟಿ ಕಿರಣ್ ಮತ್ತು ಪುನೀತ್ ಮನೋಹರ್ 2026ರ ವಿಂಬಲ್ಡನ್ ಅಂಡರ್–14 ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆದಿದ್ದಾರೆ.

- ಪಂದ್ಯಾವಳಿಯಲ್ಲಿ ಕನ್ನಡಿಗರ ಅಮೋಘ ಸಾಧನೆ
- ಗಮನ ಸೆಳೆದ ಸೃಷ್ಟಿ, ಪುನೀತ್, ಪದ್ಮಪ್ರಿಯಾ
- ಯೂರೋಪ್ ಚಾಂಪಿಯನ್‌ಶಿಪ್‌ಗೆ ಮೂವರ ಆಯ್ಕೆ
- ವಿಂಬಲ್ಡನ್‌ಗೂ ಸೃಷ್ಟಿ, ಪುನೀತ್ ಅರ್ಹ
- ಮಿಂಚಿದ ಪಂಜಾಬ್‌ನ ತಾನಿಷ್

ಪದಬಂಧ

ರಾಜಾ ಸಂಗಮೇಶ ಹಿರೇಮಠ

5952



ಎಡದಿಂದ ಬಲಕ್ಕೆ
1.ಶಿವನು ಇಲ್ಲಿ ನೆಲೆಸಿದ್ದರಿಂದ ಬಂದ ಹೆಸರು (5)
3.ಮೂಗು, ಮಹಾರಾಷ್ಟ್ರದ ಒಂದು ನಗರ (3)
5.ಕೆಂಪೇಗೌಡರ ಆಡಳಿತದ ಪ್ರಮುಖ ಕೇಂದ್ರ (3)
6.ಹರೆಯ ಬರುವ ವಯಸ್ಸು ತಿರುಗಿದೆ (4)
9.ಕೇಳಿದರೆ ಸರಣಿಯಲ್ಲಿರುವೆನೆಂದ ಹೆಣ್ಣು ಸಿಂಹ (4)
10.ಮಾಂತ್ರಿಕ–ಇಂದ್ರಜಾಲ ಪ್ರದರ್ಶಕ (4)
12.ಬಂದಿರುವ ಕೆಟ್ಟ ಸಮಯ (4)
14.ಮಂದಿಯ ನಾಯಕನಾಗಿ ಅರಸ (3)
16.ನೈಜವಲ್ಲದ್ದು–ಕೃತಕ ಪ್ರತಿ (3)
17.ಪ್ರಕಾಶಿಸು–ಹೊಳೆಯುವಿಕೆ (5)

ಮೇಲಿನಿಂದ ಕೆಳಕ್ಕೆ
1.ಮಾರ್ಗದರ್ಶನ ಮಾಡು ಎಂಬರ್ಥದ ನುಡಿಗಟ್ಟು (3)
2.ತಿಂಗಳು ತಲೆಕೆಳಗಾಗಿದೆ (2)
3.ನಾಗದ ನಡುವೆ ಧರ್ಮಾಧಿಕಾರಿಯಿದ್ದಾನೆ (3)
4.ಸುಗಂಧದ್ರವ್ಯ ಕೊಡುತ್ತದೆಯೆನ್ನುವ ಜಿಂಕೆಯ ಪ್ರಬೇಧ (5)
7.ಹಸುವಿನ ನಡುವೆ ಹೊಂಚುಹಾಕುವಿಕೆಯಿದೆ (4)
8.ಉತ್ಪಾದನೋದ್ಯಮ ಕಡೆಯಲ್ಲಿ ದೀರ್ಘವಾಗಿದೆ (4)
9.ತಲೆಗೂದಲನ್ನು ಕತ್ತರಿಸುವಿಕೆ–ಚೌಲಕ್ರಿಯೆ (5)
11.ಮಜವಾಗಿ ಏರಿದ ಹಂತಗಳು (3)
13.ಆನಂದಭಾಷ್ಪವಿಲ್ಲಿ ಉಲ್ಟಾ ಬೀಳುತ್ತಿದೆ (3)
15.ಸಂಸ್ಕೃತದಲ್ಲಿ ಸಾಗುತ್ತಿರುವ ದಾರಿ (2)

5951 ಉತ್ತರ

ಎಡದಿಂದ ಬಲಕ್ಕೆ:
2.ಚರಣದಾಸ 4.ವರದಿಗಾರ 7.ತಲ 9.ನಾಗರಿಕತೆ 11.ಬೆಂಕಿಪೊಟ್ಟಣ 14.ಮಗು 17.ಕ್ಷಾಮ ಡಾಮರ 18.ನವಸಾಗರ

ಮೇಲಿನಿಂದ ಕೆಳಕ್ಕೆ :
1.ನವನೀತ 2.ಚರ 3.ಸತೀಶ 5.ಗಾಯನಾ 6.ಸಂಕ 8.ಬೆಂಬಲ 10.ತೆಲುಗು 12.ಕಿಚ್ಚು 13.ಮರಣ 15.ಮನೋರಥ 16.ವಿಮಾನ 17.ಕ್ಷಾರ

ಏಳು ಮಹಿಳಾ ಪೊಲೀಸರಿಂದ ರಹಸ್ಯ ಕಾರ್ಯಾಚರಣೆ | ಮಹಿಳೆಯರೊಂದಿಗೆ ಆರೋಪಿಗಳ ಅನುಚಿತ ವರ್ತನೆ

ನಾಸಿಕ್‌ನಲ್ಲಿ ಮತಾಂತರ, ಲೈಂಗಿಕ ಕಿರುಕುಳ ಸಂಚು

ನಾಸಿಕ್: ಇಲ್ಲಿನ ಒಂದು ಮಲ್ಟಿ–ನ್ಯಾಷನಲ್ ಕಂಪನಿಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಮಹಿಳಾ ಉದ್ಯೋಗಿಗಳಿಗೆ ಲೈಂಗಿಕ ಕಿರುಕುಳ ನೀಡಲಾಗುತ್ತಿದ್ದ ಆರೋಪದ ಕೇಸ್‌ನಲ್ಲಿ 7 ಮಹಿಳಾ ಪೊಲೀಸ್ ಅಧಿಕಾರಿಗಳು ಸಿಬ್ಬಂದಿಯ ವೇಷದಲ್ಲಿ ಕಂಪನಿಗೆ ತೆರಳಿ ದೊಡ್ಡ ಮತಾಂತರ, ಲೈಂಗಿಕ ಹಗರಣದ ಸಂಚನ್ನು ಬಯಲು ಮಾಡಿದ್ದಾರೆ.

ಮುಖ್ಯ ಆರೋಪಿಯು ಹಲವಾರು ಮಹಿಳೆಯರೊಂದಿಗೆ ಅನುಚಿತ ವರ್ತನೆ ಮಾಡುತ್ತಿರುವುದನ್ನು ಕಣ್ಣಾರೆ ಕಂಡಿರುವ ಈ ಮಹಿಳಾ ಪೊಲೀಸರು, ಕೆಲವರ ಬಂಧನಕ್ಕೂ ಕಾರಣವಾಗಿದ್ದಾರೆ.

ಕಂಪನಿಯೊಳಗೆ ನಡೆಯುತ್ತಿದ್ದ ಒಂದು ಮೀಟಿಂಗ್‌ಗೆ ಈ ಮಹಿಳಾ ಪೊಲೀಸರು ಪ್ರವೇಶಿಸಿದಾಗ ಆರೋಪಿಯೊಬ್ಬ ಮಹಿಳೆಯರೊಂದಿಗೆ ಅನುಚಿತವಾಗಿ ವರ್ತಿಸುತ್ತಿರುವುದನ್ನು ರೆಡ್‌ಹ್ಯಾಂಡೆಡ್ ಆಗಿ ಹಿಡಿದಿದ್ದಾರೆ. ಪೊಲೀಸರು ಈಗ 40ಕ್ಕೂ ಹೆಚ್ಚು ಸಿಸಿಟಿವಿ ಫುಟೇಜ್‌ಗಳನ್ನು ಪರಿಶೀಲಿಸುತ್ತಿದ್ದಾರೆ. ಇದರಿಂದ ಆರೋಪಿಗಳ ವಿರುದ್ಧ ದೃಢ ಪುರಾವೆಗಳನ್ನು ಸಂಗ್ರಹಿಸುತ್ತಿದ್ದಾರೆ. ಸದ್ಯ ಎಸ್‌ಐಟಿ ರಚಿಸಲಾಗಿದ್ದು, ಇಡೀ ಪ್ರಕರಣದ ಬಗ್ಗೆ ಕೂಲಂಕಶವಾಗಿ ತನಿಖೆ ನಡೆಸುತ್ತಿದೆ. ಈ ಕೇಸ್‌ನಲ್ಲಿ ಲೈಂಗಿಕ ಕಿರುಕುಳ, ಧಾರ್ಮಿಕ ಭಾವನೆಗಳನ್ನು ಗಾಯಗೊಳಿಸುವ ಆರೋಪಗಳೊಂದಿಗೆ ಆರು ಜನರ ವಿರುದ್ಧ ಒಟ್ಟು 9 ಕೇಸ್‌ಗಳು ದಾಖಲಾಗಿವೆ. ಇದರಲ್ಲಿ ಟೀಮ್ ಲೀಡರ್ ಮತ್ತು ಎಚ್‌ಆರ್ ಪ್ರತಿನಿಧಿಯೂ ಸೇರಿದ್ದಾರೆ. ದೂರುದಾರ ಮಹಿಳೆಯರು ಸಾಮಾನ್ಯವಾಗಿ 18 ರಿಂದ 25 ವಯಸ್ಸಿನವರಾಗಿದ್ದಾರೆ.

ಕೇಸ್‌ಗಳು: ಕೇಸ್ 1 (ಜುಲೈ 2022 – ಫೆಬ್ರುವರಿ 2026):

ಆರೋಪಿಗಳು ಡ್ಯಾನಿಶ್ ಶೇಖ್, ತೌಸಿಫ್ ಅಟ್ಟಾರ್ ಮತ್ತು ನಿದಾ ಖಾನ್. ಇವರು ಒಬ್ಬ ಮಹಿಳಾ ಉದ್ಯೋಗಿಯ ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸಿದ್ದಾರೆ. ಹಿಂದೂ ದೇವತೆಗಳ ಬಗ್ಗೆ ಅವಮಾನಕರ ಟೀಕೆಗಳನ್ನು ಮಾಡಿದ್ದಾರೆ. ತೌಸಿಫ್ ಅಟ್ಟಾರ್ ವಿವಾಹದ ಮುಸುಕಿನಲ್ಲಿ ಆಕೆಯೊಂದಿಗೆ ದೈಹಿಕ ಸಂಬಂಧ ಹೊಂದಿದ್ದಾನೆ. ಡ್ಯಾನಿಶ್ ಶೇಖ್ ಆಫೀಸ್ ಲಾಬಿಯಲ್ಲಿ ಅಶ್ಲೀಲ ಕ್ರಿಯೆಗಳಲ್ಲಿ ತೊಡಗಿ ಆಕೆಯ ಮಾನಭಂಗ ಮಾಡಲು ಪ್ರಯತ್ನಿಸಿದ್ದಾನೆ.

ಕೇಸ್ 2 (ಮೇ 2023 – ಮಾರ್ಚ್ 19, 2026): ಆರೋಪಿಗಳು ರಝಾ ಮೆಮನ್ ಮತ್ತು ಶಹರುಖ್ ಕುರೇಶಿ. ಒಬ್ಬ ಮಹಿಳಾ ಉದ್ಯೋಗಿಯನ್ನು ನೋಡಿ ನೋಡಿ ಮಾತನಾಡುವುದು, ಅನುಚಿತವಾಗಿ ಸ್ಪರ್ಶಿಸುವುದು ಮತ್ತು ಆಕೆಯ ಖಾಸಗಿ ವೈವಾಹಿಕ ಜೀವನದ ಬಗ್ಗೆ ಅವಮಾನಕರ ಟೀಕೆಗಳನ್ನು ಮಾಡಿದ್ದಾರೆ. ಆಕೆ ಔಪಚಾರಿಕ ದೂರು ನೀಡಿದ್ದರೂ ಕಂಪನಿಯ ಹೆಡ್ ಆಫೀಸರ್ ಯಾವುದೇ ಕ್ರಮ ಕೈಗೊಳ್ಳದೆ ಆರೋಪಿಗಳಿಗೆ ಪ್ರೋತ್ಸಾಹ ನೀಡಿದ್ದಾರೆ ಎಂಬ ಆರೋಪವಿದೆ.

ಕೇಸ್ 3 (2022 – ಫೆಬ್ರವರಿ 2026): ಆರೋಪಿ ಶಫಿ ಶೇಖ್. ಒಬ್ಬ ಮಹಿಳಾ ಉದ್ಯೋಗಿಯನ್ನು ಅಶ್ಲೀಲವಾಗಿ ನೋಡುವುದು ಮತ್ತು ಮೀಟಿಂಗ್‌ಗಳಲ್ಲಿ ಆಕೆಯನ್ನು ಹಾಸ್ಯ ಮಾಡುವುದು. ತೌಸಿಫ್ ಆಕೆಯ ವೈವಾಹಿಕ ಜೀವನದಲ್ಲಿ ಮಕ್ಕಳು ಇಲ್ಲ ಎಂದು ಅವಮಾನಕರ ಮಾತುಗಳನ್ನಾಡಿ, ದೈಹಿಕ ಸಂಪರ್ಕ ಸ್ಥಾಪಿಸಲು ಪ್ರಯತ್ನಿಸಿ ಅವಮಾನಿಸಿದ್ದಾನೆ.

ಕೇಸ್ 4 (ಮೇ 4, 2025 – ಡಿಸೆಂಬರ್ 2025): ಆರೋಪಿ ತೌಸಿಫ್ ಅಟ್ಟಾರ್. ಒಬ್ಬ ಮಹಿಳಾ ಉದ್ಯೋಗಿಯ ಖಾಸಗಿ ಜೀವನದ ಬಗ್ಗೆ ಅಶ್ಲೀಲ ಪ್ರಶ್ನೆಗಳನ್ನು ಕೇಳಿ ಅನುಚಿತ ಸನ್ನೆಗಳನ್ನು ಮಾಡಿದ್ದಾನೆ. ಆಫೀಸ್‌ನಲ್ಲಿ ಇತರ ಹಿಂದೂ ಮಹಿಳಾ ಉದ್ಯೋಗಿಗಳ ಮುಂದೆ ಹಿಂದೂ ದೇವತೆಗಳ ಬಗ್ಗೆ ಅವಮಾನಕರ ಟೀಕೆಗಳನ್ನು ಮಾಡಿದ್ದಾನೆ.

ಕೇಸ್ 5 (2022 – ಮಾರ್ಚ್ 23, 2026): ಆರೋಪಿಗಳು ತೌಸಿಫ್ ಅಟ್ಟಾರ್, ಡ್ಯಾನಿಶ್, ಶಹರುಖ್ ಶೇಖ್ ಮತ್ತು ರಝಾ ಮೆಮನ್. ಒಬ್ಬ ಮಹಿಳಾ ಉದ್ಯೋಗಿಯ ಧರ್ಮವನ್ನು ಅವಮಾನಿಸಿ, ಆಕೆಯನ್ನು ಬಲವಂತವಾಗಿ ನಮಾಜ್ ಮಾಡಿಸಲು ಒತ್ತಾಯಿಸಿದ್ದಾರೆ. ಧಾರ್ಮಿಕ ಪರಿವರ್ತನೆಗೆ ಒತ್ತಾಯಿಸಿ ಆಕೆಯ ಇಚ್ಛೆಗೆ ವಿರುದ್ಧವಾಗಿ ಮಾಂಸಾಹಾರ ತಿನ್ನಿಸಿದ್ದಾರೆ. ಒಂದು ನಿರ್ದಿಷ್ಟ ಧರ್ಮದ ಮಹಿಳೆಯರ ವಿರುದ್ಧ ಅಶ್ಲೀಲ ಭಾಷೆ ಬಳಸಿದ್ದಾರೆ.

ಕೇಸ್ 6 (ಸೆಪ್ಟೆಂಬರ್ 6, 2024 – ಫೆಬ್ರವರಿ 2026): ಆರೋಪಿಗಳು ಅಸಿಫ್ ಅನ್ಸಾರಿ ಮತ್ತು ಶಫಿ ಶೇಖ್. ಒಬ್ಬ ಮಹಿಳಾ ಉದ್ಯೋಗಿಯ ದೇಹದ ಬಗ್ಗೆ ಅಶ್ಲೀಲ ಟೀಕೆಗಳನ್ನು ಮಾಡಿ ಅನುಚಿತವಾಗಿ ಸ್ಪರ್ಶಿಸಿದ್ದಾರೆ. ಇದೇ ಕೇಸ್‌ನಲ್ಲಿ ತೌಸಿಫ್ ಅಟ್ಟಾರ್ ಆಕೆಯ ಧರ್ಮದ ದೇವತೆಗಳ ಬಗ್ಗೆ ಅವಮಾನಕರ ಭಾಷೆ ಬಳಸಿದ್ದಾನೆ.

ಕೇಸ್ 7 (2025 – ಮಾರ್ಚ್ 2026): ಆರೋಪಿಗಳು ಅಸಿಫ್ ಅನ್ಸಾರಿ, ಶಹರುಖ್ ಕುರೇಶಿ, ರಝಾ ಮೆಮನ್, ತೌಸಿಫ್ ಅಟ್ಟಾರ್ ಮತ್ತು ಶಫಿ ಶೇಖ್. ಒಬ್ಬ ಮಹಿಳಾ ಉದ್ಯೋಗಿಯನ್ನು ಸ್ಟಾಕಿಂಗ್ ಮಾಡಿ ಅಶ್ಲೀಲ ಟೀಕೆಗಳನ್ನು ಮಾಡಿ ಅನುಚಿತವಾಗಿ ಸ್ಪರ್ಶಿಸಿದ್ದಾರೆ. ಒಟ್ಟಾಗಿ ಸೇರಿ ಆಕೆಯ ಧರ್ಮದ ವಿರುದ್ಧ ಕೆಟ್ಟ ಶಬ್ದಗಳನ್ನು ಬಳಸಿ ವಾತಾವರಣವನ್ನು ಕಲುಷಿತಗೊಳಿಸಲು ಪ್ರಯತ್ನಿಸಿದ್ದಾರೆ.

ಕೇಸ್ 8 (ಜನವರಿ 2025 – ಪ್ರಸ್ತುತ): ಆರೋಪಿಗಳು ರಝಾ ಮೆಮನ್ ಮತ್ತು ಶಫಿ ಶೇಖ್. ಒಬ್ಬ ಮಹಿಳಾ ಉದ್ಯೋಗಿಯೊಂದಿಗೆ ಆಕೆಯ ಇಚ್ಛೆ ವಿರುದ್ಧ ದೈಹಿಕ ಸಂಪರ್ಕ ಸ್ಥಾಪಿಸಲು ಪ್ರಯತ್ನಿಸಿದ್ದಾರೆ. ಶಫಿ ಆಕೆಗೆ ಬಲವಂತವಾಗಿ ಪ್ರಪೋಸ್ ಮಾಡಿದ್ದಾನೆ. ರಝಾ ಮೆಮನ್ ಆಕೆಯ ದೇಹದ ಬಗ್ಗೆ ಅಶ್ಲೀಲ ಟೀಕೆಗಳನ್ನು ಮಾಡಿ ಸ್ಪರ್ಶಿಸಲು ಪ್ರಯತ್ನಿಸಿದ್ದಾನೆ.

ಕೇಸ್ 9 (ಜನವರಿ 2026 – ಏಪ್ರಿಲ್ 1, 2026): ಆರೋಪಿಗಳು ರಝಾ ಮೆಮನ್ ಮತ್ತು ಶಹರುಖ್ ಕುರೇಶಿ. ಒಬ್ಬ ಮಹಿಳಾ ಉದ್ಯೋಗಿಯೊಂದಿಗೆ ಅಶ್ಲೀಲ ಸಂಭಾಷಣೆ ನಡೆಸಿ ಅನುಚಿತ ಕ್ರಿಯೆಗಳಲ್ಲಿ ತೊಡಗಿದ್ದಾರೆ. ಆಕೆ ನಿರಾಕರಿಸಿದರೂ ಖಾಸಗಿ ಜೀವನಕ್ಕೆ ಮುನ್ನುಗ್ಗಿ, ನಿಗಾ ಇಟ್ಟು ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿದ್ದಾರೆ. ಆಕೆಯ ದೇಹದ ಬಗ್ಗೆ ಅಶ್ಲೀಲ ಟೀಕೆಗಳನ್ನು ಮಾಡಿದ್ದಾರೆ.

ಪೊಲೀಸ್ ಕಾರ್ಯಾಚರಣೆ

ಸೋಮವಾರ ಐದು ಆರೋಪಿಗಳನ್ನು ಅರೆಸ್ಟ್ ಮಾಡಿ ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಅವರನ್ನು ಏಪ್ರಿಲ್ 10ರವರೆಗೆ ಪೊಲೀಸ್ ಕಸ್ಟಡಿಗೆ ಕಳುಹಿಸಲಾಗಿದೆ. ಒಬ್ಬ ಆರೋಪಿ ನ್ಯಾಯಾಂಗ ವಶದಲ್ಲಿದ್ದಾನೆ. ಏಳನೇ ಆರೋಪಿ ಎಚ್‌ಆರ್ ಇಲಾಖೆಯ ಮಹಿಳೆಯಾಗಿದ್ದು, ಲೈಂಗಿಕ ಕಿರುಕುಳ ತಡೆಗಟ್ಟುವ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳದಿದ್ದ ಆರೋಪವಿದೆ. ಪೊಲೀಸ್ ಅಧಿಕಾರಿಗಳ ಪ್ರಕಾರ, ''ದೂರುದಾರರು ಈ ಘಟನೆಗಳ ಬಗ್ಗೆ ಮೌಖಿಕವಾಗಿ ಹಲವು ಬಾರಿ ದೂರು ನೀಡಿದ್ದರೂ ಕಂಪನಿಯ ಹೆಡ್ ಆಫೀಸರ್ ಅದನ್ನು ಗಮನಿಸದೆ ಆರೋಪಿಗಳ ಕ್ರಿಯೆಗಳಿಗೆ ಸಹಾಯ ಮಾಡಿದ್ದಾರೆ.'' ಇನ್ನೂ ಹೆಚ್ಚು ಮಹಿಳೆಯರು ಕಿರುಕುಳಕ್ಕೊಳಗಾಗಿದ್ದಾರೆ ಎಂದು ತಿಳಿದಿದ್ದಲ್ಲಿ ತಮ್ಮನ್ನು ಸಂಪರ್ಕಿಸುವಂತೆ ಮನವಿ ಮಾಡಿದ್ದಾರೆ.

ಕಿರುಸುದ್ದಿ

ಅನೈತಿಕ ಸಂಬಂಧ: ಪತಿಯ ಕೊಲೆ



ಬೆಳಗಾವಿ: ಮೊಬೈಲ್ ರಿಚಾರ್ಜ್‌ಗೆ ಅಂಗಡಿಗೆ ಹೋಗುತ್ತಿದ್ದ ವಿವಾಹಿತ ಮಹಿಳೆಯೊಂದಿಗೆ ಯುವಕನೋರ್ವ ಅನೈತಿಕ ಸಂಬಂಧ ಬೆಳೆಸಿದ್ದು, ಇದಕ್ಕೆ ಅಡ್ಡಿಯಾದ ಪತಿಯನ್ನು ಪ್ರಿಯಕರನ ಜೊತೆ ಸೇರಿ ಪತ್ನಿ ಕೊಲೆ ಮಾಡಿ ನಾಟಕ ಆಡಿರುವ ಘಟನೆ ಅನಗೋಳದ ಬಾಬಲೇ ಗಲ್ಲಿಯಲ್ಲಿ ತಡವಾಗಿ ಬೆಳಕಿಗೆ ಬಂದಿದೆ. ಪ್ರೀತಿಸಿ ಮದುವೆಯಾದ ಲಕ್ಷ್ಮೀ ಸೂಪಣ್ಣವರ, ಮದುವೆಯಾದ ಬಳಿಕ ಮೊಬೈಲ್ ರಿಚಾರ್ಜ್ ಅಂಗಡಿಯ ಯುವಕನೊಂದಿಗೆ ಅನೈತಿಕ ಸಂಬಂಧ ಬೆಳಿಸಿದ್ದಳು ಎನ್ನಲಾಗಿದೆ. ಇದಕ್ಕೆ ಪತಿ ಅವಿನಾಶ ಸೂಪ್ಪಣ್ಣವರ (40) ಅಡ್ಡಿಯಾಗುತ್ತಿನೆಂದು ತಂಪು ಪಾನೀಯದಲ್ಲಿ ಮೂರು ಸ್ಲಿಪ್ ನಿದ್ರೆ ಮಾತ್ರೆ ಹಾಕಿ ಸಿಲಿಂಡರ್ ತಲೆ ಮೇಲೆ ಎದೆ, ತಲೆಗೆ ಹೊಡೆದು ಕೊಲೆ ಮಾಡಲಾಗಿದೆ. ಅವಿನಾಶ ಪತ್ನಿ ಲಕ್ಷ್ಮೀ ಸೂಪಣ್ಣವರ ಆತ್ಮಹತ್ಯೆ ಕೇಸ್ ಎಂದು ಡ್ರಾಮಾ ಮಾಡಿದ್ದರು. ಈ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿದ ಮೃತನ ತಾಯಿ ಕಮಲ್ ಟಿಳಕವಾಡಿ ಠಾಣೆ ಮೆಟ್ಟಿಲೇರಿದ್ದಾರೆ. ದೂರು ದಾಖಲಿಸಿಕೊಂಡ ಪೊಲೀಸ್‌ರು ತನಿಖೆ ನಡೆಸಿ ಆರೋಪಿ (ಪ್ರಿಯಕರ) ಕೈಲಾಶ್ ಅಚ್ಚಿತ್ತಾಲ್, ಪತ್ನಿ ಲಕ್ಷ್ಮೀಯನ್ನು ಬಂಧಿಸಿ ಹಿಂಡಲಗಾ ಜೈಲಿಗೆ ರವಾನಿಸಿಲಾಗಿದೆ ಎಂದು ತಿಳಿಸಿದ್ದಾರೆ.

7 ಬೈಕ್‌ಗಳು ಬೆಂಕಿಗಾಹುತಿ: ಅಪಾರ ಹಾನಿ



ಬೀದರ್: ರಸ್ತೆ ಬದಿಯ ಗ್ಯಾರೇಜ್‌ವೊಂದರಲ್ಲಿ ಆಕಸ್ಮಿಕ ಬೆಂಕಿ ಅವಘಡ ಸಂಭವಿಸಿದ್ದು 7 ಬೈಕ್‌ಗಳು ಸುಟ್ಟು ಭಸ್ಮವಾಗಿರುವ ಘಟನೆ ಚಿಟಗುಪ್ಪ ತಾಲೂಕಿನ ಮನ್ನಾಏಖ್ಖೆಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಮುತ್ತಂಗಿ ಗ್ರಾಮಗ್ರಾಮದಲ್ಲಿ ನಡೆದಿದೆ. ಶಾಹಬುದ್ದೀನ್ ಶಾ ನಿರ್ಣಾ ಅವರ ಗ್ಯಾರೇಜ್‌ನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡು ಬೈಕ್‌ಗಳು ಸುಟ್ಟು ಭಸ್ಮವಾಗಿದೆ. ಏಕಾಏಕಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ತಗುಲಿರುವ ಸಾಧ್ಯತೆ ಇದೆ. ಘಟನೆಯಲ್ಲಿ 5-6 ಲಕ್ಷ ರೂಪಾಯಿ ನಷ್ಟ ಸಂಭವಿಸಿದೆ ಎಂದು ಗ್ಯಾರೇಜ್ ಮಾಲಕ ಶಾಹಬುದ್ದೀನ್ ಅವರು ತಿಳಿಸಿದ್ದಾರೆ. ಈ ಕುರಿತು ಮನ್ನಾಏಖ್ಖೆಳ್ಳಿ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಚಿನ್ನಕ್ಕಾಗಿ ಸಹೋದರಿಯರ ಮೇಲೆ ಹಲ್ಲೆ

ಧಾರವಾಡ: ಬಂಗಾರದ ವಿಷಯಕ್ಕೆ ಸಹೋದರ ಸಹೋದರಿಯರ ಮೇಲೆ ಹಲ್ಲೆ ನಡೆಸಿದ ಘಟನೆ ತಾಲೂಕಿನ ಗೋವನಕೊಪ್ಪದಲ್ಲಿ ಶುಕ್ರವಾರ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ.

ಅದೇ ಗ್ರಾಮದ ಬಿಜೆಪಿ ಮುಖಂಡ ಗುರುನಾಥಗೌಡ ಹಾಗೂ ಆತನ ಪತ್ನಿ ಜ್ಯೋತಿ ಗೌಡರ ಹಲ್ಲೆ ನಡೆಸಿದ ಆರೋಪಿ ಎಂದು ತಿಳಿದು ಬಂದಿದೆ. ಅಕ್ಕಮಹಾದೇವಿ ಉಪ್ಪಿನ ಹಾಗೂ ರಾಜೇಶ್ವರಿ ಕಟಗಿ ಎಂಬುವರೇ ಹಲ್ಲೆಗೊಳಗಾದ ಸಹೋದರಿಯರು.

ಗುರುನಾಥಗೌಡ ಗೌಡರಿಂದ ಬರಬೇಕಾದ ಬಂಗಾರ ಕೇಳಲು ಹೋದ ಅಕ್ಕಮಹಾದೇವಿ, ರಾಜೇಶ್ವರಿ ಮತ್ತು ಗುರುನಾಥಗೌಡರ ಮಧ್ಯೆ ಮಾತಿಗೆ ಮಾತು ಬೆಳೆದು ಆರೋಪಿ ಸಹೋದರಿಯರ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಗಾಯಾಳು ಸಹೋದರಿಯರನ್ನು ಚಿಕಿತ್ಸೆಗೆ ಕಿಮ್ಸ್‌ಗೆ ದಾಖಲಿಸಿದೆ. ಈ ಕುರಿತು ಧಾರವಾಡ ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಎಸ್.ಬಿ.ಆರ್ ಸಿ.ಇ.ಟಿ-2026 | ದೊಡ್ಡಪ್ಪ ಅಪ್ಪ ಸ್ಕಾಲರ್‌ಶಿಪ್

ಪರೀಕ್ಷೆಗೆ ಹಾಜರಾದ ರಾಜ್ಯದ 4,798 ವಿದ್ಯಾರ್ಥಿಗಳು

ಕಲಬುರಗಿ: ಶರಣಬಸವೇಶ್ವರ ವಸತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಪಿಯುಸಿ ಪ್ರಥಮ ವರ್ಷಕ್ಕಾಗಿ ಪ್ರವೇಶ ಬಯಸುವ ಹತ್ತನೇ ತರಗತಿಯ ಕರ್ನಾಟಕ ಸ್ಟೇಟ್ ಬೋರ್ಡ್‌ನ ಕನ್ನಡ ಮತ್ತು ಇಂಗ್ಲಿಷ ಮಾಧ್ಯಮದ ವಿದ್ಯಾರ್ಥಿಗಳಿಗಾಗಿ ಭಾನುವಾರ ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ ಸುಸೂತ್ರವಾಗಿ ಪ್ರವೇಶ ಪರೀಕ್ಷೆ ನಡೆಯಿತು.

ಪ್ರವೇಶ ಪರೀಕ್ಷೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಬೀದರ, ಭಾಲ್ಕಿ, ಯಾದಗಿರಿ, ರಾಯಚೂರು, ಬಳ್ಳಾರಿ, ಕೊಪ್ಪಳ ಹಾಗೂ ಗದಗ, ಬೆಳಗಾವಿ, ವಿಜಯಪೂರ ಸೇರಿದಂತೆ ರಾಜ್ಯದ ನಾನಾ ಜಿಲ್ಲೆಗಳಿಂದ ಹಾಗೂ ಗಡಿ ರಾಜ್ಯಗಳಾದ ಮಹಾರಾಷ್ಟ್ರ,ಆಂಧ್ರಪ್ರದೇಶ, ತೆಲಂಗಾಣ ವಿವಿಧ ಪ್ರದೇಶಗಳಿಂದ 4798 ವಿದ್ಯಾರ್ಥಿಗಳು ಹಾಜರಿದ್ದು ಪರೀಕ್ಷೆ ಅಚ್ಚುಕಟ್ಟಾಗಿ ಬರೆದರು.

ಈ ಪರೀಕ್ಷೆಯಲ್ಲಿ ಗರಿಷ್ಠ ಅಂಕ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾ ಭಂಡಾರಿ ಲಿಂಗೈಕ್ಯ ಡಾ.ಶರಣಬಸವಪ್ಪ ಅಪ್ಪಾಜಿಯವರ ಆಶಯದಂತೆ 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ ಹೆಸರಲ್ಲಿ ಸ್ಕಾಲರ್‌ಶಿಪ್ ರೂಪದಲ್ಲಿ 5 ಕೋಟಿ ರೂಪಾಯಿ ನೀಡಲಾಗುತ್ತಿದೆ.

ಪರೀಕ್ಷೆಯನ್ನು ಬರೆಯುವ ವಿದ್ಯಾರ್ಥಿಗಳಿಗೆ ಎಸ್.ಬಿ.ಆರ್. ಪಿ.ಯು ಕಾಲೇಜು, ಮುಕ್ತಾಂಬಿಕಾ ಪಿ.ಯು ಕಾಲೇಜು,ಅಪ್ಪಾ ಪಬ್ಲಿಕ್ ಶಾಲೆ, ಎಸ್.ಬಿ.ಆರ್ ಪಬ್ಲಿಕ್ ಶಾಲೆ, ದೊಡ್ಡಪ್ಪ ಅಪ್ಪಾ ಪಿಯು ಕಾಲೇಜು ಹೀಗೆ ಸಂಸ್ಥೆಯ 6 ಶಾಲಾ ಕಾಲೇಜುಗಳಲ್ಲಿ ಆಸನಗಳ ವ್ಯವಸ್ಥೆ ಮಾಡಲಾಗಿತ್ತು. ಯಾವುದೇ ಅನಾನುಕೂಲವಾಗದಂತೆ ಸಾವಿರಾರು ವಿದ್ಯಾರ್ಥಿಗಳು ಶಾಂತತೆಯಿಂದ ಪರೀಕ್ಷೆ ಬರೆದರು.

10ನೇ ತರಗತಿಯ ವಿಜ್ಞಾನ ಮತ್ತು ಗಣಿತ ವಿಷಯಗಳನ್ನು ಆಧಾರವಾಗಿಟ್ಟುಕೊಂಡು 100 ಪ್ರಶ್ನೆಗಳ, 400 ಅಂಕಗಳ ಪ್ರಶ್ನೆ ಪತ್ರಿಕೆಯನ್ನು ಸಿದ್ದಪಡಿಸಲಾಗಿತ್ತು. 16 ವರ್ಷಗಳಿಂದ ಕೂಡಿದ ಪ್ರಶ್ನೆ ಪತ್ರಿಕೆಯು ಋಣಾತ್ಮಕ ಅಂಕ ಒಳಗೊಂಡಿತ್ತು. ಅತ್ಯಂತ ಪಾರದರ್ಶಕವಾಗಿ ಭಾನುವಾರ ಪ್ರವೇಶ ಪರೀಕ್ಷೆ ನಡೆಸಲಾಗಿದ್ದು, ಇದು ಎಸ್.ಬಿ.ಆರ್ ಕಾಲೇಜಿನ ಗುಣಮಟ್ಟದ ಶಿಕ್ಷಣಕ್ಕೆ ಮತ್ತು ಗುರು-ವೃಂದದವರ ಪರಿಶ್ರಮಕ್ಕೆ ಹಿಡಿದ ಕನ್ನಡಿಯಾಗಿದೆ.



> ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಸಲಹೆ-ಸಹಕಾರ ಹಾಗೂ ಮಾರ್ಗದರ್ಶನಕ್ಕಾಗಿ ಕ್ಯಾಂಪಸ್‌ನಲ್ಲಿ ಹೆಲ್ಪ-ಡೆಸ್ಕ್ ವ್ಯವಸ್ಥೆ ಮಾಡಲಾಗಿತ್ತು. ಆನ್‌ಲೈನ್ ರೆಜಿಸ್ಟ್ರೇಶನ್ ಮಾಡಿಸದೇ ಹಾಗೆಯೇ ಬಂದ ವಿದ್ಯಾರ್ಥಿಗಳಿಗೆ ಸ್ಪಾಟ್ ರೆಜಿಸ್ಟ್ರೇಶನ್ ಮಾಡಿಸಿ, ಯಾವುದೇ ವಿದ್ಯಾರ್ಥಿಯೂ ಕೂಡಾ ಮರಳಿ ಹೋಗದಂತೆ ಅವರಿಗೆ ಪರೀಕ್ಷೆ ಬರೆಯುವ ವ್ಯವಸ್ಥೆ ಮಾಡಲಾಗಿತ್ತು.
> ■ ಎಸ್.ಎಸ್.ದೇವರಕಲ್, ಎಸ್‌ಬಿಆರ್ ಕಾಲೇಜು ಪ್ರಾಂಶುಪಾಲ

> ಎಸ್.ಬಿ.ಆರ್ ಕಾಲೇಜಿನಲ್ಲೇ ನಮ್ಮ ಅಣ್ಣ ಕಲಿಯುತ್ತಿದ್ದಾನೆ.ಇಲ್ಲಿ ಓದಲು ಒಳ್ಳೆಯ ವಾತಾವರಣವಿದೆ. ಇಲ್ಲಿನ ಶಿಕ್ಷಣ ನಮ್ಮ ಭವಿಷ್ಯದ ಶಿಕ್ಷಣಕ್ಕೆ ಉತ್ತಮ ಮಾರ್ಗದರ್ಶನ ನೀಡುತ್ತದೆ. ಸಮಯ ನಿರ್ವಹಣೆಗೆ ಅನುಕೂಲವಾಗುವ ರೀತಿಯಲ್ಲಿ ಪ್ರಶ್ನಾಪತ್ರಿಕೆ ರಚಿಸಲಾಗಿತ್ತು.
> ■ ಸಿದ್ರಾಮಪ್ಪ, ವಿದ್ಯಾರ್ಥಿ ಎಸ್‌ಜಿಎಸ್ ಪಬ್ಲಿಕ್ ಶಾಲೆ, ರಾಮನಗರ

ವಿಬಿಜಿ ರಾಮ್ ಜಿ ಯೋಜನೆ ಅನುಷ್ಠಾನದಲ್ಲಿ ರಾಜ್ಯ ಸರ್ಕಾರ ವಿಫಲ: ಸಂಸದ ಬೊಮ್ಮಾಯಿ

ವಿಜಯನಗರ: ವಿಬಿ ಜಿ ರಾಮ್ ಜಿ ಯೋಜನೆಯನ್ನು ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ರಾಜ್ಯದ ಹೊಣೆಗೇಡಿ ಸರಕಾರ ವಿಫಲವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಹಗರಿಬೊಮ್ಮನಹಳ್ಳಿಯಲ್ಲಿ ಭಾನುವಾರ ಪಟ್ಟಣದ ಪಂಚಮಸಾಲಿ ಭವನದಲ್ಲಿ ರಾಜ್ಯ ಪಂಚಮಸಾಲಿ ಸಮಾಜದ ಗೌರವಾಧ್ಯಕ್ಷ ಬಾವಿ ಬೆಟ್ಟಪ್ಪ ಅವರ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಪಾಲ್ಗೊಂಡು ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದರು.

ರಾಜ್ಯ ಸರ್ಕಾರ ಬಡವರ ಪರವಾಗಿಲ್ಲ. ಅತ್ಯಂತ ಹೊಣೆಗಾರಿಕೆ ಯಿಂದ ಅನುಷ್ಠಾನಗೊಳಿಸಬೇಕಿದ್ದ ವಿಬಿ ಜಿ ರಾಮ್‌ಜಿ ಯೋಜನೆಗೆ ತನ್ನ ಪಾಲಿನಅನುದಾನ ಬಿಡುಗಡೆಗೊಳಿಸದೆ ದಾರಿ ತಪ್ಪಿಸಿದೆ. ಯೋಜನೆಯನ್ನು ಮಾರ್ಪಾಡು ಮಾಡುವ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಅತ್ಯಂತ ಪಾರದರ್ಶಕವಾಗಿ ಮಾನವ ದಿನಗಳನ್ನು ಸೃಜನೆ ಮಾಡುವ ಹೊಣೆಗಾರಿಕೆಯಿಂದ ರಾಜ್ಯದ ಬದ್ಧತೆ ರಹಿತ ಸರ್ಕಾರ ನುಣುಚಿಕೊಳ್ಳುತ್ತಿದೆ. ಅಭಿವೃದ್ಧಿ ಮತ್ತು ಉತ್ತಮ ಆಡಳಿತ ನಡೆಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದರು.

ಮೈತ್ರಿಯಿಂದ ಹಾನಿಯಿಲ್ಲ: ಈ ಸಂದರ್ಭದಲ್ಲಿ ರಾಜ್ಯದಲ್ಲಿ ಜೆಡಿಎಸ್ ಜೊತೆಗಿನ ಮೈತ್ರಿ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಜೆಡಿಎಸ್ ಜತೆಗಿನ ಮೈತ್ರಿಯಿಂದ ಬಿಜೆಪಿಗೆ ಹಾನಿಯಾಗಿಲ್ಲ. ರಾಜ್ಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಮಾಜಿ ಸಿಎಂ ಯಡಿಯೂರಪ್ಪ ಅವರು ಹಾಕಿದ ಭದ್ರ ಬುನಾದಿಯಲ್ಲಿ ಬಿಜೆಪಿ ಗಟ್ಟಿಯಾಗಿ ನೆಲೆಯೂರಿದೆ. ಜೆಡಿಎಸ್ ಜತೆಗಿನ ಮೈತ್ರಿ ಹಾನಿ ಒಪ್ಪಲಾಗದು. ರಾಜ್ಯದಲ್ಲಿನ ದಾವಣಗೆರೆ ಬಾಗಲಕೋಟೆ ಉಪ ಚುನಾವಣೆಗಳಲ್ಲಿ ಬಿಜೆಪಿ ಗೆಲುವು ನಿಶ್ಚಿತವಾಗಿದೆ ಎಂದರು.

ಶಾಸಕ ಕೃಷ್ಣನಾಯ್ಕ, ಮಾಜಿ ಶಾಸಕ ಚಂದ್ರನಾಯ್ಕ, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಸಂಜೀವರೆಡ್ಡಿ, ಮುಖಂಡರಾದ ಬಲ್ಲಾಹುಣ್ಸೆ ರಾಮಣ್ಣ, ಓದೋ ಗಂಗಪ್ಪ, ಜಗಳೂರು ದೊಡ್ಡಬಸಪ್ಪ ಇದ್ದರು.



ವಂದೇ ಭಾರತ ಸ್ಲೀಪರ್ ಕೋಚ್ ರೈಲು ವಿಜಯಪುರ ಮಾರ್ಗವಾಗಿ ಸಂಚರಿಸಲು ಸಚಿವರಿಗೆ ಪತ್ರ

ವಿಜಯಪುರ: ವಂದೇ ಭಾರತ ಸ್ಲೀಪರ್ ಕೋಚ್ ರೈಲನ್ನು ವಿಜಯಪುರ ಮಾರ್ಗವಾಗಿಸಂಚರಿಸುವಂತೆಕೇಂದ್ರ ರೈಲ್ವೆಸಚಿವರಿಗೆ ಪತ್ರ ಬರೆಯಲಾಗಿದೆ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜಯಪುರದಿಂದ ಬೆಂಗಳೂರಿಗೆ ನಿತ್ಯ ಸಾವಿರಾರು ಜನರು ಪ್ರಯಾಣಿಸುತ್ತಾರೆ. ಅವರ ಅನುಕೂಲಕ್ಕಾಗಿ ವಂದೇ ಭಾರತ ರೈಲನ್ನು ವಿಜಯಯಪುರ ಮಾರ್ಗವಾಗಿ ಓಡಿಸುವಂತೆ ಹಾಗೂ ವಿವಿಧ ರೈಲ್ವೆ ಮಾರ್ಗಗಳಿಗೆ ಸಂಬಂಧಿಸಿದಂತೆ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವರಾದ ಸೋಮಣ್ಣ ಅವರಿಗೆ ಪತ್ರ ಬರೆದಿರುವೆ ಎಂದರು.

ವಿಜಯಪುರ ನಗರದಲ್ಲಿ ಇನ್ನೂ ರಸ್ತೆಗಳ ಅಗಲೀಕರಣ, ಇನ್ನೂ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಉತ್ತಮ ಡಾಕ್ಟರ್ ಬೇಕು, ಈಗಿರುವ ಡಾಕ್ಟರ್ ಸರಿಯಿಲ್ಲ, 2028ಕ್ಕೆ ಬೇರೆ ಡಾಕ್ಟರ್ ಬರುತ್ತಾನೆ. ಆತ ಎಲ್ಲವೂ ಶುದ್ಧ ಮಾಡುತ್ತಾನೆ ಎಂದು ಮುಖ್ಯಮಂತ್ರಿಗಳ ಕಾರ್ಯವೈಖರಿ ಕುರಿತು ತಮ್ಮದೇ ಸ್ಟೈಲ್‌ನಲ್ಲಿ ಹೇಳುವುದಲ್ಲದೇ ಮುಂದೆ ತಾವೇ ಮುಖ್ಯಮಂತ್ರಿ ಎಂಬುದನ್ನು ಸಹ ಉಲ್ಲೇಖಿಸಿದರು.ಸರ್ಕಾರಿ ಆಸ್ಪತ್ರೆಯಲ್ಲಿ ಪಾರ್ಕಿಂಗ್, ಶೌಚಾಲಯಕ್ಕೆ ಶುಲ್ಕ ಪಡೆದುಕೊಳ್ಳಲಾಗುತ್ತಿದೆ ಎಂಬುದರ ಪ್ರತಿಕ್ರಿಯೆ ನೀಡಿದ ಅವರು, ಎಲ್ಲವೂ ಫ್ರೀ ನೀಡಿದರೆ ಅರ್ಥವಿರುವುದಿಲ್ಲ, ಕೆಲವೊಂದು ಸೇವೆಗಳಿಗೆ ಹಣ ಪಾವತಿಸಲೇಬೇಕಾಗುತ್ತದೆ. ಆ ಕಾರಣಕ್ಕಾಗಿಯೇ 5 ರೂ. ಆರೋಗ್ಯ ಶುಲ್ಕ ಪಡೆದುಕೊಳ್ಳಲಾಗುತ್ತದೆ. ಆದರೂ ಸಹ ಈ ಬಗ್ಗೆ ಪರಿಶೀಲನೆ ನಡೆಸುವೆ ಎಂದರು.

ಆದಿಲ್‌ಷಾಹಿ ಅರಸರು ಧರ್ಮಾಂಧರಲ್ಲ: ನವರಸಪುರ ಉತ್ಸವ ಸಾಬರ ಉತ್ಸವ ಅಲ್ಲ, ನವರಸಪುರ ಎಂದರೆ 9 ರಸಗಳು ಎಂದರ್ಥ. ನಾನು ನವರಪುರ ಉತ್ಸವಕ್ಕೆ ತಕರಾರು ಮಾಡಿಲ್ಲ, ಆದಿಲ್ ಷಾಹಿ ಅರಸರು ಹಿಂದು ದೇವತೆಗಳ ಆರಾಧಕರಾಗಿದ್ದರು, ಸರಸ್ವತಿ ದೇವಿಯ, ನರಸಿಂಹ ದೇವರ ಆರಾಧಕರಾಗಿದ್ದರು, ನಮ್ಮ ನರಸಿಂಹ ದೇವರ ಕೃಪೆಯಿಂದ ಸುಲ್ತಾನನ ಪುತ್ರಿಗೆ ಕಣ್ಣು ಬಂದಿದ್ದವು, ಆದಿಲ್‌ಷಾಹಿ ಅರಸರು ಜನರಿಗೆ ಗೊತ್ತಾಗದ ರೀತಿ ಜಲ ಸುರಂಗದ ಮೂಲಕ ನರಸಿಂಹ ದೇವಾಲಯಕ್ಕೆ ಭೇಟಿ ನೀಡುತ್ತಿದ್ದರು, ಔರಂಗಜೇಬ್, ಅಕ್ಬರ್ ನಂತೆ ಅವರು ಧರ್ಮಾಂಧರಾಗಿರಲಿಲ್ಲ, ನಮ್ಮ ದೇವರನ್ನು ಆರಾಧಿಸುತ್ತಿದ್ದರು, ಈ ವಿಷಯವೂ ಜನರಿಗೆ ಗೊತ್ತಾಗಬೇಕು. ನಮ್ಮದೇವರನ್ನು ಅವರು ಪೂಜಿಸುತ್ತಿದ್ದರು ಎಂದು ಎಲ್ಲರಿಗೂ ತಿಳಿಯಬೇಕು, ನವರಸಪುರ ಉತ್ಸವ ಬಗ್ಗೆ, ಹೆಸರಿನ ಬಗ್ಗೆ ನಾನು ತಕರಾರು ಮಾಡಿಯೇ ಇಲ್ಲ ಎಂದು ಯತ್ನಾಳ ಸ್ಪಷ್ಟಪಡಿಸಿದರು.

ಶೈಕ್ಷಣಿಕ ಕ್ಷೇತ್ರದಲ್ಲಿ ಸುಧಾರಣೆ: ಡಾ.ಅಜಯ್ ಸಿಂಗ್

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗಾಗಿ ನಮ್ಮ ಸರ್ಕಾರ ಈ ಭಾಗದಲ್ಲಿನ ಶಿಕ್ಷಣದ ಸುಧಾರಣೆಗಾಗಿ ಮಂಡಳಿಯಿಂದ ಅಕ್ಷರ ಆವಿಷ್ಕಾರ ಯೋಜನೆ ಜಾರಿಗೆ ತಂದು, ಯೋಜನೆಯಡಿ ಶೇ.25 ಪ್ರತಿಶತ ಹಣ ಮೀಸಲಿಟ್ಟಿದ ಪರಿಣಾಮ ಫಲಿತಾಂಶದಲ್ಲಿ ಒಂದಿಷ್ಟು ಸುಧಾರಣೆ ಕಂಡಿದೆ ಎಂದು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ, ಜೇವರ್ಗಿ ಶಾಸಕ ಡಾ.ಅಜಯ್ ಧರ್ಮಸಿಂಗ್ ತಿಳಿಸಿದರು.



ಇತ್ತೀಚೆಗೆ ಪ್ರಕಟವಾದ ಪ್ರಸಕ್ತ 2025-26ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶದ ಕುರಿತು ಮಾತನಾಡಿದ ಅವರು,ಭಾಗದ ಶಿಕ್ಷಣಕ್ಕಾಗಿಯೇ ಅಕ್ಷರ ಆವಿಷ್ಕಾರ ಯೋಜನೆಯಡಿ 25 ಪ್ರತಿಶತ ಹಣ ಮೀಸಲಿಡಲಾಗಿದ್ದು,ಹಂತ ಹಂತವಾಗಿ ಭಾಗದಲ್ಲಿ ಶೈಕ್ಷಣಿಕವಾಗಿ ಸುಧಾರಣೆ ಕಂಡುಬರಲಿದೆ. ಮೊನ್ನೆಯ ಫಲಿತಾಂಶದಲ್ಲಿ 17 ಪ್ರತಿಶತ ಸುಧಾರಣೆ ಕಂಡಿದ್ದು, ಹಂತ ಹಂತವಾಗಿ ಫಲಿತಾಂಶದಲ್ಲಿ ಬೆಳವಣಿಗೆ ಕಾಣಲಿದೆ. ಇನ್ನೂ ಮುಂಬರುವ ಎಸ್‌ಎಸ್‌ಎಲ್ ಸಿ ಪರೀಕ್ಷೆಯ ಫಲಿತಾಂಶವನ್ನು ಸಹ ನಾವು ಕಾತುರದಿಂದ ಕಾಯುತ್ತಿದ್ದು,ಅದರಲ್ಲಿ ಸಹ ಸುಧಾರಣೆ ಕಾಣುವ ಭರವಸೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇತ್ತೀಚೆಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರೊಂದಿಗೆ ಭಾಗದ ಶೈಕ್ಷಣಿಕ ವಿಷಯಗಳ ಕುರಿತಂತೆ ಮಹತ್ವದ ಸಭೆ ನಡೆಸಲಾಗಿದ್ದು, ಮುಂಬರುವ ದಿನಗಳಲ್ಲಿ ಯಾವ ರೀತಿ ಸಾಕ್ಷರತಾ ಪ್ರಮಾಣವನ್ನು ಬಲಪಡಿಸಬೇಕು ಹಾಗೂ ಏನೆಲ್ಲಾ ದಿಟ್ಟ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದರ ಕುರಿತು ಸಮಗ್ರ ಚರ್ಚೆ ನಡೆಸಲಾಗಿದೆ. ಇಡೀ ರಾಜ್ಯದ ಸಾಕ್ಷರತಾ ಪ್ರಮಾಣ 74.74 ಇದ್ದು, ನಮ್ಮದು 65.4 ಇದೆ. ಕೇವಲ 9 ರಿಂದ 10 ಪ್ರತಿಶತವಷ್ಟೆ ಕಡಿಮೆಯಿದೆ.ಹೀಗಾಗಿ ರಾಜ್ಯ ಮಟ್ಟದಲ್ಲಿ ಹಾಗೂ ರಾಷ್ಟ ಮಟ್ಟದಲ್ಲಿ ಯಾವ ರೀತಿ ಸಾಕ್ಷರತಾ ಪ್ರಮಾಣ ಹೆಚ್ಚಿಸಬೇಕು ಎಂಬುದರ ಕುರಿತು ಶಿಕ್ಷಣ ಸಚಿವರೊಂದಿಗೆ ಚರ್ಚೆ ನಡೆಸಲಾಗಿದೆ ಎಂದರು.

ಇನ್ನೂ ಅಸ್ಸಾ ಚುನಾವಣಾ ಪ್ರಚಾರ ಸಭೆಯಲ್ಲಿ ಆರೆಸ್ಸೆಸ್ ಬಿಜೆಪಿ ವಿಷಕಾರಿ ಎಂಬ ಹೇಳಿಕೆ ನೀಡಿದ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು,ಕಳೆದ 50 ವರ್ಷಗಳಿಂದ ರಾಜಕೀಯ ಜೀವನದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇದ್ದಾರೆ.ಯಾವತ್ತೂ ಪ್ರಚೋದನಕಾರಿ ಹೇಳಿಕೆ ನೀಡಿಲ್ಲ ಎಂದು ಡಾ.ಅಜಯ್ ಧರ್ಮಸಿಂಗ್ ಹೇಳಿದರು.

ಫೈರೋಜ್ ಕುಟುಂಬಕ್ಕೆ ವೈಶಾಲಿ ಸಾಂತ್ವನ

ಧಾರವಾಡ: ಯೂತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಫೈರೋಜ್ ಖಾನ್ ಪಠಾಣ ನಿವಾಸಕ್ಕೆ ತೆರಳಿದ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯೆ ಮತ್ತು ಶಾಸಕ ವಿನಯ ಕುಲಕರ್ಣಿ ಪುತ್ರಿ ವೈಶಾಲಿ ಕುಲಕರ್ಣಿ, ಫೈರೋಜ್ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಫೈರೋಜ್ ಅಗಲಿಕೆಗೆ ಸಂತಾಪ ಸೂಚಿಸಿದ ವೈಶಾಲಿ ಕುಲಕರ್ಣಿ, ಕುಟಂಬಸ್ಥರ ಜೊತೆಗೆ ನಾವೆಲ್ಲರೂ ಇದ್ದೇವೆ ಎಂದು ಅಭಯ ನೀಡಿದರು. ಅಲ್ಲದೇ, ಪಕ್ಷದಿಂದ ನಿಮಗೆ ಸಿಗಬೇಕಾದ ಸಹಾಯ, ಸಹಕಾರ ಬೆಂಬಲ ನೀಡುವುದಾಗಿಯೂ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಮತ್ತು ಫೈರೋಜ್ ಕುಟುಂಬದ ಸದಸ್ಯರು ಇದ್ದರು.



ಬಸವಣ್ಣ ಜಗತ್ತಿನ ಮೊದಲ ಪ್ರಜಾಪ್ರಭುತ್ವವಾದಿ: ಅನುಪಮಾ

ಹರ್ಡೇಕರ ಮಂಜಪ್ಪ, ಡಾ ಫ.ಗು ಹಳಕಟ್ಟಿ, ಕುಮಾರ ಕಕ್ಕಯ್ಯ ಪೋಳ ವೇದಿಕೆ ವಿಜಯಪುರ: ಶರಣ ಸಂಕುಲ ಅಂದರೆ ಜಾತಿ ವರ್ಣ ರಹಿತವಾಗಿ ಎಲ್ಲರನ್ನು ಒಳಗೊಳ್ಳುವಿಕೆಯಾಗಿದೆ ನುಡಿಯಲ್ಲಿ ಒಂದಾಗಿರುವ ಬಸವಾದಿ ಶರಣರ ತತ್ವಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕಾಗಿದೆ. ಜಗತ್ತಿನಲ್ಲಿ ಕಾಯಕದ ಹೆಸರಲ್ಲಿ ಇರುವ ಏಕೈಕ ಧರ್ಮವೆಂದರೆ ಶರಣ ಧರ್ಮ, ಬಸವಣ್ಣ ಜಗತ್ತಿನ ಮೊದಲ ಪ್ರಜಾಪ್ರಭುತ್ವವಾದಿಯಾಗಿದ್ದಾರೆ. ಸಮಾಜಕ್ಕೆ ಇಂದು ಬಸವಾದಿ ಶರಣರ ಸಮಾಜಕ್ಕೆ ಅನಿವಾರ್ಯವಾಗಿದೆ ಹಿರಿಯ ಸಾಹಿತಿ ಡಾ.ಎಚ್.ಎಸ್. ಅನುಪಮಾ ಅವರು ಹೇಳಿದರು.

ವಿಜಯಪುರ ನಗರದ ದರ್ಬಾರ ಪ್ರೌಢ ಶಾಲೆ ಮೈದಾನದಲ್ಲಿ ಮೇ ಸಾಹಿತ್ಯ ಮೇಳ ವಿಜಯಪುರ ಬಳಗ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಏಪ್ರಿಲ್ 10ರಿಂದ 14ರ ವರೆಗೆ 5ದಿನಗಳ ಕಾಲ ಹಮ್ಮಿಕೊಂಡಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದಲ್ಲಿ ಮೂರನೇ ದಿನದ ಮೊದಲ ಗೋಷ್ಠಿ ಬಸವಾನುಯಾಯಿಗಳ ಸಮಾವೇಶದಲ್ಲಿ ಮುಖ್ಯ ಉಪನ್ಯಾಸ ನೀಡಿ ಅವರು ಮಾತನಾಡಿದರು. ವಚನ ಪಿತಾಮಹ ಫ.ಗು.ಹಳಕಟ್ಟಿ ತಮ್ಮ ಮನೆ ಮಾರಿ ಬಸವಾದಿ ಶರಣರ ವಚನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಣೆ ಮಾಡಿ ಶರಣ ಸಾಹಿತ್ಯವನ್ನು ನಮಗೆ ಕೊಟ್ಟಿದ್ದಾರೆ. ಅವರ ತ್ಯಾಗ ನಮಗೆಲ್ಲ ಸ್ಫೂರ್ತಿಯಾಗಿದೆ ಎಂದರು.

ಆಧುನಿಕ ಸಾಹಿತ್ಯದಲ್ಲಿ ಕುಮಾರ ಕಕ್ಕಯ್ಯ ಪೋಳ ಕಾವ್ಯ ನಾಮದಲ್ಲಿ ಸಾಹಿತ್ಯ ರಚನೆ ಮಾಡಿ ಸಮಾಜದ ಅಂಕುಡೊಂಕು ತಿದ್ದಿದ ಬಿ.ಎಸ್.ಪೋಳ ನಮಗೆ ಮಾದರಿಯಾಗಿದ್ದಾರೆ ಶರಣರ ಮಾರ್ಗದಲ್ಲಿ ನಾವು ಸಾಗಬೇಕಾದರೆ ಮೊದಲು ಪ್ರತಿಯೊಬ್ಬರೂ ತಮ್ಮ ಜಾತಿ ವರ್ಗವನ್ನು ಮರೆಯಬೇಕು ಎಂದು ಹೇಳಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಹಿರಿಯ ಸಾಹಿತಿ ಜೆ.ಎಸ್ .ಪಾಟೀಲ ಮಾತನಾಡಿ, ಕರ್ನಾಟಕದಲ್ಲಿ ಬ್ರಾಹ್ಮಣೇತರ ಚಳುವಳಿ ನೇತೃತ್ವ ವಹಿಸಿಕೊಂಡವರು ಡಾ.ಫ.ಗು ಹಳಕಟ್ಟಿಯವರು ಅದನ್ನು ನಮ್ಮ ಇತಿಹಾಸಕಾರರು ಮರೆತ್ತಿದ್ದಾರೆ ಎಂದು ಹೇಳಿದರು.

ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ವಿ.ಸಿ.ನಾಗಠಾಣ, ಭಾರತೀಯ ಬೌದ್ಧ ಮಹಾಸಭಾದ ಕಾರ್ಯದರ್ಶಿ ಬಸವರಾಜ ಹೊಳ್ಕರ್, ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಬಸನಗೌಡ ಹರನಾಳ, ರಾಷ್ಟ್ರೀಯ ಬಸವ ಸೈನ್ಯ ಅಧ್ಯಕ್ಷ ಶಂಕರಗೌಡ ಬಿರಾದಾರ, ಚಂದ್ರಶೇಖರ ಗಂಟೆಪ್ಪಗೋಳ ಮಾತನಾಡಿದರು.

ವೇದಿಕೆಯಲ್ಲಿ ನಾಗರಾಜ ಲಂಬು, ಜಗದೇವ ಸೂರ್ಯವಂಶಿ, ಅಭಿಷೇಕ ಚಕ್ರವರ್ತಿ, ದಾನೇಶ ಅವಟಿ, ಜಂಬುನಾಥ ಕಂಚ್ಯಾಣಿ, ಮಿಲನಕುಮಾರ ನಾಮದಾರ, ಪ್ರಭುಗೌಡ ಪಾಟೀಲ ಇದ್ದರು. ಕಾರ್ಯಕ್ರಮದಲ್ಲಿ ಬಸವರಾಜ ಸೂಳಿಬಾವಿ, ಅನಿಲ ಹೊಸಮನಿ, ಚೆನ್ನು ಕಟ್ಟಿಮನಿ, ವೈ.ಎಸ್ ಗುಣಕಿ, ಸಂಘರ್ಷ ಹೊಸಮನಿ, ಸುರೇಶ ಬಿಜಾಪುರ, ಲಾಯಪ್ಪ ಇಂಗಳೆ, ಕಲ್ಲಪ್ಪ ಶಿವಶರಣ, ಶಿವು ಕಟ್ಟಿಮನಿ, ಬೋಗೇಶ ಸೋಲಾಪುರ, ಅಪ್ಪಸಾಹೇಬ ಯರನಾಳ ಇದ್ದರು.

ಪೊಲೀಸರ ವಶಕ್ಕೆ ಮುಂಡಗೋಡ ಯುವಕ

ಮುಂಡಗೋಡ: ಹಣ ಡಬ್ಲಿಂಗ್ ಆಸೆಗೆ ತಾಲೂಕಿನ ಯುವಕನೊಬ್ಬ ಪಶ್ಚಿಮ ಬಂಗಾಳ ಪೊಲೀಸರ ಅತಿಥಿಯಾದ ಘಟನೆ ಬೆಳಕಿಗೆ ಬಂದಿದೆ.

ಹಣ ಡಬ್ಲಿಂಗ್ ಪ್ರಕರಣ


ತಾಲೂಕಿನ ಗ್ರಾಮೀಣ ಭಾಗದ ಮುಸ್ಲಿಂ ಸಮುದಾಯದ ಯುವಕನೊಬ್ಬ ಪಬ್ಜಿ ಗೇಮ್ ನಲ್ಲಿ ಪಶ್ಚಿಮ ಬಂಗಾಳದ ವ್ಯಕ್ತಿಯ ಜೊತೆ ಪರಿಚಯವಾಗಿದೆ. ಇದು ಸ್ನೇಹಕ್ಕೆ ತಿರುಗಿದೆ. ಹೀಗೆಯೇ ಸ್ನೇಹ ಬೆಳೆಸಿಕೊಂಡ ಪಶ್ಚಿಮ ಬಂಗಾಳದ ವ್ಯಕ್ತಿ ತಾಲೂಕಿನ ಯುವಕನಿಗೆ ನಂಬಿಕೆ ಬರುವ ಹಾಗೆ ನಡೆದುಕೊಂಡಿದ್ದಾನೆ ಎಂದು ತಿಳಿದುಬಂದಿದೆ. ನಮ್ಮ ರಾಜ್ಯದಲ್ಲಿ ಡಬ್ಲಿಂಗ್ ಹಣ ಮಾಡುವ ಒಂದು ವ್ಯವಹಾರ ಇದೆ. ಒಂದು ಲಕ್ಷ ರೂ. ಹಣಕ್ಕೆ ಮೂರು ಲಕ್ಷ ನೀಡುತ್ತಾರೆ. ಇಲ್ಲಿನ ಯುವಕನಿಗೆ ಬಂಗಾಳದ ವ್ಯಕ್ತಿ ಆಸೆ ಹುಟ್ಟಿಸಿದ್ದಾನೆ. ಇದನ್ನು ನಂಬಿದ ಯುವಕ ಡಬ್ಲಿಂಗ್ ಆಸೆಗೆ ಸಂಘ, ಕೈಗಡ ಸಾಲ ಪಡೆದು ಮನೆಯಲ್ಲಿ ಮುರುಡೇಶ್ವರಕ್ಕೆ ಹೋಗಿ ಬರುವುದಾಗಿ ಹೇಳಿ ಪಶ್ಚಿಮ ಬಂಗಾಳಕ್ಕೆ ಹೋಗಿದ್ದಾನೆ. ಬಂಗಾಳದಲ್ಲಿ ಅಪರಿಚಿತ ವ್ಯಕ್ತಿಯನ್ನು ಭೇಟಿಯಾಗಿದ್ದಾನೆ. ನಂತರ ಆ ವ್ಯಕ್ತಿ ಒಂದು ಲಕ್ಷಕ್ಕೆ ಮೂರು ಲಕ್ಷ ಹಣ ನೀಡಿ ತೆರಳಿದ್ದಾನೆ. ಹಣ ಪಡೆದುಕೊಂಡ ಯುವಕ ಊರಿಗೆ ಬರಬೇಕೆಂದು ತಯಾರಿಯಲ್ಲಿದ್ದ ಆದರೆ, ಅಲ್ಲಿನ ಪೊಲೀಸರ ಕೈಯಲ್ಲಿ ಸಿಕ್ಕಿ ಬಿದ್ದಿದ್ದಾನೆ. ಇದೀಗ ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆ ಚುನಾವಣೆ ಇರುವುದ್ದರಿಂದ ನೀತಿ ಸಂಹಿತೆ ಜಾರಿಯಲ್ಲಿದೆ. ಅಲ್ಲಿನ ಪೊಲೀಸರು ತಪಾಸಣೆ ನಡೆಸಿದ ವೇಳೆ ಯುವಕನ ಬಳಿ ಮೂರು ಲಕ್ಷ ಹಣ ರೂ. ಇರುವುದನ್ನು ಕಂಡು ಆತನನ್ನು ಪ್ರಶ್ನಿಸಿದ್ದಾರೆ ಎನ್ನಲಾಗಿದೆ. ನಂತರ ಅಲ್ಲಿನ ಪೊಲೀಸರಿಗೆ ನೋಟಿನ ಬಗ್ಗೆ ಅನುಮಾನ ವ್ಯಕ್ತವಾಗಿ ಪರಿಶೀಲಿಸಿದಾಗ ಅದು ಖೋಟಾ ನೋಟಗಳು ಎಂದು ತಿಳಿದು ನಕಲಿ ನೋಟ ಹಾಗೂ ಯುವಕನನ್ನು ಪೊಲೀಸರ ವಶಕ್ಕೆ ಪಡೆದಿದ್ದಾರೆ ಎಂದು ಇಲ್ಲಿನ ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ. ಡಬ್ಲಿಂಗ್ ಹಣದ ಆಸೆಗೆ ಸಾಲ ಮಾಡಿ ಹಣ ತೆಗೆದುಕೊಂಡ ಹೋದ ಯುವಕ ಸದ್ಯ ಬಂಗಾಳದ ಪೊಲೀಸರ ಅತಿಥಿಯಾದರೆ ಇತ್ತ ಯುವಕನ ಕುಟುಂಬಸ್ಥರಿಗೆ ದಿಕ್ಕೆ ದೋಚದಂತಾಗಿದೆ.

ಆಶಾ ಭೋಸ್ಲೆ ಧ್ವನಿಯಲ್ಲಿ ಅಮರವಾದ ಆತ್ಮ

ಭಾರತೀಯ ಸಂಗೀತ ಲೋಕದ ದಿಗ್ಗಜ ಗಾಯಕಿ ಆಶಾ ಭೋಸ್ಲೆ ಅವರು 92ನೇ ವಯಸ್ಸಿನಲ್ಲಿ ಮುಂಬೈನಲ್ಲಿ ನಿಧನರಾದರು. ಎಂಟು ದಶಕಗಳಿಗಿಂತಲೂ ಹೆಚ್ಚು ಕಾಲ ತಮ್ಮ ಧ್ವನಿಯಿಂದ ಅನೇಕ ಪೀಳಿಗೆಗಳನ್ನು ರಂಜಿಸಿದ ಅವರು, ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಿಂದ ಪಾಪ್ ಸಂಗೀತದವರೆಗೆ ಅಪಾರ ವೈವಿಧ್ಯತೆಯನ್ನು ತೋರಿಸಿದರು. ಸಹೋದರಿ ಲತಾ ಮಂಗೇಶ್ಕರ್ ಅವರೊಂದಿಗೆ ಭಾರತೀಯ ಚಿತ್ರರಂಗದ ಸುವರ್ಣಯುಗವನ್ನು ನಿರ್ಮಿಸಿದ ಆಶಾ, ತಮ್ಮದೇ ಆದ ಶೈಲಿ ಮತ್ತು ಚೈತನ್ಯದಿಂದ ಪ್ರತ್ಯೇಕ ಸ್ಥಾನ ಗಳಿಸಿದರು. ಪಿಯಾ ತು ಅಬ್ ತೋ ಆಜಾ, ದಮ್ ಮಾರೋ ದಮ್ ಮೊದಲಾದ ಹಾಡುಗಳ ಮೂಲಕ ಜನಮನ ಗೆದ್ದ ಅವರು, 12,000ಕ್ಕೂ ಹೆಚ್ಚು ಹಾಡುಗಳನ್ನು ಹಲವು ಭಾಷೆಗಳಲ್ಲಿ ಹಾಡಿದ್ದಾರೆ. ಅನೇಕ ರಾಷ್ಟ್ರೀಯ ಪ್ರಶಸ್ತಿಗಳು, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಮತ್ತು ಪದ್ಮ ವಿಭೂಷಣ ಪುರಸ್ಕಾರಗಳು ಅವರ ಸಾಧನೆಗೆ ಸಾಕ್ಷಿ. ಜೀವನದ ಸಂಕಷ್ಟಗಳನ್ನು ಜಯಿಸಿ ಸಂಗೀತವನ್ನೇ ಉಸಿರೆಂದಿದ್ದ ಆಶಾ ಭೋಸ್ಲೆ, ಸದಾ ನೆನಪಿನಲ್ಲಿ ಉಳಿಯುವ ಕಲಾವಿದೆ.



2008ರ ಮೇ 5ರಂದು ದಿಲ್ಲಿ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಗಾಯಕಿ ಆಶಾ ಭೋಸ್ಲೆಗೆ ಪದ್ಮವಿಭೂಷಣ ಪ್ರಶಸ್ತಿಯನ್ನು ಪ್ರದಾನ ಮಾಡಿದ ಕ್ಷಣ.



2024 ಜೂ.8ರಂದು ಆಶಾ ಬೋಸ್ಲೆ ಅವರ ಪುಸ್ತಕ ಬಿಡುಗಡೆ ನೆರವೇರಿಸಿದ ಆರ್‌ಎಸ್‌ಎಸ್ ಸರಸಂಘಚಾಲಕ್ ಮೋಹನ್ ಭಾಗ್ವತ್.

ಜೀವನವೇ ಒಂದು ಮಹಾಕಾವ್ಯ

ಆಶಾ ಅವರ ಜೀವನವೇ ಒಂದು ಮಹಾಕಾವ್ಯ. 16 ವಯಸ್ಸಿನಲ್ಲಿ ಗಣಪತ್‌ರಾವ್ ಭೋಸ್ಲೆ ಅವರನ್ನು ಕುಟುಂಬದ ವಿರೋಧದ ನಡುವೆ ಮದುವೆಯಾದರು. ಆದರೆ ಈ ಮದುವೆ ವಿಫಲವಾಯಿತು. ಮೂವರು ಮಕ್ಕಳೊಂದಿಗೆ ಕುಟುಂಬಕ್ಕೆ ಮರಳಿದರು. ನಂತರ ಆರ್.ಡಿ. ಬರ್ಮನ್ ಅವರನ್ನು ಮದುವೆಯಾದರು (1980). ಆದರೆ ಆ ಸಂಬಂಧವೂ ಸುಖವನ್ನು ನೀಡಲಿಲ್ಲ. ಮಗ ಹೇಮಂತ್ 2015ರಲ್ಲಿ ಕ್ಯಾನ್ಸರ್‌ನಿಂದ ನಿಧನರಾದರು. ಮಗಳು ವರ್ಷಾ (ಪತ್ರಕರ್ತೆ) 2012ರಲ್ಲಿ ಇನ್ನಿಲ್ಲವಾದರು. ಈ ನಷ್ಟಗಳು ಹೃದಯವನ್ನು ಕತ್ತರಿಸಿದವು. ಆದರೆ ಆಶಾ ಅವರು ಮುಂದುವರಿದರು. 2023ರಲ್ಲಿ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಅವರು ಹೇಳಿದ್ದರು: ''ನಾನು ಕಷ್ಟಗಳನ್ನು ಎದುರಿಸಿದ್ದೇನೆ, ಅನೇಕ ಬಾರಿ ನಾನು ಬದುಕಲಾರೆ ಎಂದು ಭಾವಿಸಿದ್ದೇನೆ. ಆದರೆ ಇಂದು ಹಿಂತಿರುಗಿ ನೋಡಿದಾಗ ಅದೆಲ್ಲಾ ಮಜೇದಾರ್ ಎನಿಸುತ್ತದೆ.''ಅವರು ಎಂದಿಗೂ ಸ್ಥಿರರಾಗಲಿಲ್ಲ. ಬ್ಲ್ಯಾಕ್ ಅಂಡ್ ವೈಟ್ ಸಿನಿಮಾದಿಂದ ಗ್ಲೋಬಲ್ ಸ್ಟೇಜ್‌ಗಳಿಗೆ, ವಿನೈಲ್‌ನಿಂದ ಸ್ಟ್ರೀಮಿಂಗ್ ಯುಗಕ್ಕೆ ಅವರು ನಿರಂತರವಾಗಿ ತಮ್ಮನ್ನು ಪುನರುಜ್ಜೀವನಗೊಳಿಸುತ್ತಾ ಬಂದರು. 1990ರಲ್ಲಿ ಬಾಯ್ ಜಾರ್ಜ್‌ನೊಂದಿಗೆ 'ಬೋ ಡೌನ್ ಮಿಸ್ಟರ್', ಕೋಡ್ ರೆಡ್ ಬಾಯ್ ಬ್ಯಾಂಡ್‌ನೊಂದಿಗೆ ಸಹಕಾರ. ಉಸ್ತಾದ್ ಅಲಿ ಅಕ್ಬರ್ ಖಾನ್ ಅವರೊಂದಿಗೆ 'ಲೆಗಸಿ' ಇದಕ್ಕೆ ಗ್ರ್ಯಾಮಿ ನಾಮನಿರ್ದೇಶನ. 2006ರಲ್ಲಿ ಕ್ರೋನೋಸ್ ಕ್ವಾರ್ಟೆಟ್‌ನೊಂದಿಗೆ ''ಯುವ್ ಸ್ಟೋಲನ್ ಮೈ ಹಾರ್ಟ್'' ಎರಡನೇ ಗ್ರ್ಯಾಮಿ ನಾಮನಿರ್ದೇಶನ. ಇಂಡಿಪಾಪ್‌ನಲ್ಲಿ ''ಜಾನಮ್ ಸಮ್ಝಾ ಕರೋ'' ('ರಾತ್ ಶಬ್ನಮಿ'), ಅದ್ನಾನ್ ಸಾಮಿ ಜೊತೆ 'ಕಭಿ ತೋ ನಜರ್ ಮಿಲಾವ್', ಬ್ರೆಟ್ ಲೀ ಜೊತೆ 'ಯು ಆರ್ ದಿ ವನ್ ಫಾರ್ ಮಿ' ಅವರು ಎಲ್ಲಾ ಗಡಿಗಳನ್ನು ದಾಟಿದರು.



ಏಪ್ರಿಲ್ 12, 2026. ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ ಆಶಾ ಭೋಸ್ಲೆ ಅವರ ಧ್ವನಿ ನಿಶ್ಶಬ್ದವಾಯಿತು. 92 ವರ್ಷಗಳ ಆಯುಷ್ಯದಲ್ಲಿ, ಸುಮಾರು ಎಂಬತ್ತು ವರ್ಷಗಳ ಕಾಲ ಅವರು ಭಾರತದ ಹೃದಯದಲ್ಲಿ ಉಸಿರಾಡುತ್ತಿದ್ದರು. ಸಂಗೀತವೇ ಅವರ ಉಸಿರು ಎಂದು ಅವರು ಹೇಳುತ್ತಿದ್ದರು ''ಹಮಾರಿ ಸಾಂಸ್ ನಹೀಂ ಹೋತಿ ತೋ ಆದ್ಮಿ ಮರ್ ಜಾತಾ ಹೈ, ಮೇರೇ ಲಿಯೇ ಮ್ಯೂಸಿಕ್ ಮೇರಿ ಸಾಂಸ್ ಹೈ.'' ಆ ಉಸಿರು ಇಂದು ನಿಂತಿದೆ, ಆದರೆ ಅದು ಬಿಟ್ಟುಹೋದ ಪ್ರತಿ ಸ್ವರವೂ ಇನ್ನೂ ಲಕ್ಷಾಂತರ ಹೃದಯಗಳಲ್ಲಿ, ಪ್ರತಿ ರೇಡಿಯೋಲ್ಲಿ, ಪ್ರತಿ ಸಿನಿಮಾ ಹಾಲ್‌ನಲ್ಲಿ, ಪ್ರತಿ ಮನೆಯಲ್ಲಿ ಮೊಳಗುತ್ತಿದೆ. ಅವರ ಧ್ವನಿ ಕೇವಲ ಹಾಡುಗಳಲ್ಲಿರಲಿಲ್ಲ; ಅದು ಭಾವನೆಗಳ ಸಾಗರವಾಗಿತ್ತು, ಜೀವನದ ಎಲ್ಲಾ ಬಣ್ಣಗಳನ್ನು ತುಂಬುವ ಜೀವಂತ ಮಾಧ್ಯಮವಾಗಿತ್ತು.

ಸಂಗೀತ ಜಗತ್ತಿನಲ್ಲಿ ಆಶಾ ಭೋಸ್ಲೆ ಅವರು ಒಂದು ಅಪರೂಪದ ಅಧ್ಯಾಯ. ಅವರ ಧ್ವನಿ ಒಂದು ಮಾತ್ರವಲ್ಲ, ಅದು ಸಸ್ (sass) ಮತ್ತು ಸೋಲ್ (soul) ಎರಡನ್ನೂ ಒಟ್ಟಿಗೆ ಹೊಂದಿದ್ದು, ಪ್ಲೇಫುಲ್, ಪ್ಲೇಂಟಿವ್ ಅಥವಾ ಪಾಪ್ ಯಾವುದೇ ಮೂಡ್‌ಗೂ ತನ್ನದೇ ಆದ ಬಣ್ಣವನ್ನು ನೀಡುತ್ತಿತ್ತು. ''ಆಜಾ ಆಜಾ'' ಎಂದು ಕರೆಯುತ್ತಾ ನರ್ತಿಸುವ ಉತ್ಸಾಹ, ''ಪಿಯಾ ತು ಅಬ್ ತೋ ಆಜಾ''ನಲ್ಲಿ ಕಾತರಿಸುವ ಪ್ರಣಯ, ''ದಮ್ ಮಾರೋ ದಮ್''ನಲ್ಲಿ ದಣಿಯದ ಉತ್ಸಾಹ, ''ಜುಸ್ತುಜು ಜಿಸ್ಕಿ ಹೈ'' ಅಥವಾ ''ಮೇರಾ ಕುಚ್ ಸಾಮಾನ್''ನಲ್ಲಿ ಹೃದಯವನ್ನು ಕರಗಿಸುವ ದುಃಖ ಎಲ್ಲವನ್ನೂ ಅವರ ಧ್ವನಿ ಸಮಾನ ಫೆಲಿಸಿಟಿಯಿಂದ ಹಾಡುತ್ತಿತ್ತು. ಅವರು ಕೇವಲ ಗಾಯಕಿಯಾಗಿರಲಿಲ್ಲ; ಅವರು ಭಾವನೆಗಳನ್ನು ಹಾಡುವ ಮಾಧ್ಯಮವಾಗಿದ್ದರು. ಪ್ರತಿ ಹಾಡಿನಲ್ಲಿ ಅವರ ಸ್ವರ ನಮ್ಮ ಪ್ರೀತಿ, ನಮ್ಮ ದುಃಖ, ನಮ್ಮ ನಗು, ನಮ್ಮ ಕನಸುಗಳನ್ನು ತುಂಬುತ್ತಿತ್ತು.




1933ರ ಸೆಪ್ಟೆಂಬರ್ 8ರಂದು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ದಿನಾನಾಥ್ ಮಂಗೇಶ್ಕರ್ ಅವರ ಮಗಳಾಗಿ ಜನಿಸಿದ ಆಶಾ ಮಂಗೇಶ್ಕರ್, ಸಂಗೀತದ ಮನೆಯಲ್ಲಿ ಬೆಳೆದರು. ತಂದೆ ದಿನಾನಾಥ್ ಒಬ್ಬ ಪ್ರಸಿದ್ಧ ಮರಾಠಿ ರಂಗಭೂಮಿ ಕಲಾವಿದ ಮತ್ತು ಶಾಸ್ತ್ರೀಯ ಗಾಯಕರಾಗಿದ್ದರು. ಅವರು ತಮ್ಮ ಮಕ್ಕಳಿಗೆಲ್ಲಾ ಸಂಗೀತದ ತರಬೇತಿ ನೀಡಿದರು. ಆದರೆ, ಆಶಾ ಅವರಿಗೆ ಒಂಬತ್ತು ವರ್ಷದ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ಕುಟುಂಬ ಆರ್ಥಿಕ ಕಷ್ಟದಲ್ಲಿತ್ತು. ಮುಂಬೈಗೆ(ಆಗಿನ ಬಾಂಬೆ) ಸ್ಥಳಾಂತರಗೊಂಡ ಅವರು, ತಂಗಿ ಲತಾ ಮಂಗೇಶ್ಕರ್ ಜೊತೆಗೆ ಸಂಗೀತದ ಮೂಲಕ ಕುಟುಂಬವನ್ನು ನಿಭಾಯಿಸಲು ಆರಂಭಿಸಿದರು.



ಇಂದು ಪ್ರತಿಯೊಬ್ಬ ಭಾರತೀಯನಿಗೂ, ವಿಶೇಷವಾಗಿ ನನ್ನಂತಹ ಪ್ರತಿಯೊಬ್ಬ ಸಂಗೀತ ಪ್ರೇಮಿಗೂ ದುಃಖದ ದಿನವಾಗಿದೆ. ಏಕೆಂದರೆ ನಮ್ಮ ಪ್ರೀತಿಯ ಆಶಾ ಭೋಸ್ಲೆ ಇನ್ನುಮುಂದೆ ನಮ್ಮ ನಡುವೆ ಇಲ್ಲ. ಸಂಗೀತದ ಪ್ರತಿಯೊಂದು ಪ್ರಕಾರಕ್ಕೂ ಹೊಂದಿಕೊಳ್ಳುವ ಅವರ ಅಸಾಧಾರಣ ಸಾಮರ್ಥ್ಯವು ಪ್ರತಿಯೊಬ್ಬರ ಹೃದಯವನ್ನೂ ಗೆದ್ದಿದೆ. ತಮ್ಮ ಧ್ವನಿಯಿಂದ ಲಕ್ಷಾಂತರ ಹೃದಯಗಳನ್ನು ಸ್ಪರ್ಶಿಸಿದ ಆಶಾ ಜೀ ಅವರು ಹಿಂದಿ, ಮರಾಠಿ, ಬಂಗಾಳಿ, ತಮಿಳು, ಗುಜರಾತಿ ಮತ್ತು ಇತರ ಅನೇಕ ಭಾಷೆಗಳಲ್ಲಿ ಮಾತ್ರವಲ್ಲದೆ ಜಾನಪದ ಗೀತೆಗಳಲ್ಲಿಯೂ ಅಳಿಸಲಾಗದ ಛಾಪು ಮೂಡಿಸಿದ್ದಾರೆ.

■ **ಅಮಿತ್ ಶಾ, ಕೇಂದ್ರ ಗೃಹಸಚಿವ**



ಪ್ರಸಿದ್ಧ ಗಾಯಕಿ ಆಶಾ ಬೋಸ್ಲೆ ಅವರ ಸಾವಿನಿಂದ ಬಹಳ ದುಃಖಿತನಾಗಿದ್ದೇನೆ. ಅವರ ಧ್ವನಿಯ ಮೂಲಕ, ಅವರ ಕಲೆ ನಮ್ಮ ನಡುವೆ ಶಾಶ್ವತವಾಗಿ ಉಳಿಯುತ್ತದೆ. ಈ ದುಃಖದ ಸಮಯದಲ್ಲಿ, ಅವರ ಅಗಲಿದ ಪ್ರೀತಿಪಾತ್ರರು ಮತ್ತು ಅಭಿಮಾನಿಗಳಿಗೆ ನನ್ನ ಆಳವಾದ ಸಂತಾಪಗಳು.

■ **ರಾಹುಲ್ ಗಾಂಧಿ, ಲೋಕಸಭೆ ವಿಪಕ್ಷ ನಾಯಕ**



ಸಂಗೀತ ಪಯಣ ಆರಂಭ

ಆಶಾ ಅವರ ಸಂಗೀತ ಪಯಣ 1943ರಲ್ಲಿ ಮರಾಠಿ ಚಿತ್ರ ''ಮಝಾ ಬಾಲ್''ನಲ್ಲಿ ''ಚಲಾ ಚಲಾ ನವ ಬಾಲಾ'' ಹಾಡುತ್ತಾ ಪ್ರಾರಂಭವಾಯಿತು. ಹಿಂದಿ ಸಿನಿಮಾ ಪದಾರ್ಪಣೆ 1948ರಲ್ಲಿ ''ಚುನರಿಯಾ'' ಚಿತ್ರದಲ್ಲಿ ''ಸಾವನ್ ಆಯಾ'' ಹಾಡಿನ ಮೂಲಕ ಆಯಿತು. ಆರಂಭದ ದಿನಗಳು ಕಷ್ಟಕರವಾಗಿದ್ದವು. ಲತಾ ಅವರಂತಹ ತಂಗಿಯ ನೆರಳಿನಲ್ಲಿ, ಎರಡನೇ ದರ್ಜೆಯ ಚಿತ್ರಗಳಿಗೆ ಹಾಡುವಂತೆ ಟೈಪ್‌ಕಾಸ್ಟ್ ಆಗಿದ್ದರು. ವ್ಯಾಂಪ್ ಮತ್ತು ಡ್ಯಾನ್ಸರ್ ಪಾತ್ರಗಳಿಗೆ ಹಾಡುವುದು ಸಾಮಾನ್ಯವಾಗಿತ್ತು. ಆದರೆ ಆಶಾ ಅವರು ತಮ್ಮದೇ ಆದ ಮಾರ್ಗವನ್ನು ಸೃಷ್ಟಿಸಿದರು. ಅವರು ಪ್ಲೇಬ್ಯಾಕ್ ಸಿಂಗರ್‌ನ ಪರಿಕಲ್ಪನೆಯನ್ನೇ ಮರುನಿರ್ಮಾಣ ಮಾಡಿದರು.

1950ರ ದಶಕದಲ್ಲಿ ಓ.ಪಿ. ನಯ್ಯರ್ ಅವರೊಂದಿಗಿನ ಸಹಕಾರವು ಅವರ ಬ್ರೇಕ್‌ತ್ರೂ ಆಯಿತು. ಆಗ ಸಂಗೀತವು ಶಾಸ್ತ್ರೀಯ ಶುದ್ಧತೆಯತ್ತ ಒಲವು ತೋರುತ್ತಿತ್ತು. ಆದರೆ ಆಶಾ ಅವರು ಬೋಲ್ಡ್, ಪೆಪ್ಪಿ, ಆಧುನಿಕ ಎಡ್ಜ್‌ನೊಂದಿಗೆ ಕ್ಲಬ್ ಸಾಂಗ್‌ಗಳು, ಕ್ಯಾಬರೇ ನಂಬರ್‌ಗಳು, ಯುವ ಪ್ರಣಯದ ಹಾಡುಗಳನ್ನು ಪರಿಚಯಿಸಿದರು. ''ಮಾಂಗ್ ಕೇ ಸಾಥ್ ತುಮ್ಹಾರಾ'' (''ನಯಾ ದೌರ್'') ಅವರಿಗೆ ಹೊಸ ಬಾಗಿಲುಗಳನ್ನು ತೆರೆಯಿತು. ''ವಕ್ತ್'', ''ಗುಮ್ರಾಹ್'' ಮುಂತಾದ ಚಿತ್ರಗಳಲ್ಲಿ ಅವರ ಧ್ವನಿ ಜನಪ್ರಿಯವಾಯಿತು.

1960 ಮತ್ತು 70ರ ದಶಕಗಳಲ್ಲಿ ಆರ್.ಡಿ. ಬರ್ಮನ್ ಅವರೊಂದಿಗಿನ ಜೋಡಿಯು ಹಿಂದಿ ಸಂಗೀತವನ್ನೇ ಬದಲಾಯಿಸಿತು. ''ಪಿಯಾ ತು ಅಬ್ ತೋ ಆಜಾ'' (''ಕಾರವಾನ್''), ''ದಮ್ ಮಾರೋ ದಮ್'' (''ಹರೇ ರಾಮ ಹರೇ ಕೃಷ್ಣ''), ''ಯೆ ಮೇರಾ ದಿಲ್'' ('ಡಾನ್') ಈ ಹಾಡುಗಳು ಅವರ ಅಸದೃಶ ಬಹುಮುಖತೆಯನ್ನು ಪ್ರದರ್ಶಿಸಿದವು. ಅವರ ಧ್ವನಿ ಸೆನ್ಸುಯಸ್, ಪ್ಲೇಫುಲ್, ರೆಬೆಲಿಯಸ್, ರೊಮಾಂಟಿಕ್, ಪ್ಲೇಂಟಿವ್ ಎಲ್ಲಾ ರೀತಿಯದ್ದಾಗಿತ್ತು. ಆದರೆ ಅವರನ್ನು ಕೇವಲ ''ವರ್ಸಟೈಲ್'' ಎಂದು ಕರೆಯುವುದು ಅನ್ಯಾಯ. ಅವರು ಘಜಲ್‌ಗಳಲ್ಲಿ ('ದಿಲ್ ಚೀಜ್ ಕ್ಯಾ ಹೈ' 'ಉಮ್ರಾವ್ ಜಾನ್'), ಶಾಸ್ತ್ರೀಯ ರಚನೆಗಳಲ್ಲಿ, ಪಾಪ್‌ನಲ್ಲಿ, ಇಂಟರ್ನ್ಯಾಷನಲ್ ಕೊಲಾಬೊರೇಷನ್‌ಗಳಲ್ಲಿ ಪ್ರಾವೀಣ್ಯತೆ ತೋರಿದರು.

ಅವರ ಕೆಲವು ಅಮರ ಹಾಡುಗಳು: ''ಅಭಿ ನಾ ಜಾವ್ ಛೋಡ್ ಕರ್'', ''ಚುರಾ ಲಿಯಾ ಹೈ ತುಮ್ನೇ'', ''ಇನ್ ಆಂಖೋಂ ಕಿ ಮಸ್ತಿ'', 'ಜೂಮ್ಕಾ ಗಿರಾ ರೇ', 'ಶರಾರಾ ಶರಾರಾ', ''ರಾಧಾ ಕೈಸಾ ನ ಜಲೇ''('ಲಗಾನ್') ಇವುಗಳು ತಲೆಮಾರುಗಳನ್ನು ದಾಟಿ ಜನಪ್ರಿಯವಾಗಿವೆ. ಸುಮಾರು 12,000 ಹಾಡುಗಳು, 20ಕ್ಕೂ ಹೆಚ್ಚು ಭಾಷೆಗಳು ಇದು ಕೇವಲ ಸಂಖ್ಯೆಯಲ್ಲ; ಇದು ಒಂದು ಅವಿರತ ಪಯಣ.



2022ರ ಏ.24ರಂದು ಮುಂಬೈನಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಗಾಯಕರಾದ ಆಶಾ ಭೋಸ್ಲೆ, ಉಷಾ ಮಂಗೇಶ್ಕರ್, ಮೀನಾ ಖಾದಿಕರ್ ಮತ್ತು ಸಂಗೀತಗಾರ ಆದಿನಾಥ್ ಮಂಗೇಶ್ಕರ್ ಅವರಿಂದ ಮೊದಲ ಲತಾ ದೀನನಾಥ್ ಮಂಗೇಶ್ಕರ್ ಪ್ರಶಸ್ತಿಯನ್ನು ಸ್ವೀಕರಿಸಿದ ಕ್ಷಣ.



ಲತಾ ಮಂಗೇಶ್ಕರ್ ಅವರು ತಮ್ಮ ಸಹೋದರಿ ಆಶಾ ಬೋಸ್ಲೆ ಅವರಿಂದ ಜೀವಮಾನ ಪ್ರಶಸ್ತಿ ಪಡೆದ ಕ್ಷಣ. ಈ ವೇಳೆ ಜತೆಯಾದ ಗಾಯಕ ಎ.ಆರ್ ರೆಹಮಾನ್

ಆಶಾ ಭೋಸ್ಲೆ ಬೆಂಗಳೂರಿಗೆ ಬಂದಾಗ...

▸ **ಮಂಜುಳಾ ಗುರುರಾಜ್**

1993ನೇ ಇಸವಿಯಲ್ಲಿ ಸಿಬಿಎಸ್ ಅಂತ ಆಡಿಯೋ ಕಂಪನಿ ಇತ್ತು, ಅವರು ಜಯಸಿಂಹ ಅಂತ, ಅವರು ಫೋನ್ ಮಾಡಿದ್ರು, ಬೆಳಿಗ್ಗೆ ಏಳು ಗಂಟೆ ಹೊತ್ತಿಗೆ ಆಶಾ ಭೋಸ್ಲೆ ಅವರು ಮದ್ರಾಸ್‌ನಿಂದ ಬೆಂಗಳೂರು ಏರ್ಪೋರ್ಟ್‌ಗೆ ಬರ್ತಾರೆ. ಇಳಯರಾಜಾ ಅವರ ಮ್ಯೂಸಿಕಲ್ ನೈಟ್ ಮುಗಿಸಿ ಬರ್ತಿದ್ದಾರೆ. ಆದರೆ ಬಾಂಬೆಗೆ ಹೋಗೋ ವಿಮಾನ ಮೂರ್ನಾಲ್ಕು ಗಂಟೆ ತಡವಾಗಬಹುದು. ನೀವು ಅವರನ್ನು ರಿಸೀವ್ ಮಾಡಿ ವಿಶ್ ಮಾಡ್ತೀರಾ ಅಂತ ಹೇಳಿದ್ದರು. ನಾನು ಖುಷಿಯಿಂದಲೇ ಒಪ್ಪಿ, ಗುರು, ನಮ್ಮ ಅಸಿಸ್ಟೆಂಟ್ ಮಾರುತಿ 800 ಕಾರಿನಲ್ಲಿ ಹೋಗಿ ಭೇಟಿ ಮಾಡಿದ್ವಿ. ಅಲ್ಲಿ ಅವರ ಕೊನೆ ತಂಗಿ ಕೂಡ ಇದ್ರು.

ನಾವಿಬ್ಬರು ಕಾರಿನಲ್ಲಿ ಅಕ್ಕಪಕ್ಕ ಕುಳಿತಿದ್ವಿ. ಮೊದಲಿಗೆ ಮಾತಾನಾಡಿರಲಿಲ್ಲ. ಆಮೇಲೆ ಸಿಂಪಲ್ ಆಗಿ, ಆತ್ಮೀಯವಾಗಿ ಮಾತಾನಾಡಿದ್ರು. ಅವರ ಕಾಲಿಗೆ ನಮಸ್ಕಾರ ಮಾಡಿದೆ, ಆಗ ನೀನು ಸಿಂಗರ್ ಅಂದ್ರು. ಬಳಿಕ ಬೆಂಗಳೂರಲ್ಲಿ ಎಲ್ಲೆಲ್ಲಿಗೆ ಕರೆದುಕೊಂಡು ಹೋಗ್ತಿಯಾ ಅಂತ ಕೇಳಿದ್ರು. ಅವರೇ ನಮ್ಮ ಸಂಗೀತ ಶಾಲೆ ಬಗ್ಗೆ ಕೇಳಿ ಅಲ್ಲಿಗೇ ಕರೆದುಕೊಂಡು ಹೋಗು, ಮಕ್ಕಳನ್ನು ಭೇಟಿ ಮಾಡಬಹುದು ಅಂದ್ರು.

ಆದರೆ, ಬೆಳಗ್ಗೆ ಏಳೂವರೆ ಗಂಟೆಗೆ ನಮ್ಮ ಸ್ಕೂಲ್ ಓಪನ್ ಆಗಿರ್ಲಿಲ್ಲ, ಅದಕ್ಕೆ ಬೆಂಗಳೂರು ರೌಂಡ್ ಹೊಡೆಸಿ, ಬಳಿಕ ರಾಮಕೃಷ್ಣ ಆಶ್ರಮದ ಪಕ್ಕ ಇದ್ದ ನಮ್ಮ ಸಾಧನಾ ಶಾಲೆಗೆ ಕರೆದುಕೊಂಡು ಹೋಗಿದ್ದೆ. ಅಲ್ಲಿಂದ ಕಬ್ಬನ್ ಪಾರ್ಕ್, ವಿಧಾನಸೌಧಕ್ಕೆ ಕರೆದುಕೊಂಡು ಹೋಗಿದ್ದೆ. ಮೆಟ್ಟಿಲುಗಳ ಮೇಲೆ ಓಡಾಡಿದ ಅವರು, ಅಲ್ಲೇ ಫೋಟೋ ತೆಗೆಸಿಕೊಂಡ್ರು. ದಾರಿಯಲ್ಲಿ ತಮ್ಮ ದೀದಿ ಬಗ್ಗೆ ಹೇಳಿದ್ರು. ಆಮೇಲೆ ನಾನು ವಾಯಿಸ್ ಕಲ್ಚರ್ ಬಗ್ಗೆ, ಏನು ಪ್ರಾಕ್ಟೀಸ್ ಮಾಡಬೇಕು? ಅಂತೆಲ್ಲಾ ಸೂಕ್ಷ್ಮತೆಗಳನ್ನು ಕೇಳಿದೆ. ಇದಕ್ಕೆಲ್ಲಾ ಅವರು ತುಂಬಾ ಚೆನ್ನಾಗಿ ಉತ್ತರ ಕೊಟ್ರು. ಆಮೇಲೆ ಸುನಿಯೋಜಿ ಅಂತ ಲೇಕಿನ್ ಫಿಲ್ಮ್‌ಗೆ ಆಗಷ್ಟೇ ಲತಾ ಅವರಿಗೆ ರಾಷ್ಟ್ರ ಪ್ರಶಸ್ತಿ ಬಂದಿತ್ತು. ಅದರ ಬಗ್ಗೆ ನಾನು ಹೆಮ್ಮೆಯಿಂದ ಹೇಳ್ಕೋತಾ ಇದ್ದೆ.

ಕಾರಿನಲ್ಲಿ ನಾನು ಹಾಡ್ತಾ ಇದ್ರೆ, ಅವರು ಜೊತೆಯಲ್ಲಿ ಸೇರ್ಕೊಂಡ್ರು. ನಿನ್ನ ವಾಯಿಸ್ ತುಂಬಾ ಸ್ವೀಟ್ ಆಗಿದೆ. ನಿನಗೆ ಒಳ್ಳೆ ಭವಿಷ್ಯವಿದೆ ಅಂತ ಹೇಳಿದ್ರು. ನೀನು ಏನು ನಿರೀಕ್ಷೆ ಇಟ್ಕೋಬೇಡ. ನಿನ್ನ ಪಾಡಿಗೆ ನೀನು ಪ್ರಾಕ್ಟೀಸ್ ಮಾಡ್ತಾ ಇರು. ಅವಕಾಶಗಳು ಬಂದೇ ಬರುತ್ತೆ ಅಂದ್ರು. ಮ್ಯೂಸಿಕ್ ಶಾಲೆ ಮಾಡಿದ್ದು ಒಳ್ಳೆಯದಾಯ್ತು ಅಂದ್ರು. ಆ ಸರಸ್ವತಿನೇ ನಿನಗೆ ದಾರಿ ತೋರಿಸ್ತಾಳೆ. ನೀನು ತುಂಬಾ ಸ್ವೀಟ್ ಪರ್ಸನ್



ಅಂತೆಲ್ಲ ಹೊಗಳಿ ನನ್ನ ಭುಜದ ಮೇಲೆ ಕೈ ಹಾಕ್ಕೊಂಡು, ನನ್ನ ಪಕ್ಕನೇ ಕೂತಿದ್ರಲ್ಲ, ಆ ಕ್ಷಣಗಳು ಮರಿಯೋಕ್ಕೆ ಆಗಲ್ಲ.

ಮೂರ್ನಾಲ್ಕು ವರ್ಷದ ಹಿಂದೆ ಬೆಂಗಳೂರಿಗೆ ಬಂದಿದ್ದಾಗ, ನಾವು ಸಿಂಗರ್‌ಗಳೆಲ್ಲ ಅವರನ್ನು ಭೇಟಿ ಮಾಡಿದ್ದೆವು. ಆಗ ನಾನು ಹಿಂದೆ ಭೇಟಿ ಮಾಡಿದ ವಿಷಯ ಹೇಳಿದೆ. ಕಬ್ಬನ್ ಪಾರ್ಕ್‌ಗೆ ಕರೆದುಕೊಂಡು ಹೋಗಿದ್ದನ್ನು ತಿಳಿಸಿದೆ. ಆಗ ಕಾಲಿಗೆ ನಮಸ್ಕಾರ ಮಾಡಿದಾಗ ಆಶೀರ್ವಾದ ಮಾಡಿದ್ರು.

ಅವರು ದೇವರು ಪ್ರತ್ಯಕ್ಷವಾಗಿ ಕಂಡಂಗೆ. ಅವರೆಂದ್ರೆ ನನಗೆ ಸ್ಫೂರ್ತಿ. ನನಗಷ್ಟೇ ಅಲ್ಲ, ಕೋಟ್ಯಂತರ ಸಿಂಗರ್ಸ್‌ಗೂ ಸ್ಫೂರ್ತಿ. ನಾನು ಹಾಡು ಹೇಳುವಾಗ ದಕ್ಷಿಣ ಭಾರತದ ಜಾನಕಿ, ಉತ್ತರ ಭಾರತದ ಆಶಾ ಭೋಸ್ಲೆ ಮತ್ತು ಪರ್ವೀನ್ ಸುಲ್ತಾನ ಅವರ ಮಾನಸಿಕ ಗುರುಗಳು. ಯಾವುದೇ ಹಾಡು ಹೇಳ್ಬೇಕು ಅಂದ್ರೆ, ಒಂದು ಕ್ಷಣ ನೆನಸಿಕೊಂಡು ಅವರು ಸಪೋಸ್ ಈ ಹಾಡು ಹಾಡಿದ್ರೆ ಹೇಗೆ ಹಾಡ್ತಿದ್ದಿರಬಹುದು ಅಂತ ಇಮ್ಯಾಜಿನ್ ಮಾಡ್ಕೊಂಡು ನಾನು ಹಾಡ್ತಾ ಇದ್ದೆ. ಈಗಲೂ ಅಷ್ಟೇ. ಆ ತರ ಮಾಡ್ದಾಗ ನನಗೆ ಏನೋ ಒಂಥರಾ ಆತ್ಮವಿಶ್ವಾಸ ಜಾಸ್ತಿ ಬಂದಂಗೆ ಆಗುತ್ತೆ. ಇವರು ನೂರಾರು ವರ್ಷ ಇರ್ಬೇಕಿತ್ತು ಅಂತ ಅನ್ಸುತ್ತೆ. ಆದರೆ ಅವರ ಧ್ವನಿ ಜಗತ್ತು ಇರೋವರ್ಗೂ ಶಾಶ್ವತವಾಗಿ ಇರುತ್ತೆ. ಹೇಗೆ ಲತಾ ಮಂಗೇಶ್ಕರ್ ಅವರ ಧ್ವನಿ ಇನ್ನೂ ಎಷ್ಟೇ ವರ್ಷಗಳಾದರೂ ಇರುತ್ತೋ, ಅದೇ ತರ ಆಶಾ ಅವರೂ ಅಷ್ಟೇ. ಅವರನ್ನು ಹತ್ತಿರದಿಂದ ಮಾತಾಡಿಸಿದ್ದೇನೆ. ಒಂದೇ ಗಂಟೆಯಲ್ಲಿ ಆತ್ಮೀಯತೆ ಬಂದಿದೆ. ಅದು ನನ್ನ ಪುಣ್ಯ. ಆ ದೇವರ, ಕಲಾದೇವಿಯ ಅದೃಷ್ಟ ನನಗೆ ಸಿಕ್ಕಿತ್ತು ಅಂತ ಅಂದುಕೊಳ್ತೇನೆ. ಅವರು ಹೋಗಿದ್ದು ವೈಯಕ್ತಿಕವಾಗಿ ದುಃಖ ಆಗಿದೆ. ಆದರೆ ಏನ್ ಮಾಡೋದು? ಇವರೆಲ್ಲ ಗಂಧರ್ವ ವಂಶ ಇರೋರು. ಒಂದು ಸ್ಫೂರ್ತಿಯಾಗಿ ಇದ್ದೇ ಇರ್ತಾರೆ. ನಮ್ಮೆಲ್ಲರಲ್ಲೂ ಒಂದು ಚೇತನವಾಗಿ ಇದ್ದೇ ಇರ್ತಾರೆ.

ಸಾಧನೆಗಳು ಅಪಾರ

ಏಳು ಫಿಲ್ಮ್‌ಫೇರ್ ಬೆಸ್ಟ್ ಫೀಮೇಲ್ ಪ್ಲೇಬ್ಯಾಕ್ ಸಿಂಗರ್ ಪ್ರಶಸ್ತಿಗಳು, ಎರಡು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ (2000), ಪದ್ಮ ವಿಭೂಷಣ (2008), ಹಲವು ಮಹಾರಾಷ್ಟ್ರ ರಾಜ್ಯ ಪ್ರಶಸ್ತಿಗಳು. ಅವರು ಗಿನ್ನಿಸ್ ವರ್ಲ್ಡ್ ರೆಕಾರ್ಡ್‌ನಲ್ಲಿ ಅತ್ಯಂತ ಹೆಚ್ಚು ಸ್ಟುಡಿಯೋ ರೆಕಾರ್ಡಿಂಗ್‌ಗಳನ್ನು ಮಾಡಿದ ಕಲಾವಿದರಾಗಿ ಗುರುತಿಸಲ್ಪಟ್ಟಿದ್ದಾರೆ.

ವೈಯಕ್ತಿಕ ಜೀವನದಲ್ಲಿ ಅವರು ಬೋಲ್ಡ್ ಆಯ್ಕೆಗಳನ್ನು ಮಾಡಿದರು. ಸಾರಿ, ಬಿಂದಿ, ನಿಯಟ್ ಬನ್ ಇದು ಅವರ ಐಕಾನಿಕ್ ಇಮೇಜ್. ಎಂಬತ್ತು ವಯಸ್ಸಿನಲ್ಲೂ 'ತೌಬಾ ತೌಬಾ' ಹಾಡಿನ ಹುಕ್ ಸ್ಟೆಪ್ ನರ್ತಿಸುತ್ತಾ ದುಬೈ ಕನ್ಸರ್ಟ್‌ನಲ್ಲಿ ಯುವಕರನ್ನು ಆಕರ್ಷಿಸಿದರು. ಸೋಶಿಯಲ್ ಮೀಡಿಯಾದಲ್ಲಿ 7.5 ಲಕ್ಷಕ್ಕೂ ಹೆಚ್ಚು ಫಾಲೋವರ್‌ಗಳೊಂದಿಗೆ ಸಕ್ರಿಯರಾಗಿದ್ದರು.

ಆಶಾ ಅವರು ಕುಟುಂಬದಲ್ಲಿ ಲತಾ, ಉಷಾ, ಮೀನಾ, ಹೃದಯನಾಥ್ ಜೊತೆ ಸಂಗೀತದ ಧಾರೆಯನ್ನು ಮುಂದುವರಿಸಿದರು. ಲತಾ ಮತ್ತು ಆಶಾ ಇಬ್ಬರೂ ಸುಮಾರು ಏಳು ದಶಕಗಳ ಕಾಲ ಹಿಂದಿ ಪ್ಲೇಬ್ಯಾಕ್ ಸಂಗೀತದ ರಾಣಿಯರಾಗಿದ್ದರು. ಆದರೆ ಆಶಾ ಅವರು ತಮ್ಮದೇ ಆದ ಸ್ಥಳವನ್ನು ಸೃಷ್ಟಿಸಿದರು ವರ್ಸಟೈಲಿಟಿ ಮತ್ತು ರೀಇನ್ವೆಂಟ್‌ನ ಮೂಲಕ.

ಅವರ ಜೀವನದಲ್ಲಿ ಸಂಗೀತವು ಕೇವಲ ವೃತ್ತಿಯಾಗಿರಲಿಲ್ಲ; ಅದು ಜೀವನದ ತತ್ವವಾಗಿತ್ತು. ಕಷ್ಟಗಳನ್ನು ಎದುರಿಸುವಾಗ ಸಂಗೀತವು ಅವರಿಗೆ ಸಾಂತ್ವನ ನೀಡಿತು. ''ಸಂಗೀತವು ಎಂದಿಗೂ ಮುಗಿಯುವುದಿಲ್ಲ, ಅದು ನದಿಯಂತೆ'' ಎಂದು ಅವರು ಹೇಳುತ್ತಿದ್ದರು. ತಮ್ಮ 90ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರು ಹೇಳಿದ್ದರು: ''ನಾನು ಸಂಗೀತಕ್ಕೆ ಬಹಳಷ್ಟು ನೀಡಿದ್ದೇನೆ. ನಾನು ವಿವಿಧ ಭಾರತೀಯ ಹಾಡುಗಳನ್ನು ಹಾಡಿದ್ದೇನೆ. ಕಷ್ಟದ ಸಮಯಗಳಿಂದ ಹೊರಬಂದಿದ್ದಕ್ಕೆ ನನಗೆ ತೃಪ್ತಿ ಇದೆ.''

ಆಶಾ ಭೋಸ್ಲೆ ಅವರು ಮೀನಾ ಕುಮಾರಿ, ಮಧುಬಾಲಾ, ವ್ಯಾಜಯಂತಿಮಾಲಾ, ಕಾಜೋಲ್, ಊರ್ಮಿಳಾ ಮಾತೋಂಡ್ಕರ್ ತಲೆಮಾರುಗಳ ಹೀರೋಯಿನ್‌ಗಳಿಗೆ ಧ್ವನಿ ನೀಡಿದರು. ಅವರ ಹಾಡುಗಳು ಬೆಳಿಗ್ಗೆ ಎಚ್ಚರಗೊಳಿಸುತ್ತಿದ್ದವು, ರಾತ್ರಿ ಪ್ರಣಯ ಮಾಡಿಸುತ್ತಿದ್ದವು, ದುಃಖವನ್ನು ಹಂಚಿಕೊಳ್ಳುತ್ತಿದ್ದವು, ನರ್ತನಕ್ಕೆ ಪ್ರೇರೇಪಿಸುತ್ತಿದ್ದವು. ಅವರು ಭಾರತೀಯ ಸಂಗೀತಕ್ಕೆ ಪ್ಯಾನ್ ಐಡೆಂಟಿಟಿ ನೀಡಿದರು.

ಇಂದು ಅವರ ಧ್ವನಿ ಮೌನವಾದರೂ, ಅದು ಭಾರತೀಯ ಸಂಗೀತದ ಆಕಾಶದಲ್ಲಿ ಶಾಶ್ವತ ನಕ್ಷತ್ರವಾಗಿ ಮಿನುಗುತ್ತದೆ. ಅವರು ನಮಗೆ ಕಲಿಸಿದ್ದು ಒಂದೇ ಸಂದೇಶ ಜೀವನವನ್ನು ಎಲ್ಲಾ ಬಣ್ಣಗಳೊಂದಿಗೆ ಸ್ವೀಕರಿಸಿ, ಅದನ್ನು ಹಾಡುತ್ತಾ ಮುಂದುವರಿಯಿರಿ.

ಆಶಾ ಭೋಸ್ಲೆ, ನೀವು ಹಾಡಿದ ಪ್ರತಿ ಸ್ವರವೂ ನಮ್ಮ ಜೀವನದ ಭಾಗವಾಗಿದೆ. ನಿಮ್ಮ ನೆನಪುಗಳಲ್ಲಿ ನಾವು ಇನ್ನೂ ಹಾಡುತ್ತಿದ್ದೇವೆ. ನಿಮ್ಮ ಧ್ವನಿ ನಮ್ಮಲ್ಲಿ ಶಾಶ್ವತವಾಗಿ ಉಳಿಯುತ್ತದೆ. ನಿಮ್ಮ ಅಮರ ಧ್ವನಿಗೆ ಶ್ರದ್ಧಾಂಜಲಿ.

ಕಿರುಸುದ್ದಿ

ಶಿವಾನುಭವ ಇಂದು

ಗದಗ: ಲಿಂಗಾಯತ ಪ್ರಗತಿಶೀಲ ಸಂಘದ ವತಿಯಿಂದ ನಗರದ ತೋಂಟದಾರ್ಯ ಮಠದ ಆವರಣದಲ್ಲಿ ಏ.13ರಂದು ಸಂಜೆ 7ಕ್ಕೆ 2,793ನೇ ಶಿವಾನುಭವ ಕಾರ್ಯಕ್ರಮ ನಡೆಯಲಿದೆ. ತೋಂಟದ ಸಿದ್ಧರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಿರಹಟ್ಟಿ ಫಕೀರೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕಿ ಪ್ರೊ. ಅನುಪಾ ಎಚ್.ಸಿ. ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಬದುಕು ಸಾಧನೆ ವಿಷಯ ಕುರಿತು ಉಪನ್ಯಾಸ ನೀಡುವರು. ಸಂಸ್ಕೃತಿ ಚಿಂತಕ ಪ್ರೊ. ಕೆ.ಎಚ್.ಬೇಲೂರ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಹುಲಿಗೆಮ್ಮ (ಕಲಾ ವಿಭಾಗ), ಸಮೃದ್ಧಿ ಶಿದ್ಲಿಂಗ (ವಿಜ್ಞಾನ ವಿಭಾಗ), ಪದ್ಮಪ್ರಿಯಾ ಶೆಟ್ಟರ, ಗೀತಾ ಹೂಗಾರ (ಕಲಾ ವಿಭಾಗ) ಅವರನ್ನು ಸನ್ಮಾನಿಸಲಾಗುವುದು. ಮೃತ್ಯುಂಜಯ ಹಿರೇಮಠ ಹಾಗೂ ಗುರುನಾಥ ಸುತಾರ ಅವರಿಂದ ವಚನ ಸಂಗೀತ ನಡೆಯಲಿದೆ. ಭಾಗ್ಯಶ್ರೀ ಪತ್ತಾರ ಧರ್ಮ ಗ್ರಂಥ ಪಠಿಸುವರು. ಕಾವೇರಿ ಬಡಿಗೇರ ವಚನ ಚಿಂತನ ನಡೆಸಿಕೊಡುವರು ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ

ಗದಗ: ತೋಂಟದ ಸಿದ್ಧಲಿಂಗ ಶ್ರೀಗಳ ವಚನ ಪಾಠಶಾಲೆ ಹಾಗೂ ಜಗದ್ಗುರು ತೋಂಟದಾರ್ಯ ಮಠದ ವತಿಯಿಂದ ಬಸವ ಜಯಂತಿ ಅಂಗವಾಗಿ ವಿದ್ಯಾರ್ಥಿಗಳಿಗೆ ವಚನ ಕಂಠಪಾಠ, ವಚನಾಧಾರಿತ ಚಿತ್ರರಚನೆ, ಪ್ರಬಂಧ ಹಾಗೂ ವಚನ ಸಮೂಹ ನೃತ್ಯ ಸ್ಪರ್ಧೆಗಳನ್ನು ತೋಂಟದಾರ್ಯ ಮಠದಲ್ಲಿ ಆಯೋಜಿಸಲಾಗಿದೆ.

ಏ.19ರಂದು ಮಧ್ಯಾಹ್ನ 3ಕ್ಕೆ ವಚನ ಕಂಠಪಾಠ ಸ್ಪರ್ಧೆ 1ರಿಂದ 4ನೇ ತರಗತಿ ಹಾಗೂ 5ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗಾಗಿ ಎರಡು ವಿಭಾಗಗಳಲ್ಲಿ ನಡೆಯಲಿದೆ. ಪ್ರಬಂಧ ಸ್ಪರ್ಧೆ ವಿಶ್ವಗುರು ಬಸವಣ್ಣ : ಕರ್ನಾಟಕದ ಸಾಂಸ್ಕೃತಿಕ ನಾಯಕ ಈ ವಿಷಯವಾಗಿ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗಾಗಿ ಜರುಗಲಿದೆ. ಏ.20ರಂದು ಮಧ್ಯಾಹ್ನ 3ಕ್ಕೆ ವಚನಾಧಾರಿತ ಚಿತ್ರರಚನಾ ಸ್ಪರ್ಧೆ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗಾಗಿ ಎರಡು ವಿಭಾಗಗಳಲ್ಲಿ ನಡೆಯಲಿದೆ. ವಚನ ಸಮೂಹ ನೃತ್ಯ ಸ್ಪರ್ಧೆ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಜರುಗಲಿದೆ. ಸ್ಪರ್ಧಾ ವಿಜೇತರಿಗೆ ನಗದು ಬಹುಮಾನ, ಸ್ಮರಣಿಕೆ ಹಾಗೂ ಪ್ರಮಾಣಪತ್ರ ನೀಡಿ ಗೌರವಿಸಲಾಗುವುದು. ಆಸಕ್ತರು ಸ್ಪರ್ಧೆಯ ನಿಯಮ ಹಾಗೂ ನೋಂದಣಿಗಾಗಿ 94499 72988, 92415 85423, 98803 83816, 94487 59484, 99002 20722 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಬೆಂಬಲ ಬೆಲೆ ನಿಗದಿ

ಗದಗ: ಪ್ರಸಕ್ತ ಸಾಲಿನ ಹಿಂಗಾರು ಹಂಗಾಮಿನ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೈತರಿಂದ ಎಫ್.ಎ.ಕ್ಯೂ ಗುಣಮಟ್ಟದ ಕುಸುಬೆ ಹುಟ್ಟುವಳಿಯನ್ನು ಖರೀದಿಸಲು ಬೆಂಬಲ ಬೆಲೆ ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಹೇಳಿದರು.



ನಗರದ ಜಿಲ್ಲಾಧಿಕಾರಿಗಳ ಸಭಾಭವನದಲ್ಲಿ ಪ್ರಸಕ್ತ ಸಾಲಿನ ಹಿಂಗಾರು ಹಂಗಾಮಿನ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಕುಸುಬೆ ಹುಟ್ಟುವಳಿ ಖರೀದಿಸುವ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯ ಪ್ರತಿ ರೈತರಿಂದ ಪ್ರತಿ ಎಕರೆಗೆ 5 ಕ್ವಿಂಟಲ್‌ನಂತೆ ಗರಿಷ್ಟ 20 ಕ್ವಿಂಟಲ್ ಎಫ್.ಎ.ಕ್ಯೂ ಗುಣಮಟ್ಟದ ಕುಸುಬೆ ಖರೀದಿಸಲು ಹಾಗೂ ಕುಸುಬೆ ಖರೀದಿ ಕೇಂದ್ರಗಳಲ್ಲಿ ರೈತರ ಹೆಸರಿನಲ್ಲಿ ವರ್ತಕರು ತರುವ ಕುಸುಬೆ ಉತ್ಪನ್ನವನ್ನು ಖರೀದಿಸದಂತೆ ಹಾಗೂ ಖರೀದಿ ಸಂಸ್ಥೆಗಳು ಯಾವುದೇ ರೀತಿಯ ದುರುಪಯೋಗವಾಗದಂತೆ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದರು. ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕಿ ಸುಧಾ ಬಂಡಿ ಮಾತನಾಡಿ, ಎಫ್.ಎ.ಕ್ಯೂ ಗುಣಮಟ್ಟದ ಕುಸುಬೇ ಉತ್ಪನ್ನವನ್ನು ಪ್ರತಿ ಕ್ವಿಂಟಾಲ್‌ಗೆ ರೂ. 6540 ರಂತೆ ನಿಗದಿಪಡಿಸಲಾಗಿದೆ. ಕೇಂದ್ರ ಸರ್ಕಾರದ ಬೆಂಬಲ ಬೆಲೆ ಮಾರ್ಗಸೂಚಿಗಳನ್ವಯ ಈ ಆದೇಶ ಹೊರಡಿಸಿದ ದಿನಾಂಕದಿಂದ ರೈತರ ನೋಂದಣಿ ಕಾಲಾವಧಿಯನ್ನು 80 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 90 ದಿನಗಳವರೆಗೆ ನಿಗದಿಪಡಿಸಲಾಗಿದೆ. ನೋಂದಣಿ ಕಾರ್ಯದ ಜೊತೆಗೆ ಖರೀದಿ ಪ್ರಕ್ರಿಯೆಯನ್ನು ಸಹ ಪ್ರಾರಂಭಿಸಿ ಕೇಂದ್ರದಿಂದ ಎನ್.ಸಿ.ಸಿ.ಎಫ್ ಹಾಗೂ ರಾಜ್ಯದಲ್ಲಿ ಕರ್ನಾಟಕ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ (ಕೆ.ಓ.ಎಫ್) ಬೆಂಗಳೂರು ಸಂಸ್ಥೆಯ ಮೂಲಕ ಖರೀದಿಸಲು ಆದೇಶಿಸಲಾಗಿದೆ ಎಂದು ತಿಳಿಸಿದರು.

ರಥೋತ್ಸವ ನಾಳೆ

ಗದಗ: ಲಕ್ಕುಂಡಿ ತಾಲೂಕಿನ ಅಲ್ಲಮ ಪ್ರಭುದೇವರ ಮಠದ 38 ವರ್ಷಗಳ ಮೌನ ತಪಸ್ವಿ ಬಸವರಾಜೇಂದ್ರ ಸ್ವಾಮೀಜಿಯ 14ನೇ ವರ್ಷದ ಪುಣ್ಯ ಸ್ಮರಣೋತ್ಸವದ ಅಂಗವಾಗಿ ಏ.14ರಂದು ಸಂಜೆ 4.45ಕ್ಕೆ ರಥೋತ್ಸವ ನೆರವೇರಲಿದೆ. ಮಠದ ಸಿದ್ಧಲಿಂಗೇಶ್ವರ ಶ್ರೀಗಳ ನೇತೃತ್ವದಲ್ಲಿ ಹೊಸರಿತ್ತಿಯ ಗುದ್ದಲೀಶ್ವರ ಮಠದ ಗುದ್ದಲೀಶ್ವರ ಸ್ವಾಮೀಜಿ, ಹರ್ಲಾಪುರದ ಕೊಟ್ಟೂರೇಶ್ವರ ಶ್ರೀಗಳು, ನೀಲಗುಂದದ ಗುಡ್ಡದ ಸುಕ್ಷೇತ್ರದ ಚನ್ನಬಸವ ಶಿವಯೋಗಿಗಳು ರಥೋತ್ಸವಕ್ಕೆ ಚಾಲನೆ ನೀಡುವರು. ರಥೋತ್ಸವದಲ್ಲಿ ನಾಡಿನ ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಲಿವೆ. ಇದಕ್ಕೂ ಪೂರ್ವ ಬೆಳಗ್ಗೆ ಅಲ್ಲಮಪ್ರಭುದೇವರ ಗದ್ದುಗೆ ಹಾಗೂ ಬಸವರಾಜೇಂದ್ರ ಶ್ರೀಗಳ ಗದ್ದುಗೆಗೆ ವಿಶೇಷ ಪೂಜೆ ಜರುಗಲಿದೆ. ನಂತರ 11.45ಕ್ಕೆ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿವೆ. ಏ.15ರಂದು ಲಘು ರಥೋತ್ಸವ ನಡೆಯಲಿದೆ. ಏ.13ರಂದು ಬೆಳಗ್ಗೆ ಪೂರ್ಣ ಕುಂಭ ಮೇಳ ಹಾಗೂ ಅಡ್ಡಪಲ್ಲಕ್ಕಿ ಮಹೋತ್ಸವ ಗ್ರಾಮದ ಪ್ರಮುಖ ಬೀದಿಯಲ್ಲಿ ಜರುಗಲಿದೆ. ಸಂಜೆ 7ಕ್ಕೆ ಶಿವಶರಣೆ ಇಟಗಿ ಭೀಮಾಂಬಿಕಾ ದೇವಿ ಪುರಾಣವನ್ನು ಪ್ರವಚನಕಾರ ಕೊಟ್ರಯ್ಯ ಶಾಸ್ತ್ರೀಗಳು ನರಗುಂದಮಠ ಅವರು ಮುಕ್ತಾಯಗೊಳಿಸುವರು. ಪ್ರತಿದಿನ ಅನ್ನ ಸಂತರ್ಪಣೆ ಇರಲಿದೆ ಎಂದು ಅಲ್ಲಮಪ್ರಭುದೇವರ ದೇವಸ್ಥಾನ ಸೇವಾ ಸಮಿತಿಯ ಪ್ರಕಟಣೆ ತಿಳಿಸಿದೆ.



ಗದಗ: ನಗರದ ಸನ್ಮಾರ್ಗ ಪಿಯು ಕಾಲೇಜಿನ ವಿದ್ಯಾರ್ಥಿನಿ ರೇವತಿ ನಾರಾಯಣ ಉತ್ತರಕರ ವಿಜ್ಞಾನ ವಿಭಾಗದಲ್ಲಿ ಶೇ. 96 ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಈ ಹಿನ್ನೆಲೆಯಲ್ಲಿ ಗದಗ-ಬೆಟಗೇರಿ ನಗರಸಭೆ ವಾರ್ಡ್ ನಂ. 25ರ ನಗರಸಭಾ ಸದಸ್ಯ ವಿನಾಯಕ ಮಾನ್ವಿ ಅವರು ವಿದ್ಯಾರ್ಥಿನಿಯ ಮನೆಗೆ ತೆರಳಿ ಸನ್ಮಾನಿಸಿದರು.

ಏ.20ರಂದು ಜಗಜ್ಯೋತಿ ಬಸವೇಶ್ವರರ ಜಯಂತಿ

ಗದಗ: ಜಗಜ್ಯೋತಿ ಬಸವೇಶ್ವರರ ಜಯಂತಿ ಏ.20ರಂದು ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್. ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವೇಶ್ವರ ಜಯಂತಿ ಕುರಿತು ಜರುಗಿದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಪಡೆದ ಸಮಾಜದ ವಿದ್ಯಾರ್ಥಿಗಳಿಗೆ, ವಿವಿಧ ಕ್ಷೇತ್ರದ ಸಾಧಕರಿಗೆ ಹಾಗೂ ಸಮಾಜದ ಹಿರಿಯರಿಗೆ ಸನ್ಮಾನಿಸಲಾಗುವುದು ಎಂದರು. ತಾಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ನಂದಾ ಹಣಬರಟ್ಟಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಆರ್.ಎಸ್.ಬುರುಡಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ವಸಂತ ಮಡ್ಲೂರ ಇತರರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಸವರಾಜ ಬಳ್ಳಾರಿ ಸ್ವಾಗತಿಸಿದರು.

ಶಂಕರಾಚಾರ್ಯರ ಜಯಂತಿ: ಜಗದ್ಗುರು ಶಂಕರಾಚಾರ್ಯರ ಜಯಂತಿ ಏ.21ರಂದು ನಗರದ ಶಂಕರಾಚಾರ್ಯರ ಮಠದಲ್ಲಿ ಅಚ್ಚುಕಟ್ಟಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ತಿಳಿಸಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶಂಕರಾಚಾರ್ಯರ ಜಯಂತಿ ನಿಮಿತ್ತ ಜರುಗಿದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಮಾಜದ ಹಿರಿಯರಿಗೆ ಸನ್ಮಾನಿಸಲಾಗುವುದು ಎಂದರು. ಜಿಪಂ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಎಂ.ಎಂ.ತುಂಬರಮಟ್ಟಿ ಇತರರಿದ್ದರು.



ಗಜೇಂದ್ರಗಡ: ಪಟ್ಟಣದ ಎಸ್.ಎಂ. ಭೂಮರಡ್ಡಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 5ನೇ ಆವೃತ್ತಿ ವಾರ್ಡ್ ವೈಸ್ ಪ್ರೀಮಿಯರ ಲೀಗ್ ಕಾರ್ಯಕ್ರಮವನ್ನು ಪಿಎಸ್‌ಐ ಪ್ರಕಾಶ್ ಡಿ. ಉದ್ಘಾಟಿಸಿದರು. ರಾಕೇಶ್ ಮಾರಣಬಸರಿ, ಗಪಾರ್ ಡಾಲಾಯತ, ವಿನಾಯಕ ಜರತಾರಿ, ವಿನಾಯಕ ಪವಾರ, ನಾಗರಾಜ ಬಂಡ್ಡಿವಡ್ಡರ, ರವಿ ನಿಡಗುಂದಿ, ಬಸವರಾಜ ನಿಡಗುಂದಿ, ಅನಿಲ ನಿಡಗುಂದಿ, ಲಕ್ಷ್ಮಣ ಬಂಕದ, ರವಿ ಭಜಂತ್ರಿ, ರಾಜೂ ನಿಡಗುಂದಿ, ಅಂಬರೀಷ ಬಂಡ್ಡಿವಡ್ಡರ, ಮಲ್ಲು ಕಲ್ಲವಡ್ಡರ ಇದ್ದರು.

ಸಣ್ಣ ಪಾತ್ರೆಗಳಲ್ಲಿ ದೊಡ್ಡ ಕಾಳಜಿ | ಪಕ್ಷಿಗಳಿಗಾಗಿ ನೀರಿನ ಅಭಿಯಾನ

ಬಾಯಾರಿದ ಪಕ್ಷಿಗಳಿಗೆ ಜೀವಜಲ

ಗದಗ: ದಿನೇದಿನೇ ಬಿಸಿಲಿನ ತಾಪ ಹೆಚ್ಚುತ್ತಿದ್ದು, ಮನುಷ್ಯರಂತೆ ಪಕ್ಷಿಗಳೂ ಸಹ ನೀರಡಿಕೆಯಿಂದ ಬಳಲುತ್ತಿವೆ. ಬೇಸಿಗೆಯಲ್ಲಿ ಪಕ್ಷಿಗಳಿಗೆ ಕುಡಿಯುವ ನೀರು ಸಿಗುವುದು ಕಷ್ಟವಾಗಿರುವ ಕಾರಣ ಮನೆ, ಕಾಲೇಜು ಆವರಣ ಸೇರಿದಂತೆ ವಿವಿಧೆಡೆ ಸಣ್ಣ ಪಾತ್ರೆಗಳಲ್ಲಿ ನೀರು ತುಂಬಿಸಿಡುವ ಅಭಿಯಾನ ಮಾನವೀಯತೆ ನೆಲೆಯಿಂದ ಕೂಡಿದೆ ಎಂದು ಪ್ರಾಚಾರ್ಯ ಡಾ. ವಿ.ಟಿ.ನಾಯ್ಕ ಹೇಳಿದರು.

ನಗರದ ಆದರ್ಶ ಶಿಕ್ಷಣ ಸಮಿತಿಯ ವಿ.ಆರ್. ಕುಷ್ಟಗಿ ಸ್ಮಾರಕ ವಾಣಿಜ್ಯ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದಿಂದ ಶನಿವಾರ ನಡೆದ 'ಸೇವ್ ಬರ್ಡ್; ಸೇವ್ ವಾಟರ್' ಎಂಬ ವಿನೂತನ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಬೇಸಿಗೆಯಲ್ಲಿ ಪಕ್ಷಿಗಳ ನೀರಡಿಕೆಯ ದಾಹ ನೀಗಿಸಲು ಎನ್‌ಎಸ್‌ಎಸ್ ಘಟಕದ ವಿದ್ಯಾರ್ಥಿಗಳು ಉತ್ತಮ ಉಪಕ್ರಮ ಕೈಗೊಂಡಿದ್ದಾರೆ. ಇದು ಎಲ್ಲರಿಗೂ ಪ್ರೇರಣಾದಾಯಕ ಕೆಲಸವಾಗಿದೆ ಎಂದರು.

ಡಾ. ಎಸ್.ಡಿ.ಭಂಡಾರ್ಕರ್, ಡಾ. ಸುನಿತಾ ನಾಯಕ, ಡಾ. ಸುನಿಲ್ ನಾಗರಬೆಟ್ಟ, ಪ್ರೊ. ಎಸ್.ಬಿ.ಜಾದವ್, ಪ್ರೊ. ಸಲ್ಮಾ ಬೆಳಗಾವಿ, ಪ್ರೊ. ಈಶ್ವರ್ ಯಾಗಲ್, ಪ್ರೊ. ಫಿರೋಜ್ ಖಾನ್, ಪ್ರೊ. ಮೋಹನ್, ಯಶ್ವಂತ್, ಮಹಾವಿದ್ಯಾಲಯದ ಸಿಬ್ಬಂದಿ ಇದ್ದರು. ಸಭಾ ಕಾರ್ಯಕ್ರಮದ ನಂತರ ಮನೆಮನೆಗೆ ತೆರಳಿದ ವಿದ್ಯಾರ್ಥಿಗಳು ನೆರಳು ಇರುವ ಜಾಗದಲ್ಲಿ ಮಣ್ಣಿನ ಬೌಲ್‌ಗಳನ್ನು ಕಟ್ಟಿ, ನೀರು ತುಂಬಿಸಿ ಪರಿಸರ ಕಾಳಜಿ ಮೆರೆದರು.

- ಪ್ರತಿದಿನ ಪಾತ್ರೆಗಳನ್ನು ಶುದ್ಧಗೊಳಿಸಿ, ತಾಜಾ ನೀರನ್ನು ತುಂಬಿಸಿ ಇಡುವುದರಿಂದ ಹಕ್ಕಿಗಳು ಬಂದು ನೀರು ಕುಡಿದು ದಾಹ ತೀರಿಸಿಕೊಳ್ಳಲು ನೆರವು
- ಸೇವ್ ಬರ್ಡ್; ಸೇವ್ ವಾಟರ್ ಅಭಿಯಾನದ ಮೂಲಕ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆ ಮತ್ತು ಪಕ್ಷಿಗಳ ಬಗ್ಗೆ ಕರುಣೆ ತೋರಬೇಕು ಎಂಬ ಮಹತ್ವದ ಸಂದೇಶ ದಾಟಿಸುತ್ತಿದ್ದಾರೆ
- ಎನ್‌ಎಸ್‌ಎಸ್ ವಿದ್ಯಾರ್ಥಿಗಳ ಈ ಅಭಿಯಾನಕ್ಕೆ ಸಹೃದಯಿಗಳು ಕೈಜೋಡಿಸಲಿ ಎಂದು ಹೇಳಿದ ಪ್ರಾಚಾರ್ಯ ಡಾ. ವಿ.ಟಿ.ನಾಯ್ಕ

ಪಕ್ಷಿಗಳ ದಾಹ ನೀಗಿಸುವ ಉದ್ದೇಶದಿಂದ ಆರಂಭಿಸಿದ ಅಭಿಯಾನಕ್ಕೆ ನಾಲ್ಕು ವರ್ಷಗಳಿಂದ ಅಭೂತಪೂರ್ವ ಬೆಂಬಲ ಸಿಕ್ಕಿದೆ. ದಾಹದಿಂದ ಬಳಲುವ ಪಕ್ಷಿಗಳಿಗೆ ನೀರುಣಿಸುವ ಕಾರ್ಯ ಮಾನವೀಯತೆ, ಪರಿಸರ ಪ್ರೀತಿಗೆ ಸಾಕ್ಷಿ.

■ **ಬಾಹುಬಲಿ ಪಿ. ಜೈನರ್,** ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ



ಪಕ್ಷಿಗಳಿಗೆ ನೆರವು

ಬೇಸಿಗೆಯಲ್ಲಿ ತಾಪಮಾನ ಹೆಚ್ಚಾದಾಗ ಪಕ್ಷಿಗಳಿಗೆ ಕುಡಿಯುವ ನೀರು ಹಾಗೂ ಆಹಾರ ಸಿಗುವುದು ಕಷ್ಟವಾಗುತ್ತದೆ. ಇದನ್ನು ಮನಗಂಡ ನಮ್ಮ ಸ್ವಯಂಸೇವಕರು ತಮ್ಮ ಮನೆಗಳ ಮುಂದೆ, ಶಾಲಾ ಆವರಣದಲ್ಲಿ ಅಥವಾ ಮರಗಳ ಬಳಿ ಚಿಕ್ಕ ಪಾತ್ರೆಗಳಲ್ಲಿ ನೀರನ್ನು ಇಟ್ಟು, ಪಕ್ಷಿಗಳಿಗೆ ನೆರವಾಗುತ್ತಿದ್ದಾರೆ ಎಂದು ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕದ ಕಾರ್ಯಕ್ರಮ ಅಧಿಕಾರಿ ಪ್ರೊ. ಬಿ.ಪಿ. ಜೈನರ್ ಹೇಳಿದರು.

ಪರಿಸರ ಸಂರಕ್ಷಣೆ ಸರ್ವರ ಹೊಣೆ

ಪರಿಸರ ಸಂರಕ್ಷಣೆ ಎಲ್ಲರ ಹೊಣೆ. ಸಣ್ಣ ಸಹಾಯವೂ ದೊಡ್ಡ ಅರ್ಥ ಹೊಂದಿರುತ್ತದೆ. ಗದಗ ಜಿಲ್ಲೆಯ ಅನೇಕ ಗ್ರಾಮಗಳು, ನಗರದ ಅನೇಕ ವಾರ್ಡ್‌ಗಳು ನೀರಿನ ಸಮಸ್ಯೆಯಿಂದ ಬಳಲುತ್ತಿವೆ. ಹೀಗಾಗಿ ಎಷ್ಟು ಸಾಧ್ಯವೋ ಅಷ್ಟು ನೀರನ್ನು ಮಿತವಾಗಿ ಬಳಸಬೇಕು ಎಂದು ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕದ ಕಾರ್ಯಕ್ರಮ ಅಧಿಕಾರಿ ಪ್ರೊ. ಬಿ.ಪಿ. ಜೈನರ್ ಹೇಳಿದರು.

ರೈತನಿಗೆ ಭಾರೀ ನಷ್ಟ: ಪರಿಹಾರಕ್ಕೆ ಆಗ್ರಹ

ಮುಂಡರಗಿ: ತಾಲೂಕಿನ ಡಂಬಳ ಗ್ರಾಮದ ರೈತರೊಬ್ಬರಿಗೆ ಖಾಸಗಿ ಕಂಪೆನಿ ಕಳಪೆ ಗುಣಮಟ್ಟದ ಆರ್ ಕೆ ಸೀಡ್ಸ್ ಗುಜರಾತಿನ ಕಾಕರಿ ಸುಪ್ರೀಯಾ ಸೌತೆಯ ಬಿತ್ತನೆ ಬೀಜ ನೀಡಿದ ಪರಿಣಾಮ ರೈತರೊಬ್ಬರು ಲಕ್ಷಾಂತರ ರೂ. ನಷ್ಟ ಸಂಭವಿಸಿದ ಘಟನೆ ನಡೆದಿದೆ.

ಡಂಬಳ ಗ್ರಾಮದ ಮಮತಾಜ ಎಂಬುವವರಿಗೆ ಸೇರಿದ ಸರ್ವೆ ನಂಬರ್ 273ರ 4ಎಕರೆ 30 ಗುಂಟೆ ಜಮೀನಿನಲ್ಲಿ ಇದನ್ನು ಗುತ್ತಿಗೆ ಪಡೆದಿದ್ದ ರೈತ ಆಸಗರಲಿ ಸರಕಾವಾಸ ಎಂಬುವರು ಹುಬ್ಬಳ್ಳಿಯ ರೈತ ಸ್ನೇಹಿ ವಿತರಕರು ಬೀಜ, ಕ್ರಿಮಿನಾಶಕ ಮತ್ತು ಕೃಷಿ ಉಪಕರಣಗಳು ಅಂಗಡಿ ಸಂಖ್ಯೆ 12/18ಎ, ಮಡಿಮನ್ ಕಾಂಪ್ಲೆಕ್ಸ್, ನೀಲಿಜಿನ ರೋಡ, ಹುಬ್ಬಳ್ಳಿ ಇವರಿಂದ ಪಡೆದುಕೊಂಡು ಬಿತ್ತನೆ ಮಾಡಿದ್ದರು. ಇದು 45 ದಿನಗಳ ಬೆಳೆಯಾಗಿದೆ. ಆದರೆ ಇವರ ಜಮೀನಿನಲ್ಲಿ ಸೌತೆಯು ಫಲ ಕೊಡಲು ಆರಂಭಗೊಳ್ಳುತ್ತಿದ್ದಂತೆಯೇ ಆರ್ ಕೆ ಸೀಡ್ಸ್ ಗುಜರಾತಿನ ಕಾಕರಿ ಸುಪ್ರೀಯಾ ಸೌತೆಯತಳಿಯಕಾಯಿಗಳು ಕಾಣಿಸಿಕೊಂಡಿದೆ. ಪ್ರತಿ ಬಳ್ಳಿಯ ಸೌತೆಕಾಯಿ ಕಹಿ(ವಿಷಸ್ವರೂಪದ ಸೌತೆಕಾಯಿ)ಕಾಯಿಯಾಗಿದ್ದು ಪ್ರತಿ ಎಕರೆಗೆ 20ಟನ್ ವರೆಗೆ ಭರವಸೆ ನೀಡಿದ್ದರು. ಆದರೆ ಸೌತೆ ಕಾಯಿ ಸಂಪೂರ್ಣ ಬೆಳೆ ಕಹಿಯಾಗಿರುವುದರಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಂತಹ ಸ್ಥಿತಿ ನಿರ್ಮಾಣವಾಗಿದೆ ಎಂಬುದು ರೈತರ ಆರೋಪವಾಗಿದೆ.

4ಎಕರೆ 30ಗುಂಟೆ ಜಮೀನಿನಲ್ಲಿ ಸಾಲ ಮಾಡಿ ಸೌತೆ ಬೆಳೆದಿದ್ದೇನೆ. ಬೆಳೆ ಬಂದಿದ್ದು ಕಟಾವು ಮಾಡಬೇಕು ಎನ್ನುವಷ್ಟರಲ್ಲಿ ವಿಷವಾದ ಸೌತೆ ಬೆಳೆದು ನಿಂತಿದ್ದು ಕಂಪನಿಯವರಿಂದ 5ರಿಂದ 6ಲಕ್ಷ ರೂ. ವರೆಗೆ ಪರಿಹಾರ ಒದಗಿಸಿಕೊಡಬೇಕು.

■ **ಅಸಗರಲಿ ಸರಕಾವಾಸ,** ಡಂಬಳ ಗ್ರಾಮದ ರೈತ

ಆರ್.ಕೆ.ಸೀಡ್ಸ್ ಕಂಪನಿಯವರು 5ರಿಂದ 6ಲಕ್ಷ ಪರಿಹಾರ ನೀಡದಿದ್ದರೆ ಕಂಪನಿ ಪರವಾನಗಿ ರದ್ದು ಮಾಡಬೇಕು. ಅಧಿಕಾರಿಗಳು ಜಮೀನಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಕಂಪನಿ ವಿರುದ್ಧ ಅಗತ್ಯ ಕ್ರಮ ಮತ್ತು ಸೂಕ್ತ ಪರಿಹಾರ ನೀಡದಿದ್ದರೆ ಜಿಲ್ಲಾ ಕಚೇರಿ ಮುಂದೆ ಅನಿರ್ದಿಷ್ಟಾವಧಿ ಧರಣಿ ಕೈಗೊಳ್ಳಲಾಗುವುದು.

■ **ಲಕ್ಷ್ಮಣ ದೊಡ್ಡಮನಿ,** ಪ್ರಗತಿಪರ ರೈತ, ಡಂಬಳ



ಶರಣರ ವಚನಗಳು ಸಮಾಜ ಸುಧಾರಣೆಗೆ ಮಾರ್ಗ

ಮುಂಡರಗಿ: ಸಮಾಜದಲ್ಲಿನ ಅನೇಕ ನ್ಯೂನ್ಯತೆಗಳನ್ನು ತಮ್ಮ ನೇರ ನುಡಿಗಳಲ್ಲಿ ಹೇಳುತ್ತಿದ್ದ ಶರಣ ಶಂಕರ ದಾಸಿಮಯ್ಯ ಅವರ ಬಗ್ಗೆ ಅನೇಕ ಕುತೂಹಲಕರ ಸಂಗತಿಗಳಿವೆ. ಅವುಗಳ ಅಧ್ಯಯನ ಮತ್ತು ಓದುವಿಕೆಯಿಂದ ಅವರ ಜೀವನ ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ ಎಂದು ಕೊಪ್ಪಳ ಸಾಹಿತಿ, ರಂಗಭೂಮಿ ಕಲಾವಿ ವೀರಣ್ಣ ಹುರಕಡ್ಲಿ ಹೇಳಿದರು.

ಅವರು ಪಟ್ಟಣದ ಜ.ಅನ್ನದಾನೀಶ್ವರ ಕನ್ನಡ ಸಾಹಿತ್ಯ ಭವನದಲ್ಲಿ ಕಸಾಪ ಆಶ್ರಯದಲ್ಲಿ ಏರ್ಪಡಿಸಿದ್ದ ಶರಣ ಶಂಕರ ದಾಸಿಮಯ್ಯ ಅವರ ಕುರಿತು ಉಪನ್ಯಾಸ ನೀಡಿ ಮಾತನಾಡಿದರು. ಶರಣರಲ್ಲಿ ಹಲವು ಬಗೆ ಇದ್ದರೂ ಅವರೆಲ್ಲರು ರಚಿಸಿದ ವಿಭಿನ್ನ ವಚನಗಳಲ್ಲಿ ಸಮಾಜದ ಏಕತೆ ಮತ್ತು ಭಾವೈಕ್ಯತೆ ಕಾಯ್ದುಕೊಳ್ಳುವ ಮತ್ತು ಧ್ವನಿ ಇಲ್ಲದವರಿಗೆ ಧ್ವನಿ ಕೊಡುವ ಹಾಗೂ ಡೋಂಗಿ ಭಕ್ತಿ ತೋರುವವರ ಕುರಿತು ತಮ್ಮ ವ್ಯಂಗ್ಯದ ವಚನಗಳಿಂದ ಎಚ್ಚರಿಸುವ ಅಂಶಗಳಿದ್ದು, ಎಂದಿಗೂ ತಮ್ಮ ಮಾತು ಕೃತಿಗಳಲ್ಲಿ ವ್ಯತ್ಯಾಸ ತೋರದ ಇರುವ ಸತ್ಯವನ್ನು ನೇರವಾಗಿ ಹೇಳುವ ಮೂಲಕ ಇಂದಿಗೂ ಅವರ ಆದರ್ಶ ಮತ್ತು ತತ್ವಗಳು ಸಮಾಜಕ್ಕೆ ಪ್ರೇರಣೆ ಮತ್ತು ಮಾರ್ಗದರ್ಶನವಾಗಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಸಾಪ ಅಧ್ಯಕ್ಷ ಪ್ರೊ. ಎಂ.ಜಿ.ಗಚ್ಚಣ್ಣವರ ಮಾತನಾಡಿ, ಕಸಾಪ ಹಾಗೂ ಶಸಾಪ ಆಶ್ರಯದಲ್ಲಿ ಈವರೆಗೆ 12ನೇ ಶತಮಾನದಲ್ಲಿ ಆಗಿ ಹೋದ ಬೆಳಕಿಗೆ ಬರದ ಉಪೇಕ್ಷಿತ ಶರಣರ ಕುರಿತು ಪ್ರತಿ 15 ದಿನಕ್ಕೊಮ್ಮೆ ಶರಣ ಚಿಂತನ ಮಾಲೆ ನಡೆಸುತ್ತ ಬಂದಿದ್ದು, ಅನೇಕ ಶರಣರು ತಮ್ಮದೇ ಆದ ರೀತಿಯಲ್ಲಿ ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನ, ಮೌಢ್ಯಾಚರಣೆ ದೂರ ಮಾಡುವುದು, ಜಾತೀಯತೆ ಅಸಮಾನತೆ ಹೋಗಲಾಡಿಸಲು ಸ್ವತ: ವಚನಗಳನ್ನು ರಚಿಸುವ ಮೂಲಕ ಮತ್ತು ಆಚರಣೆಯಲ್ಲಿಯೂ ಮಾದರಿಯಾಗಿದ್ದಾರೆ. ಅವರಲ್ಲಿ ಶಂಕರ ದಾಸಿಮಯ್ಯ ಒಬ್ಬರು. ಬರುವ ದಿನಗಳಲ್ಲಿ ಕಸಾಪ ಆಶ್ರಯದಲ್ಲಿ ಮಹಿಳಾ ಸಮಾವೇಶ ಏರ್ಪಡಿಸಿ ಆ ಮೂಲಕ ಸೃಜನಶೀಲ ಮಹಿಳಾ ಬರಹಗಾರರ ಕೃತಿ ಚರ್ಚೆ, ಸಂವಾದ, ಗೋಷ್ಠಿ ನಡೆಸುವ ಉದ್ದೇಶ ಹೊಂದಿದೆ ಎಂದರು.

ಕಾರ್ಯಕ್ರಮದಲ್ಲಿ ನಾಗೇಶ ಕುಬಸದ, ಕಸಾಪ ಕಾರ್ಯಕಾರಿಣಿ ವೀಣಾ ಪಾಟೀಲ, ಕೃಷ್ಣಮೂರ್ತಿ ಸಾಹುಕಾರ, ಐ.ಜೆ.ಮುಲ್ಲಾ, ಶರಣಪ್ಪ ಕುಬಸದ, ಪ್ರತಿಭಾ ಹೊಸಮನಿ, ಮಹೇಶ ಮೇಟಿ, ಎನ್.ಎಸ್.ಅಲ್ಲಿಪುರ, ಶಶಿಕಲಾ ಕುಕನೂರ, ಪಾರ್ವತಿ ಕುಬಸದ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು. ಎನ್.ಎನ್.ಕಲಕೇರಿ ಸ್ವಾಗತಿಸಿ, ನಿರೂಪಿಸಿದರು. ಸಿ.ಕೆ.ಗಣಪ್ಪನವರ ವಂದಿಸಿದರು.



ಜನಗಣತಿ ದೇಶದ ಯೋಜನೆ ರೂಪಿಸುವ ಮೂಲಭೂತ ಆಧಾರ: ಡಿಸಿ

ಗದಗ: ಜನಗಣತಿ ಕಾರ್ಯವನ್ನು ಸುಗಮವಾಗಿ ಹಾಗೂ ಪರಿಣಾಮಕಾರಿಯಾಗಿ ನಡೆಸುವ ಉದ್ದೇಶದಿಂದ ನಗರ ಮತ್ತು ಗ್ರಾಮೀಣ ಭಾಗಗಳ ಗಣತಿದಾರರಿಗೆ ಮೂರು ದಿನಗಳ ಸಮಗ್ರ ತರಬೇತಿ ಕಾರ್ಯಕ್ರಮ ನಗರದ ಗುರುಬಸವ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ಯಶಸ್ವಿಯಾಗಿ ನಡೆಸಲಾಯಿತು. ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅವರ ಮಾರ್ಗದರ್ಶನದಲ್ಲಿ ನಡೆದ ಈ ತರಬೇತಿ ಕಾರ್ಯಕ್ರಮದಲ್ಲಿ ಗಣತಿದಾರರಿಗೆ ಕಾರ್ಯಪದ್ಧತಿ, ಮಾಹಿತಿಯ ಸಂಗ್ರಹಣೆ ವಿಧಾನಗಳು, ತಂತ್ರಜ್ಞಾನ ಬಳಕೆ ಹಾಗೂ ಕ್ಷೇತ್ರ ಮಟ್ಟದ ಸವಾಲುಗಳನ್ನು ಎದುರಿಸುವ ಬಗ್ಗೆ ವಿವರವಾದ ಮಾರ್ಗದರ್ಶನ ನೀಡಲಾಯಿತು.

ತರಬೇತಿಯಲ್ಲಿ ಗಣತಿದಾರರಿಗೆ ಮನೆಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ವಿಧಾನ, ಪ್ರತಿ ಕುಟುಂಬದ ಸಾಮಾಜಿಕ-ಆರ್ಥಿಕ ಸ್ಥಿತಿಗತಿ ದಾಖಲಿಸುವ ಕ್ರಮ, ಮಾಹಿತಿಯ ನಿಖರತೆ ಕಾಪಾಡುವ ಅಗತ್ಯತೆ ಹಾಗೂ ಗೌಪ್ಯತೆ ಕಾಯ್ದುಕೊಳ್ಳುವ ಮಹತ್ವವನ್ನು ವಿವರಿಸಲಾಯಿತು. ಇತ್ತೀಚಿನ ತಂತ್ರಜ್ಞಾನವನ್ನು ಬಳಸಿಕೊಂಡು ಡಿಜಿಟಲ್ ಮೂಲಕ ಮಾಹಿತಿ ದಾಖಲಿಸುವ ವಿಧಾನಗಳನ್ನೂ ಪರಿಚಯಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅವರು, ಜನಗಣತಿ ದೇಶದ ಯೋಜನೆ ರೂಪಿಸುವ ಮೂಲ ಆಧಾರವಾಗಿದ್ದು, ಶಿಕ್ಷಣ, ಆರೋಗ್ಯ, ವಸತಿ, ಉದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸರ್ಕಾರದ ಯೋಜನೆಗಳು ರೂಪಗೊಳ್ಳಲು ಇದರ ಮಾಹಿತಿ ಬಹುಮುಖ್ಯವಾಗುತ್ತದೆ ಎಂದರು. ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಮಾತನಾಡಿ, ಜನಗಣತಿ ಪ್ರಕ್ರಿಯೆ ದೇಶದ ಅಭಿವೃದ್ಧಿಗೆ ದಿಕ್ಕು ತೋರಿಸುವ ಮಹತ್ವದ ಸಾಧನವಾಗಿದ್ದು, ಸಂಗ್ರಹವಾಗುವ ಪ್ರತಿಯೊಂದು ಮಾಹಿತಿ ಭವಿಷ್ಯದ ಯೋಜನೆಗಳಿಗೆ ಮಾರ್ಗಸೂಚಿಯಾಗುತ್ತದೆ ಎಂದರು. ಗದಗ ಬೆಟಗೇರಿ ನಗರಸಭೆಯ ಪೌರಾಯುಕ್ತ ರಾಜಾರಾಮ ಪವಾರ ಮಾತನಾಡಿ, ಜನಗಣತಿ ಮಾಹಿತಿ ಆಧಾರದ ಮೇಲೆ ಸರ್ಕಾರ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದರಿಂದ ಪ್ರತಿಯೊಬ್ಬ ಗಣತಿದಾರರೂ ತಮ್ಮ ಜವಾಬ್ದಾರಿಯನ್ನು ಅರಿತು, ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸಬೇಕು ಎಂದರು. ಉಪವಿಭಾಗಾಧಿಕಾರಿ ಗಂಗಪ್ಪ ಎಂ., ತಹಶೀಲ್ದಾರ್ ಶ್ರೀನಿವಾಸ್ ಮೂರ್ತಿ ಕುಲಕರ್ಣಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್.ಬುರುಡಿ, ಪರಶುರಾಮ್ ಶೇರಖಾನೆ ಸೇರಿದಂತೆ ಇತರರಿದ್ದರು.



ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲೂ ವಿದ್ಯಾರ್ಥಿಗಳನ್ನು ತೊಡಗಿಸಿ

ನರಗುಂದ: ಶಿಕ್ಷಕರಿಗೆ ಬದ್ಧತೆ, ತಾಳ್ಮೆ, ಸೌಜನ್ಯ ಅಗತ್ಯ. ನೈತಿಕ ಶಿಕ್ಷಣದ ತಳಹದಿಯ ಮೇಲೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಬೋಧನೆ ಮಾಡಬೇಕು ಎಂದು ಎಸ್ವೈಎಸ್ ಬಿ.ಇಡಿ ಕಾಲೇಜಿನ ಪ್ರಾಚಾರ್ಯ ಆರ್.ಬಿ. ಪಾಟೀಲ ಹೇಳಿದರು.

ಪಟ್ಟಣದ ಶ್ರೀ ಯಡೆಯೂರ ಸಿದ್ದಲಿಂಗೇಶ್ವರ ಶಿಕ್ಷಣ ಮಹಾವಿದ್ಯಾಲಯ ಮತ್ತು ಎನ್‌ಎಸ್‌ಎಸ್ ಘಟಕಗಳ ಆಶ್ರಯದಲ್ಲಿ ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್ ಪ್ರಶಿಕ್ಷಣ ಭಾರತಿ ವತಿಯಿಂದ ಏರ್ಪಡಿಸಿದ ಶಿಕ್ಷಕರ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಶಿಕ್ಷಕರು ಕೌಶಲಗಳನ್ನು ಕಲಿತು, ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ ರೂಢಿಸಬೇಕು. ಪಠ್ಯೇತರ ಚಟುವಟಿಕೆಗಳಲ್ಲೂ ವಿದ್ಯಾರ್ಥಿಗಳನ್ನು ತೊಡಗಿಸಬೇಕು. ಅವರ ಅಭ್ಯುದಯಕ್ಕೆ ಶ್ರಮಿಸಬೇಕು ಎಂದರು.

ಜಿಲ್ಲಾ ಪ್ರಶಿಕ್ಷಣ ಭಾರತಿ ಸಂಚಾಲಕ ಹನುಮಂತ ಕಾಳೆ ಮಾತನಾಡಿ, ಉತ್ತಮ ಶಿಕ್ಷಕರು ಶಿಷ್ಯರನ್ನು ಪ್ರತಿಯೊಂದು ಹಂತದಲ್ಲೂ ಮೇಲೇರಲು ಪ್ರೇರೇಪಿಸುತ್ತಾರೆ. ಅಂತಹ ಗುರುಗಳಿಗೆ ವಿದ್ಯಾರ್ಥಿಗಳು ಸದಾ ವಿನಮ್ರರಾಗಿರಬೇಕು ಎಂದರು.

ರಾಷ್ಟ್ರೋತ್ಥಾನ ಗದಗ ಜಿಲ್ಲಾ ವಿಭಾಗ ಸಂಯೋಜಕ ವೀರೇಂದ್ರ ಪಾಟೀಲ ಮಾತನಾಡಿ, ಶಿಕ್ಷಕರಿಗೆ ತರಬೇತಿ ಕೊಟ್ಟಾಗ ಅವರಿಗೆ ಬೆಲೆ ಇರುತ್ತದೆ. ಮಗುವಿನಲ್ಲಿನ ಪ್ರತಿಭೆಗಳನ್ನು ಗುರುತಿಸಿ ಬೋಧಿಸಬೇಕು ಎಂದರು. ಬಾದಾಮಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ, ಕೆರೂರು ಸರ್ಕಾರಿ ಶಾಲೆಯ ಶಿಕ್ಷಕ ರವಿ ಕಂಗಳ ಮಾತನಾಡಿದರು. ಕಾಲೇಜಿನ ಎನ್‌ಎಸ್‌ಎಸ್ ಘಟಕದ ಕಾರ್ಯಕ್ರಮ ಅಧಿಕಾರಿ ಮಹಾಬಲೇಶ್ವರ ವಿಶ್ವಕರ್ಮ ನಿರೂಪಿಸಿದರು. ಸಾವಿತ್ರಿ ಬಳಿಗೇರ ಪ್ರಾರ್ಥಿಸಿದರು. ರಾಜೇಶ್ವರಿ ಆಯಟ್ಟಿ ಸ್ವಾಗತಿಸಿದರು. ಫಕ್ರುಸಾಬ ಯಲಿಗಾರ ವಂದಿಸಿದರು.



ಮಹಿಳೆಯರು ಆರೋಗ್ಯದ ಬಗ್ಗೆ ಗಮನ ಹರಿಸಲಿ

ಲಕ್ಷ್ಮೇಶ್ವರ: ಸಮೀಪದ ಗುಲಗಂಜಿಕೊಪ್ಪದ ದುಂಡಿ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ಪಟ್ಟಣದ ತಾಯಿ ಪಾರ್ವತಿ ಮಕ್ಕಳ ಬಳಗದ ಕಲಾ ಹಾಗೂ ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಿಂದ ರಾಷ್ಟ್ರೀಯ ಸೇವಾ ಯೋಜನೆಯ (ಎನ್‌ಎಸ್‌ಎಸ್)ವಾರ್ಷಿಕ ಶಿಬಿರ ನಾಲ್ಕನೆ ದಿನ ವಿಶ್ವ ಆರೋಗ್ಯ ದಿನಾಚರಣೆ ನಿಮಿತ್ತ ಮಹಿಳಾ ಆರೋಗ್ಯದ ಜಾಗೃತಿ ಕುರಿತು ಕಾರ್ಯಕ್ರಮ ಆಯೋಜಿಸಲಾಗಿತ್ತು.



ಮಹಿಳಾ ಆರೋಗ್ಯ ಕುರಿತು ಉಪನ್ಯಾಸ ನೀಡಿದ ಸಮುದಾಯ ಆರೋಗ್ಯ ಕೇಂದ್ರದ ಬಿಐಡ್‌ಇಬ ಪ್ರಕಾಶ ಕರ್ಜಗಿ ಮಾತನಾಡಿ, ಮಹಿಳೆ ಮನೆಯಲ್ಲೂ, ಮನೆಯ ಹೊರಗೂ ಆಂತರಿಕ ಮತ್ತು ಬಾಹ್ಯವಾಗಿಯೂ ಸಂಪೂರ್ಣವಾಗಿ ಸುರಕ್ಷತೆಯಿಂದಿರಲು ಅಗತ್ಯವಿರುವ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಮಹಿಳೆಯರಲ್ಲಿ ಬರುವ ರೋಗಗಳ ಬಗ್ಗೆ ವೈದ್ಯರನ್ನು ಸಂಪರ್ಕಿಸಿ ಸಲಹೆ ಪಡೆದುಕೊಳ್ಳಬೇಕು. ಆದರೆ ಮಹಿಳೆಯರಲ್ಲಿ ಕೀಳರಿಮೆಯಿಂದ ಅನೇಕ ರೋಗಗಳು ತಿಳಿಯದಂತೆ ಉಲ್ಬಣಿಸುವಂತಾಗುತ್ತವೆ. ಮಹಿಳೆಯರಲ್ಲಿ ರಕ್ತಹೀನತೆ, ಮುಟ್ಟಿನ ಸಮಸ್ಯೆ, ಲೈಂಗಿಕ ಸುರಕ್ಷತೆ, ಮಾನಸಿಕ ಬಾಧೆ ಮುಂತಾದವುಗಳ ಬಗ್ಗೆ ನಿರ್ಲಕ್ಷ್ಯ ಮಾಡುವುದನ್ನು ಕೈಬಿಟ್ಟು ಚಿಕಿತ್ಸೆ ಪಡೆಯಬೇಕು. ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಮಹಿಳೆಯರಿಗಾಗಿಯೇ ಆಪ್ತ ಸಮಾಲೋಚನ ವಿಭಾಗ ತೆರೆಯಲಾಗಿದ್ದು, ಇದರ ಉಪಯೋಗ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಈಶ್ವರಪ್ಪ ಸೊರಟೂರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪತ್ರಕರ್ತ ದಿಗಂಬರ ಪೂಜಾರ, ನೀಲಪ್ಪಗೌಡ ದುರಗಣ್ಣವರ, ನಿಂಗಪ್ಪ ಶಿವಬಸಣ್ಣವರ, ಚನ್ನಬಸಯ್ಯ ಗಡ್ಡದೇವರಮಠ, ಪ್ರಾಚಾರ್ಯ ವಿಜಯಕುಮಾರ ಬಿಳಿಎಲೆ, ಎಸ್‌ಎಸ್‌ಎಸ್ ಘಟಕ ಅಧಿಕಾರಿ ಪರಮೇಶ ತಡಹಾಳ, ರೆಂವಂತ ಕ್ಷತ್ರಿಯ, ಪ್ರಕಾಶ ಹರ್ಲಾಪುರ, ಉಪನ್ಯಾಸಕರಾದ ಎಸ್.ಬಿ.ಅಣ್ಣಿಗೇರಿ, ರವಿಕುಮಾರ ನೀರಲಗಿ ಸಂಗೀತಾ ಲಕ್ಕಣ್ಣವರ, ಮಮತಾ ನಡುವಿನಮನಿ, ಮಾಲಾಶ್ರೀ ಹುರಳಿಕುಪ್ಪಿ, ಶಭಾನಾ ಕಲಕುಟ್ರಿ ಇದ್ದರು. ವಿದ್ಯಾರ್ಥಿನಿಯರಾದ ಪವಿತ್ರಾ ಉಲ್ಲಿ, ಗಾಯತ್ರಿ ನಾಗನಗೌಡ್ರ, ದಿವ್ಯ ಮಣ್ಣವಡ್ಡರ ನಿರ್ವಹಿಸಿದರು.

ಖರ್ಗೆ ವಿರುದ್ಧ ಬಿಜೆಪಿ ದೂರು

ಗಜೇಂದ್ರಗಡ: ಬಿಜೆಪಿ ರೋಣ ಯುವ ಮೋರ್ಚಾ ವತಿಯಿಂದ ಕಾಂಗ್ರೆಸ್ ಪಕ್ಷದ ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಗಜೇಂದ್ರಗಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಲಾಯಿತು.

ರೋಣ ಮಂಡಲದ ಪ್ರಧಾನ ಕಾರ್ಯದರ್ಶಿ ಬಾಳು ಬೋಸ್ಲೆ ಮಾತನಾಡಿ, ಚುನಾವಣಾ ಪ್ರಚಾರದ ವೇಳೆ ಭಾಷಣ ಮಾಡುವಾಗ ಕುರಾನ ಓದುತ್ತಿರುವಾಗ ಹಾಗು ನಮಾಜ್ ಮಾಡುತ್ತಿರುವಾಗ ವಿಷ ಸರ್ಪ ಬಂದರೆ ನಮಾಜ್ ಮಾಡುವುದನ್ನು ಬಿಟ್ಟು ಅದನ್ನು ಕೊಲ್ಲಬೇಕು ಎಂದು ಕುರಾನ್‌ದಲ್ಲಿ ಉಲ್ಲೇಖಿಸಲಾಗಿದೆ. ಅದರಂತೆ ಈಗ ನೀವು ನಮಾಜ್ ಮಾಡುವಾಗ ಬಿಜೆಪಿ ಹಾಗೂ ಆರ್‌ಎಸ್‌ಎಸ್ ಕಾರ್ಯಕರ್ತರು ವಿಷ ಸರ್ಪಗಳಿದ್ದಂತೆ. ಅವರನ್ನು ಕೊಲ್ಲದಿದ್ದರೆ ನೀವು ಬದುಕುವದಿಲ್ಲಾ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಬಹಿರಂಗ ಸಭೆಯಲ್ಲಿ ಮಾತನಾಡಿದ್ದನ್ನು ತೀವ್ರ ಖಂಡಿಸುತ್ತೇವೆ ಎಂದರು.

ರೋಣ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಹುಲ್ಲಪ್ಪ ಕೆಂಗಾರ, ಹಿಂದುಳಿದ ಮೋರ್ಚಾ ಅಧ್ಯಕ್ಷರಾದ ರಂಗನಾಥ ಮೇಟಿ, ದಾನು ರಾಠೋಡ, ಕಿರಣ ಕಟ್ಟಿ, ವಿಶ್ವನಾಥ ಕುಷ್ಟಗಿ, ಮಲ್ಲು ಕುರಿ, ಹಣಮಂತಪವಾಡಿಗೌಡ್ರ, ನಾರಾಯಣ ಬಾಕಳೆ, ಶರಣಪ್ಪ ಕಬಾಡರ, ವಿನಾಯಕ ಜರತಾರಿ ಇತರರಿದ್ದರು.



ಸ್ತ್ರೀ ಸ್ವಾತಂತ್ರ್ಯದ ಪರ ವಚನ ರಚಿಸಿದ ಅಕ್ಕಮಹಾದೇವಿ

ನರಗುಂದ: ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳು ಪ್ರೌಢಾವಸ್ಥೆಗೆ ಬರುತ್ತಿದ್ದಂತೆ ಪರೋಕ್ಷವಾಗಿ ಅವರ ಸ್ವಾತಂತ್ರ್ಯಗಳನ್ನು ಕಸಿದುಕೊಳ್ಳಲಾಗುತ್ತಿದೆ. ಸರ್ಕಾರ ಸಾಕಷ್ಟು ಕಠಿಣ ಕಾನೂನುಗಳನ್ನು ಜಾರಿಗೆ ತಂದರೂಸಹಿತಬಾಲ್ಯವಿವಾಹದಿನದಿಂದ ದಿನಕ್ಕೆ ಉಲ್ಬಣವಾಗುತ್ತಿದೆ. ಇದರ ಬಗ್ಗೆ ಸಮಾಜ ಜಾಗೃತವಾಗಬೇಕಿದೆ. ಇಂದು ದೇಶದಲ್ಲಿ ಮಹಿಳೆಯರು ಸ್ವತಂತ್ರವಾಗಿ ಬದುಕುತ್ತಿದ್ದಾರೆ ಎಂದರೆ ಅದಕ್ಕೆ ಮೂಲ ಪ್ರೇರಣೆ ಶರಣೆ ಅಕ್ಕಮಹಾದೇವಿ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಬಿಸಿ ಟ್ರಸ್ಟ್ ಯೋಜನಾಧಿಕಾರಿ ಮಾಲತಿ ದಿನೇಶ್ ಹೇಳಿದರು.

ತಾಲೂಕಿನ ಬೈರನಹಟ್ಟಿ ಗ್ರಾಮದ ದೊರೆಸ್ವಾಮಿ ವಿರಕ್ತಮಠದಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಹಾಗೂ ಅಕ್ಕಮಹಾದೇವಿ ಮಹಿಳಾ ವಿವಿಧೋದ್ದೇಶಗಳ ಸಂಘ ಇತ್ತೀಚೆಗೆ ಹಮ್ಮಿಕೊಂಡಿದ್ದ 381ನೇ ಮಾಸಿಕ ಶಿವಾನುಭವ ಹಾಗೂ ವೈರಾಗ್ಯನಿಧಿ ಅಕ್ಕಮಹಾದೇವಿ ಜಯಂತಿ ನಿಮಿತ್ತ ಮಹಿಳಾ ಗೋಷ್ಠಿ ಸಮಾರಂಭದಲ್ಲಿ ಮಾತನಾಡಿದರು. ದೇಶದ ಮೊಟ್ಟಮೊದಲ ಕವಿಯಿತ್ರಿ ವೈರಾಗ್ಯನಿಧಿ ಅಕ್ಕಮಹಾದೇವಿ ಇಡೀ ವಿಶ್ವಕಂಡಂತಹ ದಿಟ್ಟ ಮಹಿಳೆ ಅಕ್ಕಮಹಾದೇವಿಯ ಜೀವನ ಸಂದೇಶ ನಮಗೆಲ್ಲ ದಾರಿದೀಪ. 12ನೇ ಶತಮಾನದಲ್ಲಿ ಮೌಢ್ಯಾಚರಣೆ ಹಾಗೂ ಅನಿಷ್ಟ ಪದ್ಧತಿಗಳನ್ನು ಧಿಕ್ಕರಿಸಿ ಮಹಿಳೆಯರ ಪರ ಧ್ವನಿ ಎತ್ತಿ ಸ್ತ್ರೀ ಸ್ವಾತಂತ್ರ್ಯವನ್ನು ಬಯಸಿದ ಅಕ್ಕಮಹಾದೇವಿ ಸಾವಿರಾರು ವಚನಗಳನ್ನು ರಚಿಸಿದ್ದಾರೆ. ಅಕ್ಕನ ವಚನಗಳಲ್ಲಿ ವೈಚಾರಿಕ ಪ್ರಜ್ಞೆ, ನೈಸರ್ಗಿಕ ಪ್ರಜ್ಞೆಯ ಜೊತೆಗೆ ಸ್ತ್ರೀ ಸ್ವಾತಂತ್ರ್ಯದ ಪರ ವಚನಗಳನ್ನು ರಚಿಸಿದ ಜಗತ್ತಿನ ಮೊದಲ ಕವಿಯಿತ್ರಿ ಎಂದರು.

ಉಮಾವತಿ ನಾಯ್ಕರ ಮಾತನಾಡಿದರು. ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರನ್ನು ಶ್ರೀಮಠದಿಂದ ಸತ್ಕರಿಸಲಾಯಿತು. ಶಾಂತಲಿಂಗ ಶ್ರೀಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ರಾಜೇಶ್ವರಿ ಶಂಕರಗೌಡ್ರ, ಎಸ್.ಎಫ್. ದ್ಯಾವನಗೌಡ್ರ, ಮಹಾದೇವಿ ಕುಪ್ಪಸ್ತ, ಡಾ. ವಿಜಯಲಕ್ಷ್ಮೀ ರಾಯನಗೌಡ್ರ, ಡಾ. ಸುಮಂಗಲಾ ಜಾದವ, ಆರೋಗ್ಯ ಸುರಕ್ಷಾ ಅಧಿಕಾರಿ ಸುಮಿತ್ರಾ ಜಗಲಿ, ಪ್ರತಿಭಾ ಚಿನಿವಾಲರ ಉಪಸ್ಥಿತರಿದ್ದರು. ಮಹಾಂತೇಶ ಹಿರೇಮಠ ನಿರ್ವಹಿಸಿದರು. ರೇಣುಕಾ ನರಸಾಪೂರ ಸ್ವಾಗತಿಸಿ ಶರಣವ್ವ ತೆಗ್ಗಿನಮನಿ ವಂದಿಸಿದರು.



ಕಿರುಸುದ್ದಿ

ಕ್ರಿಮಿನಲ್‌ಗಳಿಗೆ ಆರು ತಿಂಗಳು ಗಡಿಪಾರು

ಬೆಳಗಾವಿ: ಸುವ್ಯವಸ್ಥೆ ಕಾಪಾಡಲು ಪೊಲೀಸ್ ಕಮಿಷನರ್ ಖಡಕ್ ಆ್ಯಕ್ಷನ್ ತೆಗೆದುಕೊಂಡಿದ್ದಾರೆ. ಸಾರ್ವಜನಿಕ ಶಾಂತಿಗೆ ಭಂಗ ತರುತ್ತಿದ್ದ ಐವರು ಕುಖ್ಯಾತ ಕ್ರಿಮಿನಲ್‌ಗಳನ್ನು ನಗರದಿಂದ 6 ತಿಂಗಳ ಕಾಲ ಗಡಿಪಾರು ಮಾಡಿ ಪೊಲೀಸ್ ಕಮಿಷನರ್ ಭೂಷಣ್ ಬೊರಸೆ ಆದೇಶ ಹೊರಡಿಸಿದ್ದಾರೆ.ಬೆಳಗಾವಿ ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದರೋಡೆ, ಕೊಲೆ ಯತ್ನ, ಮಾದಕವಸ್ತು ಮಾರಾಟ ಹಾಗೂ ಪೋಸ್ಕೋ ಕಾಯ್ದೆಯಡಿ ದಾಖಲಾಗಿದ್ದ ಐವರು ಆರೋಪಿಗಳಿಗೆ ಈಗ ಗಡಿಪಾರು ಶಿಕ್ಷೆ ವಿಧಿಸಲಾಗಿದೆ. ಗಡಿಪಾರಾದವರಲ್ಲಿ ಮಾದಕ ವಸ್ತು ಕಿಂಗ್‌ಪಿನ್ ಹಲಗಾ ನಿವಾಸಿ ಪಿರಾಜಿ ಯಸೊಜಿ, ಟಿಳಕವಾಡಿ ನಿವಾಸಿಗಳಾದ ಯಶ್ ದಾವಲೆ ಹಾಗೂ ಆದಿತ್ಯ ದಾವಲೆ, ಉದ್ಯಮಬಾಗದ ಸಂತೋಷ ದಿವಟಗಿ ಮತ್ತು ಮಚ್ಚೆ ನಿವಾಸಿ ರಫೀಕ್ ಶೇಖ್ ಸೇರಿದ್ದಾರೆ. ಈ ರೌಡಿಶೀಟರ್‌ಗಳು ಸಾರ್ವಜನಿಕವಾಗಿ ತಲ್ವಾರ್ ಪ್ರದರ್ಶಿಸಿ ಭೀತಿ ಹುಟ್ಟಿಸುತ್ತಿದ್ದರು.

ಆಶಾ ಭೋಸ್ಲೆ ನಿಧನದಿಂದ ಚಿತ್ರರಂಗಕ್ಕೆ ನಷ್ಟ: ಲಕ್ಷ್ಮೀ ಹೆಬ್ಬಾಳ್ಕರ್

ಬೆಳಗಾವಿ: ಭಾರತೀಯ ಚಿತ್ರರಂಗದ ಖ್ಯಾತ ಗಾಯಕಿ ಆಶಾ ಭೋಸ್ಲೆ ನಿಧನಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಸಂತಾಪ ಸೂಚಿಸಿದ್ದಾರೆ. ಕನ್ನಡ, ಹಿಂದಿ, ಮರಾಠಿ ಸೇರಿದಂತೆ ಸುಮಾರು 12 ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿರುವ ಆಶಾ ಭೋಸ್ಲೆ, ಭಾರತೀಯರ ಮನೆ ಮಾತಾಗಿದ್ದರು. ಅದ್ಭುತ ಕಂಠದ ಮೂಲಕ ಕೋಟ್ಯಂತರ ಅಭಿಮಾನಿಗಳನ್ನು ಹೊಂದಿದ್ದರು. ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ, ಪದ್ಮ ವಿಭೂಷಣ ಸೇರಿದಂತೆ ದೇಶದ ಅತ್ಯುನ್ನತ ಪ್ರಶಸ್ತಿಗಳಿಗೆ ಭಾಜನರಾಗಿದ್ದ ಅವರ ನಿಧನ ತುಂಬಲಾರದ ನಷ್ಟವನ್ನುಂಟು ಮಾಡಿದೆ ಎಂದು ಸಚಿವರು ತಿಳಿಸಿದ್ದಾರೆ. ಅವರ ಸಾವಿನ ನೋವಿನ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಅಭಿಮಾನಿಗಳಿಗೆ, ಕುಟುಂಬ ವರ್ಗದವರಿಗೆ ಆ ದೇವರು ನೀಡಲಿ ಎಂದು ಪ್ರಾರ್ಥಿಸುವೆ ಎಂದು ಸಂತಾಪ ಸೂಚಿಸಿದ್ದಾರೆ.

ಕಾರಿನಲ್ಲಿದ್ದ 30 ಲಕ್ಷ ರೂ. ದರೋಡೆ

ಹಾನಗಲ್ಲ: ತಾಲೂಕಿನ ಬಾಳಂಬಿಡ ಗ್ರಾಮದ ಬಳಿ ಶನಿವಾರ ಕಾರಿನಲ್ಲಿದ್ದ 30 ಲಕ್ಷ ರೂ. ಹಣ ದರೋಡೆ ಮಾಡಿದ ಘಟನೆ ನಡೆದಿದೆ. ಶಿರಶಿಯ ಅಬ್ದುಲ್ ರಹೀಮ್ ಸಿಕ್ಕಲಗಾರ ಎಂಬುವರು ತಮ್ಮ ಕಾರಿನಲ್ಲಿ 30ಲಕ್ಷ ಹಣ ಸಾಗಿಸುವ ವೇಳೆ ಈ ಘಟನೆ ಸಂಭವಿಸಿದೆ. ಶನಿವಾರ ರಾತ್ರಿ 8.30ರ ಸುಮಾರಿಗೆ ಹಾನಗಲ್ ಹಾವೇರಿ ರಸ್ತೆಯಲ್ಲಿ ಕಾರ್ ನಿಲ್ಲಿಸಿ ಮೂತ್ರ ವಿಸರ್ಜನೆ ಗೆ ತೆರಳಿದ ವೇಳೆ ದರೋಡೆ ನಡೆದಿದೆ. ಯಾರೋ ಎರಡು ಜನ ದುಷ್ಕರ್ಮಿಗಳು ಕಬ್ಬಿಣದ ರಾಡಿನಿಂದ ಹೊಡೆದು ಹಣ ದೋಚಿ ಪರಾರಿಯಾಗಿದ್ದಾರೆ. ಆಡೂರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಅಕಾಲಿಕ ಮಳೆಗೆ 84.70 ಹೆಕ್ಟೇರ್ ತೋಟಗಾರಿಕೆ ಹಣ್ಣುಗಳಿಗೆ ಹಾನಿ

ಮಾವು ಇಳುವರಿ ಅರ್ಧದಷ್ಟು ಕುಸಿತ

▸ ರುದ್ರಗೌಡ ಪಾಟೀಲ



ಗದಗ: ಅಕಾಲಿಕ ಆಲಿಕಲ್ಲು ಮಳೆ ಹಾಗೂ ಬಿರುಗಾಳಿಯ ಪರಿಣಾಮ ಜಿಲ್ಲೆಯ 148ಕ್ಕೂ ಅಧಿಕ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆ ಹಾನಿಯಾಗಿದೆ. ಮಾವು ಕೈಗೆ ಬರುವ ಹೊತ್ತಿನಲ್ಲಿ ಮಾವು ನೆಲಕ್ಕುದುರಿದ್ದರಿಂದ ಮಾವು ಬೆಳೆಗಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕುವಂತಾಗಿದೆ.

ಕಳೆದ ವರ್ಷ 4,131 ಮೆಟ್ರಿಕ್ ಟನ್ ಇಳುವರಿ ಇದ್ದ ಮಾವು ಪ್ರಸಕ್ತ ವರ್ಷ ಅಕಾಲಿಕ ಮಳೆ, ಆಲಿಕಲ್ಲು ಮಳೆ ಹಾಗೂ ಬಿರುಗಾಳಿಯ ಹೊಡೆತಕ್ಕೆ 2,448 ಮೆಟ್ರಿಕ್ ಟನ್‌ಗೆ ಇಳಿಕೆ ಕಂಡಿದೆ. ಕಳೆದ ವರ್ಷಕ್ಕಿಂತ ಅರ್ಧದಷ್ಟು ಮಾವು ಇಳುವರಿ ಕುಸಿತವಾದಂತಾಗಿದೆ.

ಸತತ ಬರಗಾಲ, ನೀರಿನ ತೊಂದರೆಯಿದ್ದರೂ ಸಾಲ ಮಾಡಿ ಮಾವಿನ ಬೆಳೆಗೆ ಟ್ಯಾಂಕರ್ ಮೂಲಕ ನೀರು ಪೂರೈಸಿ ಬೆಳೆದಿದ್ದ ಮಾವು ಕಾಯಿ ಹಣ್ಣಾಗುವುದರೊಳಗಾಗಿ ಗದಗ ತಾಲೂಕು ಸೇರಿ ಜಿಲ್ಲೆಯ ವಿವಿಧೆಡೆ ಕಳೆದ ತಿಂಗಳು ಸುರಿದ ಬಿರುಗಾಳಿ ಸಹಿತ ಅಕಾಲಿಕ ಆಲಿಕಲ್ಲು ಮಳೆಗೆ ಅಂದಾಜು 70 ಲಕ್ಷ ರೂ. ಅಧಿಕ ಮಾವು ಇಳುವರಿ ನಷ್ಟ ಉಂಟಾಗಿದ್ದು, ಮಾವು ಬೆಳೆಗಾರರು ಕಂಗಾಲಾಗಿದ್ದಾರೆ.

ದಿಗಂತ ವಿಶೇಷ

ತಾಲೂಕಿನ ಹುಲಕೋಟಿ, ಕುರ್ತಕೋಟಿ, ಅಂತೂರ-ಬೆಂತೂರ, ಹೊಸಹಳ್ಳಿ, ಶಾಗೋಟಿ, ದುಂದೂರ ಗ್ರಾಮಗಳ ಭಾಗದಲ್ಲಿ ಸಾವಿರಾರು ಎಕರೆ ಪ್ರದೇಶದಲ್ಲಿ ಮಾವು ಬೆಳೆಯಲಾಗಿತ್ತು. ಹುಲಕೋಟಿ ಮಾವಿನ ಹಣ್ಣಿಗೆ ಭಾರೀ ಬೇಡಿಕೆ ಇದೆ. ಸತತ ನಾಲ್ಕು ವರ್ಷಗಳ ಬರಕ್ಕೆ ಮಂಕಾಗಿದ್ದ ಮಾವು ಬೆಳೆಗಾರರ ಮುಖದಲ್ಲಿ ಈ ಬಾರಿ ಮಂದಹಾಸ ಮೂಡಿತ್ತು. ಅಲ್ಲದೇ, ಪ್ರಸಕ್ತ ವರ್ಷ ಮಾವು ಉತ್ತಮ ಬೆಲೆಗೆ ಮಾರಾಟವಾಗುವ ನಿರೀಕ್ಷೆ ಹೆಚ್ಚಿತ್ತು. ಆದರೆ, ಬೆಳೆದ ಮಾವು ಕಾಯಿ ಹಣ್ಣಾಗುವ ಸಮಯದಲ್ಲಿ ಬಿರುಗಾಳಿ ಸಹಿತ ಅಕಾಲಿಕ ಮಳೆಗೆ ಮಾವಿನ ಫಸಲು ನೆಲಕಚ್ಚಿದ್ದರಿಂದ ರೈತ ಕಂಗಾಲಾಗಿದ್ದಾನೆ.

ತಾಲೂಕಿನಲ್ಲಿ ಹುಲಕೋಟಿ, ಕುರ್ತಕೋಟಿ, ದುಂದೂರ ಸೇರಿದಂತೆ 220 ಹೆಕ್ಟೇರ್, ಮುಂಡರಗಿ ತಾಲೂಕಿನ ಕೊರ್ಲಹಳ್ಳಿ, ಹಮ್ಮಿಗಿ, ನಾಗರಳ್ಳಿ, ಹೆಸರೂರು ಭಾಗದ 40 ಹೆಕ್ಟೇರ್, ಶಿರಹಟ್ಟಿ ತಾಲೂಕಿನ 32, ಲಕ್ಷ್ಮೇಶ್ವರ, ಬಾಲೆಹೊಸೂರ, ಶಿಗ್ಲಿ ಭಾಗದ 65 ಹೆಕ್ಟೇರ್, ರೋಣ ತಾಲೂಕಿನ 6 ಹಾಗೂ ಗಜೇಂದ್ರಗಡ ತಾಲೂಕಿನ ನರೇಗಲ್, ರಾಜೂರು, ಕುಂಟೋಜಿ ಭಾಗದ 45 ಹೆಕ್ಟೇರ್ ಮತ್ತು ನರಗುಂದ ತಾಲೂಕಿನ ವಿವಿಧೆಡೆ 35 ಹೆಕ್ಟೇರ್ ಸೇರಿ ಒಟ್ಟು 408 ಹೆಕ್ಟೇರ್ ಪ್ರದೇಶ ಮಾವು ಬೆಳೆಯಲಾಗಿದೆ.

ತೋಟಗಾರಿಕೆ ಬೆಳೆ ಹಾನಿ

ಕಳೆದ ತಿಂಗಳು ಸುರಿದ ಅಕಾಲಿಕ ಮಳೆಗೆ ಕಲ್ಲಂಗಡಿ 36.50 ಹೆಕ್ಟೇರ್, ಟೊಮ್ಯಾಟೊ 2.10 ಹೆಕ್ಟೇರ್, ತೆಂಗು 1.40 ಹೆಕ್ಟೇರ್, ಮಾವು 9.20 ಹೆಕ್ಟೇರ್, ಪಪ್ಪಾಯ 5.92 ಹೆಕ್ಟೇರ್, ಡ್ರ್ಯಾಯಗನ್ ಫ್ರುಟ್ 0.40 ಹೆಕ್ಟೇರ್, ಬಾಳೆ 27.48 ಹೆಕ್ಟೇರ್ ಸೇರಿ 84.70 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಹಾನಿಯಾಗಿದೆ. ಆದರಲ್ಲಿ ಗದಗ ತಾಲೂಕಿನಲ್ಲಿ 3.90, ಲಕ್ಷ್ಮೇಶ್ವರ 8.60, ಮುಂಡರಗಿ 13.50, ಶಿರಹಟ್ಟಿ 58.70 ಹೆಕ್ಟೇರ್ ಪ್ರದೇಶದಲ್ಲಿ ಹಾನಿಯಾಗಿದೆ.

> **ಪ್ರಸಕ್ತ ವರ್ಷ ಮಾವು ಹೂವು ಬಿಡುವ ಸಂದರ್ಭದಲ್ಲಿ ಸುರಿದ ಅಕಾಲಿಕ ಮಳೆ, ಬಿರುಗಾಳಿಗೆ ಮಾವಿನ ಹೂವು, ಕಾಯಿಗಳು ಉದುರಿದ್ದರಿಂದ ಮಾವು ಕುಂಠಿತಗೊಳ್ಳಲು ಪ್ರಮುಖ ಕಾರಣವಾಗಿದೆ.**
> ■ **ಮಲ್ಲಿಕಾರ್ಜುನ ಬಿ., ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರು**

> **ಪ್ರಸಕ್ತ ವರ್ಷ ಮಾವು ಉತ್ತಮ ಇಳುವರಿ ಕೊಡುತ್ತದೆ ಎಂಬ ವಿಶ್ವಾಸದಲ್ಲಿದ್ದೆವು. ಆದರೆ, ಕಳೆದ ತಿಂಗಳು ಸುರಿದ ಬಿರುಗಾಳಿ ಸಹಿತ ಆಲಿಕಲ್ಲು ಮಳೆಗೆ ಅಪಾರ ಪ್ರಮಾಣದ ಮಾವಿನ ಫಸಲು ನೆಲಕಚ್ಚಿದೆ.**
> ■ **ಕರಿಯಪ್ಪ ರವಳೋಜಿ, ಮಾವು ಬೆಳೆಗಾರ**

ಸರ್ಕಾರ ಚಿತ್ರಕಲಾ ಶಿಕ್ಷಕರ ನೇಮಿಸಲಿ: ಸಂಕನೂರ



ಧಾರವಾಡ: ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ 20 ವರ್ಷಗಳಿಂದ ಚಿತ್ರಕಲಾ ಶಿಕ್ಷಕರ ನೇಮಿಸಿಲ್ಲ. ಈ ಕುರಿತು ಶಿಕ್ಷಕರು ಸಂಘಟಿತರಾಗಿ ಸರ್ಕಾರದ ಗಮನ ಸೆಳೆಯವಂತೆ ವಿಧಾನ ಪರಿಷತ್ ಸದಸ್ಯ ಪ್ರೊ.ಎಸ್.ವಿ.ಸಂಕನೂರ ಸಲಹೆ ನೀಡಿದರು.

ನಗರದ ಚಿತ್ರಕಲಾ ಮಹಾವಿದ್ಯಾಲಯದ ಸುವರ್ಣ ಸಂಭ್ರಮದ ಅಂಗವಾಗಿ ಭಾನುವಾರ ಮಹಾವಿದ್ಯಾಲಯದ ಆವರಣದಲ್ಲಿ ಆಯೋಜಿಸಿದ್ದ ಸಾಧಕರಿಗೆ ಸನ್ಮಾನ ಹಾಗೂ ಸುವರ್ಣ ವರ್ಣ ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸರ್ಕಾರವು ಭೌಗೋಳಿಕ ಸಂಪತ್ತಿನಷ್ಟೇ (ಅರಣ್ಯ, ಖನಿಜ) ಪ್ರಾಮುಖ್ಯತೆ ಶಿಲ್ಪಕಲೆ, ಚಿತ್ರಕಲೆಗೂ ನೀಡಬೇಕು. ಚಿತ್ರಕಲೆ ಅಭಿರುಚಿ ಪ್ರೋತ್ಸಾಹಿಸುವ ಜೊತೆ ಉಳಿಸಿ ಬೆಳೆಸಲು ಅಗತ್ಯ ಕ್ರಮ ವಹಿಸಬೇಕು. ಚಿತ್ರಕಲಾ ಶಿಕ್ಷಕರ ನೇಮಿಸಬೇಕು ಎಂದು ಆಗ್ರಹಿಸಿದರು.

ಚಿತ್ರಕಲಾ ಕ್ಷೇತ್ರಕ್ಕೆ ಮಹಾವಿದ್ಯಾಲಯದ ಕೊಡುಗೆ ಅನನ್ಯ. ಇಲ್ಲಿ ಅಧ್ಯಯನ ಮಾಡಿದ ಸುಮಾರು 30 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿ ಸಂಸ್ಥೆಯ ಗೌರವ ಹೆಚ್ಚಿಸಿದ್ದಾಗಿ ಕೊಂಡಾಡಿದರು.

ಸರ್ಕಾರಇಂತಹಸಂಸ್ಥೆಯಸುವರ್ಣ ಸಂಭ್ರಮಕ್ಕೆ ಅನುದಾನ ನೀಡಬೇಕಿತ್ತು. ಆದರೆ, ಸಂಸ್ಥೆಯಲ್ಲಿ ಬದುಕು ಕಟ್ಟಿಕೊಂಡ ಹಳೇ ವಿದ್ಯಾರ್ಥಿಗಳೇ ಸ್ವತಃ ಹಣ ನೀಡಿ ಸುವರ್ಣ ಸಂಭ್ರಮದ ಮೂಲಕ ಸಂಸ್ಥೆಯ ಋಣ ತಿರಿಸಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಲಾವಿದ ಬಿ.ಮಾರುತಿ, ರಾಜ್ಯ ಚಿತ್ರಕಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಬಾಲು ಗಸ್ತಿ, ಎಂ.ಆರ್ ಬಾಳಿಕಾಯಿ, ಬಿ.ಎಂ. ಬಡಿಗೇರ, ಎನ್.ಎಂ ದಾಟನಾಳ, ಬಿ.ಎಸ್.ತೋಟಗಿ, ಬಸವರಾಜ ಕುರಿ, ಎಸ್.ಕೆ ಪತ್ತಾರ ಅನೇಕರು ಪಾಲ್ಗೊಂಡಿದ್ದರು.

ಶೋಭಾಯಾತ್ರೆ

ಇದಕ್ಕೂ ಮೊದಲು ಕರ್ನಾಟಕ ಮಹಾವಿದ್ಯಾಲಯದ ವೃತ್ತದಿಂದ ಜ್ಯುಬ್ಲಿ ವೃತ್ತದ ಮೂಲಕ ಆರ್ಟ್ ಗ್ಯಾಲರಿವರೆಗೆ ಬೃಹತ್ ಶೋಭಾಯಾತ್ರೆ ನಡೆಯಿತು. ಇದರಲ್ಲಿ ನೂರಾರು ಹಳೇ ವಿದ್ಯಾರ್ಥಿಗಳು ಮತ್ತು ಹಿರಿಯ ಚಿತ್ರಕಲಾವಿದರು ಪಾಲ್ಗೊಂಡು ಯಶಸ್ವಿಗೊಳಿಸಿದರು.

> **ಇಡೀ ವಿಶ್ವದಲ್ಲಿಯೇ ಭಾರತ ಶಿಲ್ಪಕಲೆ ಹಾಗೂ ಚಿತ್ರಕಲೆಗೆ ಹೆಸರಾಗಿದೆ. ಇಂತಹ ಕಲೆಯನ್ನು ಉಳಿಸಿ, ಬೆಳೆಸುವ ನಿಟ್ಟಿಯಲ್ಲಿ ಸರ್ಕಾರ ಹೆಚ್ಚಿನ ಗಮನ ಹರಿಸಬೇಕು. ನಿರ್ಲಕ್ಷಿಸಬಾರದು.**
> ■ **ಪ್ರೊ.ಎಸ್.ವಿ.ಸಂಕನೂರ, ವಿಧಾನ ಪರಿಷತ್ ಸದಸ್ಯರು**

ದಡ್ಡೇನವರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ

ಎಲ್ಲ ಕಾಲದಲ್ಲೂ ದುಡ್ಡು ಸಂತೋಷ ಕೊಡಲ್ಲ: ಶ್ರೀಗಳು

ಬಾಗಲಕೋಟೆ: ಈಗಿನ ಕಾಲದಲ್ಲಿ ಮನುಷ್ಯನ ಮನಸ್ಥಿತಿ ಹಾಳಾಗಿ ಹೋಗಿದೆ. ಸಂಪತ್ತಿನ ಮೂಲಕ ಸಂತೋಷ ಹುಡುಕಲು ಹೊರಟಿದ್ದಾನೆ. ಆದರೆ, ಎಲ್ಲ ಕಾಲದಲ್ಲಿಯೂಸಂಪತ್ತು ಸಂತೋಷವನ್ನು ಕೊಡುವುದಿಲ್ಲ. ಹಾಗಾಗಿ ಮನುಷ್ಯ ಜೀವನವನ್ನು ಸಂತೋಷದಿಂದ ಕಟ್ಟುವತ್ತ ಸಾಗಬೇಕಾಗಿದೆ ಎಂದು ಕೊಪ್ಪಳದ ಗವಿಸಿದ್ದೇಶ್ವರ ಮಠದ ಶ್ರೀ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಹೇಳಿದರು.

ಭಾನುವಾರ ನಗರದ ದಡ್ಡೇನವರ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಸೂಪರ್ ಸ್ಪೆಷಾಲಿಟಿ ವಿಭಾಗ ಹಾಗೂ ಬಾಗಲಕೋಟೆ ಹೃದಯ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು. ಮನುಷ್ಯ ದುಃಖ ಕಳೆದುಕೊಂಡು ಸಂತೋಷ ಪಡೆದುಕೊಳ್ಳಬೇಕು. ಮನುಷ್ಯ ಸಹಜವಾಗಿ ಸಂಪತ್ತಿನಿಂದ ಸಂತೋಷ ಸಿಗುತ್ತದೆ ಎಂದುಕೊಂಡಿದ್ದಾನೆ. ಸಂತೋಷ ಯಾವುದರಲ್ಲಿ ಸಿಗುತ್ತದೆ ಎಂಬುವುದು ತಿಳಿಯಬೇಕಾಗಿದೆ ಎಂದರು.

ಮನುಷ್ಯ ಯೋಗಿಯಂತೆ, ಸಂತರಂತೆ ಬದುಕಬೇಕಾದರೆ ಸೇವಿಸುವ ಆಹಾರ ಚೆನ್ನಾಗಿರಬೇಕು. ಮಾಡುವ ವ್ಯವಹಾರ ಸರಿ ಇರಬೇಕು ಹಾಗೂ ವಿಚಾರ ಸರಿಯಾಗಿರಬೇಕು. ಸಂತರೆಂದರೆ ಯಾರು ಎದೆಯೊಳಗೆ ಸಂತೋಷದಿಂದಿದ್ದಾರೆ ಅವರೇ ನಿಜವಾದ ಸಂತರು. ಹಿಂದಿನ ಕಾಲದಲ್ಲಿ ವ್ಯವಹಾರಗಳು ಮನುಷ್ಯನ ವಿಶ್ವಾಸದ ಮೇಲೆ ನಡೆಯುತ್ತಿದ್ದವು. ಆದರೆ, ಈಗಿನ ಕಾಲದಲ್ಲಿ ಬಾಂಡ್ ಪೇಪರ್ ಚೆಕ್‌ಗಳ ಮೂಲಕ ನಡೆಯುತ್ತಿದೆ. ಅಂದರೆ ವ್ಯವಹಾರಿಕವಾಗಿ ಮನುಷ್ಯ ಎಷ್ಟು ಕೆಟ್ಟಿದ್ದಾನೆ. ಆರೋಗ್ಯ ಸರಿ ಇದ್ದರೆ ಮನುಷ್ಯನ ವ್ಯವಹಾರವು ಸರಿಯಾಗಿರುತ್ತದೆ. ಹಾಗಾಗಿ ಋಷಿ ಹೇಳುವ ಮಾತಿನಂತೆ ಆಹಾರ, ವಿಹಾರ, ವಿಚಾರ ಸರಿ ಇರಬೇಕು ಎಂದರು.



ಸಂಸದ ಪಿ.ಸಿ ಗದ್ದಿಗೌಡರ ಮಾತನಾಡಿ, ಈ ಭಾಗದ ಜನರು ಬಹಳಷ್ಟು ನೋವಿನಿಂದ ಬಳಲುವಂತಹ ಸ್ಥಿತಿ ಇದೆ. ಕ್ಲಿಷ್ಟಕರ ವಾತಾವರಣದಲ್ಲಿ ಜನರ ಆರೋಗ್ಯದಲ್ಲಿ ಏರುಪೇರು ಹೆಚ್ಚಾಗಿದೆ. ಜನರ ಸಂಕಷ್ಟ ನೋಡಿ ಜನರಿಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ದಡ್ಡೇನವರ ಅವರು ಜನರ ಕಲ್ಯಾಣ ಬಯಸಿ ಆಸ್ಪತ್ರೆ ಸಂಶೋಧನಾ ಕೇಂದ್ರ ಆರಂಭಿಸಿದ್ದಾರೆ. ದಡ್ಡೇನವರ ಅವರು ಹಳ್ಳಿ-ಹಳ್ಳಿಯಿಂದ ಈ ಆಸ್ಪತ್ರೆಗೆ ಬರುವ ಜನರಿಗೆ ಒಳ್ಳೆಯ ಚಿಕಿತ್ಸೆ ನೀಡುತ್ತಾರೆ ಎಂಬ ಆತ್ಮ ವಿಶ್ವಾಸಿ ಇದೆ ಎಂದರು.

ಮಾಜಿ ಶಾಸಕ ರಾಜಶೇಖರ ಶೀಲವಂತ ಮಾತನಾಡಿ, ಎಂ.ಎಸ್. ದಡ್ಡೇನವರ ಅವರು ಬಹಳದಿನದ ಕನಸಾಗಿರುವ ಸೂಪರ ಸ್ಪೆಷಾಲಿಟಿ ವಿಭಾಗ ಹಾಗೂ ಬಾಗಲಕೋಟೆ ಹೃದಯ ಕೇಂದ್ರ ಇಂದು ಉದ್ಘಾಟನಯಾಗಿದ್ದು, ಆಸ್ಪತ್ರೆಯಲ್ಲಿ 40 ಡಾಕ್ಟರ್‌ಗಳು ಸೇವೆ ಸಲ್ಲಿಸುತ್ತಿದ್ದಾರೆ. ಮೊದಲು 80 ಬೆಡ್ ಹೊಂದಿತ್ತು. ಈಗ ಮತ್ತೆ 40 ಬೆಡ್‌ಗಳು ಸೇರಿದಂತೆ ಒಟ್ಟು 120 ಬೆಡ್‌ಗಳ ಈ ಆಸ್ಪತ್ರೆಯು ಹೊಂದಿದೆ ಎಂದರು. ಮಾಜಿ ಶಾಸಕ ವೀರಣ್ಣ ಚರಂತಿಮಠ ಮಾತನಾಡಿ, ಬಾಗಲಕೋಟೆಯಲ್ಲಿ ಹಿಂದೆ ಕೈಬೆರಳೆಣಿಕೆಯಲ್ಲಿ ಆಸ್ಪತ್ರೆಗಳಿದ್ದವು. ಇಲ್ಲಿಯ ಜನರು ಹೆಚ್ಚಿನ ಚಿಕಿತ್ಸೆಗಾಗಿ ಸೋಲಾಪುರ, ಮಿರಜ್, ಬೆಳಗಾವಿ ಹಾಗೂ ಹುಬ್ಬಳ್ಳಿಗೆ ತೆರಳುತ್ತಿದ್ದರು. ಈಗ ಅದನ್ನು ಮೀರಿಸುವಷ್ಟು ದೊಡ್ಡದಾಗಿ ಬಾಗಲಕೋಟೆ ಬೆಳೆದು ನಿಂತಿದೆ. ನಿಮ್ಮನ್ನು ಆಶ್ರಯಿಸಿ ಬಂದ ರೋಗಿಗಳಿಗೆ ಒಳ್ಳೆಯ ಗುಣಮಟ್ಟದ ಚಿಕಿತ್ಸೆ ಸಿಗಬೇಕು ಎಂದರು.

ರಾಜ್ಯಸಭಾ ಸದಸ್ಯ ನಾರಾಯಾಣಸಾ ಭಾಂಡಗೆ, ಎಂ.ಕೆ. ಪಟ್ಟಣಶೆಟ್ಟಿ, ಡಾ.ಎಂ.ಎಸ್.ದಡ್ಡೇನವರ, ಡಾ.ಸುಮಂಗಲಾ ದಡ್ಡೇನವರ, ಡಾ.ವಿಜಯ ದಡ್ಡೇನವರ, ನೇಹಾ ದಡ್ಡೆನ್ನವರ, ಸಂತೋಷ ಚಿಕ್ಕೋಡಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು. ರವೀಂದ್ರ ಸೊರಗಾವಿ ಪ್ರಾರ್ಥಿಸಿದರು.

ಚಿರತೆ ರಕ್ಷಿಸಿದ ಅರಣ್ಯ ಇಲಾಖೆ

ಹೊನ್ನಾವರ: ತಾಲೂಕಿನ ಸಾಲ್ಕೋಡ್ ಗ್ರಾಪಂ ವ್ಯಾಪ್ತಿಯ ಅರೇಅಂಗಡಿ ಸಮೀಪದ ಗೇರು ಪ್ಲ್ಯಾಂಟೇಶನ್ ಪ್ರದೇಶದಲ್ಲಿ ಚಿರತೆಯೊಂದು ಉರುಳಿಗೆ ಸಿಲುಕಿರುವುದನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ರಕ್ಷಿಸಿ ಸುರಕ್ಷಿತವಾಗಿ ತೆಗೆದುಕೊಂಡು ಹೋಗಿರುವ ಘಟನೆ ನಡೆದಿದೆ.

ಗೇರು ಪ್ಲ್ಯಾಂಟೇಶನ್ ಪ್ರದೇಶದಲ್ಲಿ ಕಾಡು ಪ್ರಾಣಿಗಳಿಂದ ರಕ್ಷಣೆಗಾಗಿ ಅಳವಡಿಸಿದ ಉರುಳಿಗೆ ಸಿಲುಕಿ ಹಾಕಿಕೊಂಡ ಚಿರತೆಯು ದಿಕ್ಕು ಕಾಣದೇ ಚಿರಾಡುತ್ತಿತ್ತು. ಚಿರಾಟದ ಶಬ್ದ ಕೇಳಿ ಸ್ಥಳಕ್ಕೆ ಬಂದು ನೋಡಿದ ಸಾರ್ವಜನಿಕರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು. ಅರಣ್ಯ ಇಲಾಖೆಯ ಅಧಿಕಾರಿಗಳು ಕೂಡಲೇ ಕಾರ್ಯಪ್ರವೃತ್ತರಾಗಿ ಚಿರತೆ ರಕ್ಷಿಸಿದ್ದಾರೆ. ಸಿಕ್ಕಿಬಿದ್ದ ಚಿರತೆ ನೋಡಲು ಸಾರ್ವಜನಿಕರು ತಂಡೋಪ ತಂಡವಾಗಿ ಬಂದು ಕೂತೂಹಲದಿಂದ ವಿಕ್ಷೀಸಿದ್ದು ಕಂಡು ಬಂತು.



ರಾಜ್ಯಮಟ್ಟಕ್ಕೆ ಮೂರು ರ್‍ಯಾಂಕ್

ಆಕ್ಸ್‌ಫರ್ಡ್ ಕಾಲೇಜ್ ಉತ್ತಮ ಸಾಧನೆ

ಮುದ್ದೇಬಿಹಾಳ: ತಾಲೂಕಿನ ನಾಗರಬೆಟ್ಟ ಆಕ್ಸಫರ್ಡ್ ಪಾಟೀಲ್ಸ್ ಸಮೂಹ ಶಿಕ್ಷಣ ಸಂಸ್ಥೆಯ ಆಕ್ಸಫರ್ಡ್ ಪಾಟೀಲ್ಸ್ ಸೈನ್ಸ್ ಪಿಯು ಕಾಲೇಜಿನ ಪಿಯುಸಿ ದ್ವಿತೀಯ ವರ್ಷದ ನಾಲ್ವರು ವಿದ್ಯಾರ್ಥಿಗಳು ವಿಜ್ಞಾನ ವಿಭಾಗದಲ್ಲಿ ರಾಜ್ಯಮಟ್ಟದ 3 ರ್‍ಯಾಂಕ್ ಬಾಚಿಕೊಳ್ಳುವ ಮೂಲಕ ಅತ್ಯುತ್ತಮ ಸಾಧನೆ ತೋರಿದ್ದಾರೆ.





ಬಸವನ ಬಾಗೇವಾಡಿಯ ಲಕ್ಷ್ಮೀ ಅಡಗಿಮನಿ 592 ಅಂಕ (ಗಣಿತ, ಭೌತಶಾಸ್ತ್ರ, ಜೀವಶಾಸ್ತ್ರ ವಿಷಯಗಳಲ್ಲಿ 100 ಅಂಕ) ರಾಜ್ಯಕ್ಕೆ 6ನೇ, ಕೌಜಲಗಿಯ ಭಾಗ್ಯಾ ಹೊಸಮನಿ, ಕಲಬುರ್ಗಿಯ ನಂದಿತಾ ರೆಡ್ಡಿ ತಲಾ 591 ಅಂಕ ಪಡೆದು ರಾಜ್ಯಕ್ಕೆ 7ನೇ, ಬಾಗಲಕೋಟ ಜಿಲ್ಲೆ ಮುಧೋಳದ ಸಂಜನಾ ದಾಸನಗೌಡರ 590 ಅಂಕ ಪಡೆದು ರಾಜ್ಯಕ್ಕೆ 8ನೇ ಸ್ಥಾನ ಗಳಿಸಿ ಸಾಧಕರಾಗಿ ಹೊರಹೊಮ್ಮಿದ್ದಾರೆ.

900 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 163 ವಿದ್ಯಾರ್ಥಿಗಳು ಪ್ರಥಮ ಸ್ಥಾನ. ಕಾಲೇಜಿನ ಒಟ್ಟಾರೆ ಫಲಿತಾಂಶ ಶೇ.99.06 ಆಗಿದೆ. ಗಣಿತ ವಿಷಯದಲ್ಲಿ 418 ವಿದ್ಯಾರ್ಥಿಗಳು 100 ಅಂಕ ಪಡೆದ ರಾಜ್ಯದ ಮೊದಲ ಕಾಲೇಜು ಎನ್ನುವ ಸಾಧನೆ ಮಾಡಿದ್ದಾರೆ. ಭೌತಶಾಸ್ತ್ರದಲ್ಲಿ 72, ಜೀವಶಾಸ್ತ್ರದಲ್ಲಿ 70 ಜನ 100 ಅಂಕ ಗಳಿಸಿದ್ದಾರೆ. ವಿದ್ಯಾರ್ಥಿಗಳಾದ ಗಜೇಂದ್ರಗಡದ ಅದಿತಿ ಸವಣೂರ (588), ದೇಸಣಗಿಯ ಭಾಗ್ಯಲಕ್ಷ್ಮೀ (571), ಯರನಾಳದ ಲಕ್ಷ್ಮೀ ಸಜ್ಜನ, ಕುರಗೋಡದ ವರ್ಷಾ ಯರಗಟ್ಟಿ (586), ಹಿರೇಬಾಗೇವಾಡಿಯ ಚಿನ್ಮಯಿ ಎನ್ ಸೇರಿದಂತೆ ಹಲವರು (584) ಅಂಕ ಪಡೆದು ವಿಶೇಷ ಸಾಧನೆ ತೋರಿದವರಾಗಿದ್ದಾರೆ. ಸಂಸ್ಥೆಯ ಚೇರ್ಮನ್ ಎಂ.ಎಸ್.ಪಾಟೀಲ ಅವರು, ನಮ್ಮ ಸಂಸ್ಥೆ ಕರ್ನಾಟಕ ರಾಜ್ಯದಲ್ಲಿಯೇ ಅತ್ಯಂತ ಜನಪ್ರೀಯ ಕಾಲೇಜು ಎಂದು ಕರೆಸಿಕೊಳ್ಳುವತ್ತ ನಮ್ಮ ಗುರಿಯನ್ನು ಕೇಂದ್ರೀಕರಿಸಿದ್ದೇವೆ. ಉನ್ನತ ಶಿಕ್ಷಣ ಪಡೆಯುವಲ್ಲಿ ವಿದ್ಯಾರ್ಥಿಗಳನ್ನು ತಯಾರು ಮಾಡುವುದು ನಮ್ಮ ಸಂಸ್ಥೆಯ ಗುರಿ ಎಂದು ತಿಳಿಸಿದರು.

ಸಂಸ್ಥೆಯ ಆಡಳಿತಾಧಿಕಾರಿ ಅಮಿತಗೌಡ ಪಾಟೀಲ, ವಿದ್ಯಾರ್ಜನೆ, ಗುಣಮಟ್ಟದ ಶಿಕ್ಷಣದಲ್ಲಿ ರಾಜಿ ಮಾಡಿಕೊಳ್ಳುವ ಮಾತೇ ಇಲ್ಲ, ಈ ಬಾರಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ವೈದ್ಯಕೀಯ ಪ್ರವೇಶ ಪಡೆಯುವಂತೆ ಮಾಡುವ ಮಹತ್ತರ ಗುರಿ ಹಾಕಿಕೊಂಡಿದ್ದೇವೆ ಎಂದರು. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಇನ್ನೋರ್ವ ಆಡಳಿತಾಧಿಕಾರಿ ದರ್ಶನಗೌಡ ಪಾಟೀಲ, ಮುಖ್ಯ ವ್ಯವಸ್ಥಾಪಕ ವಿಜಯಕುಮಾರ ಪಾಟೀಲ, ಪ್ರಾಂಶುಪಾಲ ರೇವಣಸಿದ್ದ ಚಲವಾದಿ (ಮುರಾಳ) ಹಾಗೂ ಸಂಸ್ಥೆಯ ಎಲ್ಲ ಬೋಧಕ, ಬೋಧಕೇತರ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಆಶಾ ಭೋಸ್ಲೆ ನಿಧನ: ಶಾಸಕ ಆರ್‌ವಿಡಿ ಸಂತಾಪ

ಹಳಿಯಾಳ: ಭಾರತೀಯ ಸಂಗೀತ ಲೋಕದ ಅಗ್ರಗಣ್ಯ ಹಾಗೂ ಮೆಚ್ಚಿನ ಹಿನ್ನಲೆ ಗಾಯಕಿ ಆಶಾ ಭೋಸ್ಲೆ ಅವರು ತಮ್ಮ 92ನೇ ವಯಸ್ಸಿನಲ್ಲಿ ವಯೋಸಹಜ ಅನಾರೋಗ್ಯದಿಂದ ಅಗಲಿರುವ ಸುದ್ದಿ ಮನಸ್ಸಿಗೆ ತುಂಬಾ ನೋವುಂಟುಮಾಡಿದೆ.

ತಮ್ಮ ಅದ್ಭುತ ಕಂಠ ಮಾಧುರ್ಯ, ಅಪಾರ ಪ್ರತಿಭೆ ಹಾಗೂ ಅನನ್ಯ ಶೈಲಿಯ ಗಾಯನದ ಮೂಲಕ ಅವರು ಹಲವು ದಶಕಗಳ ಕಾಲ ಭಾರತೀಯ ಸಂಗೀತ ಲೋಕವನ್ನು ಶ್ರೀಮಂತಗೊಳಿಸಿದರು. ಅವರ ಧ್ವನಿಯಲ್ಲಿ ಭಾವನೆ ಇತ್ತು, ಜೀವಂತಿಕೆ ಇತ್ತು, ಮನಸ್ಸನ್ನು ಸ್ಪರ್ಶಿಸುವ ಶಕ್ತಿ ಇತ್ತು ಎಂದು ಹಳಿಯಾಳ ಕ್ಷೇತ್ರದ ಹಿರಿಯ ಶಾಸಕ ಆರ್.ವಿ.ದೇಶಪಾಂಡೆ ಶೋಕ ಸಂದೇಶ ತಿಳಿಸಿದ್ದಾರೆ.

80ರ ದಶಕದಲ್ಲಿ ಚಲನಚಿತ್ರಗಳಲ್ಲಿ ಪಾಶ್ಚಾತ್ಯ ಶೈಲಿಯ ಗಾನ ಮಾಧುರ್ಯಕ್ಕೆ ಸೋತವರೇ ಇಲ್ಲ. ಭಾವನಾತ್ಮಕ ಗೀತೆಗಳಿಂದ ಭಕ್ತಿಗೀತೆ, ಪ್ರೇಮಕಾವ್ಯಗಳವರೆಗೆ, ಪ್ರತಿಯೊಂದು ಹಾಡಿಗೂ ಅವರು ವಿಶಿಷ್ಟ ಜೀವ ತುಂಬಿದರು. ಅನೇಕ ಭಾಷೆಗಳಲ್ಲಿ ಸಾವಿರಾರು ಹಾಡುಗಳನ್ನು ಹಾಡಿ, ತಮ್ಮ ಪ್ರತಿಭೆಯಿಂದ ಕೋಟ್ಯಾಂತರ ಅಭಿಮಾನಿಗಳ ಮನಸ್ಸನ್ನು ಗೆದ್ದರು. ಅವರ ಹಾಡುಗಳು ಕೇವಲ ಸಂಗೀತವಲ್ಲ, ಅನೇಕ ಜನರ ಜೀವನದ ಸಿಹಿ-ಕಹಿ ನೆನಪುಗಳ ಭಾಗವಾಗಿವೆ. ಈ ದುಃಖದ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ದು:ಖ ಭರಿಸುವ ಶಕ್ತಿ ನೀಡಲಿ. ಹಾಗೂ ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಶೋಕ ವ್ಯಕ್ತಪಡಿಸಿದ್ದಾರೆ.

ಭೀಷ್ಮ,ಪರಶುರಾಮನ ಅಪರೂಪದ ತಾಳಮದ್ದಲೆ



ಶಿರಸಿ: ಭೀಷ್ಮ ಹಾಗೂ ಪರಶುರಾಮನ ಸಂವಾದದ ಅಪರೂಪದ ತಾಳಮದ್ದಲೆ ತಾಲೂಕಿನ ಕೆರೇಕೈನ ಛಂದಸ್ವತಿಯಲ್ಲಿ ನಡೆಯಿತು.

ಭೀಷ್ಮ ವಿಜಯದ ಕೊನೆಯ ಭಾಗದ ಯಕ್ಷ ಸಂವಾದ ಗುರುವೇ ನಿನ್ನೊಳು ಸಮರದ ದೃಶ್ಯಕಾವ್ಯವಾಗಿ ಪ್ರೇಕ್ಷಕರಿಗೆ ಕಟ್ಟಿಕೊಟ್ಟಿತು. ಹಿರಿಯ ಕಲಾವಿದರುಗಳಾದ ಡಾ.ಎಂ.ಪ್ರಭಾಕರ ಜೋಶಿ ಹಾಗೂ ಅಶೋಕ ಭಟ್ಟ ಉಜಿರೆ ಭಾಗವಹಿಸಿ ಮಾತಿನ ಮಂಟಪ ನಿರ್ಮಿಸಿ, ಕರ್ಮ ಧರ್ಮದ ಸಂಕಟವನ್ನೂ ತೆರೆದಿಟ್ಟರು.ಭಾಗವತಿಕೆಯಲ್ಲಿ ಪ್ರಸಿದ್ಧ ಭಾಗವತ ಕೇಶವ ಹೆಗಡೆ ಕೊಳಗಿ ಅವರ ಅಪರೂಪದ ಸ್ವರ ಮಂಗಲದಲ್ಲಿ, ಮದ್ದಲೆಯಲ್ಲಿ ಶಂಕರ ಭಾಗವತ ಯಲ್ಲಾಪುರ, ಚಂಡೆಯಲ್ಲಿ ಪ್ರಸನ್ನ ಹೆಗ್ಗಾರ್ ವಾದನಗಳ ಮೂಲಕ ಝೇಂಕರಿಸಿದರು.ಪ್ರಾಸ್ತಾವಿಕವಾಗಿ ಮಾತನಾಡಿದ ವಿ.ಉಮಾಕಾಂತ ಭಟ್ಟ ಕೆರೇಕೈ, ಛಂದಸ್ವತಿ ಪ್ರವೇಶದ ದಿನದಂದು ನಾಲ್ಕು ದಶಕಗಳ ಕಾಲ ತಾಳಮದ್ದಲೆ ಕ್ಷೇತ್ರದಲ್ಲಿ ಅರ್ಥ ಹೇಳಿದ್ದ ಕೆರೇಕೈ ಕೃಷ್ಣ ಭಟ್ಟ ಅವರ ಸ್ಮರಣೆಯಲ್ಲಿ ತಾಳಮದ್ದಲೆ ಹಮ್ಮಿಕೊಳ್ಳಲಾಗಿದೆ. ಗಾನ ಹಾಗೂ ಮಾತಿನ ಮಿಳಿತದ ಕಾರ್ಯಕ್ರಮ ಎಂದರು.

ಇದಕ್ಕೂ ಮೊದಲು ಗಾನ ಸಿಂಚನ ಭಜನಾ ಮಂಡಳಿ ಕೆರೇಕೈ ಹಳದೋಟದ ಮಾತೆಯರು ಭಜನೆ ಹಾಡಿ ಗಮನ ಸೆಳೆದರು.

ಗೋವು ರಕ್ಷಿಸಿದ ಅಗ್ನಿಶಾಮಕ ಸಿಬ್ಬಂದಿ

ಕುಮಟಾ: ತಾಲೂಕಿನ ಬಗ್ಗೋಣ ಗ್ರಾಮದಲ್ಲಿ ಶನಿವಾರ ಮಧ್ಯಾಹ್ನ ಸಂಭವಿಸಿದ ಘಟನೆ ಒಂದರಲ್ಲಿ, 30 ಅಡಿ ಆಳದ ಬಾವಿಗೆ ಬಿದ್ದ ಗೋವನ್ನು ಕುಮಟಾ ಅಗ್ನಿಶಾಮಕ ಠಾಣೆಯ ಸಿಬ್ಬಂದಿ ಯಶಸ್ವಿಯಾಗಿ ರಕ್ಷಿಸಿದರು.ಬಗ್ಗೋಣದ ನಿವಾಸಿ ವಿಶ್ವಾಸ ಗುನಗ ಅವರ ಮನೆಯ ಎದುರಿನ ಬಾವಿಗೆ ಗೋವು ಅಕಸ್ಮಾತ್ ಬಿದ್ದಿತ್ತು. ಈ ಬಗ್ಗೆ ತಕ್ಷಣವೇ ವಿಶ್ವಾಸ ಗುನಗ ಅವರು ಕುಮಟಾ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದರು. ಮಾಹಿತಿ ದೊರಕುತ್ತಿದ್ದಂತೆ ಠಾಣಾಧಿಕಾರಿ ಟಿ.ಎನ್. ಗೊಂಡ ಅವರ ನೇತೃತ್ವದ ತಂಡ ತಕ್ಷಣ ಸ್ಥಳಕ್ಕೆ ಧಾವಿಸಿತು.ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಪರಿಸ್ಥಿತಿಯನ್ನು ಸಮೀಕ್ಷೆ ಮಾಡಿ, ಸೂಕ್ತ ಸುರಕ್ಷತಾ ಕ್ರಮ ಕೈಗೊಂಡು ಬಾವಿಗೆ ಇಳಿದು ಹಸುವನ್ನು ಯಾವುದೇ ಅಪಾಯವಾಗದಂತೆ ಸುರಕ್ಷಿತವಾಗಿ ಮೇಲಕ್ಕೆತ್ತುವಲ್ಲಿ ಯಶಸ್ವಿಯಾಯಿತು.ಠಾಣಾಧಿಕಾರಿ ತಮ್ಮಯ್ಯ ಎನ್. ಗೊಂಡ, ಪ್ರಮುಖ ಅಗ್ನಿಶಾಮಕ ಅಧಿಕಾರಿಗಳಾದ ಮಾಸ್ತಿ ಗೊಂಡ, ರಾಘವೇಂದ್ರ ಪಟಗಾರ, ಎಫ್.ಡಿ ಅಜಯ್, ಎಫ್.ಎಂ ಪ್ರಮೋದ ಪಟಗಾರ, ನಾಗರಾಜ ನಾಯ್ಕ ಹಾಗೂ ಮಹೇಶ ಶೆಟ್ಟಿ ಮತ್ತಿತರರಿದ್ದರು.



ಹೊನ್ನಾವರ: ಭೂಕೈಲಾಸದ ಪುರಾಣ ಪ್ರಸಿದ್ಧ ಪಂಚ ಕ್ಷೇತ್ರಗಳಲ್ಲಿ ಒಂದಾದ ತಾಲೂಕಿನ ಗುಣವಂತೆಯ ಶಂಭುಲಿಂಗೇಶ್ವರ ದೇವಸ್ಥಾನದ ನೂತನ ಶಿಲಾಮಯ ಕಟ್ಟಡದ ಲೋಕಾರ್ಪಣೆ, ಅಷ್ಟಬಂಧ ಹಾಗೂ ಬ್ರಹ್ಮಕಲಶೋತ್ಸವ ಭಾನುವಾರ ವಿಜೃಂಭಣೆಯಿಂದ ನಡೆಯಿತು.

ಜನಮನ ಸೆಳೆದ ಮುಂಡಳ್ಳಿ ಭಕ್ತಿ ಸಂಗೀತ ಸುಧೆ

ಹೊನ್ನಾವರ: ಪುರಾಣ ಪ್ರಸಿದ್ಧ ಶ್ರೀ ಗುಣವಂತೆ ಶಂಭುಲಿಂಗೇಶ್ವರ ದೇವರ ಪುನರ್ ಪ್ರತಿಷ್ಠೆ ಅಷ್ಟ ಬಂಧ ಬ್ರಹ್ಮ ಕಲಶೋತ್ಸವ ಮೂರನೆ ದಿನ ಭಾನುವಾರ ಮದ್ಯಾಹ್ನದ ಸಾಂಸ್ಕೃತಿಕ ಕಾರ್ಯಕ್ರಮದ ಭಾಗವಾಗಿ ಉಮೇಶ ಮುಂಡಳ್ಳಿ ಅವರ ನಿನಾದ ಕಲ್ಚರಲ್ ಅಕಾಡೆಮಿ ಭಟ್ಕಳ ವತಿಯಿಂದ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು.

ಮದ್ಯಾಹ್ನ ಎರಡು ಗಂಟೆಯಿಂದ ಮೂರುವರೆ ಗಂಟೆವರೆಗೂ ನಡೆದ ಭಕ್ತಿ ಸಂಗೀತ ಕಾರ್ಯಕ್ರಮದಲ್ಲಿ ಉಮೇಶ ಮುಂಡಳ್ಳಿ ಹಾಗೂ ಬಳಗದವರು ಗಣೇಶ ಸ್ತುತಿ ವಿಜಯ ವಿನಾಯಕನೇ, ಸೋಜುಗದ ಸುಜುಮಲ್ಲಿಗೆ, ತರವಲ್ಲ ತಗಿ ನಿನ್ನ ತಂಬೂರಿ,ರಾಮ ನಾಮ ಎಂಬ ಮೊದಕಾದ ಗೀತೆಗಳು ಅದ್ಭುತವಾಗಿ ಒಂದಕ್ಕಿಂತ ಒಂದು ಹೆಚ್ಚು ಎನ್ನುವಂತೆ ಮೂಡಿ ಬಂದವು. ಮುಂಡಳ್ಳಿಯವರು ಭೈರವಿಯಲ್ಲಿ ಹಾಡಿದ ತಂಬೂರಿ ಮೀಟಿದವ ಹಾಡು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಉಮೇಶ ಮುಂಡಳ್ಳಿ ಯವರೊಂದಿಗೆ ನಿನಾದ ಉಮೇಶ ಹಾಗೂ ಉತ್ಥಾನ ಉಮೇಶ ಮುಂಡಳ್ಳಿ ಸಹ ಗಾಯನದಲ್ಲಿ ಸಹಕರಿಸಿದರು.ತಬಲದಲ್ಲಿ ಸುಬ್ರಮಣ್ಯ ಆಚಾರ್ಯ ಗುಣವಂತೆ, ಹಾಗೂ ಹಾರ್ಮೋನಿಯಂ ನಲ್ಲಿ ಕಮಲಾಕರ ಆಚಾರ್ಯ ಅಗ್ರಹಾರ ಇವರು ಸಹಕರಿಸಿದ್ದರು.ಶಂಭುಲಿಂಗೇಶ್ವರ ದೇವಸ್ಥಾನ ವತಿಯಿಂದ ಅಧ್ಯಕ್ಷ ನರಸಿಂಹ ಪಂಡಿತ ಅವರು ಉಮೇಶ ಮುಂಡಳ್ಳಿ ಅವರನ್ನು ಗೌರವಿಸಿದರು. ದೇವಸ್ಥಾನದ ಉಪಾಧ್ಯಕ್ಷ ಎಂ.ಎಸ್.ಹೆಗಡೆ ಹಾಗೂ ಕಾರ್ಯದರ್ಶಿ ಎಂ.ವಿ.ಹೆಗಡೆ ಗಣ್ಯರು ಉಪಸ್ಥಿತರಿದ್ದರು.



ಹೊನ್ನಾವರ: ಪುರಾಣ ಪ್ರಸಿದ್ಧ ಶ್ರೀ ಗುಣವಂತೆ ಶಂಭುಲಿಂಗೇಶ್ವರ ದೇವರ ಪುನರ್ ಪ್ರತಿಷ್ಠೆ ಅಷ್ಟ ಬಂಧ ಬ್ರಹ್ಮ ಕಲಶೋತ್ಸವ ಮೂರನೆ ದಿನ ಭಾನುವಾರ ಮದ್ಯಾಹ್ನದ ಸಾಂಸ್ಕೃತಿಕ ಕಾರ್ಯಕ್ರಮದ ಭಾಗವಾಗಿ ಉಮೇಶ ಮುಂಡಳ್ಳಿ ಅವರ ನಿನಾದ ಕಲ್ಚರಲ್ ಅಕಾಡೆಮಿ ಭಟ್ಕಳ ವತಿಯಿಂದ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು.

ಮಹಿಳಾ ಮೀಸಲಾತಿ ಮಸೂದೆ ಮಹತ್ವದ ಮೈಲಿಗಲ್ಲು
ಪಕ್ಷಾತೀತ ಬೆಂಬಲ ನೀಡಿ: ರೂಪಾಲಿ ನಾಯ್ಕ

ಕಾರವಾರ: ನಾರಿ ಶಕ್ತಿ ವಂದನಾ ಅಧಿನಿಯಮವು ಭಾರತದ ಮಹಿಳಾ ಶಕ್ತಿಗೆ ಸಲ್ಲಿಸುವ ಮಹತ್ತರ ಗೌರವದ ಸಂಕೇತವಾಗಿದೆ. ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವ ಈ ಮಸೂದೆಯನ್ನು ಪಕ್ಷಾತೀತವಾಗಿ ಎಲ್ಲರೂ ಸಂಸತ್ತಿನ ಉಭಯ ಸದನಗಳಲ್ಲಿ ಬೆಂಬಲಿಸಬೇಕು ಎಂದು

ಭಾಜಪಾ ರಾಜ್ಯ ಉಪಾಧ್ಯಕ್ಷೆ, ಮಾಜಿ ಶಾಸಕಿ ರೂಪಾಲಿ ನಾಯ್ಕ ಮನವಿ ಮಾಡಿದರು.

ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೇಂದ್ರ ಸರ್ಕಾರವು ಈ ಅಧಿನಿಯಮದ ಮೂಲಕ ಮಹಿಳೆಯರನ್ನು ನಿರ್ಧಾರಾತ್ಮಕ ಸ್ಥಾನಗಳಲ್ಲಿ ಸ್ಥಾಪಿಸಿ, ದೇಶ ಮತ್ತು ರಾಜ್ಯಗಳ ನೀತಿ ರೂಪಣೆಯಲ್ಲಿ ಅವರ ಧ್ವನಿಗೆ ನ್ಯಾಯ ಸಿಗುವಂತೆ ಮಾಡುವ ಸಂಕಲ್ಪವನ್ನು ವ್ಯಕ್ತಪಡಿಸಿದೆ. ಮಹಿಳೆಯರು ಕೇವಲ ಕುಟುಂಬದ ಆಡಿಪಾಯವಲ್ಲ, ಮಹಿಳೆಯರಿಗೆ ರಾಜಕೀಯ ಹಾಗೂ ಆಡಳಿತ ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳನ್ನು ಒದಗಿಸುವ ದಿಕ್ಕಿನಲ್ಲಿ ಮಹತ್ವದ ಮೈಲಿಗಲ್ಲಾಗಿದೆ.ಇದು ಮಹಿಳಾ ಸಬಲೀಕರಣದ ಪರಿಪೂರ್ಣ ರೂಪವಾಗಿದ್ದು, ಸಮಾನತೆ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿ, ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರು ಪ್ರಮುಖ ಶಕ್ತಿಯಾಗಬೇಕು ಎಂಬ ಉದ್ದೇಶದಿಂದ ರೂಪುಗೊಂಡ ಈ ಯೋಜನೆ ಇದಾಗಿದೆ ಎಂದರು.



> ಏ.15 ಮತ್ತು 16ರಂದು ಸಂಸತ್‌ನ ಉಭಯ ಸದನಗಳಲ್ಲಿ ಮಹಿಳಾ ಮೀಸಲಾತಿ ಮಸೂದೆ ಕುರಿತು ವಿಶೇಷ ಅಧಿವೇಶನ ನಡೆಯಲಿದೆ. ಈ ಸಂದರ್ಭದಲ್ಲಿ ಎಲ್ಲ ರಾಜಕೀಯ ಪಕ್ಷಗಳು ಲಾಭ-ನಷ್ಟ ಯೋಚಿಸದೆ ಒಕ್ಕೊರಲಿನಿಂದ ಈ ವಿಧೇಯಕಕ್ಕೆ ಬೆಂಬಲ ನೀಡಬೇಕು. ಇದರಿಂದಾಗಿ ಮಹಿಳೆಯರ ದಶಕಗಳ ಕನಸು ನನಸಾಗಲಿದೆ.
> ■ ರೂಪಾಲಿ ನಾಯ್ಕ, ಭಾಜಪಾ ರಾಜ್ಯ ಉಪಾಧ್ಯಕ್ಷೆ

ದೇಶದ ಸಮಸ್ತ ಮಹಿಳೆಯರ ಪರವಾಗಿ, ನಾರಿ ಶಕ್ತಿ ವಂದನಾ ಅಧಿನಿಯಮವನ್ನು ಜಾರಿಗೆ ತರಲು ಮುಂದಾದ ಕೇಂದ್ರ ಸರ್ಕಾರಕ್ಕೆ ಮತ್ತು ನಮ್ಮ ನೆಚ್ಚಿನ ಪ್ರಧಾನ ಮಂತ್ರಿನರೇಂದ್ರ ಮೋದಿಜಿ ರವರಿಗೆ ಅಭಿನಂದನೆ ಸಲ್ಲಿಸುವುದಾಗಿ ಅವರು ತಿಳಿಸಿದರು.

ಪ್ರಧಾನಿ ಮೋದಿಯವರ ಆಡಳಿತದಲ್ಲಿ ಕೇಂದ್ರದ ಹಲವು ಯೋಜನೆಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಲಾಗಿದೆ. ಒಬ್ಬ ಸಾಮಾನ್ಯ ಮಹಿಳೆಯನ್ನು ಈ ದೇಶದ ಅತ್ಯುನ್ನತ ರಾಷ್ಟ್ರಪತಿ ಹುದ್ದೆಗೆ ಆಯ್ಕೆ ಮಾಡಿದ್ದಾರೆ. ಇನ್ನು ಪಕ್ಷ ಹಾಗೂ ಸರ್ಕಾರದ ನಿರ್ಧಾರಗಳಲ್ಲಿ ಮಹಿಳೆಯರಿಗೆ ವಿಶೇಷ ಒತ್ತನ್ನು ನೀಡಲಾಗುತ್ತಿದೆ.ಇತ್ತೀಚಿನ ದಿನಗಳಲ್ಲಿ ಎಲ್ಲಾ ರಂಗಗಳಲ್ಲಿ ಮಹಿಳಾ ಪಾಲುದಾರಿಕೆ ಹೆಚ್ಚಳವಾಗಿದೆ. ನಾರಿಶಕ್ತಿಗೆ ಇನ್ನಷ್ಟು ಬಲ ತುಂಬುವ ನಿಟ್ಟಿನಲ್ಲಿ ಈ ಮಹಿಳಾ ಮೀಸಲಾತಿ ಕೆಲಸ ಮಾಡಲಿದೆ ಎಂಬ ವಿಶ್ವಾಸ ರೂಪಾಲಿ ನಾಯ್ಕ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಮಾಲಾ ಹುಲಸ್ವಾರ್, ಕಲ್ಪನಾ ನಾಯ್ಕ, ನಯನಾ ನೀಲಾವರ, ರೇಷ್ಮಾ ಮಾಳೇಕರ್ ಹಾಗೂ ಇನ್ನಿತರರು ಇದ್ದರು.

ತ್ಯಾಗ, ಸೇವೆ ಭಾರತೀಯ ಚಿಂತನೆಯ ಅಂತರಂಗ

ಯಲ್ಲಾಪುರ: ಭಾರತೀಯ ಜೀವನ ಪದ್ಧತಿಯ ತಿರುಳು ತ್ಯಾಗ ಮತ್ತು ಸೇವೆ. ನಮ್ಮ ಜೀವನ ಅದಕ್ಕಾಗಿ ಮುಡಿಪಿರಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕದ ಪ್ರಚಾರ ವಿಭಾಗದ ಪ್ರಮುಖ ಅರುಣ ಕುಮಾರ ಹೇಳಿದರು.

ಅವರು ಭಾನುವಾರ ಸಂಜೆ ವಿಶ್ವದರ್ಶನ ಶಿಕ್ಷಣ ಸಂಸ್ಥೆಯ ಸಭಾಭವನದಲ್ಲಿ, ವಿಶ್ವದರ್ಶನ ಸೇವಾ, ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಮತ್ತು ಗೋವರ್ಧನ ಗೋಶಾಲೆ ಕರಡೊಳ್ಳಿಯ ಆಶ್ರಯದಲ್ಲಿ ನಡೆದ ಭಾರತೀಯ ಜೀವನ ಶಿಕ್ಷಣ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಭಾರತ ಇನ್ನೊಬ್ಬರಿಗೆ ತೊಂದರೆ ಕೊಟ್ಟ ದೇಶವಲ್ಲ. ಇದರಿಂದ ಜಗತ್ತಿನಲ್ಲಿ ಭಾರತದ ಕುರಿತು ಸದ್ಭಾವನೆ ಇದೆ. ಶಿಬಿರದಲ್ಲಿ ಕಲಿತ ಒಳ್ಳೆಯ ಗುಣಗಳನ್ನು ಹೊರಗೆಲ್ಲೂ ಸಿಗುವುದಿಲ್ಲ, ನಮ್ಮಲ್ಲಿರುವ ಗುಣಗಳೇ ನಮಗೆ ಅಲಂಕಾರ. ಭವಿಷ್ಯದಲ್ಲಿ ನಮ್ಮ ಜೀವನ ಭಾರತೀಯ ಮೌಲ್ಯಗಳ ಆಧಾರದ ಮೇಲಿರಬೇಕು. ಭಾರತೀಯ ಜೀವನ ಪದ್ಧತಿಯ ತಿರುಳು ತ್ಯಾಗ ಮತ್ತು ಸೇವೆ. ಇಂದು ವಿದ್ಯಾರ್ಥಿಗಳ ಅಂಕಗಳಿಗಿಂತ ಹೆಚ್ಚಾಗಿ ಸಮಾಜದಲ್ಲಿ ಹೇಗಿರುತ್ತಾನೆ ಎನ್ನುವುದರ ಮೂಲಕ ಅಳೆಯುತ್ತಾರೆ. ನಾವು ಒಟ್ಟಾಗಿ ಒಂದು ಸಮಾಜವಾಗಿ ನಮ್ಮತನವನ್ನು ಬೆಳೆಸುವ ಪ್ರಯತ್ನ ಮಾಡಬೇಕು. ಗುಣ ಸಹಿತ ಹಣ ಇರಬೇಕು, ಗುಣರಹಿತರಾಗಬಾರದು. ಹಿರಿಯರು, ಭಗವಂತನ ಬಗ್ಗೆ ಶ್ರದ್ಧೆ ಭಕ್ತಿ ಇರಬೇಕು. ಪ್ರಕೃತಿಯನ್ನು ಚೆನ್ನಾಗಿ ಇಟ್ಟುಕೊಂಡಹಾಗೆ ಜೀವನವೂ ಉತ್ತಮವಾಗುತ್ತದೆ. ಜೀವನದಲ್ಲಿ ತಾಳ್ಮೆ ಕಳೆದುಕೊಳ್ಳಬಾರದು. ಕಷ್ಟ ಸಮಸ್ಯೆಗಳನ್ನೆದುರಿಸಿ ಶಿಸ್ತು ಸಂಯಮ ತಾಳ್ಮೆ ಮೊದಲಾದವುಗಳ ಜೀವನದಲ್ಲಿ ಇಟ್ಟುಕೊಂಡರೆ ಯಶಸ್ಸುಗಳಿಸಲು ಸಾಧ್ಯ. ಜೀವನದಲ್ಲಿ ಉತ್ತಮರ ಸಹವಾಸ, ಸಂಸ್ಕಾರ ಇರಬೇಕು. ಕಲಿಕೆ ಜೀವನ ಪೂರ್ತಿ ಇರಬೇಕು ಎಂದರು.ವಿಶ್ವದರ್ಶನ ಶಿಕ್ಷಣ ಸಮೂಹದ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ ಪ್ರಾಸ್ತಾವಿಕವಾಗಿ ಮಾತನಾಡಿ ಶಿಬಿರದ ಆಯೋಜನೆಯ ಮೂಲಕ ಆಯೋಜಕರೂ ಕಲಿತಿದ್ದಾರೆ. ನಮ್ಮ ಸಂಸ್ಕೃತಿ ಸಂಸ್ಕಾರಗಳು ದೂರವಾಗುತ್ತಿರುವ ಸಂದರ್ಭದಲ್ಲಿ ಅದನ್ನು ಉಳಿಸಲೇ ಬೇಕು ಎನ್ನುವ ಚಿಂತನೆಯಲ್ಲಿ ಈ ಶಿಬಿರ ಆರಂಭವಾಯಿತು. ಶಿಬಿರ ಇಲ್ಲಿಗೆ ಮುಗಿದಿರಬಹುದು ಆದರೆ ಇಲ್ಲಿ ಕಲಿತ ವಿಚಾರಗಳನ್ನು ಜೀವನ ಪರ್ಯಂತ ಉಳಿಸಿಕೊಂಡವರು ಶ್ರೇಷ್ಠ ವ್ಯಕ್ತಿಗಳಾಗಿ ರೂಪುಗೊಳ್ಳುತ್ತಾರೆ ಎಂದು ಹೇಳಿದರು. ಶಿಬಿರದ ಸಂಚಾಲಕ ಟಿ.ಶಂಕರ ಭಟ್, ವಿಶ್ವ ಹಿಂದೂ ಪರಿಷತ್ತ ತಾಲೂಕಾಧ್ಯಕ್ಷ ಅಧ್ಯಕ್ಷ ಗಜಾನನ ನಾಯ್ಕ್, ಶಿಕ್ಷಕರು, ಪಾಲಕರು, ವಿದ್ಯಾರ್ಥಿಗಳುಉಪಸ್ಥಿತರಿದ್ದರು.ರಾಮಕೃಷ್ಣ ಕವಡಿಕೆರೆ ನಿರ್ವಹಿಸಿದರು. ಶಿಬಿರ ಪ್ರಮುಖ ಸಮರ್ಥ ಗಾಂವ್ಕರ್ ಸ್ವಾಗತಿಸಿದರು. ವಿಶ್ವದರ್ಶನ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ.ಡಿ.ಕೆ.ಗಾಂವ್ಕರ್ ವಂದಿಸಿದರು.



ರೈತರ ಸಮಸ್ಯೆಗಳಿಗೆ ಸ್ಪಂದಿಸಿ: ಡಾ.ನವೀನ್

ಕುಮಟಾ: ರೈತರ ಸಮಸ್ಯೆಗಳಿಗೆ ಸ್ಪಂದಿಸುವ ಜೊತೆಗೆ ಅವರ ನೋವಿಗೆ ಧ್ವನಿಯಾಗುವಂತೆ ಸಂಘಟನೆ ಕಾರ್ಯನಿರ್ವಹಿಸಬೇಕು ಎಂದು ರಾಜ್ಯ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಾ. ನವೀನ್ ಕುಮಾರ್ ಹೇಳಿದರು.

ತಾಲೂಕಿನ ದಿವಗಿಯ ಹಾಲಕ್ಕಿ ಸಮುದಾಯ ಭವನದಲ್ಲಿ ನಡೆದ ಬಿಜೆಪಿ ರೈತ ಮೋರ್ಚಾ ಪದಾಧಿಕಾರಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಯೋಜನೆಗಳು ಹಾಗೂ ಹಿಂದಿನ ರಾಜ್ಯ ಬಿಜೆಪಿ ಸರ್ಕಾರ ಜಾರಿಗೆ ತಂದ ಜನಪರ ಯೋಜನೆಗಳ ಮಾಹಿತಿಯನ್ನು ಪ್ರತಿಯೊಂದು ಮನೆಗೂ ತಲುಪಿಸುವುದು ಸಂಘಟನೆಯ ಪ್ರಮುಖ ಗುರಿಯಾಗಬೇಕು ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಜಿಲ್ಲೆಯಾದ್ಯಂತ ರೈತ ಮೋರ್ಚಾವನ್ನು ಇನ್ನಷ್ಟು ಚಟುವಟಿಕೆಯಿಂದ ನಡೆಸುವ ಕುರಿತು ಪದಾಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು.

ಸಭೆಯಲ್ಲಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಅನಂತಮೂರ್ತಿ ಹೆಗಡೆ ಸ್ವಾಗತಿಸಿ ಮಾತನಾಡಿ, ಜಿಲ್ಲೆಯ ಅಡಿಕೆ ಬೆಳೆಗಾರರನ್ನು ಸಂಕಷ್ಟಕ್ಕೊಳಪಡಿಸಿರುವ ಎಲೆ ಚುಕ್ಕಿ ರೋಗದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು. ರೋಗ ನಿಯಂತ್ರಣಕ್ಕೆ ವೈಜ್ಞಾನಿಕ ಪರಿಹಾರ ಒದಗಿಸುವ ಜೊತೆಗೆ ಸಂಕಷ್ಟದಲ್ಲಿರುವ ಬೆಳೆಗಾರರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಈ ಸಂಬಂಧ ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರದ ವಿರುದ್ಧ ಹೋರಾಟ ನಡೆಸುವ ಬಗ್ಗೆ ಅವರು ಸೂಚಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್. ಹೆಗಡೆ ಕರ್ಕಿ ಮಾತನಾಡಿ, ಪಕ್ಷದ ನಿಜವಾದ ಶಕ್ತಿ ಬೂತ್ ಮಟ್ಟದ ಕಾರ್ಯಕರ್ತರಲ್ಲಿ ಅಡಕವಾಗಿದೆ. ಪ್ರತಿಯೊಬ್ಬ ಕಾರ್ಯಕರ್ತನನ್ನು ವಿಶ್ವಾಸಕ್ಕೆ ಪಡೆದು ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಾಗ ಮಾತ್ರ ಪಕ್ಷವನ್ನು ಗಟ್ಟಿಯಾಗಿ ಕಟ್ಟಲು ಸಾಧ್ಯ ಎಂದು ಹೇಳಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ರೈತ ಮೋರ್ಚಾ ಪ್ರಭಾರಿ ಪ್ರಶಾಂತ್ ನಾಯ್ಕ ಮಾತನಾಡಿ, ಪ್ರತಿಯೊಬ್ಬ ಪದಾಧಿಕಾರಿಯೂ ತನ್ನ ಜವಾಬ್ದಾರಿಯನ್ನು ಅರಿತು ಕಾರ್ಯನಿರ್ವಹಿಸಿದರೆ ರೈತ ಮೋರ್ಚಾ ಜಿಲ್ಲೆಯಲ್ಲಿ ಮಾದರಿಯಾಗಿ ಹೊರಹೊಮ್ಮಲಿದೆ ಎಂದರು.

ಸಭೆಯಲ್ಲಿಜಿಲ್ಲಾರೈತಮೋರ್ಚಾ ಉಪಾಧ್ಯಕ್ಷ ಅಶೋಕ್ ಚಲವಾದಿ, ನಿಕಟಪೂರ್ವ ಜಿಲ್ಲಾಧ್ಯಕ್ಷ ವೆಂಕಟೇಶ್ ನಾಯಕ್, ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ವಿಷ್ಣುಮೂರ್ತಿ ಹೆಗಡೆ, ಶಿವಲಿಂಗಯ್ಯ ಅಲ್ಲಯ್ಯನವರಮಠ ಸೇರಿದಂತೆ ಜಿಲ್ಲಾ ಹಾಗೂ ಮಂಡಲ ಮಟ್ಟದ ರೈತ ಮೋರ್ಚಾ ಪದಾಧಿಕಾರಿಗಳು ಉಪಸ್ಥಿತರಿದ್ದರು.



ವಿಜೃಂಭಣೆಯ ಮಧುಕೇಶ್ವರ ದೇವಸ್ಥಾನದ 16ನೇ ವಾರ್ಷಿಕೋತ್ಸವ

ಮುಂಡಗೋಡ: ತಾಲೂಕಿನ ಕಂಚಿಕೊಪ್ಪ ಗ್ರಾಮದ ಶ್ರೀ ಮಧುಕೇಶ್ವರ ದೇವಸ್ಥಾನದ 16ನೇ ವರ್ಷದ ವಾರ್ಷಿಕೋತ್ಸವ ವಿಜೃಂಭಣೆಯಿಂದ ನಡೆಯಿತು.

ಬೆಳಗ್ಗೆ ಇಷ್ಟದೇವತಾ ಪ್ರಾರ್ಥನೆ, ಪುಣ್ಯಾಹ, ದೇವನಾಂದಿ, ಮಾತೃಕಾ ಪೂಜೆ, ಕೌತುಕ ಬಂಧನ, ಧ್ವಜ ಪೂಜಾ, ಧ್ವಜಾರೋಹಣ, ಮಹಾಗಣಪತಿ ಹವನ, ನವಗ್ರಹ ಹವನ, ಸಪ್ತಶತಿ ಪಾರಾಯಣ, ನವಚಂಡಿಕಾ ಹವನ ಹಾಗೂ ಬೆಳಗ್ಗೆ ಶ್ರೀಮನ್ನೆಲೆಮಾವು ಮಠದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ ಮಾಧವಾನಂದ ಭಾರತೀ ಮಹಾಸ್ವಾಮಿಗಳು ಇವರ ಸಮ್ಮುಖದಲ್ಲಿ ಪೂರ್ಣಕುಂಭ ಸ್ವಾಗತ, ಶ್ರೀಗಳ ಪಾದಪೂಜೆ ನಂತರ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿತರಣೆ



ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನ ಶಾಸಕ ಶಿವರಾಮ ಹೆಬ್ಬಾರ ಅವರು ಶ್ರೀಮಧುಕೇಶ್ವರ ದೇವಸ್ಥಾನದ ಸಭಾಭವನ ಉದ್ಘಾಟನೆ ನೆರವೇರಿಸಿದರು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಶ್ರೀಮದ್ ಮಾಧವಾನಂದ ಭಾರತೀ ಶ್ರೀಗಳ ಸಾನ್ನಿಧ್ಯದಲ್ಲಿ ಆಶೀರ್ವಚನ ನಡೆಯಿತು.

ರಾತ್ರಿ ಜಾಗರಣೆ ನಿಮಿತ್ತ ಯಕ್ಷಗಾನ ರತ್ನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಯಕ್ಷ ಮಾಣಿಕ್ಯ ಚಿಂತನಾ ಹೆಗಡೆ ಮಾಳಕೋಡರ ಗಾನ ಸಾರಥ್ಯದಲ್ಲಿ 'ಶಿವಭಕ್ತ ಮಾಲಿ' ಎಂಬ ಪೌರಾಣಿಕ ಯಕ್ಷಗಾನ ಪ್ರದರ್ಶನಗೊಂಡಿತು.

ಕಂಚಿಕೊಪ್ಪದ ಶಾಂತಕುಮಾರ ಕೃಷ್ಣಪ್ಪ ಹೆಗಡೆ ಮತ್ತು ಆಟಬೈಲ್‌ನ ಧರ್ಮರಾಜ ಜಟ್ಟಯ್ಯ ಗೌಡ ಇವರನ್ನು ಸನ್ಮಾನಿಸಲಾಯಿತು.ಇಂದು ಪ್ರಾತಃ ಕಾಲ ಪೂಜೆ, ಪಂಚಾಮೃತ ಪೂಜೆ, ರುದ್ರಾಭಿಷೇಕ, ಸರ್ವಾಲಂಕಾರ ಪೂಜೆ, ಅಧಿವಾಸ ಹೋಮ, ರುದ್ರ ಹೋಮ, ಪೂರ್ಣಾಹುತಿ, ತೀರ್ಥ ಪ್ರಸಾದ ವಿತರಣೆ ಮತ್ತು ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಮಾಜಕ್ಕೆ ಮಹಿಳೆಯರ ಕೊಡುಗೆ ಅಪಾರ

ಯಲ್ಲಾಪುರ: ನಿತ್ಯದ ಒತ್ತಡದ ನಡುವೆಯೂ ಸಾಮಾಜಿಕ ಚಟುವಟಿಕೆಗಳಲ್ಲಿ ಮಹಿಳೆಯರು ಭಾಗವಹಿಸುವ ಮೂಲಕ ಉತ್ತಮ ಕೊಡುಗೆ ನೀಡಲು ಸಶಕ್ತವಾಗಬೇಕಾದರೆ ಸಂಘಟನೆ ಸಾರ್ಥಕವಾಗಿರಬೇಕು.

ಜೀವನ ನಿರ್ವಹಣೆಯಲ್ಲಿ ಹೆಣ್ಣು ಜವಾಬ್ದಾರಿ ಹೊತ್ತು ನಿಂತಾಗ ಅದು ಪ್ರಾಮಾಣಿಕ ಸೇವೆಯ ಫಲ ಸಿಗುವಂತಾಗುತ್ತದೆ. ಸಂಜೀವಿನಿ ಒಕ್ಕೂಟದ ಮಹಿಳೆಯರ ಆರ್ಥಿಕ ಭದ್ರತೆಯ ಜೊತೆಗೆ ಜೀವ ವಿಮಾ ಸೌಲಭ್ಯ ಎಲ್ಲರಿಗೂ ಸಿಗುವಂತೆ ಆಗಬೇಕು ಎಂದು ಸರ್ವೋದಯ ಶಿಕ್ಷಣ ಸಮಿತಿಯ ಅಧ್ಯಕ್ಷ ಡಿ.ಶಂಕರ ಭಟ್ಟ ಅಭಿಪ್ರಾಯಪಟ್ಟರು.ಅವರು ತಾಲೂಕಿನ ವಜ್ರಳ್ಳಿಯ ಸರ್ವೋದಯ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ವಜ್ರಳ್ಳಿಯ ಭಾಗ್ಯಶ್ರೀ ಸಂಜೀವಿನಿ ಗ್ರಾಪಂ ಮಟ್ಟದ ಒಕ್ಕೂಟದ ವಾರ್ಷಿಕ ಸರ್ವ ಸಾಧಾರಣ ಸಭೆ ಮತ್ತು ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಆದರ್ಶ ಸೇವಾ ಸಹಕಾರಿ ಸಂಘದ ಅಧ್ಯಕ್ಷ ದತ್ತಾತ್ರೇಯ ಭಟ್ಟ ತಾರಗಾರ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದರು. ಆದರ್ಶ ಸೇವಾ ಸಹಕಾರಿ ಸಂಘದ ವ್ಯವಸ್ಥಾಪಕ ಜಿ.ವಿ.ಭಟ್ಟ ಆಡ್ಕೆಮನೆ, ಪತ್ರಕರ್ತ ಸುಬ್ರಾಯ ಬಿದ್ರೆಮನೆ, ತಾಲೂಕು ಪಂಚಾಯಿತಿ ವಲಯ ಮೇಲ್ವಿಚಾರಕಿ ಶರೀಫ್ ಮುಲ್ಲಾ ಉಪಸ್ಥಿತರಿದ್ದು ಮಾತನಾಡಿದರು.ವಲಯ ಮೇಲ್ವಿಚಾರಕರಾದ ರಾಜಾರಾಮ ವೈದ್ಯ ಮತ್ತು ಗೀತಾ ದಂಪತಿಗಳನ್ನು, ಕಾರ್ಯನಿರತ ಪತ್ರಕರ್ತರ



ಸಂಘದ ಅಧ್ಯಕ್ಷ ಸುಬ್ರಾಯ ಬಿದ್ರೆಮನೆ, ಭಾಗೀರಥಿ ಭಟ್ಟ,ಗಿರಿಜಾ ಕೋಮಾರ, ರಾಧಾ ಕಾರಂತರವರನ್ನು ಸನ್ಮಾನಿಸಲಾಯಿತು. ಭಾಗ್ಯಶ್ರೀ ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಅನ್ನಪೂರ್ಣ ಭಟ್ ಅಧ್ಯಕ್ಷತೆವಹಿಸಿದ್ದರು. ಮಹಿಳೆಯರಿಗೆ ಏರ್ಪಡಿಸಿದ್ದ ಸ್ಪರ್ಧಾ ಕಾರ್ಯಕ್ರಮದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.ನಾಗರತ್ನ ಗಾಂವ್ಕರ್,ಯಮುನಾ ನಾಯ್ಕ,ಅಂಕಿತಾ ನಾಯ್ಕ, ಗಾಯತ್ರಿ ಗಾಂವ್ಕರ ಸನ್ಮಾನ ಪತ್ರ ವಾಚಿಸಿದರು.ಸಂಜೀವಿನಿ ಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ರತ್ನಾ ಬಾಂದೇಕರ ಸ್ವಾಗತಿಸಿದರು. ಉಮಾ.ನಾ.ಭಟ್ಟ ನಿರೂಪಿಸಿದರು.ನಾಗವೇಣಿ ಶೇಖರ್ ಗೌಡ ವಂದಿಸಿದರು.ನಂತರ ಒಕ್ಕೂಟದ ಸದಸ್ಯರಿಂದ ಯಕ್ಷಗಾನ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

ಅನಧಿಕೃತ ಬಾವುಟ ಹಾರಿಸಿದವರ ಮೇಲೆ ಕ್ರಮ ಕೈಗೊಳ್ಳಿ


ಭಟ್ಕಳ: ಪಟ್ಟಣದ ಬಂದರ ರಸ್ತೆಯಲ್ಲಿ ಅನಧಿಕೃತವಾಗಿ ಧರ್ಮದ ಬಾವುಟ ಹಾರಿಸಿದವರ ಮೇಲೆ ನಗರ ಸಭೆಯವರು ಕೇಸ್ ದಾಖಲಿಸಬೇಕು. ಇಲ್ಲದಿದ್ದಲ್ಲಿ ಪಕ್ಷದಿಂದಲೇ ಹೋರಾಟ ಮಾಡಿ ಕೇಸ್ ದಾಖಲಿಸುವಂತೆ ಆಗ್ರಹಿಸುತ್ತೇವೆ ಎಂದು ರಾಜ್ಯ ಪಶ್ಚಿಮ ಘಟ್ಟ ಕಾರ್ಯಪಡೆ ಮಾಜಿ ಅಧ್ಯಕ್ಷ ಗೋವಿಂದ ನಾಯ್ಕ ಹೇಳಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಜಾಲಿ ದೇವಿನಗರದಲ್ಲಿ ಭಗವಧ್ವಜ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದೂಗಳ ಮೇಲೆ ಅಲ್ಲಿನ ಮುಖ್ಯಾಧಿಕಾರಿ ಕೇಸ್ ದಾಖಲು ಮಾಡಿದ್ದರು. ಆದರೆ ಪಟ್ಟಣದ ಬಂದರ ರಸ್ತೆಯಲ್ಲಿ, ರಮ್ಜಾನ್ ಹಬ್ಬದ ಪ್ರಯುಕ್ತ ಹಾಕಿದ್ದ ಧ್ವಜವನ್ನು ಹಬ್ಬ ಮುಗಿದ ಮೇಲೆ ನಗರಸಭೆಯವರು, ಪೊಲೀಸರು ಜೊತೆ ಸೇರಿಕೊಂಡು ತೆರವು ಮಾಡಿದ ಮೇಲೂ ಪುನಃ ಅದೇ ಸ್ಥಳದಲ್ಲಿ ಧ್ವಜವನ್ನು ಹಾರಿಸಲಾಗಿದೆ. ಈ ರೀತಿ ಅನಧೀಕೃತವಾಗಿ ಧ್ವಜ ಹಾಕಿದ ವ್ಯಕ್ತಿಗಳ ಮೇಲೆ ಕೇಸ್ ದಾಖಲಸಿ ಉವಂತೆ ನಗರಸಭೆಗೆ ಭಟ್ಕಳ ಬೊಜೆಪಿ ಘಟಕದಿಂದ ಮನವಿ ನೀಡಿದ್ದರೂ ಇನ್ನೂ ತನಕ ಅವರ ಮೇಲೆ ಕ್ರಮಕ್ಕೆ ಮುಂದಾಗಿಲ್ಲ. ನಗರಸಭೆ ಅಧಿಕಾರಿಗಳು ಅವರ ಮೇಲೆ ಕೇಸ್ ದಾಖಲಿಸಲು ಮೀನಾಮೇಷ ಎಣಿಸಿದರೆ ನಾವು ಬೀದಿಗಿಳಿದು ಪ್ರತಿಭಟನೆ ಮಾಡುವುದು ಅನೀವಾರ್ಯವಾಗುತ್ತದೆ ಎಂದರು.

ಬಿಜೆಪಿ ಜಿಲ್ಲಾ ಘಟಕ ಕಾರ್ಯದರ್ಶಿ ಸುಬ್ರಾಯ ದೇವಾಡಿಗ ಮಾತನಾಡಿ, ಮಲ್ಲಿಕಾರ್ಜುನ ಖರ್ಗೆಯವರು ಚುನಾವಣೆ ಪ್ರಚಾರ ಭಾಷಣದಲ್ಲಿ ಆರ್ ಎಸ್‌ಎಸ್ ಹಾಗೂ ಬಿಜೆಪಿಯವರ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದಾರೆ. ಅವರ ಈ ಮಾತಿಗೆ ದೇಶವ್ಯಾಪಿ ಖಂಡನೆ ವ್ಯಕ್ತವಾಗುತ್ತಿದೆ. ಮುಂದಿನ ದಿನಗಳಲ್ಲಿ ಅವರು ತಮ್ಮ ನಾಲಿಗೆಯನ್ನು ಈ ರೀತಿ ಹರಿಬಿಟ್ಟರೆ ಬೀದಿಗಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ಬಿಜೆಪಿ ರಾಜ್ಯ ಹಿಂದುಳಿದ ವಿಭಾಗದ ಉಪಾಧ್ಯಕ್ಷ ಈಶ್ವರ ನಾಯ್ಕ ಮಾತನಾಡಿದರು. ಬಿಜೆಪಿ ಭಟ್ಕಳ ಘಟಕ ಅಧ್ಯಕ್ಷ ಲಕ್ಷ್ಮೀ ನಾರಾಯಣ ನಾಯ್ಕ, ಕಾರ್ಯದರ್ಶಿ ಶ್ರೀನಿವಾಸ ನಾಯ್ಕ, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಶ್ರೀಕಾಂತ ನಾಯ್ಕ ಇದ್ದರು.

ಕಲೆ ಉಳಿವಿಗೆ ಕಲಾಭಿಮಾನಿಗಳ ಸಹಕಾರ ಅಗತ್ಯ



ಕುಮಟಾ: ಇಲ್ಲಿನ ಕಲಾ ಗಂಗೋತ್ರಿ ಸಂಸ್ಥೆಯ ಆಶ್ರಯದಲ್ಲಿ ಪೆರ್ಡೂರು ಮೇಳದ ಕಲಾವಿದರಿಂದ ಭವ್ಯ ಯಕ್ಷಗಾನ ಪ್ರದರ್ಶನ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಗರದಲ್ಲಿನ ಗಿಬ್ಸ್ ಹೈಸ್ಕೂಲ್ ಆವರಣದಲ್ಲಿ ಜರುಗಿತು.

ಕುಮಟಾದ ಹಿರಿಯ ಪ್ರಖ್ಯಾತ ವೈದ್ಯರಾದ ಡಾ. ಅಶೋಕ ಭಟ್ ಹಳಕಾರ, ಹಿರಿಯ ಸಾಮಾಜಿಕ ಕಾರ್ಯಕರ್ತ ಹಾಗೂ ಕುಮಟಾ ಹ್ಯಾಂಡಿಕ್ಯಾಪ್ಟ್ ಮಾಲೀಕರಾದ ಹರೀಶ್ ಶೇಟ್ ಮತ್ತು ಯಕ್ಷ ಸಂಘಟನಾ ಚತುರ ಪ್ರಶಸ್ತಿ ಪುರಸ್ಕೃತ ಶ್ರೀಧರ ನಾಯ್ಕ ದಂಪತಿಯನ್ನು ಸನ್ಮಾನಿಸಲಾಯಿತು.

ಖ್ಯಾತ ವೈದ್ಯ ಹಾಗೂ ಕೆನರಾ ಎಕ್ಸೆಲೆನ್ಸ್ ಮುಖ್ಯಸ್ಥರಾದ ಡಾ.ಜಿ.ಜಿ. ಹೆಗಡೆಯವರು ಅಭಿನಂದನಾ ನುಡಿಗಳನ್ನಾಡಿದರು.

ಖ್ಯಾತ ಭಾಗವತರಾದ ರಾಘವೇಂದ್ರ ಆಚಾರ್ಯ ಜನ್ಸಾಲೆಯವರು ಮಾತನಾಡಿ, ಯಕ್ಷಗಾನವು ಜೀವನ ಪಾಠಗಳನ್ನು ಕಲಿಸುವ ಸರ್ವಾಂಗ ಸುಂದರ ಹಾಗೂ ಆರಾಧನಾ ಕಲೆ. ಈ ಕಲೆಯ ಉಳಿವು-ಬೆಳವಣಿಗೆಗೆ ಕಲಾಭಿಮಾನಿಗಳ ಸಹಕಾರ ಅತ್ಯವಶ್ಯಕ ಎಂದು ಅಭಿಪ್ರಾಯಪಟ್ಟರು. ಸನ್ಮಾನಿತರಾದ ಡಾ. ಅಶೋಕ ಭಟ್ ಹಳಕಾರ, ಹರೀಶ್ ಶೇಟ್ ಹಾಗೂ ಶ್ರೀಧರ ನಾಯ್ಕ ಅವರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಕಲಾ ಗಂಗೋತ್ರಿ ಅಧ್ಯಕ್ಷರಾದ ಎಂ.ಟಿ. ನಾಯ್ಕ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾದ ರವಿ ನಾಯ್ಕ, ಖಜಾಂಚಿ ಅಶೋಕ್ ಗೌಡ, ಸದಸ್ಯರಾದ ಚಂದ್ರಹಾಸ ನಾಯಕ, ವೆಂಕಟ್ರಮಣ ಗುನಗಾ ಹಾಗೂ ಗೀತಾ ಪಂಡಿತ್ ಉಪಸ್ಥಿತರಿದ್ದರು.


ಡಾ. ಜಿ. ಎಸ್. ಭಟ್ ಸ್ವಾಗತಿಸಿದರು. ಡಾ.ಎಂ. ಆರ್. ನಾಯ್ಕ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ವಸಂತ ಪಂಡಿತ್ ವಂದಿಸಿದರು. ಗಣೇಶ್ ಪಟಗಾರ ಕಾರ್ಯಕ್ರಮ ನಿರೂಪಿಸಿದರು.ಪೆರ್ಡೂರು ಮೇಳದಿಂದ 'ಚದುರಂಗ'ಯಕ್ಷಗಾನ ಪ್ರದರ್ಶನಗೊಂಡು ಪ್ರೇಕ್ಷಕರ ಮನಗೆದ್ದಿತು.

ಮೇ 7ರಿಂದ ಸಾಣಿ ಅಮ್ಮ ದೇವಸ್ಥಾನದ ಅಮೃತ ಮಹೋತ್ಸವ

ಕುಮಟಾ: ಸುಮಾರು 200 ವರ್ಷಗಳ ಇತಿಹಾಸವಿರುವ ಕುಮಟಾ ಪಟ್ಟಣದ ಹೆರವಟ್ಟಾದ ಸಾಣಿ ಅಮ್ಮ ದೇವಸ್ಥಾನದ ಅಮೃತ ಮಹೋತ್ಸವ ಸಂಭ್ರಮ ಮೇ 7ರಿಂದ 11ರವರೆಗೆ ನಡೆಯಲಿದ್ದು, ಭಕ್ತರು ಸಹಕಾರ ನೀಡುವಂತೆ ಅಮೃತ ಮಹೋತ್ಸವ ಸಮಿತಿ ಕಾರ್ಯದರ್ಶಿ ಬಿ.ಎನ್. ಕೆ ನಾಗರಾಜ್ ಮನವಿ ಮಾಡಿದರು.

ಪಟ್ಟಣದ ಹೆರವಟ್ಟಾದ ಸಾಣಿ ಅಮ್ಮ ದೇವಸ್ಥಾನದ ಸುದ್ದಿಗೋಷ್ಠಿಯಲ್ಲಿ ಅಮೃತ ಮಹೋತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸುಮಾರು 200 ವರ್ಷಗಳ ಇತಿಹಾಸವಿರುವ ಸಾಣಿ ಅಮ್ಮ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಭಕ್ತರೆಲ್ಲ ಸೇರಿ ನಿರ್ಧರಿಸಲಾಗಿತ್ತು. ದೇವಿಯ ಪೀಠ ಭಿನ್ನವಾಗಿದ್ದರಿಂದ ದೇವಿಯ ಅಪ್ಪಣೆ ಮೇರೆಗೆ ದೇವಿ ಮತ್ತು ಅಮ್ಮನವರ ಪರಿವಾರ ದೇವರುಗಳ ಪುನರ್ ಪ್ರತಿಷ್ಠಾಪನೆ, ದೇವಸ್ಥಾನದ ಜೀರ್ಣೋದ್ಧಾರ ಸೇರಿದಂತೆ ದೇವಸ್ಥಾನ ಸ್ಥಾಪನೆಯಾಗಿ 75 ವರ್ಷ ಪೂರೈಸಿದ ಹಿನ್ನಲೆಯಲ್ಲಿ ಅಮೃತ ಮಹೋತ್ಸವ ಕಾರ್ಯಕ್ರಮ ಕೂಡ ಮೇ. 7ರಿಂದ 11ರ ವರೆಗೆ ವಿಜೃಂಭಣೆಯಿಂದ ನಡೆಯಲಿದೆ. ಮೇ. 7ರಂದು ಗ್ರಾಮ ದೇವತಾ ಪ್ರಾರ್ಥನೆ, ಗುರುಗಣಪತಿ ಪೂಜೆ, ಶುದ್ಧಿಕರ್ಮಗಳು, ಬ್ರಹ್ಮಕೂಚ ಹೋಮ, ಭೂಶುದ್ಧಿ, ರಾಕ್ಷೋಘ್ನ ಹವನ, ದೇವರ ಹೊಸಪೀಠ ಸ್ಥಾಪನೆ,ದೇವರ ಅಧಿವಾಸ ನಡೆಯಲಿದೆ.

ಮೇ 8ರಂದು ಗಣೇಶ ಪೂಜೆ, ಪ್ರತಿಷ್ಠಾಂಗ ಹವನಗಳು, ದೇವರ ಪ್ರತಿಷ್ಠೆ, ಪರಿವಾರ ದೇವರ ಪ್ರತಿಷ್ಠೆ, ಪ್ರಾಣ ಪ್ರತಿಷ್ಠೆ,



ಕಲಾವೃದ್ಧಿ, ಮೇ. 9ರಂದು ಪವಮಾನ ಹೋಮ, ಬಾಹ್ಯ ಮತ್ತು ಪೂರ್ಣ ಕಲಾವೃದ್ಧಿ, ಶಾಂತಿ ಹೋಮ ಸಂಜೆ ಆಶ್ಲೇಷ ಬಲಿ ಪ್ರದಾನ,

ಮೇ 10ರಂದು ವಿವಿಧ ಹೋಮ ಹವನಾಧಿಗಳು, ಸಂಜೆ ದೇವಿಯ ನಗರೋತ್ಸವ , ಅಷ್ಟಾವಧಾನ ಸೇವೆ ನಡೆಯಲಿದೆ. ಮೇ. 11ರಂದು 108 ಬ್ರಹ್ಮ ಕಲಶಾಭಿಷೇಕ, ಪ್ರಸನ್ನ ಚಂಡಿಕಾ ಹೋಮ, ಮಹಾ ಪೂರ್ಣಾಹುತಿ, ಪ್ರಸಾದ ವಿತರಣೆ ಮಧ್ಯಾಹ್ನ ಅನ್ನ ಸಂತರ್ಪಣೆ ನಡೆಯಲಿದೆ. ಈ ಐದು ದಿನಗಳ ಕಾರ್ಯಕ್ರಮದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ತನು, ಮನ ಧನದಿಂದ ಸಹಕಾರ ನೀಡುವಂತೆ ಕೋರಿದರು.

ಅಮೃತ ಮಹೋತ್ಸವ ಸಮಿತಿಯ ಗೌರವಾಧ್ಯಕ್ಷ ವೆಂಕಟೇಶ ನಾಯಕ, ಸಮಿತಿ ಅಧ್ಯಕ್ಷರಾದ ಶೈಲೇಶ ನಾಯ್ಕ ಮಾತನಾಡಿದರು. ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ನಾಗಪ್ಪ ಗೌಡ, ಕಾರ್ಯದರ್ಶಿ ಭಗವಾನ್ ನಾಯ್ಕ, ಪ್ರಮುಖರಾದ ಗಜಾನನ ನಾಯ್ಕ, ದೇವಪ್ಪ ನಾಯ್ಕ, ಅಣ್ಣಯ್ಯ ಪೈ, ಮಾದೇವ ಗೌಡ, ಶೇಖರ ಪಟಗಾರ, ಎಂ.ಜಿ.ನಾಯ್ಕ, ಮಂಜುನಾಥ ಮಡಿವಾಳ, ನಾರಾಯಣ ನಾಯ್ಕ, ಲಕ್ಷ್ಮಣ ನಾಯ್ಕ, ಪದ್ದು ಮಹಾಲೆ ಇತರರು ಇದ್ದರು.

ಕಿರುಸುದ್ದಿ

ಬೆಂಬಲ ಬೆಲೆ ನಿಗದಿ



ಗದಗ: ಪ್ರಸಕ್ತ ಸಾಲಿನ ಹಿಂಗಾರು ಹಂಗಾಮಿನ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೈತರಿಂದ ಎಫ್.ಎ.ಕ್ಯೂ ಗುಣಮಟ್ಟದ ಕುಸುಬೆ ಹುಟ್ಟುವಳಿಯನ್ನು ಖರೀದಿಸಲು ಬೆಂಬಲ ಬೆಲೆ ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಹೇಳಿದರು. ನಗರದ ಜಿಲ್ಲಾಧಿಕಾರಿಗಳ ಸಭಾಭವನದಲ್ಲಿ ಪ್ರಸಕ್ತ ಸಾಲಿನ ಹಿಂಗಾರು ಹಂಗಾಮಿನ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಕುಸುಬೆ ಹುಟ್ಟುವಳಿ ಖರೀದಿಸುವ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯ ಪ್ರತಿ ರೈತರಿಂದ ಪ್ರತಿ ಎಕರೆಗೆ 5 ಕ್ವಿಂಟಲ್‌ನಂತೆ ಗರಿಷ್ಟ 20 ಕ್ವಿಂಟಲ್ ಎಫ್.ಎ.ಕ್ಯೂ ಗುಣಮಟ್ಟದ ಕುಸುಬೆ ಖರೀದಿಸಲು ಹಾಗೂ ಕುಸುಬೆ ಖರೀದಿ ಕೇಂದ್ರಗಳಲ್ಲಿ ರೈತರ ಹೆಸರಿನಲ್ಲಿ ವರ್ತಕರು ತರುವ ಕುಸುಬೆ ಉತ್ಪನ್ನವನ್ನು ಖರೀದಿಸದಂತೆ ಹಾಗೂ ಖರೀದಿ ಸಂಸ್ಥೆಗಳು ಯಾವುದೇ ರೀತಿಯ ದುರುಪಯೋಗವಾಗದಂತೆ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದರು. ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕಿ ಸುಧಾ ಬಂಡಿ ಮಾತನಾಡಿ, ಎಫ್.ಎ.ಕ್ಯೂ ಗುಣಮಟ್ಟದ ಕುಸುಬೇ ಉತ್ಪನ್ನವನ್ನು ಪ್ರತಿ ಕ್ವಿಂಟಾಲ್‌ಗೆ ರೂ. 6540 ರಂತೆ ನಿಗದಿಪಡಿಸಲಾಗಿದೆ. ಕೇಂದ್ರ ಸರ್ಕಾರದ ಬೆಂಬಲ ಬೆಲೆ ಮಾರ್ಗಸೂಚಿಗಳನ್ವಯ ಈ ಆದೇಶ ಹೊರಡಿಸಿದ ದಿನಾಂಕದಿಂದ ರೈತರ ನೋಂದಣಿ ಕಾಲಾವಧಿಯನ್ನು 80 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 90 ದಿನಗಳವರಗೆ ನಿಗದಿಪಡಿಸಲಾಗಿದೆ. ನೋಂದಣಿ ಕಾರ್ಯದ ಜೊತೆಗೆ ಖರೀದಿ ಪ್ರಕ್ರಿಯೆಯನ್ನು ಸಹ ಪ್ರಾರಂಭಿಸಿ ಕೇಂದ್ರದಿಂದ ಎನ್.ಸಿ.ಸಿ.ಎಫ್ ಹಾಗೂ ರಾಜ್ಯದಲ್ಲಿ ಕರ್ನಾಟಕ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ (ಕೆ.ಓ.ಎಫ್) ಬೇಂಗಳೂರು ಸಂಸ್ಥೆಯ ಮೂಲಕ ಖರೀದಿಸಲು ಆದೇಶಿಸಲಾಗಿದೆ ಎಂದು ತಿಳಿಸಿದರು.

ಬೈಕ್ ಕಳ್ಳತನ

ಹಾವೇರಿ: ತಾಲೂಕಿನ ದೇವಿಹೊಸೂರು ಗ್ರಾಮದ ಅಂಗಡಿಯೊಂದರ ಮುಂಭಾಗದಲ್ಲಿ ನಿಲ್ಲಿಸಿದ್ದ ಬೈಕ್‌ನ್ನು ಕಳ್ಳರು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದಾರೆ. ದೇವಿಹೊಸೂರಿನ ಗೌಂಡಿ ಕೆಲಸ ಮಾಡುವ ಇಬ್ರಾಹಿಂಸಾಬ್ ಚಮನಸಾಬ್ ಹನುಮಾಪುರ ಎಂಬುವವರಿಗೆ ಸೇರಿದ ಸುಮಾರು 15,000 ರೂ. ಕಿಮ್ಮತ್ತಿನ ಬೈಕ್ ಇದಾಗಿದೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಕಿ ಅವಘಡ: ಅಪಾರ ಹಾನಿ

ಹಾವೇರಿ: ಆಕಸ್ಮಿಕ ಬೆಂಕಿಯಿಂದ ಕಣದಲ್ಲಿ ರಾಶಿ ಹಾಕಿದ್ದ ಸುಮಾರು 20ಕ್ಕೂ ಹೆಚ್ಚು ಟ್ರ್ಯಾಕ್ಟರ್ ಮೆಕ್ಕೆಜೋಳ ತೆನೆಯ ರಾಶಿ ಸಂಪೂರ್ಣವಾಗಿ ಸುಟ್ಟು ಕರಕಲಾಗಿರುವ ಘಟನೆ ತಾಲೂಕಿನ ಹೊಸಳ್ಳಿ ಗ್ರಾಮದಲ್ಲಿ ನಡೆದಿದೆ.ತಾಲೂಕಿನ ಕಾಟೇನಹಳ್ಳಿ ಗ್ರಾಮದ ಪರಮೇಶಪ್ಪ ಹನುಮಂತಪ್ಪ ನಾಗಣ್ಣನವರ ಎಂಬುವರಿಗೆ ಸೇರಿದ 10 ಎಕರೆಗೂ ಹೆಚ್ಚಿನ ಜಮೀನಿನಲ್ಲಿ ಬೆಳೆದಿದ್ದ ಸುಮಾರು 20 ಟ್ರ್ಯಾಕ್ಟರ್ ಮೆಕ್ಕೆಜೋಳ ತೆನೆಯ ರಾಶಿ ಸುಟ್ಟು ಕರಕಲಾಗಿದೆ. ಕಳೆದ ಒಂದು ತಿಂಗಳ ಹಿಂದೆಯಷ್ಟೆ ಮೆಕ್ಕೆಜೋಳ ತೆನೆ ಕಟಾವು ಮಾಡಿಸಿ, ಕಣದಲ್ಲಿ ರಾಶಿ ಹಾಕಲಾಗಿತ್ತು. ಆಕಸ್ಮಿಕ ಬೆಂಕಿಯಿಂದಾಗಿ 200 ಕ್ವಿಂಟಾಲನಷ್ಟು ಮೆಕ್ಕೆಜೋಳ ತೆನೆ ರಾಶಿ ಸುಟ್ಟು ಭಸ್ಮವಾಗಿದ್ದು, ಸುಮಾರು 3 ಲಕ್ಷಕ್ಕೂ ಹೆಚ್ಚು ಲುಕ್ಸಾನು ಸಂಭವಿಸಿದೆ ಎಂದು ಎಫ್‌ಐಆರ್‌ನಲ್ಲಿ ತಿಳಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಥೋತ್ಸವ ನಾಳೆ

ಗದಗ: ಲಕ್ಕುಂಡಿ ತಾಲೂಕಿನ ಅಲ್ಲಮ ಪ್ರಭುದೇವರ ಮಠದ 38 ವರ್ಷಗಳ ಮೌನ ತಪಸ್ವಿ ಬಸವರಾಜೇಂದ್ರ ಸ್ವಾಮೀಜಿಯ 14ನೇ ವರ್ಷದ ಪುಣ್ಯ ಸ್ಮರಣೋತ್ಸವದ ಅಂಗವಾಗಿ ಏ.14ರಂದು ಸಂಜೆ 4.45ಕ್ಕೆ ರಥೋತ್ಸವ ನೆರವೇರಲಿದೆ. ಮಠದ ಸಿದ್ದಲಿಂಗೇಶ್ವರ ಶ್ರೀಗಳ ನೇತೃತ್ವದಲ್ಲಿ ಹೊಸರಿತ್ತಿಯ ಗುದ್ದಲೀಶ್ವರ ಮಠದ ಗುದ್ದಲೀಶ್ವರ ಸ್ವಾಮೀಜಿ, ಹರ್ಲಾಪುರದ ಕೊಟ್ಟೂರೇಶ್ವರ ಶ್ರೀಗಳು, ನೀಲಗುಂದದ ಗುಡ್ಡದ ಸುಕ್ಷೇತ್ರದ ಚನ್ನಬಸವ ಶಿವಯೋಗಿಗಳು ರಥೋತ್ಸವಕ್ಕೆ ಚಾಲನೆ ನೀಡುವರು. ರಥೋತ್ಸವದಲ್ಲಿ ನಾಡಿನ ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಲಿವೆ. ಇದಕ್ಕೂ ಪೂರ್ವ ಬೆಳಗ್ಗೆ ಅಲ್ಲಮಪ್ರಭುದೇವರ ಗದ್ದುಗೆ ಹಾಗೂ ಬಸವರಾಜೇಂದ್ರ ಶ್ರೀಗಳ ಗದ್ದುಗೆಗೆ ವಿಶೇಷ ಪೂಜೆ ಜರುಗಲಿದೆ. ನಂತರ 11.45ಕ್ಕೆ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿವೆ. ಏ.15ರಂದು ಲಘು ರಥೋತ್ಸವ ನಡೆಯಲಿದೆ. ಏ.13ರಂದು ಬೆಳಗ್ಗೆ ಪೂರ್ಣ ಕುಂಭ ಮೇಳ ಹಾಗೂ ಅಡ್ಡಪಲ್ಲಕ್ಕಿ ಮಹೋತ್ಸವ ಗ್ರಾಮದ ಪ್ರಮುಖ ಬೀದಿಯಲ್ಲಿ ಜರುಗಲಿದೆ. ಸಂಜೆ 7ಕ್ಕೆ ಶಿವಶರಣೆ ಇಟಗಿ ಭೀಮಾಂಬಿಕಾ ದೇವಿ ಪುರಾಣವನ್ನು ಪ್ರವಚನಕಾರ ಕೊಟ್ರಯ್ಯ ಶಾಸ್ತ್ರೀಗಳು ನರಗುಂದಮಠ ಅವರು ಮುಕ್ತಾಯಗೊಳಿಸುವರು. ಪ್ರತಿದಿನ ಅನ್ನ ಸಂತರ್ಪಣೆ ಇರಲಿದೆ ಎಂದು ಅಲ್ಲಮಪ್ರಭುದೇವರ ದೇವಸ್ಥಾನ ಸೇವಾ ಸಮಿತಿಯ ಪ್ರಕಟಣೆ ತಿಳಿಸಿದೆ.



ಗದಗ: ನಗರದ ಸನ್ಮಾರ್ಗ ಪಿಯು ಕಾಲೇಜಿನ ವಿದ್ಯಾರ್ಥಿನಿ ರೇವತಿ ನಾರಾಯಣ ಉತ್ತರಕರ ವಿಜ್ಞಾನ ವಿಭಾಗದಲ್ಲಿ ಶೇ. 96 ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಈ ಹಿನ್ನೆಲೆಯಲ್ಲಿ ಗದಗ-ಬೆಟಗೇರಿ ನಗರಸಭೆ ವಾರ್ಡ್ ನಂ. 25ರ ನಗರಸಭಾ ಸದಸ್ಯ ವಿನಾಯಕ ಮಾನ್ವಿ ಅವರು ವಿದ್ಯಾರ್ಥಿನಿಯ ಮನೆಗೆ ತೆರಳಿ ಸನ್ಮಾನಿಸಿದರು.

ಏ.20ರಂದು ಜಗಜ್ಯೋತಿ ಬಸವೇಶ್ವರರ ಜಯಂತಿ

ಗದಗ: ಜಗಜ್ಯೋತಿ ಬಸವೇಶ್ವರರ ಜಯಂತಿ ಏ.20ರಂದು ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್. ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವೇಶ್ವರ ಜಯಂತಿ ಕುರಿತು ಜರುಗಿದ ಪೂರ್ವಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಎಸ್‌ಎಸ್ ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ, ವಿವಿಧ ಕ್ಷೇತ್ರದ ಸಾಧಕರಿಗೆ ಹಾಗೂ ಸಮಾಜದ ಹಿರಿಯರಿಗೆ ಸನ್ಮಾನಿಸಲಾಗುವುದು ಎಂದರು. ತಾಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ನಂದಾ ಹಣಬರಟ್ಟಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಆರ್.ಎಸ್.ಬುರುಡಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ವಸಂತ ಮಡ್ಲೂರ ಇತರರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಸವರಾಜ ಬಳ್ಳಾರಿ ಸ್ವಾಗತಿಸಿದರು.

ಶಂಕರಾಚಾರ್ಯರ ಜಯಂತಿ: ಜಗದ್ಗುರು ಶಂಕರಾಚಾರ್ಯರ ಜಯಂತಿ ಏ.21ರಂದು ನಗರದ ಶಂಕರಾಚಾರ್ಯರ ಮಠದಲ್ಲಿ ಅಚ್ಚುಕಟ್ಟಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ತಿಳಿಸಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶಂಕರಾಚಾರ್ಯರ ಜಯಂತಿ ನಿಮಿತ್ತ ಜರುಗಿದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಮಾಜದ ಹಿರಿಯರಿಗೆ ಸನ್ಮಾನಿಸಲಾಗುವುದು ಎಂದರು. ಜಿಪಂ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಎಂ.ಎಂ.ತುಂಬರಮಟ್ಟಿ ಇತರರಿದ್ದರು.



ಗಜೇಂದ್ರಗಡ: ಪಟ್ಟಣದ ಎಸ್.ಎಂ. ಭೂಮರಡ್ಡಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 5ನೇ ಆವೃತ್ತಿ ವಾರ್ಡ್ ವೈಸ್ ಪ್ರೀಮಿಯರ ಲೀಗ್ ಕಾರ್ಯಕ್ರಮವನ್ನು ಪಿಎಸ್‌ಐ ಪ್ರಕಾಶ್ ಡಿ. ಉದ್ಘಾಟಿಸಿದರು. ರಾಕೇಶ್ ಮಾರಣಬಸರಿ, ಗಫಾರ್ ಡಾಲಾಯತ, ವಿನಾಯಕ ಜರತಾರಿ, ವಿನಾಯಕ ಪವಾರ, ನಾಗರಾಜ ಬಂಡ್ಡಿವಡ್ಡರ, ರವಿ ನಿಡಗುಂದಿ, ಬಸವರಾಜ ನಿಡಗುಂದಿ, ಅನಿಲ ನಿಡಗುಂದಿ, ಲಕ್ಷ್ಮಣ ಬಂಕದ, ರವಿ ಭಜಂತ್ರಿ, ರಾಜೂ ನಿಡಗುಂದಿ, ಅಂಬರೀಷ ಬಂಡ್ಡಿವಡ್ಡರ, ಮಲ್ಲು ಕಲ್ಲವಡ್ಡರ ಇದ್ದರು.

ಜಿಜೆಪಿ ಮಹಿಳಾ ಮೋರ್ಚಾ ಕಾರ್ಯದರ್ಶಿ ಶೋಭಾ ಮಾಹಿತಿ

ಇಂದಿನಿಂದ ಮಹಿಳಾ ಜಾಗೃತಿ ಸಮಾವೇಶ

ಹಾವೇರಿ : ಕೇಂದ್ರ ಸರ್ಕಾರ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲು ನೀಡುವ ನಾರಿಶಕ್ತಿ ವಂದನಾ ತಿದ್ದುಪಡಿ (ಮಹಿಳಾ ಮೀಸಲಾತಿ) ಮಸೂದೆ ಅನುಷ್ಠಾನಗೊಳ್ಳುತ್ತಿರುವ ಹಿನ್ನೆಲೆ ಮಹಿಳೆಯರಿಗೆ ತಮ್ಮ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜಿಲ್ಲಾದ್ಯಂತ ಹಲವು ಜಾಗೃತಿ ಕಾರ್ಯಕ್ರಮ ನಡೆಸಲಾಗುವುದು ಎಂದು ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಶೋಭಾ ನಿಸ್ಸೀಮಗೌಡ್ರ ಹೇಳಿದರು.

ನಗರದ ಕಾಗಿನೆಲೆ ರಸ್ತೆಯ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದಲ್ಲಿ ಮಹಿಳೆಯರಿಗೆ ಪೂಜ್ಯನೀಯ ಸ್ಥಾನಮಾನವಿದೆ. ಈ ದೇಶದಲ್ಲಿ ಶೇ.48.5ರಷ್ಟು ಮಹಿಳೆಯರೇ ಇದ್ದು, ಪ್ರಧಾನಿ ಮೋದಿಯವರು ಮಹಿಳೆಯರಿಗೆ ರಾಜಕಾರಣದಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡುವ ನಿಟ್ಟಿನಲ್ಲಿ ನಾರಿಶಕ್ತಿ ವಂದನಾ ಮಸೂದೆ ಅನುಷ್ಠಾನಕ್ಕೆ ಮುಂದಾಗಿದ್ದಾರೆ.

ತೊಟ್ಟಿಲು ತೂಗುವ ಕೈ ದೇಶದ ಚುಕ್ಕಾಣಿ ಹಿಡಿಯುವಂತೆ ಪರಿವರ್ತನೆಯಾಗುತ್ತಿದೆ. ಈ ಮಹಿಳಾ ಮೀಸಲು ಜಾರಿ ಸಂಬಂಧ ಏ.16ರಿಂದ 18ರ ವರೆಗೆ ವಿಶೇಷ ಸಂಸತ್ ಅಧಿವೇಶನ ನಡೆಯಲಿದೆ. ರಾಜಕೀಯ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆಯನ್ನು ಮುಕ್ತ ಮನಸ್ಸಿನಿಂದ ಬೆಂಬಲಿಸಬೇಕು ಎಂದು ಮನವಿ ಮಾಡಿದರು. ಮುಂಬರುವ ದಿನಗಳಲ್ಲಿ ವಿವಿಧ ಕ್ಷೇತ್ರಗಳ ತಜ್ಞರನ್ನು ಗುರುತಿಸಿ, ಅವರಿಗೆ ಚುನಾವಣಾ ಟಿಕೇಟ್ ನೀಡುವ ಅವಕಾಶಗಳು ಸೃಷ್ಟಿಯಾಗಲಿವೆ ಎಂದರು.

ಲೋಕಸಭೆ, ವಿಧಾನಸಭೆಯಲ್ಲಿ ಮಹಿಳಾ ಮೀಸಲಾತಿಯ ಕುರಿತು ಬಹಳ ವರ್ಷಗಳಿಂದ ಕೇಳಿಬರುತ್ತಿರುವ ಒಂದು ಕೂಗಾಗಿತ್ತು. ಕಳೆದ 30 ವರ್ಷಗಳ ಹಿಂದೆಯೇ ಇದು ಚರ್ಚೆಗೆ ಬಂದಾಗ ಕೆಲ ರಾಜಕೀಯ ಪಕ್ಷದವರು ಮಸೂದೆಯ ಪ್ರತಿಗಳನ್ನು ಹರಿದು ಹಾಕಿ ಪ್ರಬಲ ವಿರೋಧ ವ್ಯಕ್ತಪಡಿಸಿದ್ದರು. ಬಳಿಕ ಈ ಮಸೂದೆ ನನೆಗುದಿಗೆ ಬಿದ್ದಿತ್ತು. ಆದರೆ ನರೇಂದ್ರ ಮೋದಿಯವರು ಪ್ರಧಾನಿಯಾದ ಮೇಲೆ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ. ಶೌಚಾಲಯ ನಿರ್ಮಾಣ, ಭೇಟಿ ಬಚಾವ್ ಭೇಟಿ ಪಡಾವ, ಮುದ್ರಾ ಯೋಜನೆ ಹೀಗೆ ಅನೇಕ ಕಾರ್ಯಕ್ರಮ ರೂಪಿಸಿದ್ದಾರೆ ಎಂದರು.



> ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಮಹಿಳೆಯರಿಗೂ ತನ್ನದೇ ಆದ ನಿರ್ಣಯಗಳನ್ನು ತೆಗೆದುಕೊಳ್ಳಲು, ಚಿಂತನೆ ಮಾಡಲು ನಾರಿಶಕ್ತಿ ವಂದನಾ ತಿದ್ದುಪಡಿ ಮಸೂದೆ ಅನುಕೂಲವಾಗಲಿದೆ. ಇಷ್ಟು ದಿನ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರ ನಡೆಸಿದ ಮಹಿಳೆಯರು ಸಮರ್ಥವಾಗಿ ಆಡಳಿತ ನಡೆಸಬಲ್ಲರು ಎಂದು ಭಾವಿಸಿ ಮಸೂದೆ ಅಂಗೀಕಾರಗೊಳಿಸಲಾಗುತ್ತಿದೆ. ಪ್ರಬುದ್ಧ ರಾಷ್ಟ್ರ ನಿರ್ಮಾಣಕ್ಕೆ ಮಹಿಳೆಯರ ಕೊಡುಗೆಯೂ ಇನ್ಮುಂದೆ ಮಹತ್ವದ್ದಾಗಿರುತ್ತದೆ. ಜಿಲ್ಲೆಯಲ್ಲೂ ಮಹಿಳಾ ಸಮಾವೇಶವನ್ನು ಶೀಘ್ರದಲ್ಲಿ ಹಮ್ಮಿಕೊಳ್ಳಲಾಗುವುದು.
>
> ■ **ಬಸಮ್ಮ ಅಬಲೂರ,** ಜಿಲ್ಲಾಧ್ಯಕ್ಷರು, ಮಹಿಳಾ ಮೋರ್ಚಾ ಹಾವೇರಿ

ಸಹಿ ಸಂಗ್ರಹ, ಮಿಸ್ಡ್ ಕಾಲ್ ಅಭಿಯಾನ: ನಾರಿಶಕ್ತಿ ವಂದನಾ ತಿದ್ದುಪಡಿ ವಿಧೇಯಕ ಮಂಡನೆಗೆ ಮುಂದಾಗಿರುವ ಪ್ರಧಾನಿ ಮೋದಿ ಅವರನ್ನು ಅಭಿನಂದಿಸಲು ಎಲ್ಲ ಜಿಲ್ಲೆಗಳಲ್ಲಿ ಏ.13ರಿಂದ 18ರ ವರೆಗೆ ಮಹಿಳಾ ಮೋರ್ಚಾದಿಂದ ಮಹಿಳಾ ಜಾಗೃತಿ ಸಮಾವೇಶ ನಡೆಸಲಾಗುತ್ತದೆ. ಹಾವೇರಿ ಜಿಲ್ಲೆಯಲ್ಲಿಯೂ ವಕೀಲರು, ಡಾಕ್ಟರ್‌ಗಳು, ಎಂಜನೀಯರ್ಸ್ ಹೀಗೆ ವಿವಿಧ ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಬುದ್ಧ ಮಹಿಳಾ ತಜ್ಞರನ್ನು ಗುರುತಿಸಿ ಪ್ರಭುದ್ಧರ ಮಹಿಳಾ ಸಮಾವೇಶ ಆಯೋಜಿಸಲಾಗುವುದು. ಜತೆಗೆ ಸಹಿ ಸಂಗ್ರಹ ಅಭಿಯಾನ, ವಾಕ್‌ಥಾನ್, ಮಿಸ್ಡ್ ಕಾಲ್ ಅಭಿಯಾನ, ಬೈಕ್ ರ‍್ಯಾಲಿ ಮೂಲಕ ಅಭಿನಂದನೆ ಸಲ್ಲಿಸಲಾಗುತ್ತದೆ ಎಂದು ಶೋಭಾ ನಿಸ್ಸೀಮಗೌಡ್ರ ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ, ಮಹಿಳಾ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ವಿದ್ಯಾ ಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲತಾ ಬಡ್ನಿಮಠ, ವಕ್ತಾರ ನಿರಂಜನ ಹೇರೂರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮಂತ್ರಿ ಸ್ಥಾನ ನೀಡಲು ಶಾಸಕ ಶಿವಣ್ಣನವರ ಒತ್ತಾಯ

ಹಾವೇರಿ: ರಾಜ್ಯ ಸರ್ಕಾರದ ಸಚಿವ ಸಂಪುಟದಲ್ಲಿ ಉತ್ತರ ಕರ್ನಾಟಕ ಭಾಗದ ಕುರುಬ ಸಮಾಜದವರಿಗೆ ಮಂತ್ರಿ ಸ್ಥಾನ ಕೊಟ್ಟಿಲ್ಲ. ಸಚಿವ ಸಂಪುಟ ವಿಸ್ತರಣೆಯಾದರೆ ಕುರುಬ ಸಮಾಜದಿಂದ ನಾನು ನಾಲ್ಕು ಬಾರಿ ಶಾಸಕನಾಗಿ ಆಯ್ಕೆಯಾಗಿದ್ದೇನೆ. ನನಗೆ ಮಂತ್ರಿ ಸ್ಥಾನ ನೀಡಬೇಕೆಂದು ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಬಸವರಾಜ ಶಿವಣ್ಣನವರ ಕಾಂಗ್ರೆಸ್ ಹೈಕಮಾಂಡ್‌ಗೆ ಒತ್ತಾಯಿಸಿದರು.



ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಬಂದು ಎರಡೂವರೆ ವರ್ಷಗಳ ಬಳಿಕ ಸಂಪುಟ ಪುನಾರಚನೆ ಮಾಡುತ್ತೇವೆಂದು ಸಿಎಂ, ಡಿಸಿಎಂ ಹೇಳಿದ್ದರು. ಇದಕ್ಕೆ ಹೈಕಮಾಂಡ್ ಕೂಡ ನಿರ್ದೇಶನ ನೀಡಿತ್ತು. ಇದೀಗ ಎರಡೂವರೆವರ್ಷ ಮುಗಿದಿದೆ. ಬಜೆಟ್ ಮುಗಿದಿದೆ, ಉಪ ಚುನಾವಣೆಯೂ ಮುಗಿದಿದೆ. ಮತ್ತೇಕೆ ತಡ, ಮೂರಕ್ಕಿಂತ ಹೆಚ್ಚು ಬಾರಿ ಶಾಸಕರಾದವರು ಸಚಿವ ಸ್ಥಾನ ಕೊಡಿ ಎಂದು ಹೈಕಮಾಂಡ್‌ಗೆ ಒತ್ತಾಯ ಮಾಡಲು ನಿರ್ಧರಿಸಿದ್ದೇವೆ ಎಂದರು.

ಭಾನುವಾರ ಸಚಿವಾಕಾಂಕ್ಷಿ ಶಾಸಕರು ದಿಲ್ಲಿಗೆ ತೆರಳುತ್ತಿದ್ದಾರೆ, ನನಗೂ ದಿಲ್ಲಿಗೆ ಬರುವಂತೆ ಕರೆ ಮಾಡಿದ್ದರು. ಆದರೆ ನನಗೆ ಈಗಾಗಲೇ ಕಾರ್ಯಕ್ರಮ ನಿಗದಿಯಾಗಿದ್ದು, ನೀವು ಏನೇ ನಿರ್ಣಯ ತೆಗೆದುಕೊಂಡರೂ ಆ ನಿರ್ಣಯಕ್ಕೆ ಬೆಂಬಲ ಇದೆ ಎಂದು ಶಾಸಕರಿಗೆ ತಿಳಿಸಿದ್ದೇನೆ ಎಂದರು.

ಸಿಎಂ ಬದಲಾವಣೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ನಮ್ಮ ಸಿಎಂ ಹಾಗೂ ಡಿಸಿಎಂ ಅವರು ಹೈಕಮಾಂಡ್ ಏನು ಹೇಳುತ್ತೋ ಅದನ್ನು ಕೇಳೋಕೆ ತಯಾರಿದ್ದಾರೆ. ಆದರೆ ನಾವು ಈಗ ಸಚಿವ ಸಂಪುಟ ಪುನಾರಚನೆ ಮಾಡಿ ಎಂದು ಮಾತ್ರ ಒತ್ತಡ ಹಾಕುತ್ತಿದ್ದೇವೆ. ಹೈಕಮಾಂಡ್ ಏನು ನಿರ್ಣಯ ತೆಗೆದುಕೊಳ್ಳುತ್ತೋ ಅದಕ್ಕೆ ಬದ್ಧರಿದ್ದೇವೆ. ಈ ಹಿಂದೆ ಬಿಜೆಪಿ ಸರ್ಕಾರ ಇದ್ದಾಗೆಲ್ಲಾ ನಮ್ಮ ಜಿಲ್ಲೆಯಿಂದ ಇಬ್ಬಿಬ್ಬರನ್ನು ಮಂತ್ರಿ ಮಾಡಿದ್ದಾರೆ. ಆದರೆ ನಮ್ಮ ಸರ್ಕಾರ ಬಂದಾಗಲೆಲ್ಲಾ ಹಾವೇರಿಯನ್ನು ನಿರ್ಲಕ್ಷ್ಯ ಮಾಡಿದೆ. ಆದಾಗ್ಯೂ ಜಿಲ್ಲೆಯಲ್ಲಿ 6 ಕಾಂಗ್ರೆಸ್ ಶಾಸಕರು ಇದ್ದೇವೆ. ಜಿಲ್ಲೆಯವರನ್ನು ಮಂತ್ರಿ ಮಾಡಿದರೆ ಸಮಸ್ಯೆ ಬಗೆಹರಿಸಿ, ಅಭಿವೃದ್ಧಿ ಕಡೆ ಗಮನಹರಿಸಬಹುದು. ಮೂಲಭೂತ ಸೌಕರ್ಯ, ನೀರಾವರಿ ವಿಚಾರಗಳಲ್ಲಿ ನಮ್ಮ ಜಿಲ್ಲೆ ಬಹಳ ಹಿಂದೆ ಇದೆ, ಪಕ್ಕದ ದಾವಣಗೇರಿ, ಗದಗ ಅಭಿವೃದ್ಧಿಯಾಗಿದೆ. ನಮ್ಮ ಜಿಲ್ಲೆ ಅಭಿವೃದ್ಧಿಗೆ ಒಳ್ಳೆ ನಾಯಕರನ್ನು ಬೆಳೆಸಬೇಕಿದೆ ಎಂದರು.

ಜಿಲ್ಲಾ ಸಮಿತಿ ಅನ್ಯಾಯ ಖಂಡನೀಯ

ಹಾವೇರಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ 2026-31ರ ಅವಧಿಯ ಚುನಾವಣಾ ಪ್ರಕ್ರಿಯೆಯು ರಾಜ್ಯಾದ್ಯಂತ ನಡೆಯುತ್ತಿದ್ದು, ಹಾವೇರಿ ತಾಲೂಕಿನಲ್ಲಿ ಮಾತ್ರ ಚುನಾವಣಾಧಿಕಾರಿಗಳನ್ನು ನೇಮಿಸದೆ, ಮತದಾರರ ಪಟ್ಟಿಯನ್ನು ನೀಡದೆ ಜಿಲ್ಲಾ ಸಮಿತಿ ಅನ್ಯಾಯ ಮಾಡುತ್ತಿದೆ ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕಾ ಘಟಕದ ಪದಾಧಿಕಾರಿಗಳು ಆಕ್ರೋಶ ಹೊರಹಾಕಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ಬಸವರಾಜ ಅರಳಿ ಹಾಗೂ ತಾಲೂಕಾ ಪ್ರಧಾನ ಕಾರ್ಯದರ್ಶಿ ಬಸವರಾಜ ಹಳೇಮನಿ ಅವರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಸಂಬಂಧಿಸಿದಂತೆ 2026 ಏ.1ರಂದು ರಾಜ್ಯ ಚುನಾವಣೆ ಅಧಿಕಾರಿಗಳಿಂದ ಅಧಿಸೂಚನೆ ಹೊರಡಿಸಲಾಗಿದೆ. ಆ ಪ್ರಕಾರ ಚುನಾವಣೆಗೆ ನಾಮಪತ್ರ ಸಲ್ಲಿಸಲು ಏ.11 ಹಾಗೂ ಏ.12 ಕೊನೆಯ ದಿನವಾಗಿದೆ. ಆದರೆ ಶನಿವಾರ ಸಂಜೆಯಾದರೂ ರಾಜ್ಯ ಸಂಘವಾಗಲಿ, ಜಿಲ್ಲಾ ಸಮಿತಿಯಾಗಲಿ ಹಾವೇರಿ ತಾಲೂಕಾ ಸಂಘದ ಮತದಾರ ಪಟ್ಟಿ ಮತ್ತು ಚುನಾವಣೆ ಅಧಿಕಾರಿಗಳನ್ನು ನೇಮಕ ಮಾಡದೆ, ವಾಮ ಮಾರ್ಗದಿಂದ ಅಧಿಕಾರ ಹಿಡಿಯಲು ಪ್ರಯತ್ನ ಮಾಡುತ್ತಿದೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ರಾಜ್ಯ ಸಂಘದಿಂದ ಚುನಾವಣೆ ಘೋಷಣೆಯಾಗಿದ್ದರೂ ಸಹ, ಹಾವೇರಿ ತಾಲೂಕು ಮಟ್ಟದಲ್ಲಿ ಇದುವರೆಗೂ ಚುನಾವಣಾಧಿಕಾರಿಗಳ ನೇಮಕವಾಗಿಲ್ಲ. ಚುನಾವಣೆ ಘೋಷಣೆಯಾದ ನಂತರ ನಿಯಮದಂತೆ ಮತದಾರರ ಪಟ್ಟಿ ಘೋಷಿಸಿ ತಾಲೂಕು ಸಂಘಕ್ಕೆ ನೀಡಬೇಕಿತ್ತು. ಆದರೆ ರಾಜ್ಯ ಸಂಘದ ಅಧ್ಯಕ್ಷರು ಇದುವರೆಗೂ ಮತದಾರರ ಪಟ್ಟಿ ಒದಗಿಸದೆ ಇರುವುದು ಚುನಾವಣಾ ಅಕ್ರಮದ ಶಂಕೆ ಹುಟ್ಟುಹಾಕಿದೆ. 5ವರ್ಷದ ವಂತಿಗೆ ಹಣ ಕಟಾವಣೆ ಮಾಡಿದ್ದರೂ ಕೂಡ ಚುನಾವಣೆಯಲ್ಲಿ ಸ್ಪರ್ಧಿಸಲು, ಮತದಾನ ಮಾಡಲು ಅವಕಾಶ ನೀಡದಿರುವುದು ಪ್ರಜಾಪ್ರಭುತ್ವದ ಆಶಯಕ್ಕೆ ಧಕ್ಕೆ ತರುತ್ತಿದೆ. ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆಯನ್ನು ನಡೆಸದೆ ಹಿಂಬಾಗಿಲಿನ ಮೂಲಕ ಅಧಿಕಾರ ಹಿಡಿಯಲು ಪ್ರಯತ್ನಿಸುವ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿದೆ. ರಾಜ್ಯ ಸಂಘವು ತಕ್ಷಣವೇ ಹಾವೇರಿ ತಾಲೂಕಿಗೆ ಚುನಾವಣಾಧಿಕಾರಿ ನೇಮಿಸಬೇಕು ಮತ್ತು ಅಧಿಕೃತ ಮತದಾರರ ಪಟ್ಟಿ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಶಿಕ್ಷಕರಿಂದ ಸಂಗ್ರಹವಾಗುವ ವಂತಿಗೆಗೆ ಬೆಲೆ ಇಲ್ಲದಂತಾಗಿದ್ದು, ಮುಂದಿನ ದಿನಗಳಲ್ಲಿ ಹೋರಾಟ ಹಾದಿ ಹಿಡಿಯಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಸಚಿವ ಸಂಪುಟ ಪುನರ ರಚನೆಯಾಗಲಿ: ಶಾಸಕ ಮಾನೆ

ಹಾವೇರಿ/ ಹಾನಗಲ್ಲ: ಆದಷ್ಟು ಬೇಗ ಸಚಿವ ಸಂಪುಟ ಪುನರ ರಚನೆಯಾಗಿ, ಅಭಿವೃದ್ಧಿ, ಸಂಘಟನೆಯ ಹಿತದೃಷ್ಟಿಯಿಂದ ಹೊಸಮುಖಗಳಿಗೆ ಅವಕಾಶ ಸಿಗಬೇಕು. ಹಾವೇರಿ ಜಿಲ್ಲೆಗೂ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ಸಿಗಬೇಕು ಎಂದು ಹಾನಗಲ್ ಶಾಸಕ ಶ್ರೀನಿವಾಸ ಮಾನೆ ಹೇಳಿದರು.



ಜಿಲ್ಲೆಯ ಅಕ್ಕಿಆಲೂರಿನಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಎರಡೂವರೆ ವರ್ಷದ ನಂತರ ಸಂಪುಟದಲ್ಲಿ ಹೊಸಬರಿಗೆ ಅವಕಾಶ ನೀಡುವುದಾಗಿ ವರಿಷ್ಠರು ತಿಳಿಸಿದ್ದರು. ವಿಧಾನಸಭೆ ಅಧಿವೇಶನ, ಉಪ ಚುನಾವಣೆ ಹೀಗೆ ಬೇರೆ, ಬೇರೆ ಕಾರಣಗಳಿಂದ ಸಂಪುಟ ವಿಸ್ತರಣೆ ವಿಳಂಬವಾಗಿದೆ.

ಸರ್ಕಾರಕ್ಕೆ ಮೂರು ವರ್ಷ ಭರ್ತಿಯಾಗುತ್ತಿದೆ. ಮತ್ತಷ್ಟು ವಿಳಂಬವಾದರೆ ಕೆಲಸ ಮಾಡಲು ಅವಕಾಶ ಸಿಗಲ್ಲ, ಹಾಗಾಗಿ ಮೂರು ಬಾರಿಗಿಂತ ಹೆಚ್ಚು ಅವಧಿಗೆ ಗೆದ್ದಿರುವ ಹಿರಿಯ ಶಾಸಕರು ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿಮಾಡಲು ನಿರ್ಧರಿಸಿದ್ದು, ಈ ಕುರಿತು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ ಅವರಿಗೂ ಮಾಹಿತಿ ನೀಡಿದ್ದೇವೆ ಎಂದರು. ಜಿಲ್ಲೆಯ ಎಲ್ಲ ಆರು ಸ್ಥಾನಗಳಲ್ಲಿ ಕಾಂಗ್ರೆಸ್ ಶಾಸಕರು ಗೆದ್ದಿದ್ದೇವೆ. ತಾವೂ ಸೇರಿದಂತೆ ಹಿರಿಯ ಶಾಸಕರಾದ ಬಸವರಾಜ ಶಿವಣ್ಣನವರ, ರುದ್ರಪ್ಪ ಲಮಾಣಿ, ಯು.ಬಿ. ಬಣಕಾರ ಹಾಗೂ ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್ ಅವರು ಸಚಿವ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದು ನಮ್ಮಲ್ಲಿ ಯಾರನ್ನೇ ಮಾಡಿದರೂ ಸಹಮತವಿದೆ. ಒಟ್ಟಾರೆ ಜಿಲ್ಲೆಗೆ ಪ್ರಾತಿನಿಧ್ಯ ಸಿಗಬೇಕು ಎನ್ನುವುದಷ್ಟೇ ನಮ್ಮ ಹಕ್ಕೊತ್ತಾಯವಾಗಿದ್ದು, ಈ ಬಾರಿ ಖಂಡಿತವಾಗಿ ಜಿಲ್ಲೆಗೆ ಅವಕಾಶ ಸಿಗಲಿದೆ ಎಂದು ವಿಶ್ವಾಸವಿದೆ.

ಶಿಕ್ಷಕ ವೃತ್ತಿ ಮಾಡುವಂತವರು ಭಾಗ್ಯವಂತರು: ನೆಗಳೂರ ಶ್ರೀ

ಹಾವೇರಿ: ಶಿಕ್ಷಕವೃತ್ತಿ ಮಾಡುವುದು ಭಾಗ್ಯವಂತರ ಕೆಲಸವಾಗಿದ್ದು, ಸಮಾಜದಲ್ಲಿ ಶ್ರೇಷ್ಠ ಸೇವೆಯಾಗಿದ್ದು, ಎಲ್ಲ ಕ್ಷೇತ್ರದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುವರು ಎಂದು ನೆಗಳೂರಿನ ಸಂಸ್ಥಾನ ಹಿರೇಮಠದ ಗುರುಶಾಂತೇಶ್ವರ ಶಿವಾಚಾರ್ಯ ಶ್ರೀಗಳು ಹೇಳಿದರು.



ತಾಲೂಕಿನ ನೆಗಳೂರ ಗ್ರಾಮದಲ್ಲಿ ಭಾನುವಾರ ಇತ್ತೀಚೆಗೆ ಸೇವಾ ನಿವೃತ್ತಿ ಹೊಂದಿದ ಶಾಲಾ ಶಿಕ್ಷಕಿ ಎಸ್. ಜಿ. ಪಾಟೀಲ(ಹಿರೇಮಠ) ಇವರ ಸೇವಾ ನಿವೃತ್ತಿ ಕೃತಜ್ಞತಾ ಸಮಾರಂಭದಲ್ಲಿ ಸಾನ್ನಿಧ್ಯವಹಿಸಿ ಆರ್ಶೀವಚನ ನೀಡಿದರು.

ಗುರುಮಾತೆ ಎಸ್.ಜಿ. ಪಾಟೀಲ ಶಿಕ್ಷಕಿಯಾಗಿ ಸುದೀರ್ಘ 27 ವರ್ಷಗಳ ಕಾಲ ನಿಸ್ವಾರ್ಥ, ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದ್ದಾರೆ. ಅವರ ಗರಡಿಯಲ್ಲಿ ನೂರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಅವರ ಭವಿಷ್ಯ ರೂಪಿಸಿಕೊಳ್ಳುವಲ್ಲಿ ಮಾರ್ಗದರ್ಶಕರಾಗಿ ಸಾರ್ಥಕ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ಅವರ ನಿವೃತ್ತಿ ಜೀವನ ಸುಖಮಯವಾಗಿರಲಿ ಎಂದರು.

ಗದಿಗೆಯ್ಯ ಸ್ವಾಮಿ ಹಿರೇಮಠ ಮಾತನಾಡಿ ಎಸ್.ಜಿ. ಪಾಟೀಲ ಶಿಕ್ಷಕಿಯರು ಕಲಬುರಗಿ ಪಟ್ಟಣದಲ್ಲಿ ಜನಿಸಿ ನೆಗಳೂರ ಗ್ರಾಮದ ಹಿರೇಮಠದ ಮನೆತನದ ಸೊಸೆಯಾಗಿ ಬಂದ ನಂತರ 14 ವರ್ಷಗಳ ನಂತರ ಕಪ್ಪು ಹಲಗೆ ಯೋಜನೆ ಅಡಿಯಲ್ಲಿ ಶಿಕ್ಷಕಿಯಾಗಿ ಆಯ್ಕೆಯಾಗಿ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಕಾಳಗಿ ಕರೆಕಲ್ ತಾಂಡದಲ್ಲಿ ವೃತ್ತಿ ಪ್ರಾರಂಭಿಸಿ ಅಕ್ಕೂರ, ನೆಗಳೂರ ರ ಪ್ರಾಥಮಿಕ ಶಾಲೆಯಲ್ಲಿ ಸುದೀರ್ಘ 27 ವರ್ಷಗಳ ಕಾಲ ಸೇವೆ ಸಲ್ಲಿಸಿ ಸಾರ್ಥಕತೆ ಮೆರೆದಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕಲಬುರಗಿ, ನೆಗಳೂರ ಗ್ರಾಮಸ್ಥರು, ಹಳೆಯ ವಿದ್ಯಾರ್ಥಿಗಳು ಭಾಗಿಯಾಗಿ ಪಾಟೀಲ ಶಿಕ್ಷಕಿಯನ್ನು ಗೌರವಿಸಿದರು.

ಎಲ್ಪಿಜಿ ಗ್ಯಾಸ್ ದರ ಕಡಿಮೆ ಮಾಡಿ: ಜಗದೀಶ ಕೆರೂಡಿ

ರಾಣೇಬೆನ್ನೂರ: ತಾಲೂಕಾ ಆಟೋ ಚಾಲಕರ ಒಕ್ಕೂಟದ ಸಭೆ ಇತ್ತೀಚೆಗೆ ಸ್ಥಳೀಯ ಎಪಿಎಂಸಿ ವರ್ತಕರ ಸಮುದಾಯ ಭವನದಲ್ಲಿ ನಡೆದು ಒಕ್ಕೂಟಕ್ಕೆ ನೂತನವಾಗಿ ಅಧ್ಯಕ್ಷರಾಗಿ ಯುವ ಮುಖಂಡ ಜಗದೀಶ ಕೆರೂಡಿ ಹಾಗೂ ಗೌರವಾಧ್ಯಕ್ಷರಾಗಿ ರವೀಂದ್ರಗೌಡ ಪಾಟೀಲ ಆಯ್ಕೆಗೊಂಡರು.

ನೂತನ ಅಧ್ಯಕ್ಷ ಜಗದೀಶ್ ಕೆರೂಡಿ ಮಾತನಾಡಿ, ಯಾವುದೇ ಸಂಸ್ಥೆಯ ಸ್ಥಾನಮಾನಗಳು ಮುಖ್ಯವಲ್ಲ. ಜನರ ಸೇವೆ ಮುಖ್ಯವಾಗಿದೆ. ರಾಣೆಬೆನ್ನೂರು ನಗರದಲ್ಲಿ ಪ್ರತಿನಿತ್ಯ ಸಾವಿರಾರು ಆಟೋ ಚಾಲಕರು ಆಟೋ ಚಲಾಯಿಸಿಕೊಂಡು ಇಂದು ತಮ್ಮ ತಮ್ಮ ಕುಟುಂಬ ನಿರ್ವಹಣೆ ಮಾಡಿಕೊಳ್ಳುವುದು ಕಷ್ಟಕರವಾಗಿದೆ ಎಂದರು.

ಪ್ರಯಾಣ ದರದಲ್ಲಿ ವ್ಯತ್ಯಾಸವಾಗುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಸರ್ಕಾರ ಎಲ್ಪಿಜಿ ಗ್ಯಾಸ್ ದರವನ್ನ ಕಡಿಮೆ ಮಾಡಿ ಆಟೋ ಚಾಲಕರ ಬದುಕಿಗೆ ದಾರಿದೀಪವಾಗಬೇಕು ಎಂದರು.

ಗೌರವಾಧ್ಯಕ್ಷ ರವೀಂದ್ರಗೌಡ ಪಾಟೀಲ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಸೇವೆಯೇ ಜನಾರ್ದನ ಸೇವೆಯಾಗಿದೆ. ಇವತ್ತು ರಾಣೇಬೆನ್ನೂರು ನಗರದ ಎಲ್ಲಾ ಆಟೋ ಚಾಲಕರು ಗೌರವಾಧ್ಯಕ್ಷರನ್ನು ಆಯ್ಕೆ ಮಾಡುವುದರ ಮುಖಾಂತರ ದೊಡ್ಡ ಜವಾಬ್ದಾರಿಯನ್ನು ನೀಡಿದ್ದಾರೆ. ಅವರ ನಂಬಿಕೆ ವಿಶ್ವಾಸಗಳಿಗೆ ಮಾನ್ಯತೆ ನೀಡಿ ಆಟೋ ಚಾಲಕರಿಗೆ ಸರ್ಕಾರದ ಸೌಲಭ್ಯಗಳು ಸೂಕ್ತ ಸಮಯದಲ್ಲಿ ದೊರೆಯುವಂತಾಗಲು ಸಂಬಂಧಪಟ್ಟ ಇಲಾಖೆಗಳಿಗೆ ಮತ್ತು ಸರ್ಕಾರಗಳ ಗಮನ ಸೆಳೆಯಲು ಹಾಗೂ ರಾಣೆಬೆನ್ನೂರು ನಗರ ಆಟೋ ಚಾಲಕರ ಕಲ್ಯಾಣಕ್ಕಾಗಿ ಶ್ರಮಿಸುವುದಾಗಿ ಭರವಸೆ ನೀಡಿದರು.



ಕರಿಯಪ್ಪ ಪೂಜಾರ, ವಿರೇಶ ಬಳ್ಳಾರಿ, ಹಾರೋಗಪ್ಪ, ವಿನಯ ಚನ್ನಪ್ಪನವರ, ಪರಶುರಾಮ ಅಯ್ಯಜ್ಜನವರ, ರಮೇಶ್ ಕೆಂಪಣ್ಣನವರ, ಉದಯ ತೆಗ್ಗಿನ, ಮನೋಜ್ ಕುಮಾರ್, ಉಮೇಶ್ ತಿಳುವಳ್ಳಿ, ಭಾಷಾಸಾಬ್ ಹಂಪಾಪಟ್ಟಣ, ರಾಜು ಓಲೇಕಾರ್, ಯಲ್ಲಪ್ಪ ಚಿಕ್ಕಣ್ಣನವರ, ಚಿಕ್ಕಪ್ಪ ಎಡಚಿ, ಅಜ್ಜಪ್ಪ ನಾಯಕ್, ಅಣ್ಣಪ್ಪ ಸೇರಿದಂತೆ 400 ಕ್ಕೂ ಅಧಿಕ ಆಟೋ ಚಾಲಕರು ಇದ್ದರು.

ಸ್ತ್ರೀ ಸ್ವಾತಂತ್ರ್ಯದ ಪರ ವಚನ ರಚಿಸಿದ ಅಕ್ಕಮಹಾದೇವಿ

ನರಗುಂದ: ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳು ಪ್ರೌಢಾವಸ್ಥೆಗೆ ಬರುತ್ತಿದ್ದಂತೆ ಪರೋಕ್ಷವಾಗಿ ಅವರ ಸ್ವಾತಂತ್ರ್ಯಗಳನ್ನು ಕಸಿದುಕೊಳ್ಳಲಾಗುತ್ತಿದೆ. ಸರ್ಕಾರ ಸಾಕಷ್ಟು ಕಠಿಣ ಕಾನೂನುಗಳನ್ನು ಜಾರಿಗೆ ತಂದರೂ ಸಹಿತ ಬಾಲ್ಯವಿವಾಹ ದಿನದಿಂದ ದಿನಕ್ಕೆ ಉಲ್ಲಂಘನವಾಗುತ್ತಿದೆ. ಇದರ ಬಗ್ಗೆ ಸಮಾಜ ಜಾಗೃತವಾಗಬೇಕಿದೆ. ಇಂದು ದೇಶದಲ್ಲಿ ಮಹಿಳೆಯರು ಸ್ವತಂತ್ರವಾಗಿ ಬದುಕುತ್ತಿದ್ದಾರೆ ಎಂದರೆ ಅದಕ್ಕೆ ಮೂಲ ಪ್ರೇರಣೆ ಶರಣೆ ಅಕ್ಕಮಹಾದೇವಿ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಬಿಸಿ ಟ್ರಸ್ಟ್ ಯೋಜನಾಧಿಕಾರಿ ಮಾಲತಿ ದಿನೇಶ್ ಹೇಳಿದರು.



ತಾಲೂಕಿನ ಬೈರನಹಟ್ಟಿ ಗ್ರಾಮದ ದೊರೆಸ್ವಾಮಿ ವಿರಕ್ತಮಠದಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಹಾಗೂ ಅಕ್ಕಮಹಾದೇವಿ ಮಹಿಳಾ ವಿವಿಧೋದ್ದೇಶಗಳ ಸಂಘ ಇತ್ತೀಚೆಗೆ ಹಮ್ಮಿಕೊಂಡಿದ್ದ 381ನೇ ಮಾಸಿಕ ಶಿವಾನುಭವ ಹಾಗೂ ವೈರಾಗ್ಯನಿಧಿ ಅಕ್ಕಮಹಾದೇವಿ ಜಯಂತಿ ನಿಮಿತ್ಯ ಮಹಿಳಾ ಗೋಷ್ಠಿ ಸಮಾರಂಭದಲ್ಲಿ ಮಾತನಾಡಿದರು. ದೇಶದ ಮೊಟ್ಟಮೊದಲ ಕವಿಯಿತ್ರಿ ವೈರಾಗ್ಯನಿಧಿ ಅಕ್ಕಮಹಾದೇವಿ ಇಡೀ ವಿಶ್ವಕಂಡಂತಹ ದಿಟ್ಟ ಮಹಿಳೆ ಅಕ್ಕಮಹಾದೇವಿಯ ಜೀವನ ಸಂದೇಶ ನಮಗೆಲ್ಲ ದಾರಿದೀಪ. 12ನೇ ಶತಮಾನದಲ್ಲಿ ಮೌಡ್ಯಾಚರಣೆ ಹಾಗೂ ಅನಿಷ್ಠ ಪದ್ಧತಿಗಳನ್ನು ಧಿಕ್ಕರಿಸಿ ಮಹಿಳೆಯರ ಪರ ಧ್ವನಿ ಎತ್ತಿ ಸ್ತ್ರೀ ಸ್ವಾತಂತ್ರ್ಯವನ್ನು ಬಯಸಿದ ಅಕ್ಕಮಹಾದೇವಿ ಸಾವಿರಾರು ವಚನಗಳನ್ನು ರಚಿಸಿದ್ದಾರೆ. ಅಕ್ಕನ ವಚನಗಳಲ್ಲಿ ವೈಚಾರಿಕ ಪ್ರಜ್ಞೆ, ನೈಸರ್ಗಿಕ ಪ್ರಜ್ಞೆಯ ಜೊತೆಗೆ ಸ್ತ್ರೀ ಸ್ವಾತಂತ್ರ್ಯದ ಪರ ವಚನಗಳನ್ನು ರಚಿಸಿದ ಜಗತ್ತಿನ ಮೊದಲ ಕವಿಯಿತ್ರಿ ಎಂದರು.

ಉಮಾವತಿ ನಾಯ್ಕರ ಮಾತನಾಡಿದರು. ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರನ್ನು ಶ್ರೀಮಠದಿಂದ ಸತ್ಕರಿಸಲಾಯಿತು. ಶಾಂತಲಿಂಗ ಶ್ರೀಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ರಾಜೇಶ್ವರಿ ಶಂಕರಗೌಡ್ರ, ಎಸ್. ಎಫ್. ದ್ಯಾವನಗೌಡ್ರ, ಮಹಾದೇವಿ ಕುಪ್ಪಸ್ತ, ಡಾ. ವಿಜಯಲಕ್ಷ್ಮೀ ರಾಯನಗೌಡ್ರ, ಡಾ. ಸುಮಂಗಲಾ ಜಾದವ, ಆರೋಗ್ಯ ಸುರಕ್ಷಾ ಅಧಿಕಾರಿ ಸುಮಿತ್ರಾ ಜಗಲಿ, ಪ್ರತಿಭಾ ಚಿನಿವಾಲರ ಉಪಸ್ಥಿತರಿದ್ದರು. ಮಹಾಂತೇಶ ಹಿರೇಮಠ ನಿರ್ವಹಿಸಿದರು. ರೇಣುಕಾ ನರಸಾಪೂರ ಸ್ವಾಗತಿಸಿ ಶರಣವ್ವ ತೆಗ್ಗಿನಮನಿ ವಂದಿಸಿದರು.

ಕಿರುಸುದ್ದಿ

ಪ್ರಬಂಧ ಸ್ಪರ್ಧೆ: ವಿಜೇತರಿಗೆ ಬಹುಮಾನ ವಿತರಣೆ

◆**ಸಂಕೇಶ್ವರ :** ಶ್ರೀಮತಿ ಗೋದಾಬಾಯಿ ಗೋವಿಂದ ಕರನಿಂಗ ಮೆಮೊರಿಯಲ್ ಫೌಂಡೇಷನ್ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ವೃತ್ತ ಭೀಮ ನಗರ ಸಂಕೇಶ್ವರ ಸಹಯೋಗದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿಯ ನಿಮಿತ್ತವಾಗಿ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಪಟ್ಟಣದ ಭೀಮನಗರದಲ್ಲಿನ ಗೌತಮ ಕನ್ನಡ ಮಾಧ್ಯಮ ಶಾಲೆಯಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಕುರಿತು ನಡೆದಿದ್ದ ಪ್ರಬಂಧ ಸ್ಪರ್ಧೆಯಲ್ಲಿನ ವಿದ್ಯಾರ್ಥಿಗಳಿಗೆ ಭಾನುವಾರ ಗಣ್ಯರಿಂದ ಪ್ರಶಸ್ತಿ ನೀಡಲಾಯಿತು. ಪ್ರಾಥಮಿಕ ಹಾಗೂ ಪ್ರೌಢ ವಿಭಾಗದಲ್ಲಿನ ಕನ್ನಡ, ಇಂಗ್ಲಿಷ್, ಮರಾಠಿ ಭಾಷೆಯಲ್ಲಿನ ವಿದ್ಯಾರ್ಥಿಗಳಿಗೆ ಪ್ರತೇಕವಾಗಿ ಬಹುಮಾನ ವಿತರಿಸಲಾಯಿತು ಪ್ರಥಮ ಬಹುಮಾನ 3001, ದ್ವಿತಿಯ ಬಹುಮಾನ 2001, ತೃತೀಯ ಬಹುಮಾನ 1001, ರೂ. ನಗದು ಮತ್ತು ಮೊಮೆಂಟೋವನ್ನು ಶ್ರೀಮತಿ ಗೋದಾಬಾಯಿ ಗೋವಿಂದ ಕರನಿಂಗ ಮೆಮೊರಿಯಲ್ ಫೌಂಡೇಷನ್ ಅವರಿಂದ ವಿತರಿಸಲಾಯಿತು. ಈ ಸಂದರ್ಭದಲ್ಲಿ ನಿಖಿಲ್ ಸ್ಪೋರ್ಟ್ಸ್ ಕ್ಲಬ್‌ನ ಅಧ್ಯಕ್ಷ ನಿಖಿಲ್ ನವೀನ ಗಂಗರೆಡ್ಡಿ, ನ್ಯಾಯವಾದಿ ವಿಕ್ರಮ ಕರನಿಂಗ, ಮುಖಂಡರಾದ ಪ್ರಮೋದ್ ಹೊಸಮನಿ, ಗಂಗಾರಾಮ ಭೂಸಗೋಳ, ಡಾ. ಸುನಿಲ ಕಾಂಬಳೆ, ಶಿಕ್ಷಕರಾದ ಭರತ್ ಪಾರ್ಥನಳ್ಳಿ, ಬಸವಂತ ಸತ್ಯನಾಯಕ, ಮಂಜುನಾಥ ಸತ್ಯನಾಯಿಕ, ರಾಜು ಸತ್ಯನಾಯಕ, ಪ್ರವೀಣ ಮಾಳಗೆ, ಕಿರಣ ಕಾಂಬಳೆ, ನಾಗರಾಜ ಕರನಿಂಗ, ವಿನಾಯಕ ಮಳನಾಯಿಕ ಸೇರಿದಂತೆ ಅನೇಕರು ಹಾಜರಿದ್ದರು.

ಸಾವಳಗಿ ಶ್ರೀ ಶಿವಲಿಂಗೇಶ್ವರ ಮಹಾತ್ಮೆ ನಾಟಕ ಪುಸ್ತಕ ಬಿಡುಗಡೆ



◆**ಗೋಕಾಕ:** ಸಾಹಿತಿಗಳ ಹಾಗೂ ಕಲಾವಿದರ ತವರು ಗೋಕಾಕ ತಾಲೂಕು ಎಂದು ಕಸಾಪ ಗೋಕಾಕ ತಾಲೂಕು ಘಟಕದ ಮಾಜಿ ಅಧ್ಯಕ್ಷ ಮಹಾಂತೇಶ ತಾಂವಶಿ ಹೇಳಿದರು. ಅವರು, ನಗರದ ಜಿರಗ್ಯಾಳ ಸಭಾ ಭವನದಲ್ಲಿ ಹಮ್ಮಿಕೊಂಡ ಸಾಹಿತಿ ಬಸವರಾಜ ಪಟ್ಟಣಶೆಟ್ಟಿ ಅವರ ಸಾವಳಗಿ ಶ್ರೀ ಶಿವಲಿಂಗೇಶ್ವರ ಮಹಾತ್ಮೆ ನಾಟಕ ಪುಸ್ತಕ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ತಾಲೂಕಿನ ಬೆಟಗೇರಿ ಕೃಷ್ಣ ಶರ್ಮ, ಬಸವರಾಜ ಕಟ್ಟಿಮನಿ, ಕೃಷ್ಣಮೂರ್ತಿ ಪುರಾಣಿಕರಂತಹ ಮಹಾನ ಸಾಹಿತಿಗಳು ಸಾಹಿತ್ಯ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಿದ್ದಾರೆ. ಅವರ ಮಾರ್ಗದಲ್ಲಿಯೇ ಇಂದಿನ ಸಾಹಿತಿಗಳು ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೆ ಕೊಡುಗೆ ನೀಡುವಂತೆ ಕರೆ ನೀಡಿದರು. ನಾಟಕ ಕೃತಿಯನ್ನು ಡಾ.ಅಶೋಕ ಜಿರಗ್ಯಾಳ ಬಿಡುಗಡೆಗೊಳಿಸಿದರು. ಕೃತಿ ಕುರಿತು ವಿದ್ಯಾ ರೆಡ್ಡಿ ಮಾತನಾಡಿದರು. ಸಾನಿಧ್ಯವನ್ನು ಜಂಗಟಿಹಾಳನಶ್ರೀ ಚಂದ್ರಶೇಖರ ಮಹಾರಾಜರು, ಅಧ್ಯಕ್ಷತೆಯನ್ನು ಪ್ರೊ.ಚಂದ್ರಶೇಖರ ಅಕ್ಕಿ ವಹಿಸಿದ್ದರು. ವೇದಿಕೆಯ ಮೇಲೆ ಸುವರ್ಣಾತಾಯಿ ಹೊಸಮಠ, ರಜನಿ ಜಿರಗ್ಯಾಳ, ಧರೆಪ್ಪ ಮಗದುಮ, ಡಾ.ಸಂತೋಷ ಚಿಕ್ಕೋಡಿ, ಪ್ರಕಾಶಕರಾದ ಸಿದ್ರಾಯ ಐದುಡ್ಡಿ, ಸಾವಿತ್ರಿ ಐದುಡ್ಡಿ ಇದ್ದರು. ಜಯಾ ಚುನಮರಿ ಸ್ವಾಗತಿಸಿದರು. ಸಂಗೀತಾ ಬನ್ನೂರ ನಿರೂಪಿಸಿದರು. ಸುಧಾ ಮಠಪತಿ ವಂದಿಸಿದರು.

ನಿಧನ ಸುದ್ದಿ

ಲಕ್ಷ್ಮಣ ಸಿಂಗಾಡಿ

◆**ಗೋಕಾಕ:** ತಾಲೂಕಿನ ಮಮದಾಪೂರ ಗ್ರಾಮದ ಲಕ್ಷ್ಮಣ ಕೆಂಚಪ್ಪ ಸಿಂಗಾಡಿ (68) ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.




ಸಂತಾಪ: ಲಕ್ಷ್ಮಣ ಸಿಂಗಾಡಿಯವರ ನಿಧನಕ್ಕೆ ಶಾಸಕ ರಮೇಶ ಜಾರಕಿಹೊಳಿ, ಕಾರ್ಮಿಕ ಮುಖಂಡ ಅಂಬಿರಾವ ಪಾಟೀಲ ತೀವ್ರ ಸಂತಾಪ ಸೂಚಿಸಿದ್ದಾರೆ.



ಸಂಕೇಶ್ವರ : ಶ್ರೀಮತಿ ಗೋದಾಬಾಯಿ ಗೋವಿಂದ ಕರನಿಂಗ ಮೆಮೊರಿಯಲ್ ಫೌಂಡೇಷನ್ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ವೃತ್ತ ಭೀಮ ನಗರ ಸಂಕೇಶ್ವರ ಸಹಯೋಗದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿಯ ನಿಮಿತ್ತವಾಗಿ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಯುವಜನತೆಯ ಸೇವೆ ದೇಶಕ್ಕೆ ದೊರಕಲಿ: ಶ್ರೀಗಳು

◆**ರಾಯಬಾಗ:** ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಿ, ತಾಯ್ನಾಡಿಗೆ ಮರಳಿ ಬರುವ ದೇಶದ ಯುವಕರ ಸೇವೆ ದೇಶಕ್ಕೆ ದೊರಕಬೇಕೆಂದು ಚಿತ್ರದುರ್ಗದ ಹೊಸದುರ್ಗ ಭಗೀರಥ ಮಠದ ಪುರುಷೋತ್ತಮ ಸ್ವಾಮೀಜಿ ಹೇಳಿದರು. ಶನಿವಾರ ಕಂಕಣವಾಡಿ ಪಟ್ಟಣದ ನಾಯಿಕವಾಡಿ ತೋಟದಲ್ಲಿ ಆಸ್ಟ್ರೇಲಿಯಾ ದೇಶದಲ್ಲಿ ಅಗ್ರಿಕಲ್ಚರಲ್ ಬಿಸಿನೆಸ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದು ಸ್ವಗ್ರಾಮಕ್ಕೆ ಆಗಮಿಸಿದ ಶ್ರೀರಾಜ ಅರ್ಜುನ ನಾಯಿಕವಾಡಿ ಅವರ ಸತ್ಕಾರ ಮತ್ತು ಸ್ವಾಗತ ಸಮಾರಂಭದಲ್ಲಿ ಮಾತನಾಡಿ, ನಾಯಿಕವಾಡಿ ಕುಟುಂಬದ ಯುವಕರು ವಿವಿಧ ಸರ್ಕಾರಿ ಹುದ್ದೆಗಳನ್ನು ಅಲಂಕರಿಸಿ ಸೇವೆ ಸಲ್ಲಿಸುತ್ತಿರುವುದು ಅತ್ಯಂತ ಸಂತೋಷದ ವಿಷಯ. ಇವರ ಕುಟುಂಬ ಮಾಡುತ್ತಿರುವ ಸಾಮಾಜಿಕ ಮತ್ತುರಾಜಕೀಯ ಕಾರ್ಯ ಪ್ರತಿಯೊಬ್ಬರಿಗೂ ಮಾದರಿಯಾಗಿದೆ ಎಂದರು. ನಮ್ಮದೇಶದ ಯುವಜನಾಂಗ ವಿದೇಶದಲ್ಲಿ ಅಧ್ಯಯನ ಕೈಗೊಂಡಿದ್ದರೂ, ದೇಶದ ಸಂಸ್ಕೃತಿ, ಸಂಸ್ಕಾರ ಮರೆಯದೇ ಇರುವುದು ನಮಗೆ ಹೆಮ್ಮೆಯ ವಿಷಯ ಎಂದು ಹೇಳಿದರು. ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಭರಮಣ್ಣ ಉಪ್ಪಾರ, ಬನಹಟ್ಟಿಯ ಮಹಾಂತ ದೇವರು, ಜಂಗಟಿಹಾಳದ ಯಲ್ಲಾಲಿಂಗೇಶ್ವರ ಮಠದ ಮಾತೋಶ್ರೀ ಸಂಗಮತಾಯಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಹಾವೀರ ಮೊಹಿತೆ, ಅರ್ಜುನ ನಾಯಿಕವಾಡಿ, ಧೂಳಗೌಡ ಪಾಟೀಲ, ಶ್ರೀಶೈಲ ಮಹಾಲಿಂಗೇಶ್ವರ, ನಾಗಯ್ಯ ಸ್ವಾಮಿ, ಕರೇಪ್ಪ ಪೂಜಾರಿ, ಶ್ರೀಮಂತ ಪೂಜಾರಿ, ಬಾಳಪ್ಪ ಆರಭಾವಿ, ಶಂಕರಗೌಡ ಪಾಟೀಲ, ರಾಜುಕೊಟಗಿ, ತಮ್ಮಣ್ಣ ನಾಯಿಕವಾಡಿ, ಬಸವರಾಜ ಮಿರ್ದೆ, ಗುರುರಾಜ ನಾಯಿಕವಾಡಿ, ಲಕ್ಷ್ಮೀಕಾಂತ ಉಪ್ಪಾರ, ಸಚಿನ ನಾಯಿಕವಾಡಿ ಸೇರಿ ಅನೇಕರು ಇದ್ದರು.



ರಾಯಬಾಗ: ಶನಿವಾರ ಕಂಕಣವಾಡಿ ಪಟ್ಟಣದ ನಾಯಿಕವಾಡಿ ತೋಟದಲ್ಲಿ ಆಸ್ಟ್ರೇಲಿಯಾ ದೇಶದಲ್ಲಿ ಅಗ್ರಿಕಲ್ಚರಲ್ ಬಿಸಿನೆಸ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದು ಸ್ವಗ್ರಾಮಕ್ಕೆ ಆಗಮಿಸಿದ ಶ್ರೀರಾಜ ಅರ್ಜುನ ನಾಯಿಕವಾಡಿ ಅವರ ಸತ್ಕಾರ ಮತ್ತು ಸ್ವಾಗತ ಸಮಾರಂಭ ನಡೆಯಿತು. ಚಿತ್ರದುರ್ಗದ ಹೊಸದುರ್ಗ ಭಗೀರಥ ಮಠದ ಪುರುಷೋತ್ತಮ ಸ್ವಾಮೀಜಿ, ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಭರಮಣ್ಣ ಉಪ್ಪಾರ, ಬನಹಟ್ಟಿಯ ಮಹಾಂತ ದೇವರು, ಜಂಗಟಿಹಾಳದ ಯಲ್ಲಾಲಿಂಗೇಶ್ವರ ಮಠದ ಮಾತೋಶ್ರೀ ಸಂಗಮತಾಯಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಹಾವೀರ ಮೊಹಿತೆ ಇತರರಿದ್ದರು.

ವಿಶೇಷ ಬೇಸಿಗೆ ತರಗತಿಗಳಿಗೆ ಚಾಲನೆ | ಕಾಂಗ್ರೆಸ್ ಮುಖಂಡ ಚಿದಾನಂದ ಹೇಳಿಕೆ

ಶೈಕ್ಷಣಿಕ ಲೋಕದಲ್ಲಿ ಹೊಸ ಸಂಚಲನ

◆**ತೆಲಸಂಗ:** ಶಿಕ್ಷಣ ಎಂಬುದು ಇಂದು ಕೇವಲ ಶ್ರೀಮಂತರ ಪಾಲಿನ ಸ್ವತ್ತಾಗಿರುವ ಈ ಕಾಲಘಟ್ಟದಲ್ಲಿ ಕೇವಲ ಸರ್ಕಾರಿ ಶಾಲೆಯ ಬಡ ವಿದ್ಯಾರ್ಥಿಗಳಿಗಾಗಿ ಸಂತೋಷ್ ಕದಂ ಅವರು ಕೈಗೊಂಡಿರುವ ನಿರ್ಧಾರ ಇಡೀ ರಾಜ್ಯಕ್ಕೆ ಮಾದರಿಯಾಗಿದೆ ಎಂದು ಕಾಂಗ್ರೆಸ್ ಯುವ ಮುಖಂಡ ಚಿದಾನಂದ ಸವದಿ ಹೇಳಿದರು.

ಸಮೀಪದ ಖೋತನಟ್ಟಿ ಗ್ರಾಮದಲ್ಲಿ ಶಿಕ್ಷಕ ಸಂತೋಷ ಕದಮ್ ಅವರು ಕೈಗೊಂಡ ಉಚಿತ ಗ್ರಾಮ ಶಿಕ್ಷಣ ಅಭಿಯಾನದಡಿ ಸರಕಾರಿ ಶಾಲಾ ಮಕ್ಕಳಿಗಾಗಿ ಉಚಿತ ವಿಶೇಷ ಬೇಸಿಗೆ ತರಗತಿಗಳಿಗೆ ಭಾನುವಾರ ಚಾಲನೆ ನೀಡಿ ಮಾತನಾಡಿ, ಶಿಕ್ಷಣವೇ ಶಕ್ತಿ ಎನ್ನುವ ಮಾತಿಗೆ ನಿಜವಾದ ಅರ್ಥ ನೀಡಲು ಹೊರಟಿರುವ ಈ ಕಾರ್ಯಕ್ರಮ, ಶೈಕ್ಷಣಿಕ ಲೋಕದಲ್ಲಿ ಹೊಸ ಸಂಚಲನ ಮೂಡಿಸಿದೆ ಎಂದರು.

ಸಂತೋಷ್ ಕದಮ್ ರೂಪಿಸಿರುವ ಈ ಯೋಜನೆ ಸಂಪೂರ್ಣ ಉಚಿತವಾಗಿದೆ. ಇಲ್ಲಿ ಹಣಕ್ಕಿಂತ ಅರ್ಹತೆಗೆ ಹೆಚ್ಚಿನ ಬೆಲೆ ನೀಡಲಾಗಿದೆ. ಕಡ್ಡಾಯವಾಗಿ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ. ಇದು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಮಕ್ಕಳ ಶೈಕ್ಷಣಿಕ ಉನ್ನತಿ. ಕೂಲಿ ಕಾರ್ಮಿಕರು, ರೈತರು ಮತ್ತು ದೀನ ದಲಿತರ ಮಕ್ಕಳ ಶೈಕ್ಷಣಿಕ ಪ್ರಗತಿಗೆ ದಿಟ್ಟ ಹೆಜ್ಜೆ. ಇದು ಗ್ರಾಮಗಳಲ್ಲಿನ ವಿದ್ಯಾವಂತ ಯುವಕರಿಗೆ ಮಾದರಿಯಾಗಿದೆ ಎಂದರು.

ವಕೀಲ ಅಮಗೊಂಡ ಖೊಬ್ರಿ ಮಾತನಾಡಿ, ನಮ್ಮ ಸಮಾಜದಲ್ಲಿ ಸವಲತ್ತುಗಳಿಲ್ಲದೆ ಎಷ್ಟೋ ಪ್ರತಿಭಾವಂತ ಮಕ್ಕಳು ಕಮರಿ ಹೋಗುತ್ತಿದ್ದಾರೆ. ಸರ್ಕಾರಿ ಶಾಲೆಯ ಮಕ್ಕಳು ಖಾಸಗಿ ಶಾಲೆಯ ಮಕ್ಕಳೊಂದಿಗೆ ಸ್ಪರ್ಧಿಸಲು ಬೇಕಾದ ತರಬೇತಿಯನ್ನು ಈ ವೇದಿಕೆ ನೀಡಲಿದೆ. ಬಡತನ ಎಂಬುದು ಸಾಧನೆಗೆ ಅಡ್ಡಿಯಾಗಬಾರದು. ಖಾಸಗಿ ಶಾಲೆಗಳಿಗೆ ಪ್ರವೇಶ ನಿರಾಕರಿಸಿ, ಕೇವಲ ಸರ್ಕಾರಿ ಶಾಲೆಯ ಮಕ್ಕಳಿಗಾಗಿಯೇ ಮೀಸಲಿಟ್ಟಿರುವ ಈ ಕಾರ್ಯಕ್ರಮ, ಸರ್ಕಾರಿ ಶಾಲೆಗಳನ್ನು ಉಳಿಸುವ ಮತ್ತು ಬೆಳೆಸುವ ನಿಟ್ಟಿನಲ್ಲಿ ದೊಡ್ಡ ಹೆಜ್ಜೆಯಾಗಿದೆ.



> ಕಡ್ಡಾಯವಾಗಿ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ಕಲ್ಪಿಸಿ ಉಚೀತ ಶಿಬಿರ ನಡೆಸುವ ಈ ನಿಸ್ವಾರ್ಥ ಸೇವೆ ಸಮಾಜದ ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಲಿ. ಇಂತಹ ಮಾದರಿ ಕಾರ್ಯಕ್ರಮಗಳು ರಾಜ್ಯದ ಮೂಲೆ ಮೂಲೆಗಳಲ್ಲಿ ನಡೆದರೆ ಮುಂದಿನ ದಿನಗಳಲ್ಲಿ ಜ್ಞಾನದ ಹಣತೆ ಪ್ರತಿಯೊಬ್ಬ ಬಡವನ ಮನೆಯಲ್ಲೂ ಬೆಳಗುವುದರಲ್ಲಿ ಸಂಶಯವಿಲ್ಲ.
> ■ ಚಿದಾನಂದ ಸವದಿ. ಕಾಮಗ್ರೆಸ್ ಯುವ ಮುಖಂಡರು ಅಥಣಿ.

ಇದು ಕೇವಲ ಒಂದು ತರಗತಿಯಲ್ಲ, ಬದಲಿಗೆ ಸಮಾನತೆಯ ಸಮಾಜ ನಿರ್ಮಿಸುವ ಒಂದು ಮಹಾನ್ ಅಭಿಯಾನ ಎಂದರು.

ಅಭಿಯಾನದ ರೂವಾರಿ ಸಂತೋಷ್ ಕದಮ ಮಾತನಾಡಿ, ಬಡ ಹಾಗೂ ರೈತ ಕುಟುಂಬಗಳ ಮಕ್ಕಳು ಮಾತ್ರ ಸರಕಾರಿ ಶಾಲೆಗಳಲ್ಲಿದ್ದಾರೆ. ಅಂತಹ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಅನ್ನುದು ಮುಖ್ಯ ಉದ್ದೇಶವಾಗಿದೆ. 1 ರಿಂದ 7ನೇ ತರಗತಿ ವಿದ್ಯಾರ್ಥಿಗಳಿಗೆ ನಡೆಯುವ ಈ ತರಗತಿಗಳು ಪ್ರತಿದಿನ ಬೆಳಿಗ್ಗೆ 7ರಿಂದ 10ರವರೆಗೆ ನಡೆಯಲಿದ್ದು, ಕನ್ನಡ, ಇಂಗ್ಲಿಷ್, ಗಣಿತ ಹಾಗೂ ಸಾಮಾನ್ಯ ಜ್ಞಾನ ಬೋಧನೆ ಮಾಡಲಾಗುತ್ತದೆ ಎಂದರು.

ಪ್ರಮುಖರಾದ ಪಾಂಡುರಂಗ ಪವಾರ, ನಾನಾ ಖೋತ, ಸಂಜಯ ಖೋತ, ಪಿಂಟು ಕದಮ, ಪ್ರೀತಿ ಶುಭಂ ಖೋತ, ಪ್ರತಿಕ್ಷ ನಾನಾ ಖೋತ, ರಮೇಶ ಭೋಸಲೆ ಸಂಜಯ್ ಶಿಂದೆ, ಜ್ಯೋತಿಬಾ ಪಾಟೀಲ ಸ್ವಾಗತಿಸಿ ವಂದಿಸಿದರು. ಚಿದಾನಂದ ದರೂರು ನಿರುಪಿಸಿದರು.

ದೀಕ್ಷಾಂತದಲ್ಲಿ ಋತುಗೆ ಇನ್ಫೋಸಿಸ್ ಪ್ರಶಸ್ತಿ

◆**ಯರಗಟ್ಟಿ :** ತಾಲೂಕಿನ ಮುಗಳಿಹಾಳ ಗ್ರಾಮದ ಪ್ರತಿಭೆ ಸಂಸ್ಕೃತ ವಿದ್ಯಾಭ್ಯಾಸದಲ್ಲಿ ಅಪೂರ್ವ ಸಾಧನೆಗೈದ ಋತು ಜಿ. ಗಂಗರಡ್ಡಿ ಅವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹನ್ನೆರಡು ಹಾಗೂ ಹದಿಮೂರನೇ ದೀಕ್ಷಾಂತ ಘಟಿಕೋತ್ಸವದಲ್ಲಿ ಪ್ರತಿಷ್ಠಿತ ಇನ್ಫೋಸಿಸ್ ದತ್ತಿನಿಧಿ ನಗದು ಪುರಸ್ಕಾರವನ್ನು ಸ್ವೀಕರಿಸಿ ರಾಜ್ಯ ಮಟ್ಟದಲ್ಲಿ ಗಮನ ಸೆಳೆದಿದ್ದಾರೆ.

ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದ ಈ ಭವ್ಯ ಸಮಾರಂಭವು ವಿದ್ಯಾರ್ಥಿಗಳ ಸಾಧನೆಗೆ ಸಾಕ್ಷಿಯಾದ ಮಹತ್ವದ ವೇದಿಕೆಯಾಗಿತ್ತು. ರಾಜ್ಯಪಾಲರು ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿ ಥಾವರ್ ಚಂದ್ ಗೆಹ್ಲೋಟ್ ವಿದ್ಯಾರ್ಥಿಗಳ ಪರಿಶ್ರಮ ಕೊಂಡಾಡಿದರು. ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಮಾತನಾಡಿ, ಸಾಧನೆಗೈದ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು. ಖ್ಯಾತ ಹೃದ್ರೋಗ ತಜ್ಞ, ಸಂಸದ ಸಿ.ಎನ್. ಮಂಜುನಾಥ್ ಅವರು ದೀಕ್ಷಾಂತ ಭಾಷಣದ ಮೂಲಕ ಯುವಜನತೆಗೆ ಗುರಿ ಸಾಧನೆಗೆ ಪ್ರೇರಣಾದಾಯಕ ಸಂದೇಶ ನೀಡಿದರು.

2023-24ನೇ ಸಾಲಿನ ಆಚಾರ್ಯ (ಎಂ.ಎ.) ಅದ್ವೈತ ವೇದಾಂತ ವಿಭಾಗದಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿದ ಋತು ಗಂಗರಡ್ಡಿ ಅವರು ಈ ಗೌರವಕ್ಕೆ ಪಾತ್ರರಾಗಿದ್ದು, ತಮ್ಮ ನಿರಂತರ ಪರಿಶ್ರಮ, ಶಿಸ್ತಿನ ಅಧ್ಯಯನ ಮತ್ತು ವಿಷಯದ ಮೇಲಿನ ಆಳವಾದ ಆಸಕ್ತಿಯಿಂದ ಈ ಸಾಧನೆಯನ್ನು ಸಾಧಿಸಿದ್ದಾರೆ. ವೇದವಿಜ್ಞಾನ ಶೋಧ ಸಂಸ್ಥಾನ ಸಂಸ್ಕೃತ ಮಹಾಪಾಠಶಾಲೆಯ ವಿದ್ಯಾರ್ಥಿನಿಯಾಗಿರುವ ಇವರ ಸಾಧನೆ ಸಂಸ್ಥೆಯಿಗೂ ಹೆಮ್ಮೆಯ ವಿಷಯವಾಗಿದೆ.

> ಗ್ರಾಮೀಣ ವಿದ್ಯಾರ್ಥಿಗಳೂ ದೊಡ್ಡ ಮಟ್ಟದಲ್ಲಿ ಸಾಧನೆ ಮಾಡಬಹುದು ಎಂಬುದನ್ನು ಋತು ತೋರಿಸಿದ್ದಾರೆ. ಅದ್ವೈತ ವೇದಾಂತದಲ್ಲಿ ಅತ್ಯಧಿಕ ಅಂಕಗಳೊಂದಿಗೆ ಉತ್ತೀರ್ಣರಾದ ಅವರ ಸಾಧನೆ ಶಿಕ್ಷಣ ಕ್ಷೇತ್ರದಲ್ಲಿ ಮಾದರಿಯಾಗಿದೆ.
> ■ ರಾಮನಗೌಡ ಗಂಗರಡ್ಡಿ, ಮಾಜಿ ಗ್ರಾಪಂ ಸದಸ್ಯ, ಮುಗಳಿಹಾಳ

> ಋತು ಗಂಗರಡ್ಡಿ ಅವರ ಈ ಸಾಧನೆ ಮುಗಳಿಹಾಳ ಗ್ರಾಮದ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ. ಶ್ರಮಕ್ಕೆ ಸದಾ ಯಶಸ್ಸು ಸಿಗುತ್ತದೆ ಎಂಬ ಸಂದೇಶವನ್ನು ಅವರು ಸಮಾಜಕ್ಕೆ ತೋರಿಸಿದ್ದಾರೆ.
> ■ ಅಶೋಕ ಪಟ್ಟಣಶೆಟ್ಟಿ, ಮಾಜಿ ಗ್ರಾಪಂ ಉಪಾಧ್ಯಕ್ಷ, ಮುಗಳಿಹಾಳ



ಜಾನಪದ ಸಾಹಿತ್ಯ ಬದುಕಿನ ಅವಿಭಾಜ್ಯ ಅಂಗ

◆**ಸಂಕೇಶ್ವರ:** ಜಾನಪದದ ಹೆಸರಿನಲ್ಲಿ ಅಶ್ಲೀಲತೆಯ ಹಾಡುಗಳನ್ನು ಹಾಗೂ ಸಂಭಾಷಣೆಗಳನ್ನು ಆಡುವುದರಿಂದ ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಗೆ ದೊಡ್ಡ ಪೆಟ್ಟು ಬೀಳುತ್ತಿದೆ ಇದು ನಿಲ್ಲಬೇಕು ಎಂದು ಸಾಹಿತಿ ಡಾ.ಭಾರತಿ ಮಠದ ಆಗ್ರಹಿಸಿದರು.

ಪಟ್ಟಣದ ಶಿವನಂದಾ ಕಲಾ, ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಹಮ್ಮಿಕೊಂಡಿದ್ದ ಚಾಲುಕ್ಯ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತ್ಯ ಕೃತಿಯೊಂದು ಪ್ರಕಟವಾದರೇ ಪ್ರಚಾರಕ್ಕೆ ಹಂಬಲಿಸುವ ಇಂದಿನ ಸಾಹಿತಿಗಳ ನಡುವೆ ಯಾವುದೇ ಹೆಸರಿಲ್ಲದೆ ಬಾಯಿಯಿಂದ ಬಾಯಿಗೆ ಮಾತಿನ ಮೂಲಕವೇ ಹರಿದು ತಂದಿರುವ ಜಾನಪದ ಸಾಹಿತ್ಯವೂ ಮನುಷ್ಯ ಬದುಕಿನ ಅವಿಭಾಜ್ಯ ಅಂಗವಾಗಿದೆ ಎಂದರು.

ಕನ್ನಡ ಪ್ರಾಧ್ಯಾಪಕ ದೇಮಣ್ಣ ಸೊಗಲದ ಮಾತನಾಡಿ, ಕನ್ನಡ ನಾಡಿನ ಕಲೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಂಪರೆಗಳನ್ನು ಇಂದಿನ ಕಾಲದ ವಿದ್ಯಾರ್ಥಿಗಳಿಗೆ ತಿಳಿಸುವ ಕೆಲಸವನ್ನು ಶಿಕ್ಷಕರು ಹಾಗೂ ಪಾಲಕರು ಮಾಡಬೇಕಾಗಿದೆ ಎಂದರು. ಬಸವರಾಜ ಕಟ್ಟಿಮನಿ ಪ್ರತಿಷ್ಠಾನದ ಸದಸ್ಯೆ ಹಮೀದಾ ಬೇಗಂ ದೇಸಾಯಿ ಮಾತನಾಡಿ, ಕಳೆದ 12 ವರ್ಷಗಳಿಂದಲೂ ಗಡಿ ಭಾಗದಲ್ಲಿ ಶಿವನಂದಾ ಕಲಾ, ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘವು ನಿರಂತರವಾಗಿ ಕಲೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಮಾಡುತ್ತಲೇ ಬಂದಿದೆ ಎಂದರು. ನಿವೃತ್ತ ಪ್ರಾಚಾರ್ಯ ಎಲ್.ವಿ.ಪಾಟೀಲ ಮಾತನಾಡಿ, ಗ್ರಾಮೀಣ ಕಲಾವಿದರು ತಮ್ಮ ಬಿಡುವಿಲ್ಲದ ಕೆಲಸದ ಮಧ್ಯೆಯೂ ವಿವಿಧ ಕಲೆಗಳನ್ನು ಪ್ರದರ್ಶಿಸುತ್ತಿರುವುದು ಶ್ಲಾಘನೀಯ ಸಂಗತಿ ಎಂದರು.

ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿವಿಧ ಕಲಾ ತಂಡಗಳು ಜಾನಪದ ಗೀತೆ, ಸೋಬನ ಪದ, ಭಾವ ಗೀತೆ, ವಚನ ಗಾಯನ, ಭರತ ನಾಟ್ಯ, ಸಾಮೂಹಿಕ ನೃತ್ಯ, ಶಿವ ಭಜನೆ, ನಾಡು ನುಡಿ, ಭಕ್ತಿ ಗೀತೆ, ಗೀಗಿ ಪದ, ಜಾನಪದ ನೃತ್ಯಗಳನ್ನು ಪ್ರದರ್ಶಿಸಿದರು.

ಪ್ರಾರಂಭದಲ್ಲಿ ಭಾರತಿ ಭೂಸಗೋಳ ಸ್ವಾಗತಿಸಿದರು. ಕೊನೆಯಲ್ಲಿ ಶಿವನಂದಾ ಕಲಾ, ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಸುರೇಶ ಮಂಜರಗಿ ವಂದಿಸಿದರು. ಸಮಾರಂಭದಲ್ಲಿ ಸಾಹಿತಿಗಳಾದ ಅಕ್ಬರ್ ಸನದಿ, ಹೇಮಾವತಿ ವಾಲಿ, ಕನ್ನಡ ಚಳುವಳಿಗಾರರ ಸಂಘದ ಅಧ್ಯಕ್ಷ ಕಿರಣ ನೇಸರಿ, ಬಾಬುರಾವ ಪಾಟೀಲ ಹಾಜರಿದ್ದರು.



ಅಸತ್ಯದಿಂದ ಸತ್ಯದೆಡೆಗೆ ಸಾಗುವುದೇ ಮನುಜ ಧರ್ಮ

◆**ಸಾವಳಗಿ:** ಅಸತ್ಯದಿಂದ ಸತ್ಯದೆಡೆಗೆ ಸಾಗುವುದೇ ಮನುಜ ಧರ್ಮ. ನಡೆ-ನುಡಿ, ಆಚಾರ-ವಿಚಾರಗಳು ಭಾರತೀಯ ಸಂಸ್ಕೃತಿಯ ಮತ್ತು ಮಾನವೀಯ ಮೌಲ್ಯಗಳ ಮೂಲಾಧಾರಗಳಾಗಿವೆ. ಸಂಸ್ಕಾರವೇ ಭೂಷಣ, ಸಂಸ್ಕಾರವೇ ನಮ್ಮ ಆಸ್ತಿ, ಹೀಗಾಗಿ ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಧನೆಯತ್ತ ಹೆಜ್ಜೆ ಹಾಕಬೇಕು ಎಂದು ಸಾವಳಗಿ ಸಿದ್ದ ಸಂಸ್ಥಾನ ಮಠದ ಶಿವಲಿಂಗೇಶ್ವರ ಕುಮಾರೇಂದ್ರ ಶ್ರೀಗಳು ಆಶೀರ್ವಚನ ನೀಡಿದರು.

ಜಿಲ್ಲೆಯ ಗೋಕಾಕ ತಾಲೂಕಿನ ಸಾವಳಗಿ ಸಿದ್ದ ಸಂಸ್ಥಾನ ಮಠದಲ್ಲಿ ಜರುಗುತ್ತಿರುವ 2026ನೇ ಸಾಲಿನ ಜಗದ್ಗುರು ಶ್ರೀ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನುಡಿದರು.



ಸಮಾಜದಲ್ಲಿ ಮೇಲು-ಕೀಳು ಎಂಬ ಬೇದಭಾವ ಮರೆತು ಎಲ್ಲರೂ ಒಂದಾಗಿ ಬಾಳಬೇಕು. ಶರಣರ ತತ್ವಗಳು ಕೇವಲ ಓದಿಗೆ ಸೀಮಿತವಾಗದೆ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಅಶಕ್ತರಿಗೆ ನೆರವಾಗುವುದು ಮತ್ತು ಸಮಾಜದ ಏಳಿಗೆಗಾಗಿ ಶ್ರಮಿಸುವುದು ನಿಜವಾದ ಧರ್ಮ. ಸಾವಳಗಿ ಸಿದ್ದ ಸಂಸ್ಥಾನವು ಶತಮಾನಗಳಿಂದಲೂ ಅನ್ನದಾಸೋಹ ಮತ್ತು ಜ್ಞಾನದಾಸೋಹದ ಮೂಲಕ ಜನಸೇವೆಯಲ್ಲಿ ತೊಡಗಿದೆ. ಯುವಪೀಳಿಗೆಯುಆಧುನಿಕತೆಯಜೊತೆಗೆ ನಮ್ಮ ಸಾಂಸ್ಕೃತಿಕ ಬೇರುಗಳನ್ನು ಮರೆಯಬಾರದು. ಸತ್ಸಂಗ ಮತ್ತು ಹಿರಿಯರ ಮಾರ್ಗದರ್ಶನದಿಂದ ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸತ್ಯದೆಡೆಗೆ ಸಾಗುವುದು ಎಂಬುದು ಕೇವಲ ಮಾತಲ್ಲ, ಅದು ಜೀವನದ ಸಕಲ ವ್ಯವಹಾರಗಳಲ್ಲಿ ಪ್ರಾಮಾಣಿಕತೆ ಮತ್ತು ದೈವಿಕತೆಯನ್ನು ಕಾಣುವ ಅರಿವಿನ ಮಾರ್ಗವಾಗಿದೆ. ನಮ್ಮ ಅಜ್ಞಾನ, ಅಹಂಕಾರ ಮತ್ತು ಮನಸ್ಸು ಸೃಷ್ಟಿಸುವ ಸುಳ್ಳುಗಳನ್ನು ಅರ್ಥಮಾಡಿಕೊಂಡು ಸತ್ಯವನ್ನು ಹುಡುಕಬೇಕು ಎಂದು ಭಕ್ತರಿಗೆ ಸಲಹೆ ನೀಡಿದರು.

ರಸ್ತೆ ಕಾಮಗಾರಿ ಸ್ಥಗಿತಗೊಳಿಸಲು ಗ್ರಾಮಸ್ಥರ ಒತ್ತಾಯ

◆**ಯಮಕನಮರಡಿ :** ಸಮೀಪದ ಹತ್ತರಗಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಇಂದಿರಾ ನಗರದಲ್ಲಿ ನಾಲ್ಕೂವರೆ ಕೋಟಿ ರೂ.ಗಳ ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಸಚಿವಸತೀಶ ಜಾರಕಿಹೊಳಿ ಮಂಜೂರುಮಾಡಿದ್ದು ಸದರಿ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಿ ಕೊಟ್ಟಿದ್ದು, ಆದರೆ ಸದರಿ ರಸ್ತೆ ಕಾಮಗಾರಿಯು ಗ್ರಾಮಸ್ಥರಿಗೆ ಉಪಯುಕ್ತವಾಗದಂತೆ ಮಾಡಿರುವುದನ್ನು ಫೋಟೋ ಸಹಿತ ಸಚಿವರಿಗೆ ಗಮನಕ್ಕೆ ತಂದು ಸದರಿ ರಸ್ತೆ ಕಾಮಗಾರಿ ಸ್ಥಗಿತಗೊಳಿಸಬೇಕೆಂದು ವಿನಂತಿಸಿಕೊಂಡರು.

ಚರಂಡಿಯನ್ನು ತೆಗೆದುಹಾಕುವಂತೆ ಗ್ರಾಮಸ್ಥರು ಹಾಗೂ ಸಮಾಜ ಕಾರ್ಯಕರ್ತ ಮಂಜುನಾಥ್ ಪಾತ್ರೂಟ್ ಹಾಗೂ ಅವರ ಮಂಡಳಿಯ ಸರ್ವ ಸದಸ್ಯರು ಹಿರಿಯ ಪತ್ರಕರ್ತ ಗೋಪಾಲ್ ಚಪ್ಪನಿಯವರು ಉಪಸ್ಥಿತರಿದ್ದು ಶನಿವಾರ ಸಚಿವರಿಗೆ ಮನವಿ ಪತ್ರ ಸಲ್ಲಿಸಲಾಗಿದೆ.

ಸಚಿವರು ಸದರಿ ಕಾಮಗಾರಿಯನ್ನು ಭಾವಚಿತ್ರದಲ್ಲಿ ಗಮನಿಸಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು ಕೂಡಲೇ ಗುತ್ತಿಗೆಯನ್ನು ರದ್ದುಪಡಿಸಿ ಬೇರೆ ಗುತ್ತಿಗೆದಾರರಿಗೆ ಒಪ್ಪಿಸುವಂತೆ ಗ್ರಾಮಸ್ಥರು ಮನವಿ ಮಾಡಿಕೊಂಡರು ಮುಂಗಾರು ಮಳೆ ಮುಂಚಿತವಾಗಿ ಚರಂಡಿ ಕಾಮಗಾರಿಯು ಸಮರ್ಪಕವಾಗಿ ರಿಪೇರಿ ಆಗಬೇಕು. ಇಲ್ಲದಿದ್ದಲ್ಲಿ ಮಳೆ ನೀರು ಬಡ ಕುಟುಂಬಗಳ ಮನೆಗಳಲ್ಲಿ ನುಗ್ಗುತ್ತದೆ.ಆದ ಕಾರಣ ಈಗಾಗಲೇ ಮಾಡಿರುವ ಚರಂಡಿಗಳನ್ನು ರದ್ದುಪಡಿಸಿ ಸದರಿ ರಸ್ತೆಯನ್ನು ಕೆಳಮಟ್ಟದಲ್ಲಿ ಮಾಡುವಂತೆ ಗ್ರಾಮಸ್ಥರು ಕೇಳಿಕೊಂಡಿದ್ದಾರೆ. ಈ ಕುರಿತು ಸಚಿವರು ಇದರ ಬಗ್ಗೆ ಕ್ರಮ ಕಳೆದುಕೊಳ್ಳುವುದಾಗಿ ಪತ್ರಕರ್ತರೊಂದಿಗೆ ಮಾತನಾಡಿ ತಿಳಿಸಿದ್ದಾರೆ. ಈ ಕುರಿತು ಮತ್ತೊಮ್ಮೆ ಸಚಿವರಿಗೆ ಭೇಟಿಯಾಗಿ ಸದರಿ ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ಸಚಿವರ ಗಮನಕ್ಕೆ ತರಲಾಗಿದೆ ತಂದು ಸಚಿವರು ಖುದ್ದಾಗಿ ಬಂದು ಕಾಮಗಾರಿ ಪರಿಶೀಲಿಸಬೇಕೆಂದು ವಿನಂತಿ ಮಾಡಿಕೊಂಡರು.



ಶಿಕ್ಷಕರ ಸಂಘದ ಚುನಾವಣೆ ನಡೆಸದ ನಾಲ್ವರ ವಿರುದ್ಧ ದೂರು ದಾಖಲು

◆**ಖಾನಾಪುರ:** ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳ ಚುನಾವಣೆಯನ್ನು ಒಂದು ತಿಂಗಳ ಒಳಗೆ ನಡೆಸುವಂತೆ ನ್ಯಾಯಾಲಯದ ಆದೇಶವಿದ್ದರೂ ಚುನಾವಣೆ ನಡೆಸದ ಸಂಘದ ಹಾಲಿ ಅಧ್ಯಕ್ಷ ಎಂ.ಬಿ ಚವಲಗಿ, ಕಾರ್ಯದರ್ಶಿ ಪಿರಾಜಿ ಪಾಖರೆ, ಜಿಲ್ಲಾಧ್ಯಕ್ಷ ಜಯಕುಮಾರ ಹೆಬಳಿ ಮತ್ತು ಜಿಲ್ಲಾ ಕಾರ್ಯದರ್ಶಿ ರಮೇಶ ಗೋಣಿ ಅವರ ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಸವರಾಜ ಯಳ್ಳೂರ ಖಾನಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಸ್ಥಳೀಯ ಠಾಣೆಯ ಇನ್ಸಪೆಕ್ಟರ್ ಲಾಲ್‌ಸಾಬ್ ಗೌಂಡಿ ಅವರ ಬಳಿ ದೂರು ಸಲ್ಲಿಸಿ ಮಾತನಾಡಿದ ಬಸವರಾಜ ಯಳ್ಳೂರ, ಚುನಾವಣೆಯ ಅಧಿಸೂಚನೆಯ ಪ್ರಕಾರ ಏ.11 ರಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭಗೊಂಡು ಏ.12 ನಾಮಪತ್ರ ಸಲ್ಲಿಸಲುಕೊನೆಯದಿನವಾಗಿತ್ತು. ಆದರೆ ಏ.11 ಮತ್ತು 12ರಂದು ಖಾನಾಪುರದ ಬಿಇಒ ಮತ್ತು ಬಿಆರ್‌ಸಿ ಕಚೇರಿ ಹಾಗೂ ತಹಶೀಲ್ದಾರ್ ಕಾರ್ಯಾಲಯದಲ್ಲಿ ಚುನಾವಣೆಗೆ ಸಂಬಂಧಿಸಿದ ಲಕ್ಷಣಗಳು ಕಂಡುಬರಲಿಲ್ಲ. ತಾಲೂಕಾ ಚುನಾವಣಾಧಿಕಾರಿಗಳು ಈ ಸ್ಥಳಗಳಲ್ಲಿ ಹಾಜರ್ ಇರಲಿಲ್ಲ. ಆದಕಾರಣ ಚುನಾವಣೆಗೆ ನಾಮಪತ್ರ ಸಲ್ಲಿಸಲು ಬಂದಿದ್ದ ಬಹಳಷ್ಟು ಶಿಕ್ಷಕರು ತುಂಬಾ ಗೊಂದಲಕ್ಕೆ ಒಳಗಾಗಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ನಡೆಸದೇ ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಚುನಾವಣೆಯನ್ನು ಮಾಡಲು ಕುತಂತ್ರ ನಡೆದಿರುವ ಬಗ್ಗೆ ಸಂಶಯ ಬಂದಿದ್ದರಿಂದ ನಾಲ್ವರ ವಿರುದ್ಧ ದೂರು ದಾಖಲಿಸಲಾಗಿದೆ ಎಂದು ವಿವರಿಸಿದರು.

ಬಳಿಕ ಅವರು ತಹಶೀಲ್ದಾರ್, ಬಿಇಒ ಮತ್ತು ಬಿರ್‌ಸಿ ಸಮನ್ವಯಾಧಿಕಾರಿ ಕಚೇರಿ ಬಳಿ ಶಿಕ್ಷಕ ಮತದಾರರೊಂದಿಗೆ ಪ್ರತಿಭಟನೆ ನಡೆಸಿದರು. ನಿಯಮ ಉಲ್ಲಂಘಿಸಿರುವ ನಾಲ್ವರನ್ನು ಬಂಧಿಸಬೇಕು. ತಕ್ಷಣದಿಂದಲೇ ಜಾರಿ ಬರುವಂತೆ ಈ ಚುನಾವಣಾ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು. ನ್ಯಾಯಸಮ್ಮತ ಚುನಾವಣೆ ನಡೆಸಬೇಕು ಎಂದು ಅಧಿಕಾರಿಗಳನ್ನು ಆಗ್ರಹಿಸಿದರು. ಈ ಸಂದರ್ಭದಲ್ಲಿ ನೌಕರರ ಸಂಘದ ಜಿಲ್ಲಾಧ್ಯಕ್ಷರು, ಪದಾಧಿಕಾರಿಗಳು, ವಿವಿಧ ವೃಂದ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು, ಶಿಕ್ಷಕರು ಇದ್ದರು.



ಅಕ್ಕ ಮಹಾದೇವಿ ಜೀವನವೇ ಶುದ್ಧ ಭಕ್ತಿಗೆ ಉದಾಹರಣೆ

◆**ಬೆಳಗಾವಿ :** 12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಹುಟ್ಟಿದ ಮಹಾನ್ ಸ್ತ್ರೀ ಸಂತೆಯಾದ ಅಕ್ಕ ಮಹಾದೇವಿ ಅವರು ಭಕ್ತಿ, ವೈರಾಗ್ಯಮತ್ತುಆತ್ಮಜ್ಞಾನಕ್ಕೆ ಪ್ರತೀಕವಾಗಿದ್ದಾರೆ ಎಂದು ಮಹಾಂತೇಶ ನಗರ ರಹವಾಸಿಗಳ ಸಂಘದ ಶಿಕ್ಷಣ ಮಹಾವಿದ್ಯಾಲಯ ಸಹಾಯಕ ಪ್ರಾಧ್ಯಾಪಕ ಡಾ. ಸಿದ್ಧಣ್ಣ ವಾಲಿಶೆಟ್ಟಿ ಹೇಳಿದರು.



ಭಾನುವಾರ ಲಿಂಗಾಯತ ಸಂಘಟನೆ ವತಿಯಿಂದ ಬೆಳಗಾವಿಯ ಮಹಾಂತೇಶ ನಗರದಲ್ಲಿರುವ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಭವನದಲ್ಲಿ ''ವೈರಾಗ್ಯ ನಿಧಿ ಅಕ್ಕ ಮಹಾದೇವಿ ಜಯಂತಿ'' ಆಚರಣೆ ಅಂಗವಾಗಿ ನಡೆದ ಅನುಭಾವ ಕಾರ್ಯಕ್ರಮದಲ್ಲಿ ಮಾತನಾಡಿ, ಭೌತಿಕ ಸಂಪತ್ತು ಹಾಗೂ ಆಸೆ-ಆಕಾಂಕ್ಷೆಗಳಿಂದ ದೂರವಿದ್ದು ಆತ್ಮಶಾಂತಿಯನ್ನು ಸಾಧಿಸುವುದೇ ಅಕ್ಕನ ಸಂದೇಶವಾಗಿದ್ದು, ಅವರ ಜೀವನವೇ ಶುದ್ಧ ಭಕ್ತಿಗೆ ಉತ್ತಮ ಉದಾಹರಣೆಯಾಗಿದೆ ಎಂದರು. ಲಿಂಗಾಯತ ಸಂಘಟನೆಯ ಅಧ್ಯಕ್ಷ ಶರಣ ಈರಣ್ಣ ದೇಯನ್ನವರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗುರುಸಿದ್ಧಪ್ಪ ರೇವಣ್ಣವರ, ಸದಾಶಿವ ದೇವರಮನಿ, ಶಶಿಭೂಷಣ ಪಾಟೀಲ, ಬಸವರಾಜ ಕರಡಿಮಠ, ಶಂಕರ ಗುಡಸ, ಬಸವರಾಜ ಬಿಜ್ಜರಗಿ, ಜಯಶ್ರೀ ಚವಲಗಿ, ನಂದಾ ಬಗಲಿ, ರುದ್ರಮ್ಮ ಅಕ್ಕನವರ, ಶಿವಲೀಲಾ ಗೌಡರ, ಪ್ರಸಾದ ಹಿರೇಮಠ ಸೇರಿದಂತೆ ಅನೇಕ ಭಕ್ತರು ಮತ್ತು ಸಂಘಟನೆಯ ಸದಸ್ಯರು ಇದ್ದರು.

ಮಕ್ಕಳಿಗೆ ಉಚಿತ ಅಭ್ಯಾಸ ಪುಸ್ತಕ ವಿತರಣೆ

◆**ಯರಗಟ್ಟಿ :** ತಾಲೂಕಿನ ದಾಸನಾಳ ಗ್ರಾಮದ ಕೆ.ಎಚ್.ಪಿ.ಎಸ್ ಶಾಲೆಯಲ್ಲಿ ಮಕ್ಕಳ ಶಿಕ್ಷಣಾಭಿವೃದ್ಧಿಗೆ ಮಾದರಿಯಾದ ಕಾರ್ಯ ನಡೆದಿದೆ. 1ರಿಂದ 5ನೇ ತರಗತಿ ಮಕ್ಕಳಿಗೆ ಬೇಸಿಗೆ ರಜೆಯ ಅವಧಿಯಲ್ಲಿ ಅಭ್ಯಾಸ ನಿರಂತರವಾಗಿರಲೆಂದು ಶಾಲೆಯ ಎಲ್ಲಾ ಶಿಕ್ಷಕರು ಒಗ್ಗೂಡಿ ತಮ್ಮ ಸ್ವಂತ ಖರ್ಚಿನಲ್ಲಿ 45 ಪುಟಗಳ ಮನೆಗೆಲಸದ ಅಭ್ಯಾಸ ಪುಸ್ತಕಗಳನ್ನು ಸಿದ್ಧಪಡಿಸಿ ಎಲ್ಲ ವಿದ್ಯಾರ್ಥಿಗಳಿಗೆ ವಿತರಿಸಿದರು.

ಇದೇ ವೇಳೆ ಸವದತ್ತಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಿಂದ ಒದಗಿಸಲಾದ 6 ಮತ್ತು 7ನೇ ತರಗತಿ ವಿದ್ಯಾರ್ಥಿಗಳಿಗೂ ಬೇಸಿಗೆ ರಜೆಯ ಅಭ್ಯಾಸ ಪುಸ್ತಕಗಳನ್ನು ವಿತರಿಸಲಾಯಿತು.

ಈ ಕಾರ್ಯದಿಂದ ವಿದ್ಯಾರ್ಥಿಗಳಲ್ಲಿ ಅಧ್ಯಯನದ ಮೇಲಿನ ಆಸಕ್ತಿ ಹೆಚ್ಚಿಸಲು ಹಾಗೂ ರಜೆ ಸಮಯವನ್ನು ಸದ್ಬಳಕೆ ಮಾಡಿಕೊಳ್ಳಲು ಸಹಕಾರಿಯಾಗಲಿದೆ.

ಈ ಸಂದರ್ಭದಲ್ಲಿ ಶಾಲೆಯ ಎಸ್.ಡಿ.ಎಮ್.ಸಿ. ಅಧ್ಯಕ್ಷರಾದ ಮಹದೇವ ಶಿಂತ್ರಿ, ಸದಸ್ಯರಾದ ಪತ್ರೆಪ್ಪ ಬಳಿಗಾರ, ಪ್ರಧಾನ ಗುರುಗಳಾದ ಜಿ. ಎಸ್. ನೆಲಗುಡ್ಡ, ಶಿಕ್ಷಕರಾದ ಎಸ್. ಬಿ. ಬಾಳೋಜಿ, ವಿದ್ಯಾ ಅಂಗಡಿ, ಲಕ್ಷ್ಮೀ ಕುರುಬೇಟ, ಲಕ್ಷ್ಮಣ ತಳವಾರ ಹಾಗೂ ಶಾಲೆಯ ಮುದ್ದು ಮಕ್ಕಳು ಉಪಸ್ಥಿತರಿದ್ದರು.



> ದಾಸನಾಳ ಕೆ.ಎಚ್.ಪಿ.ಎಸ್ ಶಾಲೆಯ ಶಿಕ್ಷಕರು ತಮ್ಮ ಸ್ವಂತ ಖರ್ಚಿನಲ್ಲಿ ವಿದ್ಯಾರ್ಥಿಗಳಿಗಾಗಿ ಅಭ್ಯಾಸ ಪುಸ್ತಕಗಳನ್ನು ಸಿದ್ಧಪಡಿಸಿ ವಿತರಿಸಿರುವುದು ಅತ್ಯಂತ ಶ್ಲಾಘನೀಯ. ಇಂತಹ ಕಾರ್ಯಗಳು ವಿದ್ಯಾರ್ಥಿಗಳ ಭವಿಷ್ಯವನ್ನು ಉಜ್ವಲಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಬೇಸಿಗೆ ರಜೆಯಲ್ಲೂ ಮಕ್ಕಳಿಗೆ ಶಿಕ್ಷಣದಿಂದ ದೂರವಾಗದಂತೆ ನೋಡಿಕೊಳ್ಳುತ್ತಿರುವುದು ಇತರ ಶಾಲೆಗಳಿಗೆ ಮಾದರಿಯಾಗಿದೆ. ಎಲ್ಲಾ ಶಿಕ್ಷಕರಿಗೂ ನನ್ನ ಅಭಿನಂದನೆಗಳು.
> ■ ಎ.ಎ. ಖಾಜಿ, ಕ್ಷೇತ್ರ ಶಿಕ್ಷಣಾಧಿಕಾರಿ ಸವದತ್ತಿ

ಕಿರುಸುದ್ದಿ

ಸಾಮೂಹಿಕ ವಿವಾಹದಿಂದ ಸೌಹಾರ್ದತೆ: ಅಸೂಟಿ



◆**ನವಲಗುಂದ:** ಸತೀಶ ಜಾರಕಿಹೊಳಿ ಅವರ ಅಭಿಮಾನಿ ಬಳಗ ಹಾಗೂ ವಿನೋದ ಅಸೂಟಿ ಅವರ ಅಭಿಮಾನಿ ಬಳಗದ ವತಿಯಿಂದ ನವಲಗುಂದ ತಾಲೂಕಿನ ಶಾನವಾಡ ಗ್ರಾಮದಲ್ಲಿ 2ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಿತು. ಕೆಪಿಸಿಸಿ ಸದಸ್ಯ ವಿನೋದ ಅಸೂಟಿ ಮಾತನಾಡಿ, ಈ ಮಹತ್ವದ ಕಾರ್ಯಕ್ರಮವು ಸಮಾಜದಲ್ಲಿ ಸಮಾನತೆ, ಸಹಕಾರ ಮತ್ತು ಸೌಹಾರ್ದತೆಯ ಸಂದೇಶವನ್ನು ಸಾರುತ್ತದೆ. ಸಾಮೂಹಿಕ ವಿವಾಹದಲ್ಲಿ ಸಂಸಾರ ಜೀವನಕ್ಕೆ ಪಾದಾರ್ಪಣೆ ಆದರ್ಶ. ಇದು ಕುಟುಂಬಕ್ಕೆ ಮಾತ್ರವಲ್ಲದೇ ದೇಶದ ಅಭಿವೃದ್ಧಿಗೂ ಸಹಕಾರಿಯಾಗುತ್ತದೆ ಎಂದರು.

ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಡಾ. ಪ್ರಸನ್ನಾನಂದ ಶ್ರೀಗಳು, ಶಾಸಕ ಎನ್.ಎಚ್.ಕೋನರಡ್ಡಿ ಮಾತನಾಡಿದರು.

ನವಲಗುಂದ ಗವಿಮಠದ ಬಸವಲಿಂಗ ಶ್ರೀಗಳು, ಸಂಸ್ಥಾನ ಪಂಚಗೃಹ ಹಿರೇಮಠ ನವಲಗುಂದ ಉತ್ತರಾಧಿಕಾರಿ ವೀರಬಸವದೇವರು, ಧಾರವಾಡ ಜಿಲ್ಲಾ ವಾಲ್ಮೀಕಿ ಮಹಾಸಭಾ ಅಧ್ಯಕ್ಷರಾದ ಮೋಹನ ಗುಡಿಸಲಮನಿ, ವರ್ಧಮಾನಗೌಡ ಹಿರೇಗೌಡ್ರ, ಸದುಗೌಡ ಪಾಟೀಲ, ಮಂಜುನಾಥ ವೀರಪ್ಪನವರ ಸೇರಿದಂತೆ ವಾಲ್ಮೀಕಿ ಸಮಾಜದ ಮುಖಂಡರು, ಶಾನವಾಡ ಗ್ರಾಮಸ್ಥರು ಉಪಸ್ಥಿತರಿದ್ದರು.

ಪಿಂಚಣಿ: ದಾಖಲೆ ಒದಗಿಸಿ

◆**ಬೆಳಗಾವಿ:**ಹು.ವಿ.ಸ.ಕಂ.ನಿ, ಬೆಳಗಾವಿಯ ನೆಹರೂ ನಗರ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿಯಿಂದ ಪಿಂಚಣಿ, ಕುಟುಂಬ ಪಿಂಚಣಿಯನ್ನು ಪಡೆಯುತ್ತಿರುವ ನಿವೃತ್ತ ಅಧಿಕಾರಿ, ನೌಕರರು ಮತ್ತು ಕುಟುಂಬ ಪಿಂಚಣಿದಾರರು ಏಪ್ರಿಲ್ 15 ರ ಒಳಗಾಗಿ ಜೀವಂತ, ಮರು ಮದುವೆ ಆಗದೇ ಇರುವ ಪ್ರಮಾಣ ಪತ್ರವನ್ನು ತಪ್ಪದೇ ಸಲ್ಲಿಸಲು ತಿಳಿಸಲಾಗಿದ್ದು, ತಪ್ಪಿದ್ದಲ್ಲಿ ಪಿಂಚಣಿ, ಕುಟುಂಬ ಪಿಂಚಣಿದಾರರ ಪಿಂಚಣಿಯನ್ನು ತಡೆಹಿಡಿಯಲಾಗುವುದು ಎಂದು ಹುವಿಸಕಂನಿ, ಬೆಳಗಾವಿ ನೆಹರೂ ನಗರ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಾರ್ಯನಿರ್ವಾಹಕ ಇಂಜಿನೀಯರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಹನ ಕಳ್ಳತನ: ಇಬ್ಬರ ಬಂಧನ

◆**ಬೆಳಗಾವಿ :** ಜಿಲ್ಲೆಯ ಗೋಕಾಕ ತಾಲೂಕಿನ ಅಂಕಲಗಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಾಲ್ಕು ಚಕ್ರ ಹಾಗೂ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಅಂಕಲಗಿ ಪೊಲೀಸರು ಬಂಧಿಸಿದ್ದಾರೆ. ಏ. 6 ರಂದು ಬೈಕ್ ಕಳ್ಳತನಯಾಗಿದೆ ಎಂದು ವ್ಯಕ್ತಿಯೊಬ್ಬರು ಅಂಕಲಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪ್ರಕರಣವನ್ನು ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡು ಕಳ್ಳರ ಬೆನ್ನತ್ತಿದ ಬಳಿಕ ಇಬ್ಬರು ಖತರ್ನಾಕ್ ಕಳ್ಳರಿಂದ ಟ್ರ್ಯಾಕ್ಟರ್ ಬೈಕ್ ಸೇರಿದಂತೆ ಹಲವು ವಾಹನಗಳನ್ನು ಕಳ್ಳತನ ಮಾಡಿದ್ದರು ಎಂದು ಒಪ್ಪಿಕೊಂಡಿದ್ದಾರೆ. ಆರೋಪಿಗಳಾದ ಗೋಕಾಕ್ ಮೂಲದ ಬಸಪ್ಪ ಚಿಕ್ಕರಾಯ (22) ದುರ್ಗಪ್ಪ ಖಾನಾಪುರ್ (23) ಬಂಧಿಸಲಾಗಿದೆ. ಬಂಧಿತ ಆರೋಪಿಗಳಿಂದ 4.5 ಲಕ್ಷ ಮೌಲ್ಯದ ಒಂದು ಟ್ರ್ಯಾಕ್ಟರ್ ಎರಡು ಟ್ರೈಲರ್ ಗಳು ಒಂದು ಬೈಕ್ ಅಂಕಲಗಿ ಪೊಲೀಸರು ವಶ ವಶಪಡಿಸಿಕೊಂಡಿದ್ದಾರೆ.

ಗೋಕಾಕ್‌ನ ಸಿಪಿಐ ಸುರೇಶ್ ಬಾಬು ಆರ್.ಬಿ ಅವರ ನೇತೃತ್ವದಲ್ಲಿ ಅಂಕಲಗಿ ಠಾಣೆ ಪಿಎಸ್ಐ ಯಮನಪ್ಪ ಮಾಂಗ್ ಹಾಗೂ ಸಿಬ್ಬಂದಿಗಳು ಈ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನಿಧನ ಸುದ್ದಿ

ದಾಕ್ಷಾಯಣಿ ಕ್ಯಾಮನಗೌಡರ

◆**ಧಾರವಾಡ:** ಸ್ಥಳೀಯ ಕುಸುಮ ನಗರದ ನಿವಾಸಿ ದಾಕ್ಷಾಯಣಿ ಹನುಮಂತಗೌಡ ಕ್ಯಾಮನಗೌಡರ(72) ಶುಕ್ರವಾರ ನಿಧನ ಹೊಂದಿದರು. ಇವರಿಗೆ ಪುತ್ರ ಪಕ್ಷಿತಜ್ಞ ಪ್ರಕಾಶ ಗೌಡರ ಹಾಗೂ ಓರ್ವ ಪುತ್ರಿ, ಅಪಾರ ಬಳಗವಿದೆ.





ನೇಸರಗಿ: ಸಮೀಪದ ಹೊಸಕೋಟಿ ಗ್ರಾಮದಲ್ಲಿ ಶ್ರೀ ದುರ್ಗಾದೇವಿ ಜಾತ್ರೆ ಪ್ರಯುಕ್ತ ನಡೆದ ಸಾಮಾಜಿಕ ನಾಟಕ ಉದ್ಘಾಟನೆ ನಡೆಯಿತು. ಯುವ ಮುಖಂಡ ಸಚಿನ ಪಾಟೀಲ, ಅಡಿವಪ್ಪ ಮಾಳಣ್ಣವರ, ಮಲ್ಲಿಕಾರ್ಜುನ ಕಲ್ಲೋಳಿ, ಸಿದ್ಧಾರ್ಥ ಸುನಕುಂಪಿ, ಅಶೋಕ ಹತ್ತರಗಿ, ಶ್ರೀಧರ ಅಂಗಡಿ, ದ್ಯಾಮಣ್ಣ ಬಶೆಟ್ಟಿ ಸೇರಿದಂತೆ ಗ್ರಾಮದ ಮುಖಂಡರು, ಗ್ರಾಮಸ್ಥರು ಭಾಗವಹಿಸಿದ್ದರು.

ಭಗವದ್ಗೀತೆ ಓದಿನಿಂದ ಸುಂದರ ಬದುಕು ಸಾಧ್ಯ

◆**ಅಳ್ನಾವರ:** ಹಿಂದು ಧರ್ಮದ ಜಾಗೃತಿ ಎಲ್ಲರಲ್ಲಿ ಮೂಡಬೇಕು. ಪವಿತ್ರ ಭಗವದ್ಗೀತೆ ಪ್ರತಿ ಮನೆಯಲ್ಲಿ ಇಟ್ಟುಕೊಂಡು ಓದುವ ಸಂಪ್ರದಾಯ ಬೆಳೆಸಬೇಕು ಎಂದು ಹಿಂದೂ ಏಕತಾ ಸಂಘಟನೆಯ ಮುಖ್ಯಸ್ಥ ಮಹಾದೇವ ಸಾಗರೇಕರ ಹೇಳಿದರು. ಇಲ್ಲಿನ ಹಿಂದೂ ಜಾಗರಣಾ ವೇದಿಕೆ ಸಂಘಟನೆಯವರು ಕಲ್ಮೇಶ್ವರ ದೇವಸ್ಥಾನದಲ್ಲಿ 11 ದಿನಗಳಿಂದ ಹಮ್ಮಿಕೊಂಡಭಗವದ್ಗೀತೆಪಾರಾಯಣಕಾರ್ಯಕ್ರಮದಸಮಾರೋಪಕಾರ್ಯಕ್ರಮದಲ್ಲಿ ಮಾತನಾಡಿ, ಆಧ್ಯಾತ್ಮಿಕ ಚಿಂತನೆಗಳಲ್ಲಿ ದಿವ್ಯ ಶಕ್ತಿ ಅಡಗಿದೆ. ಸನಾತನ ಧರ್ಮಾಚರಣೆ ಪದ್ಧತಿ ರೂಢಿಸಿಕೊಳ್ಳಬೇಕು ಎಂದರು. ಇಸ್ಕಾನ್ ದೇವಾಲಯದ ಬಹುಳಾಶ್ವದಾಸ ಪ್ರಭು ಆಶೀರ್ವಚನ ನೀಡಿ, ದಾಸ್ ಸಾಹಿತ್ಯ. ಭಗವದ್ಗೀತೆ ಓದಿನಿಂದ ಬೌದ್ಧಿಕ , ಆಧ್ಯಾತ್ಮಿಕ ಕ್ರಿಯೆ ಚುರುಕುಗೊಳ್ಳುತ್ತದೆ. ಭಕ್ತಿಯಲ್ಲಿ ನಂಬಿಕೆ ಇಡಬೇಕು. ವಚನಗಳ ಅರ್ಥ ಅರಿತುಕೊಳ್ಳಬೇಕು ಎಂದರು. ಪೂರ್ಣಿಮಾ ಮುತ್ನಾಳ ಭಗವದ್ಗೀತೆ ಪಾರಾಯಣ ನಡೆಸಿಕೊಟ್ಟರು. ಮಕ್ಕಳು, ಹಿರಿಯರು, ಮಾತಾ-ಭಗಿನಿಯರು ಇದ್ದರು. ಆರಂಭದಲ್ಲಿ ಮುಖ್ಯ ಬೀದಿಯಲ್ಲಿ ಶೋಭಾ ಯಾತ್ರೆ ಸಂಚರಿಸಿ ಹರೇ ರಾಮ ನಾಮ ಜಪಿಸಲಾಯಿತು. ಗೀತಾ ಆರತಿ ಹಾಡಲಾಯಿತು. ಮಕ್ಕಳಿಗೆ ಉಚಿತವಾಗಿ ಭಗವದ್ಗೀತೆ ಪುಸ್ತಕ ಹಂಚಲಾಯಿತು. ಭಜನೆ, ಕೀರ್ತನೆ, ಪ್ರಸಾದ ವಿತರಣೆ ಜರುಗಿತು. ಭಕ್ತ ಸೇವಕದಾಸ್ ಉಪನ್ಯಾಸ ನೀಡಿದರು. ಹಿರಿಯರಾದ ಪಾಂಡುರಂಗ ರೇವಣಕರ, ಉದಯ ಶಿಬ್ರೀಕೆರಿ, ಮಂಡಲಿಕ ಪಾರ್ದಿ, ರಾಜು ಕರ್ಲೇಕರ, ಜಯಶ್ರೀ ಉಡುಪಿ, ಸಚಿನ ಲಿಂಗನಮಠ, ಅರ್ಜುನ ಬೆನ್ನಳಕರ, ನಾರಾಯಣ ಪಟೇಲ, ಪರಶುರಾಮ ಕಾಕತ್ಕರ್, ಸುನಿಲ ಸಾಗರೇಕರ, ಅರ್ಚಕ ಪಾಳೇಕರ ಇದ್ದರು.



ರಾಯಬಾಗ: ಪಟ್ಟಣದ ಝೇಂಡಾಕಟ್ಟಿ ಹತ್ತಿರ ಮಹಾತ್ಮ ಜ್ಯೋತಿಬಾ ಫುಲೆ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರ ಜಯಂತಿ ಆಚರಿಸಲಾಯಿತು. ವಕೀಲರ ಸಂಘದ ಅಧ್ಯಕ್ಷ ಕೆ.ಆರ್. ಕೋಟಿವಾಲೆ, ವಿದ್ಯಾಧರ ಕುಲಗುಡೆ, ನಾರಾಯಣ ಮೇತ್ರಿ, ಹರೀಶ ಕುಲಗುಡೆ, ಗೋವಿಂದ ಕುಲಗುಡೆ, ಮಹೇಶ ಹೊಸಮನಿ, ಅಜ್ಜಪ್ಪ ಕುಲಗುಡೆ, ಅಶೋಕ ಮೇತ್ರಿ, ಮಹಾಂತಪ್ಪ ಹಳ್ಳದಮನಿ, ಆನಂದ ಹೊಸಮನಿ, ಬಾಳು ಕಳಸೆ ಸೇರಿ ಅನೇಕರು ಇದ್ದರು.

ಸಾರ್ವಜನಿಕರ ಸಮಸ್ಯೆ ಆಲಿಸಿದ ಸಚಿವ ಸತೀಶ ಜಾರಕಿಹೊಳಿ

◆**ಬೆಳಗಾವಿ:** ಸಮೀಪದ ಅಲದಾಳ್ ಗೆಸ್ಟ್ ಹೌಸ್‌ನಲ್ಲಿ ನಡೆದ ಸಾರ್ವಜನಿಕ ಕುಂದುಕೊರತೆ ಸಭೆಯಲ್ಲಿ ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಅವರು ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದರು.

ಯಮಕನಮರಡಿ ಕ್ಷೇತ್ರದ ದಡ್ಡಿ ಗ್ರಾಮದ ಮುಸ್ಲಿಂ ಗಲ್ಲಿಯ ನಿವಾಸಿಗಳು ಎದುರಿಸುತ್ತಿರುವ ಗಂಭೀರ ಸಮಸ್ಯೆಯನ್ನು ಮುಖಂಡ ಮುನ್ನಾ ಬುಡ್ಡಣ್ಣವರ್ ಸಚಿವರ ಗಮನಕ್ಕೆ ತಂದರು. ಪ್ರತಿ ವರ್ಷ ಮಳೆಗಾಲದಲ್ಲಿ ಸಮರ್ಪಕ ಚರಂಡಿ ವ್ಯವಸ್ಥೆಯ ಕೊರತೆಯಿಂದ ಚರಂಡಿ ನೀರು ಮನೆಗಳಿಗೆ ನುಗ್ಗಿ, ಜನರು ವಾಸಿಸಲು ಅಸಹಾಯಕ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಅವರು ವಿವರಿಸಿದರು.

ನೀರು ಸರಾಗವಾಗಿ ಹರಿದು ಹೋಗಲು ಅಗತ್ಯ ಸ್ಥಳದ ಕೊರತೆಯೇ ಈ ಸಮಸ್ಯೆಗೆ ಪ್ರಮುಖ ಕಾರಣ ಎಂದು ತಿಳಿಸಿದರು.

ಈ ಕುರಿತು ದೂರು ಆಲಿಸಿದ ಸಚಿವರು ಸಮಸ್ಯೆಯ ತೀವ್ರತೆಯನ್ನು ಮನಗಂಡು,



ತಹಶೀಲ್ದಾರ್ ಅವರೊಂದಿಗೆ ಚರ್ಚಿಸಿ ಶೀಘ್ರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಚರಂಡಿ ನೀರಿನ ನಿರ್ವಹಣೆಗೆ ತಾಂತ್ರಿಕವಾಗಿ ಪರಿಶೀಲನೆ ನಡೆಸಿ, ಅಗತ್ಯವಿದ್ದಲ್ಲಿ ಬಾಧಿತ ಕುಟುಂಬಗಳನ್ನು ಅಥವಾ ವ್ಯವಸ್ಥೆಯನ್ನು ಬೇರೆ ಸ್ಥಳಕ್ಕೆ ಸ್ಥಳಾಂತರ ಮಾಡುವ ಮೂಲಕ ಶಾಶ್ವತ ಪರಿಹಾರ ಕಲ್ಪಿಸಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ಸಾರ್ವಜನಿಕರ ದೂರುಗಳಿಗೆ ಸ್ಥಳದಲ್ಲೇ ಸ್ಪಂದಿಸಿದ ಸಚಿವರು ಜನಸಾಮಾನ್ಯರ ಸಂಕಷ್ಟಗಳಿಗೆ ಪರಿಹಾರ ಕಂಡುಹಿಡಿಯಲು ಬದ್ಧರಾಗಿದ್ದಾರೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಚಿವರ ಆಪ್ತ ಸಹಾಯಕ ದಯಾನಂದ ಪಾಟೀಲ, ಸಂಜು ಮಡಲಗಿ, ವಿಲಾಸ ನಾರ್ವೇಕರ್, ದತ್ತಾ ಪಾಟೀಲ ಸೇರಿದಂತೆ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಏ. 26ರಂದು ಜಿಲ್ಲಾಮಟ್ಟದ ಜಗಜ್ಯೋತಿ ಬಸವೇಶ್ವರ ಜಯಂತಿ : ಲಕ್ಷ್ಮಣ ಸವದಿ

◆**ಬೆಳಗಾವಿ:** ಈ ಬಾರಿ ವೀರಶೈವ ಲಿಂಗಾಯಿತ ಸಮಾಜದ ವತಿಯಿಂದ ಅದ್ದೂರಿಯಾಗಿ ಏ.26 ರಂದು ಜಿಲ್ಲಾಮಟ್ಟದ ಜಗಜ್ಯೋತಿ ಬಸವೇಶ್ವರ ಜಯಂತಿ ಆಚರಿಸಲಾಗುವುದು ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಭಾನುವಾರ ಬೆಳಗಾವಿ ನಗರದ ಸರ್ಕೀಟ್ ಹೌಸಿನಲ್ಲಿ ಬೆಳಗಾವಿ ಎಲ್ಲ ವೀರಶೈವ ಲಿಂಗಾಯಿತ ಸಮಾಜದ ಜನಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಅದ್ದೂರಿ ಬಸವೇಶ್ವರ ಜಯಂತಿ ಆಚರಣೆಯ ನಿಮಿತ್ತ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಜಗಜ್ಯೋತಿ ಬಸವೇಶ್ವರರ ಸಮಾನತೆಯ ಸಂದೇಶವನ್ನು ಉಲ್ಲೇಖಿಸಿ ತುಳಿತಕ್ಕೊಳಗಾದ ಸಮಾಜವನ್ನು ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಅನುಭವ ಮಂಟಪದಲ್ಲಿ ಕ್ರಾಂತಿಯಾಯಿತು. ಬಸವಣ್ಣನವರ 893ನೇ ಜಯಂತ್ಯೋತ್ಸವವನ್ನು ಈ ಬಾರಿ ಆಚರಣೆ ಮಾಡಲಾಗುತ್ತಿದೆ. ಅದರಂತೆಯೂ ಈ ಬಾರಿಯೂ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಜಿಲ್ಲಾಮಟ್ಟದಲ್ಲಿ ಆಚರಿಸುವ ಉದ್ದೇಶವನ್ನು ಹೊಂದಲಾಗಿದೆ ಎಂದರು.

ಏ.20 ರಂದು ಬಸವ ಜಯಂತಿ ಆಚರಣೆ ನಡೆಯಲಿದ್ದು, ಏ.19ರಂದು ಜಾಗೃತಿ ರ‍್ಯಾಲಿ ನಡೆಸಲಾಗುವುದು. ಏ.26 ರಂದು ಜಿಲ್ಲಾಮಟ್ಟದ ಶ್ರೀ ಬಸವೇಶ್ವರ ಜಯಂತಿಯ ಕಾರ್ಯಕ್ರಮ ಆಯೋಜಿಸುವ ತಿರ್ಮಾನವನ್ನು ಸಭೆಯಲ್ಲಿ ಕೈಗೊಳ್ಳಲಾಗಿದ್ದು, ಸುಮಾರು 50 ಸಾವಿರಕ್ಕೂ ಹೆಚ್ಚು ವೀರಶೈವ ಲಿಂಗಾಯಿತ ಸಮಾಜ ಬಾಂಧವರು ಭಾಗಿಯಾಗುವ ನಿರೀಕ್ಷೆಯಿದ್ದು ಬಸವಣ್ಣನವರ ವಿಚಾರಧಾರೆಗಳನ್ನು ಅನುಸರಿಸುವ ಎಲ್ಲರೂ ಆಗಮಿಸಬೇಕೆಂದು ಕರೆ ನೀಡಿದರು.

> ▸▸ ಏ.20 ರಂದು ಬಸವ ಜಯಂತಿ ಆಚರಣೆ ನಡೆಯಲಿದ್ದು, ಏ.19ರಂದು ಜಾಗೃತಿ ರ‍್ಯಾಲಿ ನಡೆಸಲಾಗುವುದು. ಏ.26 ರಂದು ಜಿಲ್ಲಾಮಟ್ಟದ ಶ್ರೀ ಬಸವೇಶ್ವರ ಜಯಂತಿಯ ಕಾರ್ಯಕ್ರಮ, ಏ.26 ರಂದು ಸಂಜೆ 4 ಗಂಟೆಗೆ ಈ ಮೆರವಣಿಗೆ ನಡೆಯಲಿದೆ.

ಈದೇ ವೇಳೆ ಮಾಜಿ ರಾಜ್ಯಸಭಾ ಸದಸ್ಯ ಪದ್ಮಶ್ರೀ ಡಾ. ಪ್ರಭಾಕರ ಕೋರೆ ಅವರು ಬಸವಣ್ಣನವರ ಜಯಂತಿಯ ನಿಮಿತ್ತ ಬೃಹತ್ ಮೆರವಣಿಗೆಯ ಮೂಲಕ ಬಸವಣ್ಣನವರ ಸಂದೇಶಗಳನ್ನು ಸಾರಲಾಗುವುದು. ಪಾಶ್ಚಿಮಾತ್ಯ ಸಂಸ್ಕೃತಿಗಳನ್ನು ಅನುಸರಿಸದೇ, ಕೇವಲ ಸಾಂಪ್ರದಾಯಿಕ ಪದ್ಧತಿಯಿಂದ ಏ.26 ರಂದು ಸಂಜೆ 4 ಗಂಟೆಗೆ ಈ ಮೆರವಣಿಗೆ ನಡೆಯಲಿದೆ. ಬಹುಜನರು ಇದರಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು.

ಈ ವೇಳೆ ಸಂಸದ ಜಗದೀಶ್ ಶೆಟ್ಟರ್, ಚಿಕ್ಕೋಡಿ-ಸದಲಗಾ ಶಾಸಕ ಗಣೇಶ್ ಹುಕ್ಕೇರಿ, ಎಂ.ಎಲ್.ಸಿ ಚನ್ನರಾಜ್ ಹಟ್ಟಿಹೊಳಿ ಇತರರು ಪಾಲ್ಗೊಂಡಿದ್ದರು.

ವ್ಯಕ್ತಿ ಕಾಣೆ

◆ **ಸಂಕೇಶ್ವರ :** ಪಟ್ಟಣದ ಜನತಾಪ್ಲಾಟ್ ನಿವಾಸಿಯಾದ ಭೀಮಪ್ಪಾ ಬಸವಣ್ಣಿ ಚೌಗಲೆ (42) ವರ್ಷದ ವ್ಯಕ್ತಿಯು ದಿ.ಏ 4 ರಂದು ತನ್ನ ಮನೆಯಿಂದ ಹೋಗಿ ಮರಳಿ ಮನೆಗೆ ಬಾರದೇ ಕಾಣೆಯಾಗಿರುವ ಕುರಿತು ಸಂಕೇಶ್ವರ ಪೋಲಿಸ ಠಾಣೆಯಲ್ಲಿ ಗುನ್ನೆ ಸಂಖ್ಯೆ: 94/2026 ಕಲಂ:ರಡಿ ಪ್ರಕರಣ ದಾಖಲಾಗಿದೆ.

ಕಾಣೆಯಾದ ವ್ಯಕ್ತಿಯು ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದ, ಕಾಣೆಯಾದ ವ್ಯಕ್ತಿಯ ಮೈಕಟ್ಟು: ಎತ್ತರ 5 ಪೂಟ 3 ಇಂಚ. ಗೋದಿಗಪ್ಪು ಮೈಬಣ್ಣ ಮೈಯಿಂದ ಸಡಪಾಳ,ಕೋಲು ಮುಖ, ಉದ್ದ ಮೂಗು ಇದೆ.

ಮೈ ಮೇಲಿನ ಬಟ್ಟೆಗಳು : ನೀಲಿ ಬಣ್ಣದ ಟೀ ಶರ್ಟ್, ಮಿಲ್ಟ್ರಿ ಬಣ್ಣದ ನೈಟ್ ಪ್ಯಾಂಟ್, ಗುರುತು : ಬಲಗೈ ಮೇಲೆ ಹನುಮಾನ ಮತ್ತು ಹಾವಿನ ಚಿತ್ರಗಳು ಎಡಗೈಯಲ್ಲಿ ಎಸ್. ಅಂತ ಟ್ಯಾಟು ಹಾಕಿಸಿದ್ದು ಇರುತ್ತದೆ. ಗೊತ್ತಿರುವ ಭಾಷೆ ಕನ್ನಡ ಮಾತಾಡುತ್ತಾರೆ. ಈ ಗುರುತಿನ ವ್ಯಕ್ತಿಯ ಬಗ್ಗೆ ಯಾವುದೇ ಮಾಹಿತಿ ಲಭ್ಯವಾದಲ್ಲಿ ಸಂಕೇಶ್ವರ ಪೊಲೀಸ್ ಠಾಣೆ ಸಂಪರ್ಕಿಸುವಂತೆ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾನೂನು ಬಾಹಿರ ಚಟುವಟಿಕೆ: ವ್ಯಕ್ತಿ ಗಡಿಪಾರು

◆**ತೆಲಸಂಗ:** ಪದೇ ಪದೇ ಅಬಕಾರಿ ಕಾಯ್ದೆ ಉಲ್ಲಂಘನೆ ಹಾಗೂ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಐಗಳಿ ಪೋಲೀಸ್ ಠಾಣಾ ವ್ಯಾಪ್ತಿಯ ಅಥಣಿ ತಾಲೂಕಿನ ಅಡಹಳಟ್ಟಿ ಗ್ರಾಮದ ವ್ಯಕ್ತಿಯೊಬ್ಬನನ್ನು ಬೆಳಗಾವಿ ಜಿಲ್ಲೆಯಿಂದ ಮೂರು ತಿಂಗಳ ಅವಧಿಗೆ ಗಡಿಪಾರು ಮಾಡಿ ಚಿಕ್ಕೋಡಿ ಉಪವಿಭಾಗೀಯ ದಂಡಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಅಡಹಳಟ್ಟಿ ಗ್ರಾಮದ ನಿವಾಸಿ ಕಲ್ಮೇಶ ಅಲ್ಲಪ್ಪ ಮೂರಾಬಟ್ಟೆ ಗಡಿಪಾರು ಶಿಕ್ಷೆಗೆ ಒಳಗಾದ ವ್ಯಕ್ತಿ. ಈತನ ಮೇಲೆ ಅಥಣಿ ವ್ಯಾಪ್ತಿಯಲ್ಲಿ ಒಂದು ಐಪಿಸಿ ಪ್ರಕರಣ ಹಾಗೂ ಮೂರು ಅಬಕಾರಿ ಕಾಯ್ದೆಯಡಿ ಪ್ರಕರಣಗಳು ದಾಖಲಾಗಿದ್ದವು. ಈ ಪೈಕಿ ಒಂದು ಪ್ರಕರಣದಲ್ಲಿ ಖುಲಾಸೆಯಾಗಿದ್ದು, ಉಳಿದ ಮೂರು ಪ್ರಕರಣಗಳು ವಿಚಾರಣೆ ಹಂತದಲ್ಲಿವೆ. ವಿಚಾರಣೆಗೆ ಹಾಜರಾಗದೆ ಕಾನೂನು ಬಾಹಿರ ಚಟುವಟಿಕೆಮುಂದುವರಿಸಿದ್ದನ್ನುಗಂಭೀರವಾಗಿ ಪರಿಗಣಿಸಿ ಈ ಕ್ರಮ ಕೈಗೊಳ್ಳಲಾಗಿದೆ.

ಕರ್ನಾಟಕ ಪೊಲೀಸ್ ಕಾಯ್ದೆ 1963 ರ ಕಲಂ 55 ಮತ್ತು 56 (ಎಚ್) ರನ್ವಯ ಚಿಕ್ಕೋಡಿ ಉಪವಿಭಾಗೀಯ ದಂಡಾಧಿಕಾರಿ ಸುಭಾಷ ಸು. ಸಂಪಗಾವಿ ಈ ಆದೇಶ ನೀಡಿದ್ದಾರೆ. ಆರೋಪಿಯನ್ನು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಉಪವಿಭಾಗದಿಂದ ಹೊರಹಾಕಿ, ಬಾಗಲಕೋಟೆ ಜಿಲ್ಲೆಯ ನವನಗರ ಪೊಲೀಸ್ ಠಾಣೆ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ.

ಮುಂದಿನ ಮೂರು ತಿಂಗಳ ಕಾಲ ಆರೋಪಿಯು ಪ್ರತಿದಿನ ಬಾಗಲಕೋಟೆಯ ನವನಗರ ಪೊಲೀಸ್ ಠಾಣೆಯಲ್ಲಿ ಹಾಜರಾತಿ ನೀಡಬೇಕು. ಈ ಹಾಜರಾತಿಯ ವರದಿಯನ್ನು ಪ್ರತಿ 15 ದಿನಕ್ಕೊಮ್ಮೆ ಅಥಣಿ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಗೆ ಸಲ್ಲಿಸುವಂತೆ ಐಗಳಿ ಪೊಲೀಸ್ ಉಪನಿರೀಕ್ಷಕರಿಗೆ ಸೂಚನೆ ನೀಡಲಾಗಿದೆ. ಈ ಆದೇಶವು ತಕ್ಷಣದಿಂದಲೇ ಜಾರಿಗೆ ಬರಲಿದ್ದು, ಆರೋಪಿಯನ್ನು ಸುರಕ್ಷಿತವಾಗಿ ಬಾಗಲಕೋಟೆ ಜಿಲ್ಲೆಗೆ ಸ್ಥಳಾಂತರಿಸಲು ಕ್ರಮ ವಹಿಸಲಾಗಿದೆ ಎಂದು ಐಗಳಿ ಪಿಎಸ್ಐ ಚಂದ್ರಶೇಖರ ಸಾಗನೂರ ತಿಳಿಸಿದ್ದಾರೆ.

ತಾಲೂಕಿಗೆ ಬಾಲ ಭವನ ಮಂಜೂರಾತಿಗೆ ಪ್ರಾಮಾಣಿಕ ಪ್ರಯತ್ನ

◆**ಖಾನಾಪುರ:** ತಾಲೂಕಿಗೆ ಒಂದು ಸುಸಜ್ಜಿತ ಬಾಲಭವನವನ್ನು ಮಂಜೂರು ಮಾಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಅಡಿವೇಶ ಇಟಗಿ ಹೇಳಿದರು.

ಪಟ್ಟಣದಲ್ಲಿ ಭಾನುವಾರ ಶಿಕ್ಷಕರು ಮತ್ತು ಪಟ್ಟಣದ ಸಾಮಾಜಿಕ ಕಾರ್ಯಕರ್ತರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ತಾವು ಕಳೆದ ಹಲವು ವರ್ಷಗಳಿಂದ ತಾಲೂಕಿನೊಂದಿಗೆ ನಿಕಟ ಬಾಂಧವ್ಯ ಹೊಂದಿದ್ದು, ತಮ್ಮ ಪೂರ್ವಜರು ಇಟಗಿಯಲ್ಲಿದ್ದ ಕಾರಣ ತಮಗೆ ಇಟಗಿ ಎಂಬ ಅಡ್ಡಹೆಸರು ಬಂದಿದೆ. ಉಳಿದ ತಾಲೂಕುಗಳಿಗೆ ಹೋಲಿಸಿದರೆ ಅಭಿವೃದ್ಧಿ ವಂಚಿತ ಎಂಬ ಹಣೆಪಟ್ಟಿ ಹೊತ್ತ ಖಾನಾಪುರ ತಾಲೂಕಿನ ಪರಿಸ್ಥಿತಿಯನ್ನು ಸರ್ಕಾರಕ್ಕೆ ವಿವರಿಸಿ ಈ ಭಾಗದ ಅಭಿವೃದ್ಧಿಗೆ ಆದ್ಯತೆ ನೀಡುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ತಾವು ಬದ್ಧ ಎಂದರು.



ರವಿ ಕಾಡಗಿ ಮಾತನಾಡಿ, ಬಹಳ ವರ್ಷಗಳಿಂದ ತಾಲೂಕಿನೊಂದಿಗೆ ಉತ್ತಮ ಒಡನಾಟ ಇಟ್ಟುಕೊಂಡ ಅಡಿವೇಶ ಅವರು ವೀರಶೈವ ಲಿಂಗಾಯತ ಸಂಘಟನೆಯನ್ನು ಮುನ್ನಡೆಸುತ್ತಿದ್ದಾರೆ. ಇವರ ರಾಜಕೀಯ ಕ್ಷೇತ್ರದ ಸಾಧನೆ ಗುರುತಿಸಿ ಇವರನ್ನು ರಾಜ್ಯಮಟ್ಟದ ಹುದ್ದೆಗೆ ನೇಮಕಗೊಳಿಸಿದ್ದು ಖುಷಿಯ ಸಂಗತಿ. ನಿಸ್ವಾರ್ಥ ರಾಜಕಾರಣಿ ಅಡಿವೇಶ ಅವರಿಂದ ಭವಿಷ್ಯದಲ್ಲಿ ಉತ್ತಮ ಮತ್ತು ಜನಪರ ಕೆಲಸಗಳು ಆಗಲಿವೆ ಎಂದು ಹಾರೈಸಿದರು.

ಅಡಿವೇಶ ಅವರನ್ನು ವಿವಿಧ ಶಿಕ್ಷಕರು, ಸಾಮಾಜಿಕ ಕಾರ್ಯಕರ್ತರು, ಲಿಂಗಾಯತ ಸಮಾಜದ ಮುಖಂಡರು ಸತ್ಕರಿಸಿದರು. ಬಸವರಾಜ ಹಿರೇಮಠ ಗೌರೀಶ ಸೋನೊಳ್ಳಿ, ಬಾಳು ಚಾಪಗಾಂವಕರ, ರಮೇಶ ನಂದಗಡಕರ ಮತ್ತಿತರರಿದ್ದರು. ಮಹಾಂತೇಶ ಬಾಳೇಕುಂದ್ರಿ ಸ್ವಾಗತಿಸಿ, ಅಪ್ಪಯ್ಯ ಕೊಡೊಳ್ಳಿ ಪ್ರಾಸ್ತಾವಿಕ ಮಾತನಾಡಿದರು. ಚಂದ್ರು ಹೊಸಮನಿ ನಿರೂಪಿಸಿ, ಶಂಕರ ಕಮ್ಮಾರ ವಂದಿಸಿದರು.

ಏ.14, 20ರಂದು ಮಾಂಸಾಹಾರಿ ಅಂಗಡಿಗಳ ಬಂದ್

◆**ಬೆಳಗಾವಿ :** ಡಾ. ಬಿ. ಆರ್. ಅಂಬೇಡ್ಕರ ಜಯಂತಿ ಹಾಗೂ ಬಸವ ಜಯಂತಿ ಅಂಗವಾಗಿ ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲ ಕಸಾಯಿಖಾನೆ, ಮಾಂಸಾಹಾರಿ ಅಂಗಡಿಗಳನ್ನು ಏ.14, ಏ.20 ರಂದು ಬಂದ್ ಮಾಡುವದು ಕಡ್ಡಾಯವಾಗಿರುತ್ತದೆ. ಜಯಂತಿ ನಿಮಿತ್ತ ಕಸಾಯಿಖಾನೆ, ಮಾಂಸಾಹಾರಿ ಅಂಗಡಿಗಳ ಮಾಲೀಕರುಗಳು ತಮ್ಮ ಅಂಗಡಿಗಳನ್ನು ಬಂದ್ ಮಾಡಿ ಸಹಕರಿಸಬೇಕು. ಈ ದಿನಗಳಂದು ಕಸಾಯಿಖಾನೆ, ಮಾಂಸಾಹಾರಿ ಅಂಗಡಿ ಮಾಲೀಕರು ಉಲ್ಲಂಘನೆ ಮಾಡಿರುವದು ಕಂಡು ಬಂದಲ್ಲಿ ಅಂತಹ ಮಾಲೀಕರುಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳಾ ಸಾಹಿತ್ಯ ಹೊಸ ದಿಕ್ಕಿನತ್ತ ಸಾಗಲಿ

◆**ಧಾರವಾಡ:** ಶ್ರೀ ಕ್ಷೇತ್ರ ಧರ್ಮಸ್ಥಳ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಮಹಿಳಾ ಗ್ರಂಥ ಬಹುಮಾನ ಪ್ರದಾನ ಸಮಾರಂಭವು ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಂಗಣದಲ್ಲಿ ನಡೆಯಿತು.

ಸಾಹಿತಿಗಳಾದ ಸವಿತಾ ನಾಗಭೂಷಣ, ಡಾ.ಕ್ಯಾತ್ಯಾಯಣಿ ಮತ್ತು ಡಾ. ಕೆ.ಎಸ್. ಕವಿಗಾ ಅವರಿಗೆ ತಲಾ ರೂ.15 ಸಾವಿರ ನಗದು, ಸ್ಮರಣಿಕೆ ಒಳಗೊಂಡ ರತ್ನಮ್ಮ ಹೆಗ್ಗಡೆ ಗ್ರಂಥ ಬಹುಮಾನ ಪ್ರದಾನಿಸಲಾಯಿತು.

ಪ್ರಶಸ್ತಿ ಪ್ರದಾನಿಸಿದ ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ. ಅಜಿತ ಪ್ರಸಾದ ಮಾತನಾಡಿ, ಮಾತೋಶ್ರೀ ರತ್ನಮ್ಮ ಅವರು ಒಂದು ಕುಟುಂಬದ ಶಕ್ತಿ ಅಲ್ಲ, ಸಾಹಿತ್ಯ ಮತ್ತು ಸಂಸ್ಕೃತಿ ಪೋಷಕರಾಗಿದ್ದರು. ಮಹಿಳಾ ಸಾಹಿತ್ಯ ಹೊಸ ದಿಕ್ಕಿನಲ್ಲಿ ಸಾಗುತ್ತಿದೆ. ಮನೆಯ ಚೌಕಟ್ಟನ್ನು ಮೀರಿಯೂ ಜಾಗತಿಕ ವಿದ್ಯಮಾನಗಳಿಗೆ ಸ್ಪಂದಿಸುವ ಲೇಖಕಿಯರ ಸಂಖ್ಯೆ ಹೆಚ್ಚುತ್ತಿರುವುದು ಆಶಾದಾಯಕ ಬೆಳವಣಿಗೆ ಎಂದರು. ಬಹುಮಾನ ಸ್ವೀಕರಿಸಿದ ಲೇಖಕಿ ಸವಿತಾ ನಾಗಭೂಷಣ, ಮಹಿಳಾ ಸಾಹಿತ್ಯ ರಚನೆ ಸವಾಲು ಪ್ರಸ್ತಾಪಿಸಿ, ಹೆಣ್ಣುಮಕ್ಕಳಿಗೆ ಬರವಣಿಗೆ ಕೇವಲ ಹವ್ಯಾಸ ಅಲ್ಲ, ಅವರ ಅಸ್ತಿತ್ವದ ಹುಡುಕಾಟ. ಅಕ್ಷರ ಕಟ್ಟುವ ಕಾರ್ಯಕವಾಗಿದೆ ಎಂದರು. ಕವಿಸಂ ಉಪಾಧ್ಯಕ್ಷ ಶ್ರೀನಿವಾಸ ವಾಡಪ್ಪಿ ಅಧ್ಯಕ್ಷತೆ ವಹಿಸಿದ್ದರು. ಕವಿಸಂ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಸತೀಶ ತುರಮರಿ, ವೀರಣ್ಣ ಒಡ್ಡೀನ್, ಡಾ.ಧನವಂತ ಹಾಜವಗೋಳ, ಡಾ. ಶೈಲಜಾ ಅಮರಶೆಟ್ಟಿ, ಗೌರಮ್ಮ ಗೋರೆಬಾಳ ಇತರರಿದ್ದರು.



ಅಂಬೇಡ್ಕರ್ ಜಯಂತಿ : ಸ್ಥಳ ಪರಿಶೀಲನೆ

◆**ಬೆಳಗಾವಿ:** ಡಾ. ಬಿ. ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸುವ ಹಿನ್ನಲೆಯಲ್ಲಿ ಬೆಳಗಾವಿ ಮಹಾಪೌರರಾದ ಪ್ರೀತಿ ಕಾಮಕರ ಅವರು ನಗರದಲ್ಲಿನ ಡಾ. ಬಿ. ಆರ್. ಅಂಬೇಡ್ಕರ್ ಉದ್ಯಾನವನದಲ್ಲಿ ಸ್ಥಳ ಪರಿಶೀಲನೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಉದ್ಯಾನವನದ ರಸ್ತೆ ಹಾಗೂ ಮೆರವಣಿಗೆ ರಸ್ತೆಯನ್ನು ಸ್ವಚ್ಛಗೊಳಿಸಲು ತಿಳಿಸಿದರು. ರಸ್ತೆ ಮಧ್ಯದಲ್ಲಿನ ಮರಗಳ ಕೊಂಬೆಗಳನ್ನು ಟ್ರಿಮ್ ಮಾಡುವುದು ಕೇಬಲ್ ಹಾಗೂ ಇನ್ನಿತರ ಅಡೆತಡೆಗಳನ್ನು ತೆರವುಗೊಳಿಸುವಂತೆ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಉಪ ಮಹಾಪೌರ ಹನುಮಂತ ಕೊಂಗಾಳಿ, ಆಡಳಿತ ಪಕ್ಷದ ನಾಯಕರು ಹಾಗೂ ಉಪ ಆಯುಕ್ತರು ಆಡಳಿತ ನೋಡಲ್ ಅಧಿಕಾರಿಗಳು, ಹಾಗೂ ದಲಿತ ಮುಖಂಡರು ಮಲ್ಲೇಶ ಚೌಗಲೆ, ಮಲ್ಲೇಶ್ ಕುರಂಗಿ. ಮನೋಜ ಹಿತ್ತಲಮನಿ, ಮಲ್ಲೇಶ ಹಿತ್ತಲಮನಿ, ಸಂದೀಪ ಖನಗಾಂವಕರ, ಪ್ರಕಾಶ ಕೆಂಪಣ್ಣವರ, ಸುಧೀರ ಚೌಗುಲೆ, ವ್ಯವಸ್ಥಾಪಕ ನಿರ್ದೇಶಕರು, ಸ್ಮಾರ್ಟ ಸಿಟಿ ಲಿ. ಬೆಳಗಾವಿ, ಸಂಚಾರಿ ಪೊಲೀಸ್ ಠಾಣೆ, ಬೆಳಗಾವಿ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬೆಳಗಾವಿ, ಜಿಲ್ಲಾ ಅಗ್ನಿಶಾಮಕ ದಳ ಬೆಳಗಾವಿ, ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬೆಳಗಾವಿ, ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆ ಬೆಳಗಾವಿ, ಕಾರ್ಯಕಾರಿ ಅಭಿಯಂತರರು ಹೆಸ್ಕಾಂ ಬೆಳಗಾವಿ, ಆರೋಗ್ಯ ನಿರೀಕ್ಷಕರು, ಮಹಾನಗರ ಪಾಲಿಕೆ ಬೆಳಗಾವಿ, ವಾರ್ತಾ ಇಲಾಖೆ ಬೆಳಗಾವಿ ಮುಂತಾದವರು ಉಪಸ್ಥಿತರಿದ್ದರು.



ವಿಟಿಯು ಫುಟ್ಬಾಲ್ ಟೂರ್ನಮೆಂಟ್ 2026: ಕೆಎಲ್‌ಎಸ್ ಜಿಐಟಿ ಚಾಂಪಿಯನ್



◆**ಬೆಳಗಾವಿ:** ಬೆಳಗಾವಿಯ ಕೆಎಲ್‌ಎಸ್ ಗೋಗಟೆ ತಾಂತ್ರಿಕ ಸಂಸ್ಥೆ ವಿಟಿಯು ಬೆಳಗಾವಿ ವಿಭಾಗದ ಫುಟ್ಬಾಲ್ ಟೂರ್ನಮೆಂಟ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಅಂತಿಮ ಪಂದ್ಯದಲ್ಲಿ ಕೆಎಲ್‌ಎಸ್ ಜಿಐಟಿ ತಂಡವು ಅಂಗಡಿ ತಾಂತ್ರಿಕ ಸಂಸ್ಥೆ ವಿರುದ್ಧ 2–0 ಅಂಕಗಳಿಂದ ಜಯ ಸಾಧಿಸಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಅಂಗಡಿ ತಾಂತ್ರಿಕ ಸಂಸ್ಥೆ ರನ್ನರ್-ಅಪ್ ಸ್ಥಾನ ಪಡೆದಿತು.

ಕೆಎಲ್‌ಎಸ್ ಜಿಐಟಿ ಕಾಲೇಜಿನ ಸುಧರ್ಶನ ಚೌಗುಲೆ ಅವರನ್ನು ಟೂರ್ನಮೆಂಟ್ನ ಅತ್ಯುತ್ತಮ ಆಟಗಾರರಾಗಿ ಘೋಷಿಸಲಾಯಿತು. ಅಂಗಡಿ ತಾಂತ್ರಿಕ ಸಂಸ್ಥೆಯ ಸಚಿನ್ ಅವರಿಗೆ ಅತ್ಯುತ್ತಮ ಗೋಲ್ಕೀಪರ್ ಪ್ರಶಸ್ತಿ ಲಭಿಸಿತು.

ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಜಾರ್ಜ್ ರೊಡ್ರಿಗ್ಸ್ ಅವರು ವಿಜೇತರಿಗೆ ಬಹುಮಾನ ವಿತರಿಸಿದರು.

ಈ ವೇಳೆ ದೈಹಿಕ ಶಿಕ್ಷಣ ಉಪನ್ಯಾಸಕರಾದ ಶುಭಶ್ವ ಶಿಕ್ರೆ, ಶಿವಾನಿ ಕರಳೆ ಮತ್ತು ನಿಕಿತಾ ಪಾಟೀಲ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಟೂರ್ನಮೆಂಟ್ನಲ್ಲಿ ಎಲ್ಲಾ ತಂಡಗಳಿಂದ ಉತ್ತಮ ಭಾಗವಹಿಸುವಿಕೆ ಮತ್ತು ಕ್ರೀಡಾಸ್ಫೂರ್ತಿ ಕಂಡುಬಂದಿತು.

ಬೇಸಿಗೆ ಸಂಸ್ಕಾರ ಶಿಬಿರದ ಸಮಾರೋಪ

◆**ಕುಂದಗೋಳ:** ಶೃಂಗೇರಿ ಶಾರದಾ ಪೀಠದ ಪರಮಾನುಗ್ರಹದೊಂದಿಗೆ ಪಟ್ಟಣದ ಶಾರದಾ ಶಂಕರ ಆಚಾರ್ಯ ಮಠದಲ್ಲಿ ಆಯೋಜಿಸಲಾದ ಬಾಲ ಭಾರತಿ ಸಂಸ್ಕಾರ ಸುಧಾ ಬೇಸಿಗೆ ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭವು ಭಾನುವಾರ ವಿಜೃಂಭಣೆಯಿಂದ ನೆರವೇರಿತು.

ಶಿಬಿರದಲ್ಲಿ ಭಾಗವಹಿಸಿದ್ದ ಎಪ್ಪತ್ತಕ್ಕೂ ಹೆಚ್ಚು ಮಕ್ಕಳಿಗೆ ವಿವಿಧ ಸ್ತೋತ್ರಗಳು, ಭಾರತೀಯ ಇತಿಹಾಸ, ಸಂಸ್ಕೃತಿ ಹಾಗೂ ನೈತಿಕ ಮೌಲ್ಯಗಳ ಕುರಿತು ತರಬೇತಿ ನೀಡಲಾಯಿತು. ಪ್ರಧಾನ ಗುರುಗಳಾಗಿ ವೇದಬ್ರಹ್ಮ ಹನುಮಂತ ಭಟ್ ಜೋಶಿ ಹಾಗೂ ಸಹಾಯಕ ಗುರುಗಳಾಗಿ ರಾಮಚಂದ್ರ ಜೋಶಿ ಮಕ್ಕಳಿಗೆ ಪಾಠ ಬೋಧಿಸಿದರು.

ಪ್ರಧಾನ ಗುರುಗಳಾಗಿ ವೇದಬ್ರಹ್ಮ ಹನುಮಂತ ಭಟ್ ಜೋಶಿ ಮಾತನಾಡಿ, ಶಿಬಿರದ ಸಮಗ್ರ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದ್ದು, ಮಕ್ಕಳಲ್ಲಿನ ಶಿಸ್ತು, ಸಂಸ್ಕಾರ ಮತ್ತು ಅಧ್ಯಾತ್ಮದ ಅರಿವು ವೃದ್ಧಿಯಾಗಿರುವುದಾಗಿ ಹರ್ಷ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ನಡೆದ ಶಿಬಿರದಲ್ಲಿ ಹಾಜರಾದ ಪೋಷಕರು ಹಾಗೂ ಸ್ಥಳೀಯರು ಶಿಬಿರದ ಆಯೋಜನೆಯನ್ನು ಮೆಚ್ಚುಗೆ ವ್ಯಕ್ತಪಡಿಸಿದರು.



ಕಿರುಸುದ್ದಿ

ಹುನಗುಂದ ತಾಲೂಕಿಗೆ ಪ್ರಥಮ ಸ್ಥಾನ

◆**ಕಮತಗಿ:** ಪಟ್ಟಣದ ವಿಶ್ವ ಭಾರತಿ ಶಿಕ್ಷಣ ಸಮಿತಿ ಬೆನಕಟ್ಟಿಯ ಶಾಖಾಂಬರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ರೇಣುಕಾ ಕರಿಯಪ್ಪ ಪೂಜಾರಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600ಕ್ಕೆ 588 (ಶೇ.98) ಅಂಕಗಳನ್ನು ಪಡೆದುಕೊಳ್ಳುವ ಮೂಲಕ ಹುನಗುಂದ ತಾಲೂಕಿಗೆ ಹಾಗೂ ಕಾಲೇಜಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಕಾಲೇಜಿನ ವತಿಯಿಂದ ಕಾಲೇಜಿನ ಪ್ರಾಚಾರ್ಯ ಪಿ.ಎಲ್. ನಾಯಕ್, ಎಸ್.ಎಸ್. ಭಜಂತ್ರಿ ಅವರು ವಿದ್ಯಾರ್ಥಿನಿ ಮನೆಗೆ ತೆರಳಿ ಸನ್ಮಾನಿಸಿ ಗೌರವಿಸಿದರು. ಪಾಲಕರು, ಉಪನ್ಯಾಸಕರು, ಸಿಬ್ಬಂದಿ ಉಪಸ್ಥಿತರಿದ್ದರು.

ಸ್ವಯಂ ಗಣತಿಯಲ್ಲಿ ಎಲ್ಲರೂ ಪಾಲ್ಗೊಳ್ಳಿ



◆**ಜಮಖಂಡಿ:** ದೇಶದಾದ್ಯಂತ ಆರಂಭವಾಗಿರುವ ಸ್ವಯಂ ಗಣತಿಯಲ್ಲಿ ಎಲ್ಲರೂ ಪಾಲ್ಗೊಳ್ಳಿ ಎಂದು ತಹಶೀಲ್ದಾರ್ ಅನಿಲ ಬಡಿಗೇರ ಹೇಳಿದರು.

ತಾಲೂಕು ಆಡಳಿತದಿಂದ ನಗರದ ಬಿಎಲ್‌ಡಿಇ ಸಂಸ್ಥೆಯ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಭಾರತ ಜನಗಣತಿ 2026–27ರ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2011ರಲ್ಲಿ ಜನಗಣತಿ ನಡೆದಿತ್ತು, ಪುನಃ 2021ರಲ್ಲಿ ನಡೆಯಬೇಕಿದ್ದ ಜನಗಣತಿ ಕರೋನಾ ಕಾರಣದಿಂದ ನಡೆದಿರಲಿಲ್ಲ. ದೇಶದಲ್ಲಿರುವ ಜನಸಂಖ್ಯೆಯ ಪ್ರಮಾಣ, ಅವರ ಆರ್ಥಿಕ, ಶೈಕ್ಷಣಿಕ, ರಾಜಕೀಯ ಹಾಗೂ ಅವರ ಜೀವನ ಮಟ್ಟವನ್ನು ಒಂದು ದತ್ತಾಂಶದ ರೀತಿಯಲ್ಲಿ ಸಮಗ್ರವಾಗಿ ಸಂಗ್ರಹಿಸುವ ಮತ್ತು ಅದಕ್ಕೆ ಅನುಗುಣವಾಗಿ ದೇಶದ ಆರ್ಥಿಕ ಯೋಜನೆಗಳ ರೂಪಿಸಲು ಜನಗಣತಿ ಮಹತ್ತರವಾದ ಕಾರ್ಯವಾಗಿದೆ ಎಂದರು.

ಉಪ ಪ್ರಾಚಾರ್ಯ ಡಾ.ಡಿ.ಎಸ್. ನಿಟ್ಟೂರ ಮಾತನಾಡಿದರು.ಉಪಪ್ರಾಚಾರ್ಯ ಪ್ರೊ. ಮಲ್ಲಿಕಾರ್ಜುನ ಬೀರಣ್ಣ, ಜನಗಣತಿ ಶಾಖೆಯ ಸಿಬ್ಬಂದಿ ವರ್ಗ, ಗ್ರಾಮಾಡಳಿತ ಅಧಿಕಾರಿಗಳು, ಕಂದಾಯ ನಿರೀಕ್ಷಕರು,ಕಾಲೇಜಿನ ಬೋಧಕರು ಇದ್ದರು.

ಏ.24ರಂದು 19ನೇ ಗುರುಸ್ಮರಣೆ ಕಾರ್ಯಕ್ರಮ

◆**ಬಾದಾಮಿ:** ನಗರದ ಗುರುಶ್ರೀ ಮನೋಚಾರ್ಯ ಪ್ರತಿಷ್ಠಾನದ ವತಿಯಿಂದ ಗುರುಶ್ರೀ ಮೋನಪ್ಪ ಧರ್ಮಪ್ಪ ಮನೋಚಾರ್ಯ ಇವರ 102 ನೇ ಜಯಂತ್ಯೋತ್ಸವದ ಪ್ರಯುಕ್ತ 19ನೇ ಗುರುಸ್ಮರಣೆ ಕಾರ್ಯಕ್ರಮವನ್ನು ಏ.24 ರಂದು ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಗದಗ ನಗರದ ಶ್ರೀಮತಿ ಎಂ.ಬಿ.ಹುಯಿಲಗೋಳ ಬಿ.ಇಡಿ.ಕಾಲೇಜಿನಲ್ಲಿ ಗದಗ ನಗರದ ಐದು ಬಿ.ಇಡಿ.ಕಾಲೇಜಿನ ಆಯ್ದ ಬಿ.ಇಡಿ.ಪ್ರಶಿಕ್ಷಣಾರ್ಥಿಗಳಿಗಾಗಿ ಅಂತರಕಾಲೇಜುಮಟ್ಟದ ಸ್ಪರ್ಧಾತ್ಮಕ ಪ್ರತಿಭಾಕಾರಂಜಿ ಹಾಗೂ ಉಪನ್ಯಾಸ–ಸಂವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ನಿವೃತ್ತ ಜಂಟಿ ನಿರ್ದೇಶಕ ಕೆ.ಆರ್.ಬಡಿಗೇರ ಕಾರ್ಯಕ್ರಮವನ್ನು ಉದ್ಘಾಟಿಸುವರು. ನಿವೃತ್ತ ಪ್ರಾಚಾರ್ಯ ಆರ್.ಬಿ.ಸಂಕದಾಳ ಅಧ್ಯಕ್ಷತೆ ವಹಿಸುವರು. ವೀರಪ್ಪ ಕಾಳಪ್ಪ ಮನೋಚಾರ್ಯ ಮತ್ತು ದಾಜೀಬಾ ಜಗದಾಳೆ ಇವರ ನೇತೃತ್ವದಲ್ಲಿ ನಡೆಯುವ ಸಮಾರಂಭದಲ್ಲಿ ಧಾರವಾಢದ ನಿವೃತ್ತ ಶಿಕ್ಷಕ ಸುರೇಶ ಕುಲಕರ್ಣಿ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಶ್ರೀನಿವಾಸ ಹುಯಿಲಗೋಳ ಮುಖ್ಯ ಅತಿಥಿಗಳಾಗಿ ಆಗಮಿಸುವರು. ನಂತರ ನಡೆಯಲಿರುವ ಅಭಿನಂದನಾ ಕಾರ್ಯಕ್ರಮದಲ್ಲಿ ಹುಚ್ಚಪ್ಪ ಬಸಪ್ಪ ಚೌಧರಿ(ಕೊಪ್ಪಳ), ಕೆ.ನಾರಾಯಣ ನಾಯಕ(ದ.ಕ), ಗೋಳೆಪ್ಪ ತಳವಾರ(ಚಿತ್ರದುರ್ಗ), ಕನ್ನಪ್ಪ ಚಿತ್ರದ, ಗೋಪೇಶ್ವರ ದಾಸ, ಇವರೆಲ್ಲರಿಗೂ ವಿಶಿಷ್ಟ ಸೇವಾ ಸನ್ಮಾನ, ರವೀಂದ್ರ ಮೂಲಿಮನಿ, ಬೀರಪ್ಪ ಅಂಡಗಿ ಚಿಲವಾಡಗಿ, ಮಲ್ಲಿಕಾರ್ಜುನ ಸಲಗರ ಇವರಿಗೆ ಗುರುಶ್ರೀ ಸನ್ಮಾನ ಮತ್ತು ನಾಗಲಿಂಗಪ್ಪ ಗಂಗೂರ ಮತ್ತು ರಹಿಮಾನಸಾಬ ನದಾಫ್ ಇವರಿಗೆ ವಿಶಿಷ್ಟ ಕಲಾ ಸನ್ಮಾನ ಮಾಡಲಾಗುತ್ತಿದೆ ಎಂದು ಮನೋಚಾರ್ಯ ಪ್ರತಿಷ್ಠಾನದ ಸಂಚಾಲಕ ಆಕಾಶ ಮನೋಚಾರ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಕ್ಷ್ಮವ್ವ ನೀಲನ್ನವರ ನಿಧನ

◆**ರನ್ನ ಬೆಳಗಲಿ:** ಪಟ್ಟಣದ ನಿವಾಸಿ, ಮಾಜಿ ಗ್ರಾಪಂ ಉಪಾಧ್ಯಕ್ಷೆ, ಲಿಂಗೈಕ್ಯ ಸ.ಸ ಶ್ರೀ ಅಡಿವಪ್ಪ ಮಹಾರಾಜರ ಧರ್ಮಪತ್ನಿ ಲಕ್ಷ್ಮವ್ವ ಅಡಿವೆಪ್ಪ ನೀಲನ್ನವರ ಶನಿವಾರದಂದು ನಿಧನರಾದರು. ಅವರಿಗೆ ಓರ್ವ ಪುತ್ರ, ಗಿರಮಲ್ಲಪ್ಪ ನೀಲನ್ನವರ, ಮೂವರು ಪುತ್ರಿಯರು ಹಾಗೂ ಮೊಮ್ಮಕ್ಕಳು ಮರಿಮೊಮ್ಮಕ್ಕಳು ಇದ್ದಾರೆ.





ರಬಕವಿ-ಬನಹಟ್ಟಿ: ನಾವಲಗಿ ಗ್ರಾಮದಲ್ಲಿ ಶಿಕ್ಷಣ ರತ್ನ ದಿ.ಜಿ.ಕೆ. ಹಿಪ್ಪರಗಿ ಸ್ಮರಣಾರ್ಥ ಅರಿವು ಡಿಜಿಟಲ್ ಗ್ರಂಥಾಲಯವನ್ನು ಶಾಸಕ ಸಿದ್ದು ಸವದಿ ಅವರು ಉದ್ಘಾಟಿಸಿದರು. ನಂತರ ಅವರಿಗೆ ಸನ್ಮಾನಿಸಲಾಯಿತು.

ನಾಯಕತ್ವದ ಗುಣಕ್ಕೆ ಎನ್‌ಎಸ್‌ಎಸ್ ಪ್ರೇರಣೆ

◆**ಕಮತಗಿ:** ಎನ್‌ಎಸ್‌ಎಸ್ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳನ್ನು ಮತ್ತು ಸೇವಾ ಮನೋಭಾವವನ್ನು ಬೆಳೆಸುವದರೊಂದಿಗೆ ಸಮಾಜಮುಖಿಯಾಗಿ ವಿದ್ಯಾರ್ಥಿಗಳಿಗೆ ನಾಯಕತ್ವ ಗುಣಗಳು ಬೆಳೆಯುತ್ತವೆ ಎಂದು ಶ್ರೀ ಹು. ವಿ. ವ ಸಂಘದ ಸಹ ಕಾರ್ಯದರ್ಶಿ ವಿದ್ಯಾಧರ ಆರ್. ಮಳ್ಳಿ ಹೇಳಿದರು.

ಪಟ್ಟಣದ ಶ್ರೀ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಗ್ರಾಮೀಣ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಕಮತಗಿ 2025–26ನೇ ಸಾಲಿನ ಬಾಗಲಕೋಟೆ ವಿಶ್ವವಿದ್ಯಾಲಯ ಜಮಖಂಡಿ ಅಡಿಯಲ್ಲಿ ರಾಷ್ಟ್ರೀಯ ಸೇವಾ ಯೋಜನೆಯನ್ನು ದತ್ತು ಗ್ರಾಮ ಮುಳ್ಳೂರು ಗ್ರಾಮದಲ್ಲಿ ರಾಷ್ಟ್ರೀಯ ಸ್ವಯಂ ಸೇವಾ ವಾರ್ಷಿಕ ಶಿಬಿರದ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಂತರ ಮಾಜಿ ಗ್ರಾಪಂ ಅಧ್ಯಕ್ಷ ಮುದ್ದಪ್ಪ ಕೊಳಮಲಿ ಕಾರ್ಯಕ್ರಮವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳು ಸುಸಂಸ್ಕೃತ ಜೀವನ ನಿರ್ಮಿಸಿಕೊಳ್ಳುವಲ್ಲಿ, ಇಂತಹ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳ ಜೀವನ ಮಟ್ಟವನ್ನು ಅತ್ಯುತ್ತಮಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಂಘದ ಆಡಳಿತಾಧಿಕಾರಿ ಅನೀಲಕುಮಾರ ಕಲ್ಯಾಣಶೆಟ್ಟಿ, ಪ್ರಾಚಾರ್ಯ ಡಾ. ಪ್ರಭುಲಿಂಗಯ್ಯ ಗುರುವಿನಮಠ, ಫಕೀರವ್ವ ಆಸಂಗಿ, ಬಸವರಾಜ ಬೋಳಿಶೆಟ್ಟರ, ಸಂಯೋಜನಾಧಿಕಾರಿ ಎಂ.ಎಸ್. ಶೆಟ್ಟರ ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ಶಿಬಿರಾರ್ಥಿಗಳು, ಗ್ರಾಮದ ಹಿರಿಯರು ಪಾಲ್ಗೊಂಡಿದ್ದರು.



ಕಮತಗಿ: ಪಟ್ಟಣದ ಶ್ರೀ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಗ್ರಾಮೀಣ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಕಮತಗಿ 2025–26ನೇ ಸಾಲಿನ ಬಾಗಲಕೋಟ ವಿಶ್ವವಿದ್ಯಾಲಯ ಜಮಖಂಡಿ ಅಡಿಯಲ್ಲಿ ರಾಷ್ಟ್ರೀಯ ಸೇವಾ ಯೋಜನೆಯನ್ನು ದತ್ತು ಗ್ರಾಮ ಮುಳ್ಳೂರು ಗ್ರಾಮದಲ್ಲಿ ರಾಷ್ಟ್ರೀಯ ಸ್ವಯಂ ಸೇವಾ ವಾರ್ಷಿಕ ಶಿಬಿರದ ಕಾರ್ಯಕ್ರಮ ನಡೆಯಿತು.

ನ್ಯಾಯವಾದಿ ಪಿ.ಎಂ. ವಸ್ತ್ರದ ಅಭಿಪ್ರಾಯ
ಪ್ರತಿಯೊಬ್ಬರಿಗೂ ಕಾನೂನಿನ ಅರಿವು ಅಗತ್ಯ

◆**ಬೀಳಗಿ:** ಗ್ರಾಮೀಣ ಭಾಗದಲ್ಲಿ ಪ್ರತಿಯೊಬ್ಬರೂ ಕಾನೂನಿನ ಅರಿವು ಪಡೆದುಕೊಳ್ಳಬೇಕು. ಆಗಲೇ ಪ್ರಜಾಪ್ರಭುತ್ವವ್ಯವಸ್ಥೆಯಸದುದ್ದೇಶಗಳುಈಡೇರಲು ಸಾಧ್ಯ. ಗ್ರಾಮಾಂತರ ಪ್ರದೇಶದಲ್ಲಿ ಕಾನೂನಿನ ಅರಿವು ಇಲ್ಲದೆ ಹತ್ತು ಹಲವು ಸಾಮಾಜಿಕ ಸಮಸ್ಯೆಗಳನ್ನು ಜನಸಾಮಾನ್ಯರು ಎದುರಿಸುವಂತಾಗಿದೆ ಎಂದು ನ್ಯಾಯವಾದಿ ಪಿ.ಎಂ. ವಸ್ತ್ರದ ಹೇಳಿದರು.

ತಾಲೂಕಿನ ನಾಗರಾಳ ಗ್ರಾಮದ ಅಮೋಘಸಿದ್ಧೇಶ್ವರ ದೇವಸ್ಥಾನದ ಆವರಣದಲ್ಲಿ ಬಾಗಲಕೋಟೆ ವಿಶ್ವ ವಿದ್ಯಾಲಯ ಜಮಖಂಡಿ, ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ ಸ್ವಾಮಿ ವಿವೇಕಾನಂದ ಪ್ರಥಮ ದರ್ಜೆ ಮಹಾವಿದ್ಯಾಲಯ ಬೀಳಗಿ ಇವರ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದಲ್ಲಿ ಕಾನೂನು ಅರಿವು ನೆರವು ವಿಷಯದ ಕುರಿತು ಉಪನ್ಯಾಸ ನೀಡಿದರು.

ಕಾನೂನುಗಳು ನಮಗೇಕೆ ಎಂಬ ಅಸಡ್ಡೆ ಬೇಡ. ಕಾನೂನನ್ನು ಹೊರತುಪಡಿಸಿ ಬದುಕನ್ನು ಕಲ್ಪಿಸಿಕೊಳ್ಳಲು ಅಸಾಧ್ಯ. ಸಂವಿಧಾನಾತ್ಮಕ ಹಕ್ಕುಗಳನ್ನು ಸಮರ್ಥವಾಗಿ ಚಲಾಯಿಸಬೇಕಾದರೆ ಕಾನೂನು ತಿಳಿವಳಿಕೆ ಇರಬೇಕು. ಜನನ ಮತ್ತು ಮರಣ ನೋಂದಣಿ ಕಾಯಿದೆ, ಮೋಟಾರು ವಾಹನ ಕಾಯಿದೆ, ಆಸ್ತಿ ನೋಂದಣಿ, ಪೋಕ್ಸೋ ಸೇರಿದಂತೆ ವಿವಿದ ಕಾಯಿದೆಗಳ ಕುರಿತು ಮಾಹಿತಿ ನೀಡಿದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಲ್ಲಿವರೆಗೆ ಆಡಳಿತ ನಡೆಸಿದ ಸರ್ಕಾರಗಳು ಜನರಿಗೆ ಶಿಸ್ತು, ಸಮಯ ಪಾಲನೆ, ಕಾನೂನು ಪಾಲನೆ, ಸ್ವಚ್ಛತೆಯನ್ನು ಕಡ್ಡಾಯವಾಗಿ ಪಾಲಿಸುವದನ್ನು ಕಲಿಸಕೊಡಲಿಲ್ಲ. ದೇಶದ ಪ್ರತಿಯೊಬ್ಬ ಪ್ರಜೆಯು ಕಾನೂನಿನ ಅಡಿಯಲ್ಲಿ ಬದುಕವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ ಎಂದು ಹೇಳಿದರು.



▸▸ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ

▸▸ ಕಾನೂನು ಅರಿವು ನೆರವು ವಿಷಯದ ಕುರಿತು ಉಪನ್ಯಾಸ

ಕೃತಕ ಬುದ್ಧಿವಂತಿಕೆಯಿಂದ ಉದ್ಯೋಗಗಳು ಕಡಿತಗೊಳ್ಳುವು ದರಿಂದ ಮುಂದೊಂದು ದಿನ ಕೃಷಿ ಉಚ್ಛ್ರಾಯ ಸ್ಥಿತಿಗೆ ಬರಲಿದೆ. ಆದ್ದರಿಂದ ಜಮೀನು ಹೊಂದಿರುವವರು ಕಾಲೇಜು ಬಿಡುವಿನ ಅವಧಿಯಲ್ಲಿ ಜಮೀನಿಗೆ ಹೋಗಿ ಕೃಷಿ ಕಾಯಕ ಮಾಡುವುದನ್ನು ರೂಢಿಸಿಕೊಳ್ಳಬೇಕು. ಹೆಣ್ಣು ಮಕ್ಕಳು ನಮ್ಮ ದೇಶದ ಸಂಸ್ಕಾರ, ಸಂಸ್ಕೃತಿ, ಪರಂಪರೆಯನ್ನು ಮುಂದುವರೆಸಿ ಕೊಂಡು ಹೋಗಬೇಕೆಂದು ಹೇಳಿದರು.

ಉಪವಾಸ ವನವಾಸ ಇದ್ದಾದರೂ ಮಕ್ಕಳ ಏಳಿಗೆಗೆ ಉನ್ನತ ಶಿಕ್ಷಣ ಕೊಡಿಸಿದ ಪರಿಣಾಮ ತಾವು ಉನ್ನತ ಹುದ್ದೆರಿಗೇರಿದರೂ ಜನ್ಮನೀಡಿ, ತಮ್ಮನ್ನು ಎತ್ತರಕ್ಕೆ ಬೆಳೆಸಿದ ತಂದೆ–ತಾಯಿಗಳನ್ನು ಮುಪ್ಪಾವಸ್ಥೆಯಲ್ಲಿ ಸಂರಕ್ಷಣೆ ಮಾಡಬೇಕು. ಯಾವುದೇ ಕಾರಣಕ್ಕೂ ಹೆತ್ತವರನ್ನು ವೃದ್ಧಾಶ್ರಮಕ್ಕೆ ಸೇರಿಸಬಾರದೆಂದು ಸಲಹೆ ನೀಡಿದರು.

ಎನ್‌ಎಸ್‌ಎಸ್ ಘಟಕದ ಅಧ್ಯಕ್ಷರು, ಪ್ರಾಚಾರ್ಯರಾದ ಎಲ್. ಎಚ್. ಕತ್ತಿ ಮಾತನಾಡಿದರು. ಅತಿಥಿಗಳಾಗಿ ಶಿವಯ್ಯ ಗಂಟಿ, ಪರಶುರಾಮ ಬೆಣ್ಣೂರ, ಈರಣ್ಣ ಮುಂಡಗನೂರ, ಪರಮಾನಂದ ಬಿಷ್ಣನ್ನವರ, ಚನ್ನಯ್ಯ ಜಡಿಮಠ, ಸೋಮಲಿಂಗಯ್ಯ ಕಳಸದ ಆಗಮಿಸಿದ್ದರು. ಭಾಗ್ಯ ಉಕ್ಕಲಿ ನಿರೂಪಿಸಿದರು. ಪ್ರಿಯಾಂಕಾ ಧೂಪದ ಸ್ವಾಗತಿಸಿದರು. ಮಹಾಂತವ್ವ ಹೊಸಗೌಡರ ವಂದಿಸಿದರು.

ಪಾದಯಾತ್ರೆ ಮೂಲಕ ಜನಗಣತಿ ಜಾಗೃತಿ

◆**ತೇರದಾಳ:** ಪಟ್ಟಣದಲ್ಲಿ ಕಂದಾಯ ಇಲಾಖೆ ಹಾಗೂ ಪುರಸಭೆ ಅಧಿಕಾರಿಗಳು ಜಂಟಿಯಾಗಿ ತಮ್ಮೆಲ್ಲ ಸಿಬ್ಬಂದಿಯೊಂದಿಗೆ ಸರ್ಕಾರದ ಘನಯೋಜನೆಯಾದ 'ಜನಗಣತಿ' ಯೋಜನೆ ಯಶಸ್ವಿಗಾಗಿ ಪಾದಯಾತ್ರೆ ಕೈಕೊಳ್ಳುವ ಮೂಲಕ ಜನಸಾಮಾನ್ಯರಲ್ಲಿ ಅರಿವು ಮೂಡಿಸಿದರು.

ಶನಿವಾರ ಹಿರಿಯ ಅಧಿಕಾರಿಗಳ ನಿರ್ದೇಶನದ ಮೇಲೆ ತಹಶೀಲ್ದಾರ್ ವಿಜಯಕುಮಾರ ಕಡಕೋಳ ಹಾಗೂ ಮುಖ್ಯಾಧಿಕಾರಿ ಎಫ್.ಬಿ.ಗಿಡ್ಡಿ ಇವರುಗಳು ತಮ್ಮ ಕಚೇರಿ ಸಿಬ್ಬಂದಿಗಳು ಹಾಗೂ ಪೌರಕಾರ್ಮಿಕರುಗಳೊಂದಿಗೆ ಪಟ್ಟಣದಲ್ಲಿ ಪಾದಯಾತ್ರೆ ಮಾಡಿದರು.

ಮಹಾವೀರ ಸರ್ಕಲ್‌ದಿಂದ ಪ್ರಾರಂಭವಾದ ಈ ಪಾದಯಾತ್ರೆಯು ಬಸ್ ನಿಲ್ದಾಣ, ಕೋಟೆಗೊಡೆ ಯಲ್ಲಮ್ಮನ ಗುಡಿ, ತಮದಡ್ಡಿ ನಾಕಾ ಡಾ. ಬಿ.ಆರ್. ಅಂಬೇಡ್ಕರ ಸರ್ಕಲ್, ಪೇಟೆ ಭಾಗದಲ್ಲಿ ಹೀಗೆ ಪಟ್ಟಣದ ಪ್ರಮುಖ ಜನವಸತಿ ಪ್ರದೇಶಗಳಲ್ಲಿ ಪಾದಯಾತ್ರೆ ಮೂಲಕ ಸಂಚರಿಸಿ ಸಾರ್ವಜನಿಕರಿಗೆ ಜನಗಣತಿ ಬಗ್ಗೆ ಜಾಗೃತಿ ಮೂಡಿಸಿದರು.

ಪಾದಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ತಹಶೀಲ್ದಾರ್ ವಿಜಯಕುಮಾರ ಕಡಕೋಳ, ಈ ಬಾರಿ ಸರ್ಕಾರವು ನಿಮ್ಮ ಮಾಹಿತಿಯನ್ನು ನೀವೆ ಭರ್ತಿ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಲು ಒಂದು ಲಿಂಕ್ ಬಿಡುಗಡೆ ಮಾಡಿದೆ ಕಾರಣ ಎಲ್ಲಾ ನಾಗರಿಕರು ಆ ಲಿಂಕಮುಖಾಂತರ ತಮ್ಮ ಮಾಹಿತಿಯನ್ನು ಭರ್ತಿ ಮಾಡಿ ಸರಕಾರಕ್ಕೆ ಮಾಹಿತಿ ಸಲ್ಲಿಸಬಹುದು ಎಂದರು.

ನಮಗೆಲ್ಲರಿಗೂ ಜನಗಣತಿ ಅತೀಮುಖ್ಯವಾಗಿದ್ದು ಇದರಿಂದ ಒಂದು ರಾಷ್ಟ್ರದಲ್ಲಿ ಅಥವಾ ರಾಜ್ಯದಲ್ಲಿ ಇರುವ ಜನರನ್ನುಗುರಿತಿಸಿಜನಾಂಗದಆಧಾರದಿಂದ ವಿಂಗಡಿಸಿ ಅವರಿರುವ ದಾಖಲೆಯನ್ನು ಸರಕಾರದ ಕಡತದಲ್ಲಿ ನಮೂದಿಸುವುದು. ಇದರಿಂದ ವ್ಯಕ್ತಿಯು ಸ್ವಾತಂತ್ರ್ಯ, ಸಮಾನತೆ ಹಾಗೂ ಸಾಮಾಜಿಕ ಹಕ್ಕುಗಳಿಗೆ ಬಾಧ್ಯಸ್ಥನಾಗುತ್ತಾನೆ. ಸರಕಾರದ ಪ್ರತಿ ಯೋಜನೆಯೂ ಸಹ ಜನಸಂಖ್ಯೆಯನ್ನು ಅವಲಂಬಿಸಿರುವುದರಿಂದ ಸಂಪನ್ಮೂಲಗಳ ಹಂಚಿಕೆಗೂ ಸಹ ಅನುಕೂಲವಾಗುತ್ತದೆ. ಕಾರಣ ನಿಮ್ಮ ಹಕ್ಕನ್ನು ಕಾಪಾಡಿಕೊಳ್ಳಲು ಈ ಜನಗಣತಿಯಲ್ಲಿ ಪಾಲ್ಗೊಳ್ಳಿ ಜನಗಣತಿಗಾಗಿ ನಿಮ್ಮ ಮನೆಗೆ ಬರುವ ಪ್ರತಿಯೊಬ್ಬ ಅಧಿಕಾರಿಗಳಿಗೆ ತಾವು ಸಹಕರಿಸಿ ಮಾಹಿತಿ ನೀಡಿ ಯಶಸ್ವಿಗೊಳಿಸಬೇಕೆಂದರು.



ಮಕ್ಕಳ ಸೃಜನಶೀಲತೆಗೆ ಪಾಲಕರು ಕೈಜೋಡಿಸಲಿ

◆**ಮಹಾಲಿಂಗಪುರ:** ವಿದ್ಯಾರ್ಥಿಗಳು ಸರಿಯಾದ ಮಾರ್ಗದಲ್ಲಿ ನಡೆದು ಒಳ್ಳೆಯ ಮತ್ತು ಹೊಸ ವಿಚಾರಗಳಲ್ಲಿ ಭಾಗಿಯಾಗಬೇಕು ಎಂದು ಸಿದ್ದಾಪುರದ ಶ್ರೀ ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆ ಕಾರ್ಯನಿರ್ವಾಹಕ ನಿರ್ದೇಶಕ ವಿರೂಪಾಕ್ಷಯ್ಯ ಗುಡಗುಂಟಿಮಠ ಹೇಳಿದರು.

ಸ್ಥಳೀಯ ಕೆಎಲ್‌ಇ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ನಡೆದ ಸೃಜನೋತ್ಸವ 2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಗುರಿ, ಕಲಿಕೆ, ಧೈರ್ಯ ಈ ಮೂರು ವಿಚಾರಗಳನ್ನು ಎಂದಿಗೂ ಮರೆಯಬಾರದು. ಜೊತೆಗೆ ಪಾಲಕರು ಮಕ್ಕಳ ಸೃಜನಶೀಲತೆಗೆ ಕೈ ಜೋಡಿಸಬೇಕು. ತಾವು ಮಾಡುವ ಕೆಲಸದಲ್ಲಿ ಮನಸ್ಸನ್ನು ತೊಡಗಿಸಿ ಕಾರ್ಯನಿರ್ವಹಿಸಿದರೆ ಗೆಲವು ಸಾಧ್ಯ ಎಂದರು.

ಜಮಖಂಡಿಯ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಪ್ಪ ಪಟ್ಟಿಹಾಳ ಮಾತನಾಡಿ, ಇಂದಿನ ಯುವ ಪೀಳಿಗೆ ನಮ್ಮ ದೇಶ,ರಾಜ್ಯ,ಜಿಲ್ಲಾದ್ಯಂತ ಹೊಸ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳಬೇಕು. ಸಾಮಾಜಿಕ ಕಾರ್ಯದಲ್ಲಿ ತೊಡಗಿ ಗುರುಗಳಿಗೆ, ತಂದೆ–ತಾಯಂದಿರಿಗೆ ಒಳ್ಳೆಯ ಮಕ್ಕಳು ಎಂದೆನಿಸಿಕೊಳ್ಳಬೇಕು ಎಂದರು.

ಕೆಎಲ್‌ಇ ಪದವಿ ಕಾಲೇಜಿನ ಪ್ರಾಚಾರ್ಯ ಎನ್ ಬಿ ಪಾಟೀಲ್ ಮಾತನಾಡಿ, ಜೀವನದಲ್ಲಿ ನಿರಂತರ ಪ್ರಯತ್ನದಿಂದ ಕೆಲಸ ಮಾಡಿ ಮಾಲೀಕರಾಗಿ. ಯಾವುದೇ ಕೆಲಸಕ್ಕೆ ಹಿಂಜರಿಕೆ ಬೇಡ. ಮೊದಲು ಅರಿತು, ಕಲಿತು ಧೈರ್ಯದಿಂದ ಮುನ್ನುಗ್ಗಿ ಎಂದರು.

ಜಮಖಂಡಿಯ ಓಲೆಮಠದ ಪ.ಪೂ ಶ್ರೀ ಆನಂದ ದೇವರು ದಿವ್ಯ ಸಾನ್ನಿಧ್ಯವಹಿಸಿ ವಿದ್ಯಾರ್ಥಿಗಳ ಜೀವನ ಮಾರ್ಗ ಯಶಸ್ವಿಯಾಗಲಿ ಎಂದು ಹಾರೈಸಿದರು. ಕೆಎಲ್‌ಇ ಪಾಲಿಟೆಕ್ನಿಕ್‌ನ ಪ್ರಾಚಾರ್ಯ ಎಸ್.ಐ. ಕುಂದಗೋಳ ವಾರ್ಷಿಕ ವರದಿ ವಾಚಿಸಿ,ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ವಿದ್ಯಾರ್ಥಿಗಳಾದ ರೋಹಿಣಿ ರಾವಳ, ಪ್ರಜ್ಞಾ ಬೆಳಗಾಂವಕರ, ಬಸವರಾಜ ತೇಲಿ, ಶಿವಾನಂದ ಮಲಾಬದಿ ಅನಿಸಿಕೆ ಹಂಚಿಕೊಂಡರು. ಈ ವರ್ಷ ಬೀಳ್ಕೊಡುವ ಎಲ್ಲ ವಿದ್ಯಾರ್ಥಿಗಳಿಗೆ ಕಾಲೇಜಿನಿಂದ ಫೈಲ್ ವಿತರಿಸಲಾಯಿತು. ಅನೇಕ ವಿದ್ಯಾರ್ಥಿಗಳು ಉತ್ತಮ ಬಹುಮಾನವನ್ನು ಪಡೆದರು. ಹಾಡಿನ ಜೊತೆಗೆ ಕುಣಿದು ಕುಪ್ಪಳಿಸಿದರು.

ಸ್ಥಳೀಯ ಸಂಸ್ಥೆಯ ನಿರ್ದೇಶಕ ಅಶೋಕ ಅಂಗಡಿ, ಉಮೇಶ ಹಾದಿಮನಿ, ವಂದನಾ ಪಸಾರ ಸೇರಿದಂತೆ ವಿವಿಧ ವಿಭಾಗದ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳಿದ್ದರು. ಶಿಕ್ಷಕರಾದ ಸವಿತಾ ಬೀಳಗಿ, ವಿಶಾಲ ಮೆಟಗುಡ್ ನಿರೂಪಿಸಿ, ವಂದಿಸಿದರು.



ಸಂಜನಾ ಗ್ಯಾನಪ್ಪನವರ ಉತ್ತಮ ಸಾಧನೆ

◆**ಬಾದಾಮಿ:** ಪ್ರೌಢಶಾಲೆ ಸಹಶಿಕ್ಷಕ ಮಹಾದೇವಪ್ಪ ಗ್ಯಾನಪ್ಪನವರ ಇವರ ಪುತ್ರಿ ಸಂಜನಾ ಗ್ಯಾನಪ್ಪನವರ ಇವರು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600/584 ಅಂಕ ಪಡೆದು ಶೇ. 97.33 ರಷ್ಟು ಉತ್ತಮ ಸಾಧನೆ ಮಾಡಿದ್ದಾರೆ. ಈ ವಿದ್ಯಾರ್ಥಿನಿ ಹುಬ್ಬಳ್ಳಿ ವಿದ್ಯಾನಿಕೇತನ ಕಾಲೇಜಿನಲ್ಲಿ ಅಧ್ಯಯನ ಮಾಡಿದ್ದಾರೆ.



ವಿದ್ಯಾರ್ಥಿನಿ ಸಾಧನೆಗೆ ಕಾಲೇಜಿನ ಪ್ರಾಚಾರ್ಯರು, ಸಿಬ್ಬಂದಿಗಳು, ಕುಟುಂಬಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ಮೇ 8ಕ್ಕೆ ಸಮಾವೇಶ: ಪೂರ್ವಸಿದ್ಧತೆ ಪರಿಶೀಲನೆ



◆**ಬಾದಾಮಿ:** ಮೇ 8ರಿಂದ 9ರವರೆಗೆ ಸಮೀಪದ ಶ್ರೀ ಕ್ಷೇತ್ರ ಬನಶಂಕರಿಯಲ್ಲಿ ನಡೆಯಲಿರುವ ಅಖಿಲ ಭಾರತ ದೇವಾಂಗ(ನೇಕಾರ) ಬೃಹತ್ ಜಾಗೃತ ಸಮಾವೇಶ ಹಾಗೂ ಶ್ರೀ ದಯಾನಂದಪುರಿ ಮಹಾಸ್ವಾಮೀಜಿಯವರ 36ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವದ ಜೊತೆಗೆ ಶ್ರೀಗಳವರಿಗೆ ತುಲಾಭಾರ ಕಾರ್ಯಕ್ರಮದ ಪೂರ್ವ ಸಿದ್ಧತೆಯನ್ನು ಅಖಿಲ ಭಾರತ ದೇವಾಂಗ ಜಾಗೃತ ಸಮಾವೇಶದ ಸಮಿತಿಯ ಅಧ್ಯಕ್ಷ ರವೀಂದ್ರ ಕಲಬುರ್ಗಿ ಮತ್ತು ಸಮಿತಿಯವರು ಪರಿಶೀಲನೆ ನಡೆಸಿದರು.

ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಮಿಸಲಿರುವ ಹಿನ್ನೆಲೆಯಲ್ಲಿ ಶಿಷ್ಟಾಚಾರ ಪಾಲನೆ, ಪೆಂಡಾಲ್ ಹಾಗೂ ಉಟೋಪಚಾರ ಹಾಗೂ ಇತರೆ ವಿಷಯದ ಬಗ್ಗೆ ಸುದೀರ್ಘ ಸಮಾಲೋಚನೆ ನಡೆಸಿದರು.

ಈ ಸಂದರ್ಭದಲ್ಲಿ ರಾಜ್ಯ ದೇವಾಂಗ ಸಂಘದ ಪ್ರಧಾನ ಕಾರ್ಯದರ್ಶಿ ಟಿ. ರಾಜೇಶ, ಸಂಘಟನಾ ಕಾರ್ಯದರ್ಶಿ ಆನಂದ ಹುಲಮನಿ, ಗಾಯತ್ರಿ ಪೀಠದ ನಿರ್ದೇಶಕ ಅಮಾತೆಪ್ಪ ಕೊಪ್ಪಳ, ಇನ್ನೋರ್ವ ನಿರ್ದೇಶಕ ನಾಗೇಶ ಭಾವಿಕಟ್ಟಿ, ಬನಶಂಕರಿ ಶಾಖಾಮಠದ ಮೇಲುಸ್ತುವಾರಿ ಸಂಕಣ್ಣ ಕರಡಿಗುಡ್ಡ, ಹನಮಂತ ಒಡ್ಡೊಡಗಿ, ಮಹೇಶ ಶೇಬಿನಕಟ್ಟಿ, ಬಸವರಾಜ ಒಡ್ಡೊಡಗಿ ಉಪಸ್ಥಿತರಿದ್ದರು.

ಸ್ವಯಂ ಜನಗಣತಿ ಅರಿವು ಕಾರ್ಯಕ್ರಮ

◆**ಜಮಖಂಡಿ:** ಸ್ಥಳೀಯ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ ದಲ್ಲಿ ಸ್ವಯಂ ಜನಗಣತಿ ಅರಿವು ಕಾರ್ಯಕ್ರಮವನ್ನು ತಹಶೀಲ್ದಾರ್ ಅನೀಲ ಬಡಿಗೇರ ವಿದ್ಯಾರ್ಥಿ ಗಳಿಗೆ ಅರಿವು ಕಾರ್ಯಕ್ರಮ ನೀಡಿದರು.

ನಂತರ ಮಾತನಾಡಿದ ಅವರು ಭಾರತದ ಜನಗಣತಿ 2027ರ ಪ್ರಯುಕ್ತ ಸ್ವಯಂ–ಗಣತಿ ಕುರಿತು ಸಮಗ್ರ ತರಬೇತಿಯನ್ನು ನೀಡಿದರು. ವಿದ್ಯಾರ್ಥಿನಿಯರಿಗೆ ಜನಗಣತಿಯ ಮಹತ್ವ, ಅದರ ಸಾಮಾಜಿಕ ಹಾಗೂ ಆಡಳಿತಾತ್ಮಕ ಉಪಯೋಗಗಳು, ಮತ್ತು ಸ್ವಯಂ–ಗಣತಿ ಪ್ರಕ್ರಿಯೆಯ ಅಗತ್ಯತೆಹೇಳಿದರು. ಜನಗಣತಿ 16ನೇ ಜನಗಣತಿಯಾಗಿದ್ದು, ಮೂಲತಃ ಇದು 2021ರಲ್ಲಿನಡೆಯಬೇಕಾಗಿತ್ತು. ಕರೋನಾ 19 ಮಹಾಮಾರಿಯ ಕಾರಣದಿಂದ ಮುಂದೂಡಲ್ಪಟ್ಟಿದ್ದು, ಇದೀಗ ಹಂತ ಹಂತವಾಗಿ ಪ್ರಕ್ರಿಯೆ ಆರಂಭಗೊಂಡಿದೆ.

ಸ್ವಯಂ–ಗಣತಿ ವ್ಯವಸ್ಥೆಯಡಿ ಸಾರ್ವಜನಿಕರು ಸುರಕ್ಷಿತ ಆನ್ ಲೈನ್ ಪೋರ್ಟಲ್ ಮೂಲಕ ತಮ್ಮ ಮಾಹಿತಿಯನ್ನು ಸ್ವತಃ ಭರ್ತಿ ಮಾಡಿ ಸಲ್ಲಿಸಲು ಅವಕಾಶವಿದೆ. ಈ ಪ್ರಕ್ರಿಯೆಯಲ್ಲಿ ಸೃಷ್ಟಿಯಾಗುವ ರೆಫರೆನ್ಸ್ ಐಡಿಯನ್ನು ನಂತರ 2026ರ ಏಪ್ರಿಲ್ 16 ರಿಂದ ಮೇ 15 ರವರೆಗೆ ನಡೆಯುವ ಕ್ಷೇತ್ರ ಮಟ್ಟದ ಮಾಹಿತಿ ಸಂಗ್ರಹಣೆಯ ಸಮಯದಲ್ಲಿ ನಿಯೋಜಿತಗಣಕರಿಗೆ ದೃಢೀಕರಣಕ್ಕಾಗಿ ಹಂಚಿಕೊಳ್ಳಬೇಕೆಂದು ತಿಳಿಸಲಾಯಿತು.

ಪ್ರಾಂಶುಪಾಲ ಡಾ. ಸುನಂದಾ ಎಸ್. ಶಿರೂರ, ಆರ್. ಎಚ್. ಹಳ್ಳಿ,ಡಾ. ಬಿ. ಎನ್. ಜಾಧವ, ಡಾ. ಸುನೀಲ ಮಣಕವಾಡ, ಡಾ. ಎಂ. ಎಂ. ಮಂಟೂರ, ಎ. ಎಸ್. ಪೂಜಾರಿ ಇದ್ದರು.



ಸಾಧನೆ ಸೋಮಾರಿಗಳ ಸೊತ್ತಲ್ಲ: ಸಂಗಣ್ಣ ಎಮ್ಮಿ



◆**ಅಮೀನಗಡ:** ಸಮೀಪದ ಕಳ್ಳಿಗುಡ್ಡ ಗ್ರಾಮದಲ್ಲಿ ಸಾಧನೆ ಸೋಮಾರಿಗಳ ಸೊತ್ತಲ್ಲ, ಅದು ಸಾಧಕರಸೊತ್ತು ಎಂದು ರಾಷ್ಟ್ರ ಪ್ರಶಸ್ತಿ ವಿಭೂಷಿತರಾದ ವಿಶ್ರಾಂತ ಶಿಕ್ಷಕ ಸಂಗಣ್ಣ ಎಮ್ಮಿ ಅವರು ಹೇಳಿದರು.

ಸರ್ಕಾರಿ ಪ್ರಾಥಮಿಕ ಶಾಲೆ ಕಳ್ಳಿಗುಡ್ಡ 2026ನೆ ಸಾಲಿನ 7ನೆತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸತತ ಪ್ರಯತ್ನ, ಛಲವಾದ ಮನಸ್ಸು, ದೃಢ ನಿರ್ಧಾರ ಇವುಗಳನ್ನು ಮೈಗೂಡಿಸಿಕೊಳ್ಳಬೇಕು. ಕಲಿತ ಶಾಲೆ, ವಿದ್ಯೆ ನೀಡಿದ ಗುರುಗಳನ್ನು ಸದಾ ಸ್ಮರಣೆ ಮಾಡಿಕೊಳ್ಳಬೇಕು. ಗುರು ಹಿರಿಯರಿಗೆ ಗೌರವ ನೀಡಬೇಕು.ಓದು ಬರಹ ಆಸಕ್ತಿ ಬೆಳಸಿಕೊಳಬೇಕು ಹೆಚ್ಚು ಅಂಕ ಪಡೆಯಲು ಸಮಯ ಪ್ರಜ್ಞೆ ವುಳ್ಳವರು ಆಗಬೇಕು ಎಂದರು.

ವರ್ಷದುದ್ದಕ್ಕೂ ವಿವಿಧ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು.

ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ವೆಂಕಟೇಶ ದಾಸರ ವಹಿಸಿದ್ದರು.

ಶಾಲಾ ಮಟ್ಟದ ಯುವ ವಿಜ್ಞಾನಿ ಪ್ರಶಸ್ತಿ ಕುಮಾರ ಆದರ್ಶ ಪಡೆದುಕೊಂಡರು. ಹಲಗತ್ತಿ ಗುರುಗಳು ವಂದಿಸಿದರು. ಬಿ.ಬಿ.ದೇವರ, ಸಿ.ಬಿ. ಮೆಣಸಿಕಾಯಿ, ಬಸಪ್ಪ ತಳವಾರ, ಶರಣು ಕೋರಿ, ಆಸಾಂಗೇಪ್ಪಾ ತಳವಾರ, ಬಸವರಾಜ್ ಕೆಂದೂರ್, ನೀಲಪ್ಪ ಅಸೂತಿ, ಬಾವಣ್ಣವರ, ಎಸ್.ಬಿ. ತೆಗ್ಗಿ ಇತರರು ಇದ್ದರು.

ಮಸ್ತಕದ ಆಸ್ತಿ ಪುಸ್ತಕ: ಶಾಸಕ ಸವದಿ

◆**ರಬಕವಿ-ಬನಹಟ್ಟಿ:** ಪುಸ್ತಕಗಳು ಅಮೂಲ್ಯ ಆಸ್ತಿಗಳಾಗಿದ್ದು, ಓದಿನಿಂದಲೇ ಎಲ್ಲವೂ ಸಾಧ್ಯ. ಕಲಿಕಾ ಸಂದರ್ಭ ನಿರ್ಲಕ್ಷ್ಯ ಮಾಡದೆ ಸಾಧನೆ ಗುರಿ ಮುಟ್ಟುವವರೆಗೂ ಪ್ರಯತ್ನ ವಿದ್ಯಾರ್ಥಿಗಳದ್ದಾಗಬೇಕು. ಇದೇ ಕಾರಣಕ್ಕೆ ನಾವಲಗಿಯಲ್ಲಿ ಅರಿವು ಡಿಜಿಟಲ್ ಗ್ರಂಥಾಲಯ ಕೇಂದ್ರ ತೆರೆದಿರುವದು ವಿಶೇಷವೆಂದು ಶಾಸಕ ಸಿದ್ದು ಸವದಿ ಕಿವಿ ಮಾತು ಹೇಳಿದರು.

ಭಾನುವಾರ ನಾವಲಗಿ ಗ್ರಾಮದಲ್ಲಿ ಶಿಕ್ಷಣ ರತ್ನ,ದಿ.ಜಿ.ಕೆ. ಹಿಪ್ಪರಗಿ ಸ್ಮರಣಾರ್ಥ ಅರಿವು ಡಿಜಿಟಲ್ ಗ್ರಂಥಾಲಯ ಉದ್ಘಾಟಿಸಿ ಮಾತನಾಡಿದರು, ಗ್ರಾಮಸ್ಥರು ಒಂದಾಗಿ ಅವರ ಹೆಸರಿನಲ್ಲಿ ಗ್ರಂಥಾಲಯ ಸ್ಥಾಪಿಸಿದ್ದು, ಪ್ರೀತಿ ಹಾಗೂ ಗೌರವದ ನಿದರ್ಶನವಾಗಿದೆ, ಇದರಿಂದ ವಿದ್ಯಾರ್ಥಿಗಳಿಗೆ ಓದಲು ಅನೂಕೂಲವಾಗಲಿದೆ, ವಿದ್ಯಾರ್ಥಿಗಳು ಕೂಡಾ ಮೊಬೈಲ್ ವ್ಯಾಮೋಹಕ್ಕೆ ಅಂಟಿಕೊಳ್ಳದೆ, ಇದರ ಸದುಪಯೋಗ ಪಡೆದುಕೊಳ್ಳಬೇಕೆಂದರು.

ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಮಾತನಾಡಿ, ಶಿಕ್ಷಣ ರತ್ನ, ದಿ. ಜಿ.ಕೆ. ಹಿಪ್ಪರಗಿಯವರ ಸೇವಾ ಮನೋಭಾವಹಾಗೂ ಸಮಾಜಮುಖಿ ಕಾರ್ಯಗಳು ಅಗಾಧವಾಗಿವೆ. ಅವರ ಹೆಸರಿನಲ್ಲಿ ಡಿಜಿಟಲ್ ಗ್ರಂಥಾಲಯ ಸ್ಥಾಪನೆ ಆಗಿದ್ದು, ನಿಜಕ್ಕೂ ಹೆಮ್ಮೆಯೆಂದರು.

ಕಾರ್ಯಕ್ರಮ ದಿವ್ಯ ಸಾನ್ನಿಧ್ಯವನ್ನು ಬಸಯ್ಯ ಹಿರೇಮಠ ವಹಿಸಿದ್ದರು, ಗುರುಪಾದಯ್ಯ ಮರಡಿಮಠ, ಕಾಶಿರಾಯ ಹಿಪ್ಪರಗಿ, ಗ್ರಾಪಂ ಮಾಜಿ ಅಧ್ಯಕ್ಷರಾದ ಹಣಮಂತ ಸವದಿ, ಆನಂದ ಕಂಪ್ಲು, ರೇಖಾ ಕಾಂತಿ, ದಾನಪ್ಪ ಆಸಂಗಿ, ಶಿವಪ್ಪ ವಾಲಿ, ಕಲ್ಮೇಶ ದೇವದಾಸ, ಅಲ್ಲಪ್ಪ ಮಗಳಖೋಡ, ಮಹಾಂತೇಶ ಬಿದರಿ, ಮಹೇಶ ಚಿಂಚಖಂಡಿ, ವಿಶ್ವನಾಥ ಬಡಚಿ, ಮಂಜು ಕಾಂತಿ, ಈರಪ್ಪ ಕಡಕಬಾವಿ, ಬಸು ಗಣಿ, ಗಂಗಪ್ಪ ಅಮ್ಮಲ್ಲಜೇರಿ, ಮುತ್ತು ಆಸಂಗಿ, ಸದಾಶಿವ ಅಂಗಡಿ ಸೇರಿದಂತೆ ಅನೇಕರಿದ್ದರು.

ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನ



◆**ಬೀಳಗಿ:** ತಾಲೂಕಿನ ಬಾಡಗಂಡಿಯ ಎಸ್.ಆರ್. ಪಾಟೀಲಎಜುಕೇಶನ್‌ಫೌಂಡೇಷನ್‌ನ ಬಾಪೂಜಿ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯದ 2025–26ನೇ ಸಾಲಿನ ದ್ವಿತೀಯ ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಎಸ್. ಆರ್. ಪಾಟೀಲ ಎಜುಕೇಶನ್ ಫೌಂಡೇಷನ್‌ದ ಅಧ್ಯಕ್ಷರು, ಮಾಜಿ ಸಚಿವ ಎಸ್.ಆರ್. ಪಾಟೀಲ ಅವರು ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರಶಂಸಿದರು.

ಈ ಸಂದರ್ಭದಲ್ಲಿ ಬಾಪೂಜಿ ಕಾಲೇಜ ಹಾಗೂ ಶಾಲೆಯ ಸಲಹೆಗಾರ ಎಚ್.ಬಿ. ಧರ್ಮಣ್ಣವರ, ಆಡಳಿತ ಅಧಿಕಾರಿ ರಾಘವೇಂದ್ರ ಪಾಟೀಲ, ಬಾಪೂಜಿ ಕಾಲೇಜ್ ಹಾಗೂ ಶಾಲೆಯ ಪ್ರಾಚಾರ್ಯರು ಶಿವಬೋಧ ಶೆಟ್ಟಿ ಹಾಗೂ ಉಪನ್ಯಾಸಕ ವೃಂದದವರು ಶುಭ ಕೋರಿದರು.

ಆರೋಗ್ಯಕರ ಜೀವನಕ್ಕೆ ವ್ಯಾಯಾಮ ಅವಶ್ಯ

◆**ಕಲಾದಗಿ:** ದೈನಿಕ ಜೀವನದಲ್ಲಿ ಮಾನಸಿಕ ಆರೋಗ್ಯದ ಜೊತೆಗೆ ಸಮತೋಲಿತ ಆಹಾರ ಮತ್ತು ನಿಯಮಿತ ವ್ಯಾಯಾಮ ಅತ್ಯವಶ್ಯವಾಗಿದ್ದು, ಆರೋಗ್ಯಕರ ಜೀವನಶೈಲಿಗಾಗಿ ನಾವೆಲ್ಲರೂ ನಮ್ಮ ದಿನಚರಿಯಲ್ಲಿ ಇವೆಲ್ಲವನ್ನು ರೂಢಿಸಿಕೊಳ್ಳಬೇಕು ಎಂದು ಡಾ.ಯಲ್ಲಪ್ಪ ಜಿ. ಹೇಳಿದರು.

ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ನಡೆದ ಆರೋಗ್ಯ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಾರೀರಿಕ ಮತ್ತು ಮಾನಸಿಕ ಆರೋಗ್ಯದ ಸಮತೋಲನವೇ ಸಮಗ್ರ ವ್ಯಕ್ತಿತ್ವ ನಿರ್ಮಾಣಕ್ಕೆ ಅಗತ್ಯ, ವಿದ್ಯಾರ್ಥಿಗಳು ನಿತ್ಯ ಜೀವನದಲ್ಲಿ ಆರೋಗ್ಯಕರ ಅಭ್ಯಾಸಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಸಮೂಹ ಸಂಪನ್ಮೂಲವ್ಯಕ್ತಿಗಳಾಗಿಕಲಾದಗಿಪ್ರಾಥಮಿಕಆರೋಗ್ಯಕೇಂದ್ರದಸಿಬ್ಬಂದಿಗಳಾದ ಮಂಜುನಾಥ ಚಿನಗುಂಡಿ ಮತ್ತು ಶಾಂತಾ ಚೌದರಿ ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಬಿ.ಮಹಾಂತೇಶ ಮಾತನಾಡಿದರು. ಉಪನ್ಯಾಸದ ನಂತರ ಆರೋಗ್ಯ ಸಿಬ್ಬಂದಿಗಳ ಜೊತೆ ವಿದ್ಯಾರ್ಥಿಗಳ ಸಂವಾದ ಕಾರ್ಯಕ್ರಮ ನಡೆಯಿತು. ಡಾ.ಲೋಕಣ್ಣ ಭಜಂತ್ರಿ ಸ್ವಾಗತಿಸಿದರು, ಡಾ.ಮುಂಡಲೀಕ ಹುನ್ನಳ್ಳಿ ನಿರೂಪಿಸಿದರು, ಡಾ.ಕೆ.ಎಂ.ಸಾರವಾನ ವಂದಿಸಿದರು. ವಿದ್ಯಾರ್ಥಿಗಳು, ಕಾಲೇಜಿನ ಭೋಧಕ ಭೋದಕೇತರ ಸಿಬ್ಬಂದಿಗಳು ಇದ್ದರು.



ಕಿರುಸುದ್ದಿ

ಮುಖ್ಯರಸ್ತೆ ಮೇಲೆ ಚರಂಡಿ ನೀರು: ದುರಸ್ತಿಗೆ ಆಗ್ರಹ

ಮುದ್ದೇಬಿಹಾಳ: ನಗರದ ಹುನುಗುಂದ ತಾಲೂಕು ಸಂಪರ್ಕಿಸುವ ರಾಜ್ಯ ರಸ್ತೆಯ ಪೈಪ್‌ಲೈನ್ ಹಲವು ಕಡೆ ಒಡೆದು ಸುಮಾರು ದಿನಗಳು ಕಳೆದರೂ, ದುರಸ್ತಿ ಆಗದೆ ಚರಂಡಿಗಳು ತುಂಬಿಕೊಂಡು ಒಳಚರಂಡಿ ಮ್ಯಾನ್ ಹೋಲ್ ಗಳ ಮೂಲಕ ಮಲೀನ ನೀರು ಹರಿದು ಹೋಗುತ್ತಿರುವುದಕ್ಕೆ ಸಾಮಾಜಿಕ ಕಾರ್ಯಕರ್ತ ಸಿದ್ದರಾಜ ಹೊಳಿ ಆಕ್ಷೇಪ ವ್ಯಕ್ತಪಡಿಸಿ, ಸಂಚಾರಕ್ಕೆ ಆಗುತ್ತಿರುವ ತೊಂದರೆಯನ್ನು ಸರಿಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ತಾಲೂಕಿನ ದೇವೂರ ಗ್ರಾಮದಿಂದ ಜ್ಞಾನಭಾರತಿ ಶಾಲೆ, ಡಿಸಿಸಿ ಬ್ಯಾಂಕ್ ಹಾಗೂ ವಿಬಿಸಿ ಹೈಸ್ಕೂಲ್ ವಾಣಿಜ್ಯ ಸಂಕೀರ್ಣದ ಮುಂಭಾಗದಲ್ಲಿ ಹಾದು ಹೋಗುವ ಮೊದಲ ಹಂತದ ನೀರು ಪೂರೈಕೆ ಪೈಪ್‌ಲೈನ್ ಗಳು ಕೆಲವು ದಿನಗಳಿಂದ, ಹಲವಾರು ಬಾರಿ ಒಡೆದು ಹೋಗುತ್ತಿವೆ. ಇದರಿಂದ ಹಲವು ಬಡಾವಣೆಗಳಿಗೆ ನೀರು ಪೂರೈಕೆ ವ್ಯತ್ಯಾಸ ಆಗಿದೆ, ಅಲ್ಲದೆ ಮೇಲಿಂದ ಮೇಲೆ ಪೈಪ್‌ಲೈನ್ ಒಡೆದು ಒಳ ಚರಂಡಿಗಳ ಮೂಲಕ ತುಂಬಿ ಹರಿಯುತ್ತಿದೆ. ವೆಂಕಟೇಶ್ವರ ಟೆಂಟ್ ಹೌಸ್ ಮುಂಭಾಗ ಹಾಗೂ ಕಿತ್ತೂರು ಚೆನ್ನಮ್ಮ ವೃತ್ತ ಭಾಗದಲ್ಲಿ ಕಳೆದ ಎರಡು ವಾರಗಳಿಂದ ನೀರು ತುಂಬಿ ಹರಿಯುತ್ತಲೇ ಇದೆ ಇದರಿಂದ ಪಾದಾಚಾರಿಗಳಿಗೆ ವಾಹನ ಸಂಚಾರಿಗಳಿಗೆ ಕಿರಿಕಿರಿ ಆಗುತ್ತಿದೆ ಎಂದಿರುವ ಅವರು ನಗರದಲ್ಲಿ ಪದೇ ಪದೇ ಒಳಚರಂಡಿ ತುಂಬಿಕೊಂಡು ಮಲೀನ ನೀರು ರಸ್ತೆಯಲ್ಲಿ ಹಾದು ಹೋಗುವುದರಿಂದ, ಚರಂಡಿ ನೀರು ಗಬ್ಬು ವಾಸನೆ ಹೊಡೆಯುತ್ತಿದೆ. ವ್ಯಾಪಾರಸ್ಥರು ಹೊಲಸು ವಾಸನೆಯಿಂದ ಬೇಸತ್ತಿದ್ದಾರೆ. ಸಂಬಂಧಪಟ್ಟ ಪುರಸಭೆ ಅಧಿಕಾರಿಗಳು ಈ ಕುರಿತು ಗಮನಹರಿಸಿ ಶೀಘ್ರದಲ್ಲಿ ಸಮಸ್ಯೆಯನ್ನು ಪರಿಹರಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಉತ್ತಮ ಸಾಧನೆ



ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದ ರಾಮಪ್ಪ ನಾವಿ ಅವರ ಸುಪುತ್ರ ಬೀದರ ಜಿಲ್ಲೆಯ ಬಾಲ್ಕಿ ತಾಲೂಕಿನ ಕರಡ್ಯಾಳ ಶ್ರೀ ಚನ್ನಬಸವೇಶ್ವರ ಗುರುಕುಲ ವಿಜ್ಞಾನ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಶ್ರೇಯಸ್ ರಾಮಪ್ಪ ನಾವಿ ಅವರು 600 ಅಂಕಗಳಿಗೆ 547 ಅಂಕಗಳನ್ನು ಪಡೆದು ಶೇ. 91.16ರಷ್ಟು ಫಲಿತಾಂಶ ಪಡೆದು ಸಾಧನೆ ಮಾಡಿದ್ದಾರೆ.ವಿದ್ಯಾರ್ಥಿಗೆ ತಂಗಡಗಿ ಹಡಪದ ಅಪ್ಪಣ್ಣ ಮಹಾಸಂಸ್ಥಾನ ಮಠದ ಸ್ವಾಮೀಜಿ ಅನ್ನದಾನ ಭಾರತಿ ಅಪ್ಪಣ್ಣ ಸ್ವಾಮೀಜಿ ಸೇರಿ ಹಡಪದ ಸಮಾಜದ ಜಿಲ್ಲಾಧ್ಯಕ್ಷರು, ರಾಜ್ಯಾಧ್ಯಕ್ಷರು ನೌಕರರ ಸಂಘದ ಜಿಲ್ಲಾಧ್ಯಕ್ಷರು, ರಾಜ್ಯಾಧ್ಯಕ್ಷರು ಸೇರಿ ಪದಾಧಿಕಾರಿಗಳು ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿದ್ದಾರೆ.

ಬಿಎಲ್‌ಡಿಇ ಪಿಯು ಕಾಲೇಜು ಉತ್ತಮ ಸಾಧನೆ



ಬಸವನಬಾಗೇವಾಡಿ: ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಬಿಎಲ್‌ಡಿಇ ಪಿಯು ಕಾಲೇಜಿನಲ್ಲಿ 2026ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಫಲಿತಾಂಶದಲ್ಲಿ ವಿದ್ಯಾರ್ಥಿಗಳು ವಾಣಿಜ್ಯ ಮತ್ತು ವಿಜ್ಞಾನ ವಿಭಾಗದಲ್ಲಿ ಉತ್ತಮ ಸಾಧನೆ ಮಾಡುವುದರ ಮೂಲಕ ಕಾಲೇಜು ಹಾಗೂ ಸಂಸ್ಥೆಗೆ ಕೀರ್ತಿ ತಂದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಕು.ಆರತಿ ಬೀರಗೊಂಡ 600ಕ್ಕೆ 580 ಅಂಕಗಳನ್ನು ಪಡೆಯುವುದರ ಮೂಲಕ ಕಾಲೇಜಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಕು.ಸಂಗೀತಾ ನಾಗಠಾಣ 600ಕ್ಕೆ 576ಅಂಕಗಳೊಂದಿಗೆ ದ್ವಿತೀಯ ಸ್ಥಾನ, ಅರುಣ ಬೀರಗೊಂಡ 600ಕ್ಕೆ 572 ಅಂಕಗಳೊಂದಿಗೆ ತ್ರುತೀಯ ಸ್ಥಾನ, ಅಶ್ವಿನಿ ಗೊಳಸಂಗಿ 600ಕ್ಕೆ 549 ಅಂಕಗಳೊಂದಿಗೆ ಗಣಿತ ವಿಷಯದಲ್ಲಿ 100ಕ್ಕೆ 100ಅಂಕಗಳನ್ನು ಪಡೆದು ವಿಶಿಷ್ಟ ಸಾಧನೆ ಮಾಡಿದ್ದಾಳೆ.

ವಾಣಿಜ್ಯ ವಿಭಾಗದಲ್ಲಿ ಕು. ಸ್ವಾತಿ ಬಂಗಾರಿ 600ಕ್ಕೆ 569 ಅಂಕಗಳೊಂದಿಗೆ ಪ್ರಥಮ ಹಾಗೂ ವ್ಯವಹಾರ ಅಧ್ಯಯನ ಮತ್ತು ರಾಜ್ಯಶಾಸ್ತ್ರ ವಿಷಯದಲ್ಲಿ 100ಕ್ಕೆ 100ಅಂಕಗಳನ್ನು ಪಡೆದಿದ್ದಾಳೆ. ಸುಪ್ರಿತಾ ಮಾದರ 600ಕ್ಕೆ 549 ಅಂಕಗಳೊಂದಿಗೆ ದ್ವಿತೀಯ, ಜಯಶ್ರೀ ಬಳಬಟ್ಟಿ 600ಕ್ಕೆ 538 ತ್ರುತೀಯ ಸ್ಥಾನ ಪಡೆದಿರುತ್ತಾಳೆ. ಕು.ಅಂಕಿತಾ ಭಜಂತ್ರಿ ವ್ಯವಹಾರ ಅಧ್ಯಯನ ವಿಷಯದಲ್ಲಿ 100ಕ್ಕೆ 100 ಅಂಕಗಳನ್ನು ಪಡೆದಿದ್ದಾಳೆ. ಕಾಲೇಜಿನ ಫಲಿತಾಂಶ ವಿಜ್ಞಾನ ವಿಭಾಗದಲ್ಲಿ ಪ್ರತಿಶತ 96.72 ಹಾಗೂ ವಾಣಿಜ್ಯ ವಿಭಾಗದಲ್ಲಿ ಪ್ರತಿಶತ 100ಕ್ಕೆ 100 ಫಲಿತಾಂಶ ಬಂದಿದೆ. ವಿದ್ಯಾರ್ಥಿಗಳ ಈ ಅತ್ಯುತ್ತಮ ಸಾಧನೆಯನ್ನು ಕಂಡು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಡಾ. ರಾಘವೇಂದ್ರ ಕುಲಕರ್ಣಿ, ಪ್ರಾಚಾರ್ಯರಾದ ರಾಮಚಂದ್ರ ಅಂಬೋಜಿ ಪವಾರ ಸೇರಿ ಬೋಧಕ ಬೋಧಕೇತರ ಸಿಬ್ಬಂದಿಯವರು ಹರ್ಷವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.



ಮುದ್ದೇಬಿಹಾಳ: ನಗರದ ಹುನುಗುಂದ ತಾಲೂಕು ಸಂಪರ್ಕಿಸುವ ರಾಜ್ಯ ರಸ್ತೆಯ ಪೈಪ್‌ಲೈನ್ ಹಲವು ಕಡೆ ಒಡೆದು ಸುಮಾರು ದಿನಗಳು ಕಳೆದರೂ, ದುರಸ್ತಿ ಆಗದೆ ಚರಂಡಿಗಳು ತುಂಬಿಕೊಂಡು ಒಳಚರಂಡಿ ಮ್ಯಾನ್ ಹೋಲ್‌ಗಳ ಮೂಲಕ ಮಲೀನ ನೀರು ಹರಿದು ಹೋಗುತ್ತಿರುವ ದೃಶ್ಯ.

ಸಮಾಜದ ಬೆಳವಣಿಗೆಯ ಪ್ರಮುಖ ಶಕ್ತಿ ಶಿಕ್ಷಕರು

ತಾಳಿಕೋಟೆ: ಇಲ್ಲಿನ ಎಸ್.ಕೆ. ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಆಶ್ರಯು ಕಾಲೋನಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯು ಸೇವಾ ಯೋಜನೆ (ಎನ್‌ಎಸ್‌ಎಸ್) ವಿಶೇಷ ಶಿಬಿರದ ಐದನೇ ದಿನ ಶನಿವಾರ ಅರ್ಥಪೂರ್ಣ ಹಾಗೂ ಪ್ರೇರಣಾದಾಯಕ ಕಾರ್ಯಕ್ರಮಗಳೊಂದಿಗೆ ನಡೆಯಿತು.

ಶಿಬಿರದ ಅಂಗವಾಗಿ ಬೆಳಗ್ಗೆ ಎನ್‌ಎಸ್‌ಎಸ್ ಗೀತೆಯ ಗಾಯನ ಮತ್ತು ಯೋಗಾಭ್ಯಾಸ ನಡೆಸಲಾಯಿತು. ಬಳಿಕ ವಿದ್ಯಾರ್ಥಿಗಳು ಆಶ್ರಯ ಕಾಲೋನಿಯ ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸುವ ಮೂಲಕ ಶ್ರಮದಾನದಲ್ಲಿ ತೊಡಗಿಸಿಕೊಂಡು ಸಮಾಜಮುಖಿ ಚಟುವಟಿಕೆಗಳಿಗೆ ಕೈಜೋಡಿಸಿದರು.

'ಪ್ರಸ್ತುತ ಸಮಾಜದಲ್ಲಿ ಶಿಕ್ಷಕರ ಪಾತ್ರ' ವಿಷಯದ ಕುರಿತು ನಡೆದ ಉಪನ್ಯಾಸದಲ್ಲಿ ಮುಖ್ಯ ಭಾಷಣಕಾರರಾದ ಶ್ರೀಕಾಂತ ಪತ್ತಾರ ಅವರು, ಶಿಕ್ಷಕರು ಸಮಾಜದ ಬೆಳವಣಿಗೆಯ ಪ್ರಮುಖ ಶಕ್ತಿಯಾಗಿದ್ದು, ಜ್ಞಾನದಿಂದಲೇ ತಮ್ಮನ್ನು ಗುರುತಿಸಿಕೊಳ್ಳಬೇಕು ಎಂದು ತಿಳಿಸಿದರು. ಸಿ.ಆರ್. ಕತ್ತಿ ಅವರು ಉತ್ತಮ ತಯಾರಿ ಮತ್ತು ನಿಷ್ಠೆಯಿಂದ ಬೋಧನೆ ಮಾಡುವ ಅಗತ್ಯವಿದೆ ಎಂದು ಹೇಳಿದರು. ನವೀನ್ ಅವರು ಶಿಕ್ಷಕ-ವಿದ್ಯಾರ್ಥಿಗಳ ನಡುವೆ ಪರಸ್ಪರ ಗೌರವ ಬೆಳೆಸಬೇಕು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಯು.ಎನ್. ಮಂಗೊಂಡ ಅವರು ಶಿಕ್ಷಕರು ಕೇವಲ ಉದ್ಯೋಗಿಗಳು ಅಲ್ಲ, ನಿಸ್ವಾರ್ಥ ಸಮಾಜಸೇವಕರು ಎಂದು ಹೇಳಿದ್ದಾರೆ. ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ನಡೆಯಿತು. ಎನ್‌ಎಸ್‌ಎಸ್ ಶಿಬಿರಾರ್ಥಿಗಳು, ಸಿಬ್ಬಂದಿ ಹಾಗೂ ಗಣ್ಯರು ಉಪಸ್ಥಿತರಿದ್ದರು.



ತಾಳಿಕೋಟಿ: ಇಲ್ಲಿನ ಎಸ್.ಕೆ. ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಆಶ್ರಯ ಕಾಲೋನಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ವಿಶೇಷ ಶಿಬಿರದ ಐದನೇ ದಿನ ಶನಿವಾರ ಅರ್ಥಪೂರ್ಣ ಹಾಗೂ ಪ್ರೇರಣಾದಾಯಕ ಕಾರ್ಯಕ್ರಮಗಳೊಂದಿಗೆ ನಡೆಯಿತು.

ಹಾಸನದ ಶ್ರೀ ಶಿವಸುಜ್ಞಾನತೀರ್ಥ ಸ್ವಾಮೀಜಿ ಅಭಿಮತ

ಗುರು-ಶಿಷ್ಯರ ಸಂಬಂಧ ಆಯಸ್ಕಾಂತದಂತಿರಲಿ

ವಿಜಯಪುರ: ಗುರು ಶಿಷ್ಯರ ಸಂಬಂಧ ಹೇಗಿರಬೇಕೆಂದರೆ ಆಯಸ್ಕಾಂತದಂತಿರಬೇಕು. ಆಯಸ್ ಎಂದರೆ ಕಬ್ಬಿಣ, ಕಾಂತವೆಂದರೆ ಆಕರ್ಷಿಸುವಂತಹದು, ಹೀಗಾಗಿ ಈ ಅನ್ಯೋನ್ಯ ಸಂಬಂಧ ಗುರು ಶಿಷ್ಯರಲ್ಲಿ ಇರಬೇಕು ಎಂದು ಹಾಸನದ ಶ್ರೀ ಶಿವಸುಜ್ಞಾನತೀರ್ಥ ಮಹಾಸ್ವಾಮೀಜಿ ಹೇಳಿದರು.

ವಿಜಯಪುರದಲ್ಲಿ ಶ್ರೀ ಸದ್ಗುರು ಸಮರ್ಥ ರಂಗರಾವ ಮಹಾರಾಜರ ದಿವ್ಯ ಮೂರ್ತಿ ಪ್ರತಿಷ್ಠಾಪನೆ, ಧ್ಯಾನ ಮಂದಿರ ಲೋಕಾರ್ಪಣೆ ಅಂಗವಾಗಿ ಎರಡನೇಯ ದಿನ ನಡೆದ ಧರ್ಮಸಭೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು, ಪರುಷ ಮುಟ್ಟಿದ ಕಬ್ಬಿಣವೆಲ್ಲ ಬಂಗಾರವಾಗುವಂತೆ ಗುರುವಿನ ಆಶೀರ್ವಾದ ಪಡೆದ ಶಿಷ್ಯನ ಬದುಕು ಕೂಡ ಪಾವನವಾಗಿ ಹೋಗುತ್ತಿದೆ. ಮನುಷ್ಯ ಜನ್ಮ ದುರ್ಲಭವಾದುದು ಅದು ನಮಗೆ ಲಭಿಸಿದೆ ಎಂದರೆ ಅದು ನಮ್ಮ ಪೂರ್ವಪುಣ್ಯಗಳ ಸುಕೃತ ಫಲ. ಈ ಅಮೂಲ್ಯವಾದ ಮನುಷ್ಯ ಜನ್ಮವನ್ನು ಗುರುವಿನ ಕೃಪೆಯಿಂದ ಇಹಬಂಧನ ಕಳಚಿ ಕೊಂಡು ಮೋಕ್ಷ ಪ್ರಾಪ್ತಿ ಮಾಡಿಕೊಳ್ಳಬೇಕೆಂದರು. ಮುಕ್ತಿ ಮಾರ್ಗಕ್ಕೆ ಷಟ್‌ಸೋಪಾನಗಳಿದ್ದು ಅವುಗಳೆಂದರೆ ಕರ್ಮ, ಧರ್ಮ, ಭಕ್ತಿ, ವೈರಾಗ್ಯ, ಜ್ಞಾನ, ಮುಕ್ತಿಗಳಾಗಿದ್ದು ಅವುಗಳನ್ನು ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ತಂದು ಮುಕ್ತಿಯನ್ನು ಸಂಪಾದಿಸಬೇಕು, ಜೀವಾತ್ಮ-ಪರಮಾತ್ಮರ ಸಂಬಂಧಗಳು ಎರಡು ದೀಪಗಳ ಸಂಬಂಧದಂತೆ. ಅವು ಎರಡೂ ಬೇರೆ ಬೇರೆ ಅಲ್ಲ, ಅವು ಎರಡೂ ಒಂದೇ ಎಂದರು.



ಶ್ರೀ ಕಾಳಹಸ್ತೇಂದ್ರ ಮಹಾಸ್ವಾಮಿಗಳು ಕಟಪಾಡಿ ಆಶೀರ್ವಚನ ನೀಡಿ, ಭಕ್ತನಾದವನು ಗುರುವಿನ ಸೇವೆಯಲ್ಲಿದ್ದರೆ ಅವನಿಗೆ ಎಂದು ಕಷ್ಟಗಳು ಬರಲಾರವು. ಸಿರಿಸಂಪತ್ತಿಗೆ ಎಂದೂ ಕೊರತೆಯಾಗದು. ತಂದೆಯಂತೆ ಮಕ್ಕಳು ಕೂಡ ಧರ್ಮಮಾರ್ಗದಲ್ಲಿ ನಡೆದು ಸರ್ವ ಸಾಧಕರಿಗೂ ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯುವವರಿಗೆ ಧ್ಯಾನ ಮಂದಿರವನ್ನು, ಭಜನಾ ಮಂದಿರವನ್ನು ಸ್ಥಾಪಿಸಿದ್ದಾರೆ. ಅವುಗಳು ಸಾರ್ಥಕತೆಯನ್ನು ಪಡೆಯಬೇಕೆಂದರೆ ನಿತ್ಯ ಸಾಧಕರಾದ ನೀವು ಧ್ಯಾನ, ಭಜನೆ ಮಾಡಿ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳಬೇಕು ಎಂದರು.

ಶ್ರೀ ಪ್ರಣವಾನಂದ ಸ್ವಾಮಿಗಳು ಆಶೀರ್ವಚನ ನೀಡಿ, ಶ್ರೀ ಸ.ಸ. ರಂಗರಾವ ಮಹಾರಾಜರು ಜಗದಲ್ಲಿ ಭಗವನ್ನಾಮ ಸ್ಮರಣೆಯ ಬೀಜವನ್ನು ಬಿತ್ತಿದರು. ನಂಬಿ ಕರೆದಡೆ ಓ ಎನ್ನನೇ ಶಿವನು. ನಂಬದೆ ನಚ್ಚದೆ ಬರಿದೆ ಕರೆದರೆ ಒಲಿವನೇ ಅವನು ಎಂದು ಹೇಳುತ್ತ ದೇವನಲ್ಲಿ ಭಕ್ತನಿಗೆ ಶ್ರದ್ಧೆ ಬಲು ಮುಖ್ಯವಾದುದು ಅದಿಲ್ಲದೆ ಭಕ್ತಿಮಾರ್ಗ ಪಯಣದಲ್ಲಿ ಕಿಂಚಿತ್ತೂ ಮುಂದೆ ಸಾಗಲಾರದು ಎಂದರು.

ವೇದಬ್ರಹ್ಮ ಶ್ರೀ ಮೌನೇಶ್ವರ ಶರ್ಮಾ ಅವರು ಗುರುವಿನ ಮಹತ್ವವನ್ನು ಕುರಿತು ಉಪನ್ಯಾಸ ನೀಡಿದರು. ಶ್ರೀ ಪ್ರಣವ ಪ್ರಕಾಶ ಮಹಾರಾಜರು, ಜಗನ್ನಾಥ ಸ್ವಾಮಿಗಳು, ಸಾವಯವ ಬೀಜ ಪ್ರಮಾಣನ ಸಂಸ್ಥೆ ಮಾಜಿ ಅಧ್ಯಕ್ಷ ವಿಜುಗೌಡ ಪಾಟೀಲ, ಮಹೇಶ ಮನ್ವಾಚಾರಿ, ಕೆ. ಸುನಂದಾ, ಗೀತಾ ಶಿರವಾಳ, ಸುರೇಶ ಸಾತಲಗಾಂವ, ಭೀಮರಾವ ಅಟಪಟಕರ, ಲಕ್ಷ್ಮಣ ಪತ್ತಾರ, ಸಿದ್ದು ಬಡಿಗೇರ, ಅಮರ ಪೊದ್ದಾರ, ಸಂದೀಪ ಪತ್ತಾರ, ರೋಹಿತ ಮನ್ವಾಚಾರಿ, ಮೋಹನ ಸೋನಾರ, ಕಲ್ಲಪ್ಪ ಕೊಕಟನೂರ ಪಾಲ್ಗೊಂಡಿದ್ದರು.

ಶಾಸ್ತ್ರೋಕ್ತವಾಗಿ ನಡೆದ ಹೋಮ-ಹವನ

ಶ್ರೀ ಸದ್ಗುರು ಸಮರ್ಥ ರಂಗರಾವ ಮಹಾರಾಜರ ದಿವ್ಯ ಮೂರ್ತಿ ಪ್ರತಿಷ್ಠಾಪನೆ, ಧ್ಯಾನ ಮಂದಿರ, ವಾಸ್ತುಶಾಂತಿ ಕಳಸಾರೋಹಣ ಅಂಗವಾಗಿ ಹೋಮ-ಹವನ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧಾ-ಭಕ್ತಿ ಹಾಗೂ ಶಾಸ್ತ್ರೋಕ್ತವಾಗಿ ನೆರವೇರಿದವು.

ನವಜಾತ ಶಿಶುಗಳ ಆರೋಗ್ಯ ರಕ್ಷಣೆಯಲ್ಲಿ ಆಧುನಿಕ ಸ್ಪರ್ಶ: ಶಾಸಕ ಯತ್ನಾಳ

ವಿಜಯಪುರ: ಮೆಟ್ರೋ ನಗರದಲ್ಲಿ ಒದಗಿಸಲಾಗಿರುವ ಆರೋಗ್ಯ ಸೇವೆಗಳನ್ನು ವಿಜಯಪುರದ ಜೆಎಸ್‌ಎಸ್ ಆಸ್ಪತ್ರೆಯಲ್ಲಿಯೇ ಒದಗಿಸಲಾಗುತ್ತಿದ್ದು, ಆದರ ಭಾಗವಾಗಿ ಅತ್ಯಾಧುನಿಕ ನವಜಾತ ಶಿಶುಗಳ ತೀವ್ರ ನಿಗಾ ಘಟಕ, ದಂತಗಳ ಆರೋಗ್ಯಕ್ಕೆ ಸಂಬಂಧಿಸಿದ ಮ್ಯಾಕ್ಸಿಲೋಫಿಷಿಯಲ್ ಶಸ್ತ್ರಚಿಕಿತ್ಸೆ ಸಹ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ಹಾಗೂ ಜೆಎಸ್‌ಎಸ್ ಆಸ್ಪತ್ರೆಯ ಸಂಸ್ಥಾಪಕ ಬಸನಗೌಡ ಪಾಟೀಲ ಯತ್ನಾಳ ಪ್ರಕಟಿಸಿದರು.

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಕೈಗೊಳ್ಳಲಾಗುತ್ತಿರುವ ಆರೋಗ್ಯ ಸೇವೆಗಳ ಕುರಿತು ಮಾಧ್ಯಮ ಪ್ರತಿನಿಧಿಗಳಿಗೆ ವಿವರಣೆ ನೀಡಿದ ಅವರು, ವಿಜಯಪುರದಲ್ಲಿ ಎನ್ ಐಸಿಯುಘಟಕವನ್ನು ಆಧುನಿಕಸ್ಪರ್ಶದೊಂದಿಗೆ ಆರಂಭಿಸಲಾಗಿದ್ದು, ನವಜಾತ ಶಿಶುಗಳಿಗಳಿಗೆ ಸಕಲ ಆರೋಗ್ಯ ಸೌಲಭ್ಯಗಳು ದೊರಕಲಿವೆ, 24 ಗಂಟೆಗಳ ನಿಯೋನೇಟಾಲಜಿಸ್ಟ್, ಮಲ್ಟಿಪಾರಾ ಮಾನಿಟರ್, ಬಬಲ್ ಸಿಪಿಎಪಿ ಸೌಲಭ್ಯ ಸೇರಿದಂತೆ ವೈದ್ಯಕೀಯ ರಂಗದಲ್ಲಿ ಆದರಲ್ಲೂ ನವಜಾತ ಶಿಶುಗಳ ಆರೋಗ್ಯ ರಕ್ಷಣೆಯಲ್ಲಿ ಆಧುನಿಕ ಸ್ಪರ್ಶ ನೀಡಲಾಗಿದೆ ಎಂದರು.

ದಂತಗಳ ಆರೋಗ್ಯ ಸೇವೆ ಒದಗಿಸುವಲ್ಲಿಯೂ ಜೆಎಸ್‌ಎಸ್ ಮುನ್ನಡೆ ಇರಿಸಿದೆ, ಅತ್ಯಾಧುನಿಕ ದಂತ ಹಾಗೂ ಮ್ಯಾಕ್ಸಿಫೇಷಿಯಲ್ ಶಸ್ತ್ರಚಿಕಿತ್ಸೆ ಸಹ ಇಲ್ಲಿ ಆರಂಭಿಸಲಾಗಿದೆ, ದೊಡ್ಡ ಮಹಾನಗರಗಳಲ್ಲಿ ಲಭ್ಯವಿದ್ದಈಚಿಕಿತ್ಸೆಈಗವಿಜಯಪುರದಲ್ಲಿಯೇ ಲಭ್ಯವಿದೆ ಎಂದರು.

24★7 ಟ್ರಾಮಾ ಸೆಂಟರ್ ಸಹ ಕಾರ್ಯನಿರ್ವಹಿಸುತ್ತಿದ್ದು, ರಾಷ್ಟ್ರೀಯ ಹೆದ್ದಾರಿಗಳ ಅಪಘಾತ ಪೀಡಿತರಿಗೆ ಪಿ.ಎಂ. ರಾಹತ್ ಯೋಜನೆಯಡಿಯಲ್ಲಿ ಅರ್ಹರಿಗೆ ಉಚಿತ ಚಿಕಿತ್ಸೆ ಸಹ ಒದಗಿಸಲಾಗುತ್ತಿದೆ ಎಂದು ವಿವರಿಸಿದರು.

ನಮ್ಮದೇ ಸ್ವಂತ ಕಾಲೇಜು ಮಾಡಿದರೆ, ನಮಗೆ ಹೆಚ್ಚು ಅನುಕೂಲವಾಗಲಿದೆ, ಪಿಪಿಪಿ ಮಾದರಿಯಾದರೆ ಸರ್ಕಾರ ಹೇಳಿದಂತೆ ನಾವು ಕೇಳಬೇಕಾಗುತ್ತದೆ. ಹೀಗಾಗಿ 2028ಕ್ಕೆ ಮೊದಲ ಬ್ಯಾಚ್ ಆರಂಭಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಕಟ್ಟಡ ನಿರ್ಮಾಣ ಕಾಮಗಾರಿ ಆರಂಭಿಸಲಾಗುವುದು. 500 ಕೋಟಿ ರೂ. ವೆಚ್ಚದಲ್ಲಿ ಎಲ್ಲ ಸೌಲಭ್ಯಗಳನ್ನು ಮಾಡಿಕೊಳ್ಳಲಾಗುತ್ತದೆ ಎಂದರು.





ಇಂಡಿ: ತಾಲೂಕಿನ ನಾದ ಗ್ರಾಮದಲ್ಲಿ ಸಿದ್ಧಸಿರಿ ಸೌಹಾರ್ದ ನೂತನ ಸಹಕಾರಿ ಸೌಹಾರ್ದ ಕಟ್ಟಡವನ್ನು ವಿಜಯಪುರ ಶಾಸಕ ಬಸನಗೌಡ ಪಾಟೀಲ ಉದ್ಘಾಟಿಸಿದರು. ಸಾಲೋಟಗಿಯ ಜ್ಞಾನ ಯೋಗಾಶ್ರಮ ಶ್ರೀ ಸಿದ್ಧೇಶ್ವರ ಗುರುದೇವಾಶ್ರಮದ ಸಂಗಮೇಶ್ವರ ಶ್ರೀಗಳು, ನಾದ ಕೆಡಿ ಸಂಸ್ಥಾನ ಮಠದ ಶಿವಾನಂದ ಶಿವಾಚಾರ್ಯರರು, ಗೋಳಸಾರದ ಅಭಿನವ ಪುಂಡಲಿಂಗ ಶಿವಯೋಗಿಗಳು ಪ್ರಭುಗೌಡ ದೇಸಾಯಿ, ನಂದಿ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಉಪ್ಪಾರ, ದಯಾಸಾಗರ ಪಾಟೀಲ, ಗ್ರಾಪಂ ಅಧ್ಯಕ್ಷ ಸಿದರಾಯ ಐರೋಡಗಿ, ಮಲ್ಲನಗೌಡ ಪಾಟೀಲ ಗೋಳಸಾರ, ಹಣಮಂತರಾಯಗೌಡ ಪಾಟೀಲ ಶಿರಶ್ಯಾಡ, ಬಸವರಾಜ ಅಂಕದ, ಬಸವರಾಜ ಬಿರಾದಾರ, ಅನೀಲ ಅಳ್ಳಗಿ, ಸಿದ್ರಾಮಗೌಡ ಬಿರಾದಾರ, ಶ್ರೀಮಂತ ಕಸ್ಕಿ, ಚಂದ್ರಶೇಖರ ತೆಗ್ಗೆಳ್ಳಿ, ಸಂಗನಬಸಪ್ಪ ಸಜ್ಜನ, ಶಿವಾನಂದ ಅಣ್ಣೆಪ್ಪನವರ, ಬಸನಗೌಡ ಪಾಟೀಲ ಮತ್ತಿತರಿದ್ದರು.

ಬ್ಯಾಂಕ್, ಫೈನಾನ್ಸ್‌ಗಳಲ್ಲಿ ಡಾ. ಅಂಬೇಡ್ಕರ್ ಆಚರಿಸಲು ಮನವಿ

ಸಿಂದಗಿ: ಆರ್‌ಬಿಐ ಅಧೀನದಲ್ಲಿ ಬರುವ ಪಿಕೆಪಿಎಸ್, ಡಿಸಿಸಿ ಬ್ಯಾಂಕ್, ಫೈನಾನ್ಸ್‌ಗಳಲ್ಲಿ ಏ.14ರಂದು ಡಾ. ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸುವಂತೆ ಆದೇಶ ನೀಡಬೇಕು ಎಂದು ಭೀಮ ಸೇನೆ ಕರ್ನಾಟಕ ಸಂಘಟನೆ ಪದಾಧಿಕಾರಿಗಳು ತಹಶೀಲ್ದಾರ್ ಕರೆಪ್ಪ ಬೆಳ್ಳಿ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಭೀಮ್ ಸೇನೆ ಕರ್ನಾಟಕ ರಾಜ್ಯ ಉಪಾಧ್ಯಕ್ಷ ಅನಿಲ ಹೊಸಮನಿ, ಸಮಾಜ ಹೋರಾಟಗಾರ ಹರ್ಷವರ್ಧನ ಪೂಜಾರಿ ಮಾತನಾಡಿ, ಸಿಂದಗಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಆರ್‌ಬಿಐ ಅಧೀನದಲ್ಲಿ ಬರುವ ಪಿಕೆಪಿಎಸ್, ಡಿಸಿಸಿ ಬ್ಯಾಂಕ್, ಫೈನಾನ್ಸ್‌ಗಳಲ್ಲಿ ಏ.14 ರಂದು ಕಡ್ಡಾಯವಾಗಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಆಚರಿಸುವಂತೆ ಲಿಖಿತ ರೂಪದಲ್ಲಿ ಆದೇಶ ನೀಡಬೇಕು ಎಂದು ಮನವಿ ಮಾಡಿಕೊಂಡರು.

ಮನವಿ ಸ್ವೀಕರಿಸಿ ತಹಶೀಲ್ದಾರ್ ಕರೆಪ್ಪ ಬೆಳ್ಳಿ ಮಾತನಾಡಿ, ಆರ್‌ಬಿಐ ಅಧೀನದಲ್ಲಿ ಬರುವ ಆರ್ಥಿಕ ವ್ಯವಹಾರ ಸಂಸ್ಥೆಗಳಲ್ಲಿ ಏ.14ರಂದು ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಆದೇಶ ಆಚರಿಸುವಂತೆ ನೀಡಲಾಗುವುದು ಎಂದು ಭರವಸೆ ನೀಡಿದರು. ಈ ವೇಳೆ ತಾಲೂಕಾಧ್ಯಕ್ಷ ಪ್ರಜ್ವಲ್ ಮಲ್ಲಾರಿ, ದ್ಯಾವಪ್ಪ ಕುದರಗುಂಡ, ಲಕ್ಷ್ಮಣ ಓಲೇಕಾರ ಸೇರಿದಂತೆ ಇತರರು ಇದ್ದರು.



ಖ್ಯಾತ ಗಾಯಕಿ ಆಶಾ ಭೋಸ್ಲೆ ನಿಧನಕ್ಕೆ ಸಂತಾಪ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿಜಯಾ ಕೋರಿಶೆಟ್ಟಿ ಅವರು ಖ್ಯಾತ ಹಿನ್ನೆಲೆ ಗಾಯಕಿ ಆಶಾ ಭೋಸ್ಲೆ ಅವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಭಾರತೀಯ ಸಂಗೀತ ಕ್ಷೇತ್ರದ ಅನನ್ಯ ಕಂಠಧ್ವನಿಯೊಂದು ಮೌನವಾಗಿದ್ದು, ದೇಶದ ಸಾಂಸ್ಕೃತಿಕ ಲೋಕಕ್ಕೆ ಅಪಾರ ನಷ್ಟ ಉಂಟಾಗಿದೆ ಎಂದು ಅವರು ತಿಳಿಸಿದ್ದಾರೆ.

ಅನೇಕ ದಶಕಗಳ ಕಾಲ ತಮ್ಮ ಸುಮಧುರ ಗಾಯನದಿಂದ ಭಾರತೀಯ ಚಿತ್ರರಂಗ ಹಾಗೂ ಸಂಗೀತಾಭಿಮಾನಿಗಳ ಮನಗೆದ್ದ ಆಶಾ ಭೋಸ್ಲೆ ಅವರು ಸಂಗೀತ ಕ್ಷೇತ್ರದ ದಿಗ್ಗಜರಾಗಿದ್ದು, ಅವರ ಸಾಧನೆ ಭಾರತೀಯ ಸಂಗೀತ ಇತಿಹಾಸದಲ್ಲಿ ಸದಾ ಅಜರಾಮರವಾಗಿರಲಿದೆ ಎಂದು ಕುಲಪತಿಗಳು ಅಭಿಪ್ರಾಯಪಟ್ಟಿದ್ದಾರೆ. ವಿಶ್ವವಿದ್ಯಾಲಯದ ಸಮಸ್ತ ಕುಟುಂಬದ ಪರವಾಗಿ ಆಶಾ ಭೋಸ್ಲೆ ಅವರ ಕುಟುಂಬಸ್ಥರು, ಅಭಿಮಾನಿಗಳು ಹಾಗೂ ಸಂಗೀತಲೋಕದ ಸದಸ್ಯರಿಗೆ ಸಂತಾಪ ಸೂಚಿಸಿರುವ ಪ್ರೊ. ವಿಜಯಾ ಕೊರಿಶೆಟ್ಟಿ ಅವರು, ಪರಮಾತ್ಮನು ಅಗಲಿದ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

ಶಿವಶರಣ ಹಡಪದ ಅಪ್ಪಣ್ಣನವರ ಮೂರ್ತಿ ಪ್ರತಿಷ್ಠಾಪಿಸಲು ಮನವಿ

ಇಂಡಿ: ಬೀದರ ಜಿಲ್ಲೆಯ ಬಸವಕಲ್ಯಾಣದಲ್ಲಿರುವ ಅನುಭವ ಮಂಟಪದ ತ್ರಿಪುರಾಂತಕ ಕೆರೆ ಹತ್ತಿರ 12ನೇ ಶತಮಾನದ ಅನೇಕ ಬಸವಾದಿ ಶರಣರ ಅರಿವಿನ ಗವಿಗಳು ಇರುವುದಾಗಿ ಇತಿಹಾಸ ಸಾರುತ್ತಿದೆ. ಆದರೆ ಶಿವಶರಣ ಹಡಪದ ಅಪ್ಪಣ್ಣನವರ ಅರಿವಿನ ಗವಿಯನ್ನು ಬಸವೇಶ್ವರ ದೇವಸ್ಥಾನದ ಪಂಚಕಮಿಟಿಯವರು ಹಸ್ತಕ್ಷೇಪ ಮಾಡಿ ಅನ್ಯ ಶರಣರ ಮೂರ್ತಿಯನ್ನು ಅಕ್ರಮವಾಗಿ ಪ್ರತಿಷ್ಠಾಪನೆ ಮಾಡಿದ್ದಾರೆ. ಆದ್ದರಿಂದ ಇದನ್ನು ತೆರವುಗೊಳಿಸಿ ತ್ವರಿತವಾಗಿ ಶಿವಶರಣ ಹಡಪದ ಅಪ್ಪಣ್ಣನವರ ಮೂರ್ತಿ ಪ್ರತಿಷ್ಠಾಪಿಸಬೇಕು ಎಂದು ನಗರದ ಶ್ರೀ ಹಡಪದ ಅಪ್ಪಣ್ಣವರ ವಿವಿಧ ಉದ್ದೇಶಗಳ ಸಹಕಾರಿ ಸಂಘದ ಆಡಳಿತ ಮಂಡಳಿಯವರು ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪತ್ರವನ್ನು ತಹಶೀಲ್ದಾರ್ ಬಿ.ಎಸ್. ಕಡಕಬಾವಿ ಅವರಿಗೆ ಸಲ್ಲಿಸಿ ಒತ್ತಾಯಿಸಿದರು.

ಇದರಿಂದ ಹಡಪದ ಅಪ್ಪಣ್ಣನವರಿಗೆ ಮತ್ತು ನಮ್ಮ ಸಮುದಾಯದ ಭಕ್ತಿ ಭಾವನೆಗಳಿಗೆ ಅನ್ಯಾಯವಾಗಿದ್ದು ನಮ್ಮ ಇತಿಹಾಸದ ಮೌಲ್ಯಗಳನ್ನು ಕುಗುವಂತಾಗಿದೆ. ಹಡಪದ ಅಪ್ಪಣ್ಣನವರ ವಂಶಸ್ಥರಾದ ನಮಗೆ ಧಕ್ಕೆಯನ್ನುಂಟು ಮಾಡಿದ್ದು ಈಗಾಗಲೆ ಈ ಕುರಿತು ಸಮುದಾಯದ ಮುಖಂಡರು ಸಾಕಷ್ಟು ಬಾರಿ ಮನವಿ ಮಾಡಲಾಗಿದೆ. ಆದ್ದರಿಂದ ದಯವಿಟ್ಟು ಯಥಾಸ್ಥಿಗೆ ತಂದು ಆ ಸ್ಥಳವನ್ನು ಬಸವಕಲ್ಯಾಣ ಪ್ರಾಧಿಕಾರಕ್ಕೆ ಸೇರಿಸಿ ಅಭಿವೃದ್ಧಿ ಪಡಿಸಬೇಕು ಎಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ.

ಸಂಘದ ಅಧ್ಯಕ್ಷ ಸಂತೋಷ ಗೌಳಿ, ಉಪಾಧ್ಯಕ್ಷ ಶೀವಾನಂದ ನಾವಿ, ಸಿದ್ದು ನಾವಿ, ಕಾರ್ಯದರ್ಶಿ ಸಿದರಾಯ ಅಪ್ಪಾಗಿರಿ, ನಟರಾಜ ಗೌಳಿ, ಅಶೋಕ ಹಡಪದ, ಧುಳಪ್ಪ ನಾವಿ, ಬಾಳು ಗೌಳಿ, ಅಂಬಣ್ಣಾ ಹಡಪದ, ರಮೇಶ ನಾವಿ ಇದ್ದರು.



ರೈತರ ಏಳ್ಗೆಗಾಗಿ ಸರ್ಕಾರ ಸದಾ ಸಿದ್ಧ: ಶಾಸಕ ಸಿ.ಎಸ್.ನಾಡಗೌಡ

ನಾಲತವಾಡ: ರೈತರಿಗೆ ಅನುಕೂಲ ವಾಗಲು ನಮ್ಮ ಸರ್ಕಾರ ಸದಾ ಸಿದ್ಧವಾಗಿದೆ. ರೈತರ ಜಮೀನಿಗೆ ಸುಲಭ ವಾಗಿ ತೆರಳಲು ರಸ್ತೆ ನಿರ್ಮಾಣಕ್ಕೆ ಅಗತ್ಯ ಅನುದಾನವನ್ನು ಬಿಡುಗಡೆಮಾಡಲಾಗಿದೆ ಎಂದು ಕೆಎಸ್ಡಿಎಲ್ ನಿಗಮದ ಅಧ್ಯಕ್ಷರು ಹಾಗೂ ಶಾಸಕ ಸಿ.ಎಸ್.ನಾಡಗೌಡ ಅಪ್ಪಾಜಿ ಹೇಳಿದರು.

ಸ್ಥಳೀಯ ನಾಲತವಾಡ-ಹನ್ನೆರಡಕುಂಟಿ ರಸ್ತೆಯ ಸುಮಾರು 1 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಅಭಿವೃದ್ಧಿಗೆ ರಸ್ತೆ ಸಂಪರ್ಕ ಅತ್ಯಂತ ಮುಖ್ಯವಾಗಿದೆ. ರೈತರ ದೈನಂದಿನ ಚಟುವಟಿಕೆಗಳಿಗೆ ಸುಗಮ ಮಾರ್ಗಗಳ ಅಗತ್ಯವಿದ್ದು, ಈ ರಸ್ತೆ ನಿರ್ಮಾಣದಿಂದ ಜಮೀನಿಗೆ ತೆರಳುವುದು ಸುಲಭವಾಗುವುದರ ಜೊತೆಗೆ ಕೃಷಿ ಉತ್ಪನ್ನಗಳ ಸಾಗಣೆಯೂ ವೇಗವಾಗಲಿದೆ ಎಂದರು.

ಸರ್ಕಾರ ಗ್ರಾಮೀಣ ಮೂಲಸೌಕರ್ಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದು, ಇನ್ನೂ ಹಲವು ಅಭಿವೃದ್ಧಿ ಕಾಮಗಾರಿ ಗಳನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾ ಗುವುದು ಎಂದು ಭರವಸೆ ನೀಡಿದರು.

ಈ ವೇಳೆ ದಿ. ಜೆ.ಎಸ್. ದೇಶಮುಖ ಅವರ ಪುತ್ರಿ ನಂದಿನಿ ದೇಶಮುಖ ಮಾತನಾಡಿ,ರೈತರಿಗೆಅನುಕೂಲವಾಗುವ ನಿಟ್ಟಿನಲ್ಲಿ ಶಾಸಕರು ರಸ್ತೆ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಿದ್ದಾರೆ. ರೈತರು ಯಾವುದೇ ತಕರಾರು ಮಾಡದೇ ಸಹಕಾರ ನೀಡಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸಹಕರಿಸಬೇಕು. ಒಂದು ವೇಳೆ ಅನುದಾನ ಕೊರತೆ ಕಂಡುಬಂದರೆ ಮತ್ತಷ್ಟು ಅನುದಾನ ನೀಡುವ ಭರವಸೆ ಶಾಸಕರು ನೀಡಿದ್ದಾರೆ ಎಂದು ತಿಳಿಸಿದರು.

ಸನ್ಮಾನ: ಶಾಸಕರಾದ ಸಿ.ಎಸ್ .ನಾಡಗೌಡ ಅಪ್ಪಾಜಿ ಹಾಗೂ ನಂದಿನಿ ದೇಶಮುಖ ಅವರನ್ನು ರೈತರು ಸನ್ಮಾನಿಸಿದರು.

ಪ.ಪಂ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಪೃಥ್ವಿರಾಜ್ ನಾಡಗೌಡ, ಮುಖಂಡರಾದ ಶಂಕರರಾವ ದೇಶಮುಖ, ಗುರುಪ್ರಸಾದ ದೇಶಮುಖ, ಬಿ.ಬಿ. ಪಾಟೀಲ, ರಾಯನ ಗೌಡ ತಾತರೆಡ್ಡಿ, ಎ.ಜಿ. ಗಂಗನಗೌಡರ, ಉಪಾಧ್ಯಕ್ಷ ಬಸವರಾಜ ಗಂಗನಗೌಡರ, ಸದಸ್ಯರಾದ ಸಂಗಣ್ಣ ಬಾರಡ್ಡಿ, ಬಾಬು ಕ್ಷತ್ರಿ, ಸಿದ್ದಣ್ಣ ಆಲಕೊಪ್ಪರ, ರೈತರಾದ ಖಾಜಾಹುಸೇನ ಖತೀಬ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನಂತರನಾಲತವಾಡ-ಹನ್ನೆರಡಕುಂಟಿ ರಸ್ತೆ ಭೂಮಿ ಪೂಜೆ ಬಳಿಕ ಲೋಟಗೇರಿ ಬೈಲಹನುಮಪ್ಪನವರೆಗೆ 2025-26ನೇ ಸಾಲಿನ ಮುಖ್ಯಮಂತ್ರಿ ಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಅಂದಾಜು 50 ಲಕ್ಷ ರೂ. ವೆಚ್ಚದ ರಸ್ತೆ ಸುಧಾರಣೆ ಕಾಮಗಾರಿಗೂ ಭೂಮಿ ಪೂಜೆ ನೆರವೇರಿಸಲಾಯಿತು.

ನಂತರ ಬಲದಿನ್ನಿ ಗ್ರಾಮದಿಂದ ನಾಲತವಾಡದವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಸುಧಾರಣೆ ಕಾಮಗಾರಿಗೂ ಭೂಮಿ ಪೂಜೆ ನಡೆಸಿದರು. 2025?26ನೇ ಸಾಲಿನ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಅಂದಾಜು 1.70 ಕೋಟಿ ರೂ. ವೆಚ್ಚದ ರಸ್ತೆ ಸುಧಾರಣೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಈ ವೇಳೆ ಪ.ಪಂ ಮಾಜಿ ಅಧ್ಯಕ್ಷ ಹಾಗೂ ಸದಸ್ಯ ಪೃಥ್ವಿರಾಜ್ ನಾಡಗೌಡ, ಗುರುಮೂರ್ತಿ ಕಣಕಾಲಮಠ, ಸರೂರ ವಕೀಲರು ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದರು.



ಪ್ರಜಾಸೌಧ ಸ್ಥಳ ವಿವಾದ: 48ನೇ ದಿನಕ್ಕೆ ಮುಂದುವರಿದ ಧರಣಿ

ತಾಳಿಕೋಟೆ: ತಾಲೂಕಿನ ಮೈಲೇಶ್ವರ ಗ್ರಾಮದ ಸಮೀಪ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳವನ್ನು ವಿರೋಧಿಸಿ ತಾಳಿಕೋಟೆ ತಾಲೂಕು ಹೋರಾಟ ಸಮಿತಿಯಿಂದ ನಡೆಯುತ್ತಿರುವ ಧರಣಿ ಸತ್ಯಾಗ್ರಹವು ಭಾನುವಾರಕ್ಕೆ 48ನೇ ದಿನಕ್ಕೆ ಕಾಲಿಟ್ಟಿದೆ.

ಪಟ್ಟಣದಿಂದ ಸುಮಾರು 4-5 ಕಿಲೋಮೀಟರ್ ದೂರದಲ್ಲಿರುವ ನಿರ್ಜನ ಪ್ರದೇಶದಲ್ಲಿ ಪ್ರಜಾಸೌಧ ನಿರ್ಮಿಸಲು ತಾಲೂಕು ಆಡಳಿತ ತೆಗೆದುಕೊಂಡಿರುವ ನಿರ್ಧಾರಕ್ಕೆ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಈ ಸ್ಥಳದ ಆಯ್ಕೆಯಿಂದ ರೈತರು, ವೃದ್ಧರು ಮಹಿಳೆಯರು, ವಿದ್ಯಾರ್ಥಿಗಳಿಗೆ ಹಾಗೂ ಸಾಮಾನ್ಯ ನಾಗರಿಕರಿಗೆ ಅನಾನುಕೂಲ ಉಂಟಾ ಗಲಿದೆ ಎಂಬುದು ಹೋರಾಟಗಾರರ ಪ್ರಮುಖ ಆರೋಪವಾಗಿದೆ.

ಹೋರಾಟ ಸಮಿತಿಯ ಸಹ ಕಾರ್ಯದರ್ಶಿ ಮಹೇಶ ಛಲವಾದಿ ಮಾತನಾಡಿ, ಕಳೆದ ಹಲವು ದಿನಗಳಿಂದ ಶಾಂತಿಯುತವಾಗಿ ಧರಣಿ ನಡೆಸುತ್ತಿದ್ದರೂ ಸ್ಥಳೀಯ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಸ್ಥಳಕ್ಕೆ ಭೇಟಿ ನೀಡದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ತಾಲೂಕಿನ ಎಲ್ಲಾ ಸಮಾಜದ ಮುಖಂಡರು, ಸಂಘ-ಸಂಸ್ಥೆಗಳು ಹಾಗೂ ಸಾರ್ವಜನಿಕರು ನಿರಂತರವಾಗಿ ಹೋರಾಟ ನಡೆಸುತ್ತಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯ ಸ್ಪಷ್ಟವಾಗಿ ಕಾಣುತ್ತಿದೆ ಎಂದು ಅವರು ಹೇಳಿದರು.

ಹೋರಾಟಗಾರರು ಅಧಿಕಾರಿಗಳು ಸಮಸ್ಯೆಯನ್ನು ಆಲಿಸದೆ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ತಕ್ಷಣವೇ ಸರ್ಕಾರ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ನ್ಯಾಯಯುತ ನಿರ್ಧಾರ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಸಮಸ್ಯೆಗೆ ಶೀಘ್ರ ಪರಿಹಾರ ದೊರೆಯದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟಕ್ಕೆ ಮುಂದಾಗುವುದಾಗಿ ಹೋರಾಟ ಸಮಿತಿ ಎಚ್ಚರಿಕೆ ನೀಡಿದೆ.

ಈ ಸಂದರ್ಭದಲ್ಲಿ ಹೋರಾಟ ಸಮಿತಿಯ ಅಧ್ಯಕ್ಷ ದಶರಥಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಆರ್ ಎಸ್ ಪಾಟೀಲ (ಕುಚಬಾಳ) ಮುತ್ತಪ್ಪ ಚಮಲಾಪುರ, , ಕಾಶೀನಾಥ ಮುರಾಳ, ಮಾಸುಮಸಾಬ ಕೆಂಭಾವಿ, ಮುರಿಗೆಪ್ಪ ಸರಶೆಟ್ಟಿ, ಮಾದೇವಿ ಬಳಗಾನೂರ, ಶಕುಂತಲಾ, ಕಾವೇರಿ ಕಟ್ಟಿಮನಿ, ಸುಮಂಗಲ ಪಾಟೀಲ, ದತ್ತು ಹೆಬಸೂರ, ಮೈನು ಬೆಪಾರಿ, ಪರಶುರಾಮ ತಂಗಡಗಿ, ನಾಗೇಶ ಕಟ್ಟಿಮನಿ, ದೇವೇಂದ್ರ ಹಾದಿಮನಿ, ವಿಜಯಸಿಂಗ್ ಹಜೇರಿ, ರಾಮಣ್ಣ ಕಟ್ಟಿಮನಿ,ಪ್ರಭುಗೌಡ ಪಾಟೀಲ ಬಳಗಾನೂರ, ಸಂಜು ಬರದೇನಾಳ, ಕಳಕುಸಾ ರಂಗರೇಜ್, ಸುರೇಶ ಹಜೇರಿ, ಮಹಿಂದ್ರಕರ ಮಹೇಶ ಛಲವಾದಿ, ಪ್ರಕಾಶ್ ಹಜೇರಿ ಮುದಕಪ್ಪ ಬಡಿಗೇರ, ಸಿರಸಕುಮಾರ ಹಜೇರಿ, ಸುರೇಶ ಪುಲುಸ್, ಅಮಿತಸಿಂಗ್ ಮನಗೂಳಿ, ಮಲ್ಲು ಮೇಟಿ, ಸದ್ದಾಂ ಹುಸೇನ್ ಬೀಳಗಿ, ಸೇರಿದಂತೆ ಅನೇಕರು ಮತ್ತು ಪಟ್ಟಣದ ಗಣ್ಯರು ಭಾಗವಹಿಸಿದ್ದರು.



ಕಿರುಸುದ್ದಿ

ಪಿಯು ವಿದ್ಯಾರ್ಥಿನಿ ಸಂಗೀತಾಳಿಗೆ ಸನ್ಮಾನ

ಯಲಬುರ್ಗಾ: ಕುಕನೂರು ತಾಲೂಕಿನ ಮಂಗಳೂರ ಗ್ರಾಮದ ಶೇಖರಗೌಡ ಪೋಲಿಸ್ ಪಾಟೀಲ್ ಅವರ ಮಗಳಾದ ಕು.ಸಂಗೀತಾ ಪೋಲಿಸ್ ಪಾಟೀಲ ಇವರು ಪಿಯುಸಿ ಪರೀಕ್ಷೆಯಲ್ಲಿ 598 ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡ ವಿದ್ಯಾರ್ಥಿನಿಗೆ ತಾಲೂಕಿನ ವೀರಶೈವ ಪಂಚಮಸಾಲಿ ಸಮಾಜದ ವತಿಯಿಂದ ಕು.ಸಂಗೀತಾ ಎಸ್ ಪೋಲಿಸ್ ಪಾಟೀಲ ಅವರಿಗೆ ಸನ್ಮಾನಿಸಿ, ಗೌರವಿಸಿದರು.

ಈ ವೇಳೆಯಲ್ಲಿ ಸಂಗೀತಾಳ ಸಾಧನೆಗೆ ಅವರ ಸೋದರ ಮಾವನಾದ ಶ್ರೀಶೈಲಪ್ಪ ಗೊಂಡಬಾಳ ಅವರು 1,11000ರೂ.ಗಳ ಚೆಕ್‌ನ್ನು ವಿತರಿಸಿ ಇನ್ನೂ ಹೆಚ್ಚಿನ ಶಿಕ್ಷಣ ಕ್ಷೇತ್ರದಲ್ಲಿ ಇಂತಹ ಸಾಧನೆ ಮಾಡುವಂತೆ ವಿದ್ಯಾರ್ಥಿಯಳಿಗೆ ಶುಭ ಹಾರೈಸಿದರು.

ಪಂಚಮಸಾಲಿ ಸಮಾಜದ ತಾಲೂಕಾಧ್ಯಕ್ಷ ಕೆ.ಜಿ.ಪಲ್ಲೇದ, ಶ್ರೀಮೊಗ್ಗಿಬಸವೇಶ್ವರ ಜಾತ್ರಾ ಸಮಿತಿ ಅಧ್ಯಕ್ಷ ಮಂಜುನಾಥ ಅಧಿಕಾರಿ, ಸುರೇಶಗೌಡ ಶಿವನಗೌಡ್ರ, ನ್ಯಾಯವಾದಿ ಅಕ್ಕಮಹಾದೇವಿ ಪಾಟೀಲ, ಮುಖಂಡರಾದ ದಾನನಗೌಡ ತೊಂಡಿಹಾಳ, ಶರಣಪ್ಪ ಕೊಡಗಲಿ, ಸಿದ್ದಪ್ಪ ಹಕ್ಕಿಗುಣಿ, ಗುರುಲಿಂಗನಗೌಡ ಪಾಟೀಲ, ಶರಣಪ್ಪ ಗೋಣಿ, ಚನ್ನಪ್ಪ ನರೇಗಲ್, ಕಲ್ಲಪ್ಪ, ಮಂಜುನಾಥ ಹಾಗೂ ವಿದ್ಯಾರ್ಥಿನಿಯ ಪಾಲಕರು ಇದ್ದರು.

ಪಕ್ಷದ ಏಕತೆ ಕಾಪಾಡಲು ಒಟ್ಟಾಗಿ ಕೆಲಸ ಮಾಡೋಣ

ಅಫಜಲಪುರ: ಇತ್ತೀಚೆಗೆ ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷದ ಕೆಲ ಮುಖಂಡರು ಸ್ವಪಕ್ಷದ ನಾಯಕರ ವಿರುದ್ಧವೇ ಮಾತನಾಡುತ್ತಿರುವುದು ಸರಿಯಲ್ಲ ಎಂದು ಪುರಸಭೆಯ ನಾಮನಿರ್ದೇಶನ ಸದಸ್ಯ ಗುರುಶಾಂತ ಡಾಂಗೆ ವಿಷಾದ ವ್ಯಕ್ತಪಡಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿರಿಯ ಶಾಸಕ ಎಂ.ವೈ.ಪಾಟೀಲ ಹಾಗೂ ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ್ ಪಾಟೀಲ ಅವರು ಜನಪರ ಕಾರ್ಯಕ್ರಮ ಹಾಗೂ ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ಕ್ಷೇತ್ರದ ಅಭಿವೃದ್ಧಿಗೆ ಮುಂದಾಗಿದ್ದಾರೆ. ಆದರೆ, ವಿನಾಕಾರಣ ಕೆಲ ಮುಖಂಡರು ಶಾಸಕರು ಹಾಗೂ ಅವರ ಸುಪುತ್ರನ ಮೇಲೆ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತ ಜನರಿಗೆ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷ ಶಿಸ್ತಿನ ಪಕ್ಷವಾಗಿದ್ದು, ಯಾವುದೇ ಆಂತರಿಕ ಭಿನ್ನಾಭಿಪ್ರಾಯಗಳು ಇದ್ದಲ್ಲಿ ಅದನ್ನು ಮಾತನಾಡಿ ಬಗೆಹರಿಸಿಕೊಳ್ಳಬೇಕು. ಇಲ್ಲವಾದರೆ ಪಕ್ಷದ ವರಿಷ್ಠರ ಗಮನಕ್ಕೆ ತಂದು ಸಮಾಲೋಚನೆ ನಡೆಸಬೇಕು.ಪಕ್ಷದ ಒಳಗಿನ ವಿಚಾರಗಳನ್ನು ಸಾರ್ವಜನಿಕವಾಗಿ ಚರ್ಚಿಸುವುದು ಸರಿಯಲ್ಲ. ಇದರಿಂದ ಪಕ್ಷದ ಗೌರವಕ್ಕೆ ಧಕ್ಕೆಯಾಗುತ್ತದೆ. ಪಕ್ಷದ ವಿರುದ್ಧವಾಗಿ ಮಾತನಾಡುವವರು ಶಿಸ್ತನ್ನು ಪಾಲಿಸಬೇಕು ಮತ್ತು ತಮ್ಮ ಅಭಿಪ್ರಾಯಗಳನ್ನು ಒಳಗಡೆಯಲ್ಲೇ ವ್ಯಕ್ತಪಡಿಸಬೇಕು.ಪಕ್ಷದ ಅಭಿವೃದ್ಧಿಗಾಗಿ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ಹೊರಗೆ ಹೋಗಿ ಪಕ್ಷದ ವಿರುದ್ಧ ಮಾತನಾಡುವುದು ವಿರೋಧ ಪಕ್ಷಗಳಿಗೆ ಲಾಭವಾಗುತ್ತದೆ.ಹೀಗಾಗಿ ಪಕ್ಷದ ಏಕತೆ ಮತ್ತು ಶಿಸ್ತು ಕಾಪಾಡಲು ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕೆಂದು ತಿಳಿಸಿದರು.

ವಿದ್ಯಾಗೆ ಪಿಎಚ್‌ಡಿ ಪ್ರದಾನ

ಕಲಬುರಗಿ: ಗುಲಬರ್ಗಾ ವಿಶ್ವವಿದ್ಯಾಲಯದ ಗಣಕಯಂತ್ರ ವಿಜ್ಞಾನ ವಿಭಾಗದ ಸಂಶೋಧನಾ ವಿದ್ಯಾರ್ಥಿ ವಿದ್ಯಾ ಡಿ ಅವರಿಗೆ ಗುಲಬರ್ಗಾ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ನೀಡಿದೆ. ಬೀದರ್ ಜಿಲ್ಲೆ ಕರ್ನಾಟಕ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಗಣಕಯಂತ್ರ ವಿಜ್ಞಾನ ವಿಭಾಗದ ಸಹ ಪ್ರಾಧ್ಯಾಪಕ ಡಾ.ಮಲ್ಲಿಕಾರ್ಜುನ ಹಂಗರಗಿ ಅವರ ಮಾರ್ಗದರ್ಶನದಲ್ಲಿ 'ಸ್ಟಡೀಸ್ ಆನ್ ಇನ್ಸೆಕ್ಟ್ ಡಿಫೆಕ್ಟ್ ಡಿಟೆಕ್ಷನ್ ಆ್ಯಂಡ್ ಕ್ಲಾಸಿಫಿಕೇಶನ್ ಆಫ್ ಅಗ್ರಿಕಲ್ಚರಲ್ ಪ್ರಾಡಕ್ಟ್ಸ್ ಬೇಸ್ಡ್ ಆನ್ ಎಂಆರ್‌ಐ ಇಮೇಜ್' ವಿಷಯದಲ್ಲಿ ಸಂಶೋಧನೆ ಕೈಗೊಂಡು ಮಹಾಪ್ರಬಂಧ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದರು.





ಯಲಬುರ್ಗಾ: ಕುಕನೂರು ತಾಲೂಕಿನ ಮಂಗಳೂರ ಗ್ರಾಮದ ಶೇಖರಗೌಡ ಪೋಲಿಸ್ ಪಾಟೀಲ್ ಅವರ ಮಗಳಾದ ಕು. ಸಂಗೀತಾ ಪೋಲಿಸ್ ಪಾಟೀಲ ಇವರು ಪಿಯುಸಿ ಪರೀಕ್ಷೆಯಲ್ಲಿ 598 ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡ ವಿದ್ಯಾರ್ಥಿನಿಗೆ ತಾಲೂಕಿನ ವೀರಶೈವ ಪಂಚಮಸಾಲಿ ಸಮಾಜದ ವತಿಯಿಂದ ಕು.ಸಂಗೀತಾ ಎಸ್ ಪೋಲಿಸ್ ಪಾಟೀಲ ಅವರಿಗೆ ಸನ್ಮಾನಿಸಿ, ಗೌರವಿಸಿದರು.

ಇಪಿಎಫ್‌ಒನಿಂದ ವಿಶೇಷ ಜಾಗೃತಿ ಅಭಿಯಾನ



ಕಲಬುರಗಿ: ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ) ಕಲಬುರಗಿ ಪ್ರಾದೇಶಿಕ ಕಚೇರಿ ಉದ್ಯೋಗದಾರರು ಮತ್ತು ಸದಸ್ಯರಿಗಾಗಿ ಮಹತ್ವದ ಯೋಜನೆಗಳು ಹಾಗೂ ನಿಯಮಗಳನ್ನು ಪ್ರಕಟಿಸಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಕರೆ ನೀಡಿದೆ ಎಂದು ಭವಿಷ್ಯ ನಿಧಿ ಪ್ರಾದೇಶಿಕ ಆಯುಕ್ತರಾದ ಎಂ ಸುಬ್ರಹ್ಮಣ್ಯಂ ತಿಳಿಸಿದ್ದಾರೆ. ಉದ್ಯೋಗಿಗಳ ನೋಂದಣಿ ಅಭಿಯಾನ-2025 (ಇಇಸಿ-2025) ಅಡಿಯಲ್ಲಿ 2017ರ ಜು.1ರಿಂದ 2025ರ ಅಕ್ಟೋಬರ್ 31ರವರೆಗೆ ಸೇವೆಗೆ ಸೇರಿ ಇಪಿಎಫ್ ವ್ಯಾಪ್ತಿಗೆ ಒಳಪಡದ ಉದ್ಯೋಗಿಗಳನ್ನು ನೋಂದಾಯಿಸಲು 2025ರ ನವೆಂಬರ್ 1ರಿಂದ 2026ರ ಏ.30ರವರೆಗೆ ಒಂದು ಬಾರಿ ಅವಕಾಶ ನೀಡಲಾಗಿದೆ ಎಂದರು. ಈ ಯೋಜನೆಯಡಿ ಉದ್ಯೋಗಿಯ ಪಾಲಿನ ಹಣ ಮನ್ನಾ ಆಗಿ, ಉದ್ಯೋಗದಾರರ ಪಾಲು ಮಾತ್ರ ಪಾವತಿಸಬೇಕಾಗುತ್ತದೆ.ಇದೇ ವೇಳೆ ಪ್ರಧಾನಮಂತ್ರಿ ವಿಕಸಿತ ಭಾರತ ಉದ್ಯೋಗ ಯೋಜನೆ (ಪಿಎಂವಿಬಿಆರ್‌ವೈ) ಮೂಲಕ ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡಲಾಗುತ್ತಿದ್ದು, ಭಾಗ 'ಎ' ಅಡಿಯಲ್ಲಿ ಅರ್ಹ ಉದ್ಯೋಗಿಗಳಿಗೆ ಗರಿಷ್ಠ ರೂ.15,000 ಪ್ರೋತ್ಸಾಹ ಹಾಗೂ ಭಾಗ 'ಬಿ' ಅಡಿಯಲ್ಲಿ ಹೆಚ್ಚುವರಿ ಉದ್ಯೋಗಿಗಳಿಗೆ ತಿಂಗಳಿಗೆ ರೂ.3,000 ಸಹಾಯಧನ ನೀಡಲಾಗುತ್ತದೆ ಎಂದಿದ್ದಾರೆ.



ಕುರುಗೋಡು: ತಾಲೂಕಿನ ನಡೆದಿರುವ ಭಾರೀ ಅಕ್ರಮಗಳು ಹಾಗೂ ಅನುದಾನದ ದುರುಪಯೋಗ ಕುರಿತು ಸಮಗ್ರ ತನಿಖೆ ನಡೆಸಿ ಕಠಿಣ ಕ್ರಮ ಕೈಗೊಳ್ಳುವಂತೆ ಬಿಜೆಪಿ ಪಕ್ಷದ ಕುರುಗೋಡು ಮಂಡಲದ ವತಿಯಿಂದ ತಹಶೀಲ್ದಾರ್ ನರಸಪ್ಪಗೆ ಮನವಿ ಸಲ್ಲಿಸಲಾಯಿತು. ಮಂಡಲದ ಅಧ್ಯಕ್ಷ ಮದಿರೆ ಕುಮಾರಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಬೆಸೆಜ್ ರೆಡ್ಡಿ, ಬಿಜೆಪಿ ಮೋರ್ಚಾ ಜಿಲ್ಲಾ ಅಧ್ಯಕ್ಷ ಬಿ. ಹನುಮಂತಪ್ಪ ಇತರರಿದ್ದರು.

ಅಮೋಘ ಶಿದ್ದೇಶ್ವರ ಜಾತ್ರೆಯಲ್ಲಿ ಸಾಮೂಹಿಕ ವಿವಾಹ

ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿ

ಕುಷ್ಟಗಿ: ಮದುವೆ ಪ್ರತಿಯೊಬ್ಬರ ಜೀವನದ ಮಹತ್ತರ ಘಟ್ಟ. ಇದಕ್ಕಾಗಿ ಅನಗತ್ಯ ಹಣ ವ್ಯರ್ಥ ಮಾಡುವ ಅಗತ್ಯವಿಲ್ಲ, ಸಾಮೂಹಿಕ ವಿವಾಹದಲ್ಲಿ ಸಂಸಾರ ಜೀವನಕ್ಕೆ ಪಾದಾರ್ಪಣೆ ಆದರ್ಶ. ಇದು, ಕುಟುಂಬಕ್ಕೆ ಮಾತ್ರವಲ್ಲದೇ ದೇಶದ ಅಭಿವೃದ್ಧಿಗೂ ಸಹಕಾರಿಯಾಗುತ್ತದೆ. ಮಿತ ಸಂತಾನ, ಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

ತಾಲೂಕಿನ ಕೊರಡಕೇರಾ ಗ್ರಾಮದಲ್ಲಿ ಅಮೋಘ ಶಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನು ಶಾಸಕ ದೊಡ್ಡನಗೌಡ ಪಾಟೀಲ ಚುನಾವಣೆಯ ಪ್ರಚಾರಕ್ಕಾಗಿ ಬಂದವನು ಈಗ ಇಲ್ಲಿಗೆ ಬಂದಿದ್ದು ದೊಡ್ಡನಗೌಡರು ಗೆದ್ದರು ನಾನು ಸೋತೆ ಎಂದ ಅವರು ಇಲ್ಲಿ ನಡೆಯುವ ಅಮೋಘ ಸಿದ್ದೇಶ್ವರ ಜಾತ್ರಾ ಮಹೋತ್ಸವ ಹಾಗೂ ಸಾಮೂಹಿಕ ವಿವಾಹ ಮಹೋತ್ಸವ ಮುಂದುವರಿಯಲಿ ಎಂದರು.

ತುಂಗಭದ್ರಾ ಕಾಡಾ ನಿಗಮ ಅಧ್ಯಕ್ಷ ಹಸನಸಾಬ ದೋಟಿಹಾಳ ಮಾತನಾಡಿ, ಸಾಮೂಹಿಕ ವಿವಾಹಗಳಿಂದ ಆರ್ಥಿಕ ಹೊರೆ ತಗ್ಗಿ, ಪ್ರಗತಿಗೆ ಪೂರಕವಾಗುತ್ತದೆ ಎಂದ ಅವರು ಸಾಮೂಹಿಕ ವಿವಾಹ ಎಂದರೆ ಅದು ಕೇವಲ ಬಡ ಜನರ ಮದುವೆ ಕಾರ್ಯಕ್ರಮ ಎಂದು ಭಾವಿಸುವುದು ತಪ್ಪು. ಪವಿತ್ರವಾದ ಧಾರ್ಮಿಕ ಕ್ಷೇತ್ರ, ಸಹಸ್ರಾರು ಭಕ್ತರ ಮತ್ತು ಮಠಾಧೀಶರ ಆಶೀರ್ವಾದದೊಂದಿಗೆ ಸಾಮೂಹಿಕ ವಿವಾಹ ಬಂಧನಕ್ಕೊಳಗಾಗುವ ಭಾಗ್ಯ ಜೀವನದ ಸಾರ್ಥಕತೆಯ ಕ್ಷಣವಾಗಿದೆ ಎಂದರು.



> ಹೊಸ ದಾಂಪತ್ಯಕ್ಕೆ ಕಾಲಿಟ್ಟ ವಧು-ವರರು ಪರಸ್ಪರ ಒಬ್ಬರೊನ್ನೊಬ್ಬರು ಅರಿತು ಸಹಬಾಳ್ವೆ ನಡೆಸಿದಾಗಲೇ ದಾಂಪತ್ಯ ಜೀವನಕ್ಕೆ ಉತ್ತಮ ಅರ್ಥ ಸಿಗುತ್ತದೆ. ಜಾತ್ರಾ ಮಹೋತ್ಸವಗಳು ಗ್ರಾಮೀಣ ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಜನರ ಸಹಕಾರದಿಂದ ಜಾತ್ರೆ ಯಶಸ್ವಿಯಾಗಿ ನಡೆಯುತ್ತಿರುವುದು ಸಂತಸದ ವಿಷಯವಾಗಿದೆ.
>
> ■ ದೊಡ್ಡನಗೌಡ ಪಾಟೀಲ, ಶಾಸಕ

» ನವ ದಂಪತಿಗಳಿಗೆ ಮಾಜಿ ಸಚಿವ ಬಿ.ಶ್ರೀರಾಮುಲು ಸಲಹೆ

ಈ ಸಂದರ್ಭದಲ್ಲಿ ಹಾಲುಮತ ಸಮಾಜದ ಶ್ರೀಗಳು ಹಾಗೂ ಗುರುಗಳು,

ಸಿದ್ದಯ್ಯ ಸ್ವಾಮಿಗಳು, ಶಿವಸಿದ್ದೇಶ್ವರ ಮಹಾಸ್ವಾಮಿಗಳು, ಸಿದ್ದರಾಮಯ್ಯ ತಾತ, ತೇಜಯ್ಯ ಗುರುವಿನ್, ಸಿದ್ದಯ್ಯ ಗುರುವಿನ, ಕಳಕಯ್ಯ ಗುರುವಿನ, ಶಿವಾನಂದಯ್ಯ ಗುರುವಿನ, ಮಾದಯ್ಯಸ್ವಾಮಿ ಗುರುವಿನ, ಚಿದಾನಂದಯ್ಯ ಸ್ವಾಮಿ ಗುರುವಿನ,ನಂಜಯ್ಯ ಗುರುವಿನ,ಶುಖಮುನಿಸ್ವಾಮಿ ಗುರುವಿನ ಗಣ್ಯರಾದ ಕೆ ವಿರೂಪಾಕ್ಷಪ್ಪ ಸಿಂಗನಾಳ, ಪ್ರಭಾಕರ ಚಿಣಿ, ಫಕೀರಪ್ಪ ವಕೀಲರು, ಉಮೇಶ ಮಂಗಳೂರು, ಪರಶುರಾಮ ನಾಗರಾಳ ಸೇರಿದಂತೆ ಅನೇಕರು ಇದ್ದರು.

ಮೊಬೈಲ್ ದಾಸರಾಗಬೇಡಿ: ಚಂದ್ರಶೇಖರ

ಸಿಂಧನೂರು: ಬೆಳಿಗ್ಗೆ ಎದ್ದ ತಕ್ಷಣ ಮೊಬೈಲ್ ಹಿಡಿಯುವುದಕ್ಕಿಂತ ಪುಸ್ತಕ ಹಿಡಿದು ಓದಿ, ಮೊಬೈಲ್ ದಾಸರಾಗಬೇಡಿ, ವಿದ್ಯಾವಂತರಾಗಿ ಪ್ರಜ್ಞಾವಂತರಾಗಿ,ರೀಲ್ಸ್ ನೋಡುವ ಬದಲು ರಿಯಲ್ ಲೈಫ್ ಕಡೆ ಗಮನ ಹರಿಸಿ ಎಂದು ಡಿವೈಎಸ್ಪಿ ಚಂದ್ರಶೇಖರ ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಗರದ ಎಕ್ಸಲೆಂಟ್ ಪದವಿ ಮಹಾವಿದ್ಯಾಲಯದಲ್ಲಿ ಆಹಿಂದ ವಿದ್ಯಾರ್ಥಿ ಯುವಜನ ಒಕ್ಕೂಟ ಸಿಂಧನೂರು ತಾಲೂಕ ವತಿಯಿಂದ ಸಂವಿಧಾನಿಕ ಶಿಕ್ಷಣ,ಸಾಮಾಜಿಕ ನ್ಯಾಯ ಮತ್ತು ಐಕ್ಯತೆ ಬಲಗೊಳಿಸುವ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ಕಾನೂನು ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಅವರು ಜ್ಯೋತಿ ಬಾಪುಲೆ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಸೈಬರ್ ಕ್ರೈಂ ಮತ್ತು ಸಾಮಾಜಿಕ ಜಾಲತಾಣಗಳ ದುರುಪಯೋಗ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿದರು.

ನಂತರ ಹಿರಿಯ ವಕೀಲರಾದ ರಾಯಪ್ಪ ಮಾತನಾಡಿ, ತಮ್ಮ ಜೀವನ ಅನುಭವಗಳನ್ನು ಹಂಚಿಕೊಂಡು, ನಾವು ಕಷ್ಟಪಟ್ಟು ಓದಿ ಇಂದಿನ ಮಟ್ಟಕ್ಕೇರಿದ್ದೇವೆ. ಈಗಿನ ವಿದ್ಯಾರ್ಥಿಗಳಿಗೆ ಎಲ್ಲಾ ಸೌಕರ್ಯಗಳಿವೆ. ದಿನಕ್ಕೆ 3-4 ಗಂಟೆ ಓದಿದರೂ ಸಾಕು, ನೀವು ಯಶಸ್ವಿಯಾಗಬಹುದು. ಮೊಬೈಲ್‌ಗಳಿಗೆ ದಾಸರಾಗದೆ ಶಿಕ್ಷಣದ ಕಡೆ ಗಮನ ಹರಿಸಿ ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ಕಾನೂನು ಪಾಲನೆಯ ಮಹತ್ವ,ವಿದ್ಯಾರ್ಥಿಗಳ ಶಿಸ್ತು ಮತ್ತು ಶಿಕ್ಷಣದ ಅಗತ್ಯತೆ ಕುರಿತು ವಿವರಿಸಿದರು.

ತದನಂತರ ವೆಂಕಟೇಶ ಗಿರಿಜಾಲಿ ಮಾತನಾಡಿ ಬಸವಣ್ಣ, ಡಾ.ಬಿ.ಆರ್. ಅಂಬೇಡ್ಕರ್, ಸಾಮ್ರಾಟ್ ಅಶೋಕ, ಕಾರ್ಲ್ ಮಾರ್ಕ್ಸ್ ಹಾಗೂ ಶಿಶುನಾಳ ಶರೀಫ್ ಅವರ ತತ್ವಗಳನ್ನೂ ಉಲ್ಲೇಖಿಸಿ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದರು.

ಈ ಸಂದರ್ಭದಲ್ಲಿ ಉಮೇಶ್, ರಾಯಪ್ಪ ವಕೀಲರು, ಪತ್ರಕರ್ತರಾದ ಎಸ್.ಎಸ್.ಜಿನೂರು, ದಲಿತ ಮುಖಂಡ ವೆಂಕಟೇಶ್ ಗಿರಿಜಾಲಿ, ಕಾಲೇಜಿನ ಕಾರ್ಯದರ್ಶಿ ವೆಂಕಟರಾವ್ ಎಂ., ಪ್ರಾಂಶುಪಾಲರಾದ ಮಂಜುನಾಥ ಸೋಮಲಾಪುರ, ಉಪನ್ಯಾಸಕರಾದ ಖಾಸಿಂ ಖುರೆಸಿ, ಬಸವರಾಜ್ ಯಾಪಲಪರ್ವಿ, ಸುರೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಶ್ರೀಗಳ ಮೇಲಿನ ಆರೋಪ ಖಂಡಿಸಿ ಪ್ರತಿಭಟನೆ



ಯಲಬುರ್ಗಾ: ಕೂಡಲಸಂಗಮ ಪೀಠಾಧಿಪತಿ ಶ್ರೀ ಬಸವಜಯಮೃತ್ಯುಂಜಯ ಮಹಾಸ್ವಾಮಿಗಳ ವಿರುದ್ಧ ತೇಜೋವಧೆ ಮಾಡುವ ಹುನ್ನಾರ ನಡೆಸಿರುವುದನ್ನು ಖಂಡಿಸಿ ಶನಿವಾರ ವೀರಶೈವ ಪಂಚಮಸಾಲಿ ಸಮಾಜದ ಪದಾಧಿಕಾರಿಗಳು, ಮುಖಂಡರು ಪಟ್ಟಣದ ಕಿತ್ತೂರ ರಾಣಿ ಚನ್ನಮ್ಮ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಬಳಿಕ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ಬಳಿಕಪಂಚಮಿಸಾಲಿಸಮಾಜತಾಲೂಕಾಧ್ಯಕ್ಷ ಕೆ.ಜಿ.ಪಲ್ಲೇದ ಪ್ರತಿಭಟನೆ ನೇತೃತ್ವ ವಹಿಸಿ ಮಾತನಾಡಿದ ಅವರು, ಬಸವಜಯ ಮೃತ್ಯುಂಜಯ ಸ್ವಾಮೀಜಿ ಸಮಾಜದ ಮಕ್ಕಳಿಗೆ 2ಎ ಮೀಸಲಾತಿ ಸೌಲಭ್ಯಕ್ಕಾಗಿ ಪಾದಯಾತ್ರೆ ಮೂಲಕ ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ಇಂತಹ ಸ್ವಾಮಿಗಳ ಮೇಲೆ ವಿನ್ಹಾ ಕಾರಣ ಲೈಂಗಿಕ ಹಗರಣದಲ್ಲಿ ಸಿಲುಕಿ ಅವಮಾನ ಮಾಡುವ ಷಡ್ಯಂತ್ರವನ್ನು ಶಾಸಕ ವಿಜಯಾನಂದ ಕಾಶಪ್ಪನವರು ಮಾಡುತ್ತಿದ್ದಾರೆ ಇದು ಅವರಿಗೆ ಶೋಭೆ ತರುವಂಥದ್ದಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಪಂ ಮಾಜಿ ಸದಸ್ಯ ಸಿ.ಎಚ್.ಪಾಟೀಲ, ಕಾರ್ಯದರ್ಶಿ ರಾಜಶೇಖರ ನಿಂಗೋಜಿ, ನ್ಯಾಯವಾದಿ ಅಕ್ಕಮಹಾದೇವಿ ಪಾಟೀಲ ಹಾಗೂ ಪಪಂ ಮಾಜಿ ಸದಸ್ಯ ಸುರೇಶಗೌಡ ಶಿವನಗೌಡ್ರ ಮಾತನಾಡಿ, ಸಮಾಜದ ಪರವಾಗಿ ನಿರಂತರವಾಗಿ ಹೋರಾಟ ಮಾಡುತ್ತ ಬರುತ್ತಿರುವಂತಹ ಬಸವಜಯ ಮೃತ್ಯುಂಜಯ ಮಹಾಸ್ವಾಮಿಗಳ ವಿರುದ್ಧ ಹೋರಾಟವನ್ನು ಹತ್ತಿಕ್ಕಬೇಕೆಂಬ ದುರದ್ದೇಶದಿಂದ ಶ್ರೀಗಳ ವಿರುದ್ಧ ಅಪರಿಚಿತ ಮಹಿಳೆಯ ಹೆಸರಿನಲ್ಲಿ ಸುಳ್ಳು ಹನಿಟ್ರ್ಯಾಪ್ ಹಾಗೂ ಬ್ಲ್ಯಾಕ್‌ಮೇಲ್ ಮಾನಸಿಕ ಹಿಂಸೆಯನ್ನು ಮಾಡುತ್ತಿರುವ ಹುನಗುಂದ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಶಾಸಕ ವಿಜಯಾನಂದ ಕಾಶಪ್ಪನವರ ಕುತಂತ್ರ ನಡೆಸಿದ್ದಾರೆ. ಮುಂದಿನ ದಿಮಾನಗಳಲ್ಲಿ ಸಮಾಜಭಾಂಧವರು ತಕ್ಕ ಉತ್ತರ ನೀಡಲಿದ್ದಾರೆ ಎಂದು ಕಿಡಿಕಾರಿದರು.

ಬಳಿಕ ಕಂದಾಯ ಶಿರಸ್ತಾರ ಮಲ್ಲಿಕರ್ಜುನ ಶಾಸ್ತ್ರೀಮಠ ಅವರು ಪ್ರತಿಭಟನಾಕಾರರಿಂದ ಮನವಿ ಪತ್ರ ಸ್ವೀಕರಿಸಿ ಮಾತನಾಡಿದರು.

ಸಮಾಜ ಮುಖಂಡರಾದ ಗವಿಸಿದ್ದಪ್ಪ ಬನ್ನಿಗೋಳ, ಶರಣಪ್ಪ ಕೊಡಗಲಿ, ಅಮರೇಶ ಹುಬ್ಬಳ್ಳಿ, ದಾನನಗೌಡ ತೊಂಡಿಹಾಳ, ಸಿದ್ದರಾಮೇಶ್ವರ ಬೇಲೇರಿ, ಮಂಜುನಾಥ ಅಧಿಕಾರಿ, ಕಲ್ಲಪ್ಪ ಗಾಂಜಿ, ಸಿದ್ದಪ್ಪ ಹಕ್ಕಿಗುಣಿ, ಚಂದ್ರ ಬನ್ನಪ್ಪಗೌಡ್ರ, ಮಲ್ಲಪ್ಪ ಸರ್ವೇ, ಶ್ರೀಶೈಲಪ್ಪ ಗೊಂಡಬಾಳ, ವೀರಣ್ಣ ನಿಂಗೋಜಿ, ಶರಣಪ್ಪ ಆರಕೇರಿ, ಕಲ್ಲೇಶ ಕರಮುಡಿ, ಶರಣಪ್ಪ ರಡ್ಡಿ, ಸಂಗಪ್ಪ ರಾಮತಾಳ, ಮಹಾಂತೇಶ ಭಾಸ್ಕರ್, ನಾಗರಾಜ, ಗುರುಲಿಂಗನಗೌಡ ಪಾಟೀಲ, ಶರಣಪ್ಪ ಗೋಣಿ, ಚನ್ನಪ್ಪ ನರೇಗಲ್, ಸುರೇಶ ಹೊಸಳ್ಳಿ, ಮಂಜುನಾಥ ಇತರರಿದ್ದರು.

ಜ್ಞಾನ ಬಂಧು ಪಿಯು ಕಾಲೇಜಿನ ವಿದ್ಯಾರ್ಥಿಗಳ ಉತ್ತಮ ಸಾಧನೆ

ಕೊಪ್ಪಳ: ಭಾಗ್ಯನಗರದ ಜ್ಞಾನ ಬಂಧು ಪಿ.ಯು. ಕಾಲೇಜಿನ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಒಟ್ಟು 92 ವಿದ್ಯಾರ್ಥಿಗಳು ಹಾಜರಾಗಿದ್ದು, 39 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 50 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ.

ವಿದ್ಯಾ ನಾಗರೆಡ್ಡಿ 578 ಅಂಕಗಳನ್ನು ಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನದಲ್ಲಿದ್ದಾರೆ. ದಯಾನಂದಸ್ವಾಮಿ 573 ಅಂಕಗಳು, ಸಂಜಯ್ 570 ಅಂಕಗಳನ್ನು ಗಳಿಸಿ ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಒಟ್ಟು 63 ವಿದ್ಯಾರ್ಥಿಗಳು ಹಾಜರಾಗಿದ್ದು, 40 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 18 ವಿದ್ಯಾರ್ಥಿಗಳು ಪ್ರಥಮ ದರ್ಜೆ ಹಾಗೂ 05 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಚಿರಂಜೀವಿ ಶರ್ಮಾ 591 ಅಂಕಗಳನ್ನು ಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನದಲ್ಲಿದ್ದಾನೆ.

ಪ್ರಿಯಾಂಕಾ 588 ಅಂಕಗಳು, ಸಂದೀಪ ಕುಮಾರ 582 ಅಂಕಗಳನ್ನು ಗಳಿಸಿ ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿದ್ದಾರೆ. ಕಾಲೇಜು ಶೇ. 100 ರಷ್ಟು ಫಲಿತಾಂಶದ ಸಾಧನೆ ಮೆರೆದಿದೆ. ಸಂಖ್ಯಾಶಾಸ್ತ್ರದಲ್ಲಿ 7, ಗಣಿತದಲ್ಲಿ 4, ಗಣಕಶಾಸ್ತ್ರದಲ್ಲಿ 4, ಅರ್ಥಶಾಸ್ತ್ರದಲ್ಲಿ 4, ಭೌತಶಾಸ್ತ್ರದಲ್ಲಿ 1, ಲೆಕ್ಕಶಾಸ್ತ್ರದಲ್ಲಿ 1 ಮತ್ತು ಕನ್ನಡದಲ್ಲಿ 1 ವಿದ್ಯಾರ್ಥಿಗಳು ವಿಷಯವಾರು ಶೇ. 100 ರಷ್ಟು ಅಂಕಗಳನ್ನು ಸಾಧಿಸಿದ್ದಾರೆ.

ಕಳೆದ ಜನೆವರಿಯಲ್ಲಿ ನಡೆದ ಜೆಇಇ ಪರೀಕ್ಷೆಯಲ್ಲಿ ಪ್ರಜ್ವಲ್ ಭೋವಿ 99.18 ಪರ್ಸಂಟೇಸ್ ಪಡೆಯುವ ಮೂಲಕ ಉತ್ತರ ಕರ್ನಾಟಕಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾನೆ. ಸಿಂಚನಾ 96.75, ಸಾತ್ವಿಕ್ 96.09, ಜೀವನ್ 94.65, ಹರ್ಷಲಾ ಪ್ರೀತಿ 94.43 ಪರ್ಸಂಟೇಸ್ ಫಲಿತಾಂಶ ಸಾಧನೆಯ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಎಲ್ಲಾ ಸಾಧಕ ವಿದ್ಯಾರ್ಥಿಗಳು, ಪಾಲಕ-ಪೋಷಕರನ್ನು ಸಂಸ್ಥೆಯ ಅಧ್ಯಕ್ಷರಾದ ದಾನಪ್ಪ ಕವಲೂರು, ಶರತ್ ನೀಟ್ ಮತ್ತು ಜೆಇಇ ಅಕಾಡೆಮಿಯ ಅಧ್ಯಕ್ಷ ಪಿ. ಶರಚ್ಚಂದ್ರ, ಕಾಲೇಜಿನ ಪ್ರಾಂಶುಪಾಲ ಜೆ.ರವೀಂದ್ರ ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.



ತೋಟಗಾರಿಕೆ ಇಲಾಖೆಯ ಜಾಗ ಒತ್ತುವರಿ: ಕ್ರಮಕ್ಕೆ ಮುಂದಾದ ಇಲಾಖೆ

ಸಿಂಧನೂರು: ನಗರದ ಗಂಗಾವತಿ-ರಸ್ತೆಯ ತೋಟಗಾರಿಕೆ ಇಲಾಖೆಯ ಸ್ಥಳಕ್ಕೆ ಸುತ್ತು ಬೇಲಿ ಹಾಕಿ ರಕ್ಷಣೆ ಮಾಡಲಾಗಿತ್ತು. ಅದನ್ನು ಕಿತ್ತು ಹಾಕಿ-ಡಬ್ಬಿಗಳನ್ನು ಇಟ್ಟಿರುವುದರಿಂದ ಅವರ ವಿರುದ್ಧ ತಾಲೂಕು ಸಹಾಯಕ ತೋಟಗಾರಿಕೆ ನಿರ್ದೇಶಕರು ಸಿಂಧನೂರು ನಗರ ಠಾಣೆಯಲ್ಲಿ ದೂರು ದಾಖಲಿಸಲು ಮುಂದಾಗಿದ್ದಾರೆಂದು ತಿಳಿದು ಬಂದಿದೆ.

ಇನ್ನೂ ಯಾವುದೇ ಮೇಲಧಿಕಾರಿಗಳ ಆದೇಶವಿಲ್ಲದೆ ತೋಟಗಾರಿಕೆ ಜಾಗ ಒತ್ತುವರಿ ಮಾಡಬಾರದೆಂದು ನಿಯಮ ಹೇಳುತ್ತದೆ,ಒಂದು ವರ್ಷದ ಹಿಂದೆ ಫುಟ್‌ಪಾತ್ ತೆರವಿನ ನಂತರ ಬೀದಿ ಬದಿ ವ್ಯಾಪಾರಸ್ಥರ ಬದುಕು ಬೀದಿಗೆ ಬಂದಿದ್ದು ಮಾಡಿದ ಸಾಲ ಕಟ್ಟಲಾಗದೆ ಅದೆಷ್ಟೋ ಜನ ಕಷ್ಟದಲ್ಲಿ ಕಣ್ಣೀರು ತೊಳೆಯುತ್ತಿದ್ದಾರೆ. ತಮ್ಮ ಕಷ್ಟವನ್ನು ಹೇಳಿಕೊಳ್ಳಲು ಶಾಸಕರ ಬಳಿ ಹೋದಾಗ ತೋಟಗಾರಿಕೆ ಜಾಗದಲ್ಲಿ ವ್ಯಾಪಾರಸ್ಥರಿಗೆ ಡಬ್ಬಿ ಅಂಗಡಿಗಳನ್ನು ಹಾಕಿಕೊಳ್ಳುವಂತೆ ಮೌಖಿಕವಾಗಿ ತಿಳಿಸಿದ್ದಾರೆ ಎನ್ನುವ ಕಾರಣಕ್ಕೆ ಗ್ಯಾರೇಜ್ ಮಾಲೀಕರು ಸೇರಿದಂತೆ ವಿವಿಧ ವ್ಯಾಪಾರಸ್ಥರು ತೋಟಗಾರಿಕೆ ಜಾಗದಲ್ಲಿ ಇಟ್ಟಿದ್ದಾರೆ. ಆದರೆ ಅಧಿಕಾರಿಗಳು ಮಾತ್ರ ಸರ್ಕಾರದ ಆಸ್ತಿ ರಕ್ಷಣೆ ಅಧಿಕಾರಿಯಾಗಿ ನಮ್ಮಗಳ ಕರ್ತವ್ಯ ಯಾರೇ ಏನೇ ಹೇಳಿದರೂ ಮೌಖಿಕವಾಗಿ ಉಪಯೋಗವಿಲ್ಲ, ಇದರ ಬಗ್ಗೆ ನಮ್ಮ ಇಲಾಖೆಗೆ ಯಾವುದೇ ಆದೇಶವನ್ನು ಮೇಲಧಿಕಾರಿಗಳು ನೀಡದ ಕಾರಣಕ್ಕೆ ಡಬ್ಬಿ ಇಟ್ಟವರ ಮೇಲೆ ಪ್ರಕರಣ ದಾಖಲಿಸಲು ಅಧಿಕಾರಿಗಳು ಮುಂದಾಗಿದ್ದಾರೆ ಎಂಬುದು ತೋಟಗಾರಿಕೆ ಇಲಾಖೆಯ ಅಧಿಕಾರಿಗಳ ಮಾತು.

ವೈ.ಜೆ.ಆರ್. ಪಿಯು ಕಾಲೇಜಿನ ಸಾಧನೆ



ಗಂಗಾವತಿ: ವಿದ್ಯಾ ನಗರದಲ್ಲಿರುವ ಶ್ರೀ ಶಾರದಾ ವಿದ್ಯಾಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ವೈ.ಜೆ.ಆರ್. ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಕುಮಾರಿ ಜಿ.ದಿವ್ಯಾ ಅವರು 594 ಅಂಕಗಳನ್ನು ಪಡೆದು ರಾಜ್ಯಕ್ಕೆ 7ನೇ ಸ್ಥಾನವನ್ನು ಪಡೆದಿದ್ದಾರೆ.

ಕುಮಾರಿ ಸೌಮ್ಯಾ ಭಂಡಾರಿ ಅವರು 592 ಅಂಕಗಳನ್ನು ಪಡೆದು ರಾಜ್ಯಕ್ಕೆ 9ನೇ ಸ್ಥಾನವನ್ನು ಹಾಗೂ ಕುಮಾರಿ ದಿಯಾ ಪಿ.ಖಂಡೆಲ್ವಾಲ್ ಅವರು 591 ಅಂಕಗಳನ್ನು ಪಡೆದು ರಾಜ್ಯಕ್ಕೆ 10ನೇ ಸ್ಥಾನವನ್ನು ಪಡೆದಿದ್ದಾರೆ.

ಇನ್ನೂ ವಿಜ್ಞಾನ ವಿಭಾಗದಲ್ಲಿ ಕುಮಾರಿ ಜಿ.ಶ್ರೀಪ್ರಣವಿ 594 ಅಂಕಗಳನ್ನು ಗಳಿಸಿ ರಾಜ್ಯಕ್ಕೆ 6ನೇ ಸ್ಥಾನ ಹಾಗೂ ಪಿ. ರೇವಂತ್ ಕುಮಾರ್ ಅವರು 591 ಅಂಕಗಳನ್ನು ಪಡೆದು ರಾಜ್ಯಕ್ಕೆ 9ನೇ ಸ್ಥಾನವನ್ನು ಪಡೆದಿದ್ದಾರೆ ಹಾಗೂ ದೊಡ್ಡಬಸವ ಅವರು 589 ಅಂಕಗಳನ್ನು ಪಡೆದು ಜಿಲ್ಲಾಮಟ್ಟದಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಕಾಲೇಜಿನ ಈ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಳಿ, ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ಪೋಷಕರು ಹಾಗೂ ವಿದ್ಯಾರ್ಥಿಗಳು ಸಂತೋಷ ವ್ಯಕ್ತಪಡಿಸಿದ್ದಾರೆ.

ಜಿಲ್ಲಾದ್ಯಂತದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ

ಕಲಬುರಗಿ: ಬೇಸಿಗೆ ಪ್ರಾರಂಭಿಕ ಹಂತದಲ್ಲಿಯೆ ಕಲಬುರಗಿ ಜಿಲ್ಲಾದ್ಯಂತ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದ್ದು, ಜನರು ಪರದಾಡುತ್ತಿದ್ದಾರೆ.ಕೂಡಲೇ ಜಿಲ್ಲಾಡಳಿತ ಕುಡಿಯುವ ನೀರಿನ ಸರಬರಾಜು ಮಾಡಲು ಮುಂದಾಗಬೇಕು ಎಂದು ಕಲಬುರಗಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಾಲರಾಜ್ ಗುತ್ತೇದಾರ ಆಗ್ರಹಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಕಲಬುರಗಿ ನಗರ ಸೇರಿದಂತೆ ಬಹುತೇಕ ಗ್ರಾಮಗಳಲ್ಲಿ ಕುಡಿಯುವ ನೀರು ಸಿಗುತ್ತಿಲ್ಲ.ಕೊಳವೆ ಬಾವಿಗಳು ಬತ್ತಿ ಹೋಗಿವೆ.ನಲ್ಲಿಗಳಲ್ಲಿ ನೀರು ಸರಬರಾಜು ಆಗುತ್ತಿಲ್ಲ.ಕೆಲವು ಬಡಾವಣೆಗಳಲ್ಲಿ ಮೊದ ಮೊದಲು ವಾರಕ್ಕೊಮ್ಮೆಯಾದರೂ ನಲ್ಲಿಗಳಲ್ಲಿ ಕುಡಿಯುವ ನೀರು ಪೂರೈಕೆಯಾಗುತ್ತಿತ್ತು.ಆದರೆ, ಈಗ ಹದಿನೈದು ದಿನಕ್ಕೊಮ್ಮೆ ನೀರು ಬರುತ್ತದೆ. ಇದರಿಂದ ಜನರು ದಿನ ನಿತ್ಯ ಜೀವನದಲ್ಲಿ ತೊಂದರೆ ಅನುಭವಿಸುತ್ತಿದ್ದಾರೆ ಎಂದರು.

ಪ್ರಾರಂಭದಲ್ಲಿಯೇ ಈ ಸಮಸ್ಯೆ ಉಂಟಾದರೂ ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿಲ್ಲ.ಬಿಸಿಲು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.ಒಂದೆಡೆ ಈ ಸಮಸ್ಯೆ ಇದ್ದರೆ ಇನ್ನೊಂದೆಡೆ ಬಿಸಿಲಿನ ಝಳದಿಂದ ಜನರು ಕಂಗಾಲಾಗಿದ್ದಾರೆ.ಆದರೆ,ಮಹಾನಗರ ಪಾಲಿಕೆ ಹೆಚ್ಚುತ್ತಿರುವ ಉಷ್ಣತೆ ಶಮನಕ್ಕೆ ರಸ್ತೆ ಮತ್ತು ಬೀದಿಗಳಲ್ಲಿ ನೀರು ಚಿಮುಕಿಸಬೇಕು.ಕಲಬುರಗಿ ನಗರದ ಪ್ರಮುಖ ಸ್ಥಳಗಳಲ್ಲಿ, ಪ್ರತಿ ಗ್ರಾಪಂ ಮಟ್ಟದಲ್ಲಿ ಜನರಿಗೆ ಶುದ್ಧ ಕುಡಿಯಲು ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಬೇಕು.ಆದರೆ ಇವ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ಜಿಲ್ಲಾಡಳಿತ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ ಎಂದು ಕಿಡಿಕಾರಿದ್ದಾರೆ.

ಇನ್ನೂ ಎರಡು ತಿಂಗಳು ಬೇಸಿಗೆ ಇರುವುದರಿಂದ ಕುಡಿಯುವ ನೀರಿಗಾಗಿ ಹಾಹಾಕಾರ ಉಂಟಾಗುತ್ತದೆ. ಜನರು ರೊಚ್ಚಿಗೆದ್ದು ಬೀದಿಗಿಳಿಯುವ ಮುನ್ನ ಜಿಲ್ಲಾಡಳಿತ ಕುಡಿಯುವ ನೀರು ಸರಬರಾಜಿಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಕಾಂಗ್ರೆಸ್ ಪಕ್ಷದ ನಾಯಕರು ನಾರಯಣಪೂರ ಜಲಾಶಯದಿಂದ ಕಲಬುರಗಿ ಜಿಲ್ಲೆಗೆ ನೀರು ಹರಿಸುವುದಾಗಿ ಭರವಸೆ ನೀಡಿ 3 ವರ್ಷ ಕಳೆದಿದೆ ಆದರೇ ಇವಾಗ ಅದರ ಕುರಿತು ಪ್ರಸ್ತಾಪ ಮಾಡುತ್ತಿಲ್ಲಾ.ಅಲ್ಲಿಂದ ನೀರು ಹರಿಸುವ ಕಾರ್ಯ ಮಾಡಿದರೆ ಇಂದು ಕಲಬುರಗಿ ಜಿಲ್ಲೆಯಲ್ಲಿ ನೀರಿನ ಸಮಸ್ಯೆ ಆಗುತ್ತಿರಲಿಲ್ಲ ಎಂದು ಹೇಳಿದರು.

ಏ20ಕ್ಕೆ ಡಾ.ಚಂದ್ರಶೇಖರಗೆ ಸುವರ್ಣಗಿರಿ ಪ್ರಶಸ್ತಿ ಪ್ರದಾನ

ಕನಕಗಿರಿ: ವಿಶ್ವಗುರು ಶ್ರೀಬಸವೇಶ್ವರ ಜಯಂತಿ ನಿಮಿತ್ತವಾಗಿ ಇಲ್ಲಿನ ಸುವರ್ಣಗಿರಿ ಸಂಸ್ಥಾನ ವಿರಕ್ತ ಮಠ ಸೇರಿದಂತೆಪರಮಪೂಜ್ಯ ಡಾ.ಚನ್ನಮಲ್ಲಮಹಾಸ್ವಾಮೀಜಿಗಳ ನೇತೃತ್ವದಲ್ಲಿ ಕಳೆದ ನಾಲ್ಕು ವರ್ಷಗಳಿಂದಲೂ ಕೂಡ ತಾಲೂಕಿನ ಐದು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಒಂದು ತಿಂಗಳುಗಳ ಕಾಲ ಪರಿಪೂರ್ಣದೆಡೆಗೆ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮವನ್ನು ಆಯೋಜಿಸುತ್ತಾ ಬರುತ್ತಿರುವುದು ಶ್ಲಾಘನೀಯ ಎಂದು ಮುಖಂಡ ಕೆ.ಗಂಗಾಧರ ಸ್ವಾಮಿ ತಿಳಿಸಿದರು.

ಪಟ್ಟಣದ ಶ್ರೀ ಸುವರ್ಣಗಿರಿ ಸಂಸ್ಥಾನ ವಿರಕ್ತ ಮಠದಲ್ಲಿ ಭಾನುವಾರ ವಿಶ್ವಗುರು ಶ್ರೀ ಬಸವೇಶ್ವರರ 893ನೇ ಜಯಂತಿ ಮಹೋತ್ಸವದ ನಿಮಿತ್ಯ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು.ಯುವ ಸಮಾಜದಲ್ಲಿ ಆಧ್ಯಾತ್ಮಿಕ ಮನೋಭಾವವನ್ನು ಬೆಳೆಸುವ, ವ್ಯಸನಮುಕ್ತ ಸಮಾಜ ನಿರ್ಮಾಣ ಮಾಡಲು ಶ್ರೀಗಳು ಪಣ ತೊಟ್ಟಿದ್ದು ಸ್ವತಃ ತಾವೇ ಜೋಳಿಗೆ ಹಿಡಿದು ಅದರಲ್ಲಿ ಯುವಕರು ದುಶ್ಚಟಗಳ ಭೀಕ್ಷೆ ಹಾಕುವಂತೆ ಬೀದಿ ಬೀದಿಗಳಿಗೆ ತೆರಳಿ ಉತ್ತಮ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡುತ್ತಿದ್ದಾರೆ. ಏ.20ರಂದು ಬಸವ ಜಯಂತಿ ನಿಮಿತ್ತ ಸುವರ್ಣಗಿರಿ ವೈಭವ, ಸುವರ್ಣಗಿರಿ ಪ್ರಶಸ್ತಿ ಪ್ರದಾನ ಹಾಗೂ ಪರಿಪೂರ್ಣದೆಡೆಗೆ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮವನ್ನು ಶ್ರೀಮಠದ ಆವರಣದ ಮುಂಭಾಗದಲ್ಲಿ ಸಂಜೆ 6 ಗಂಟೆಗೆ ಹಮ್ಮಿಕೊಳ್ಳಲಾಗಿದ್ದು ಶ್ರೀಮಠದ ಗೌರವಾರ್ಥ ಸುವರ್ಣಗಿರಿ ಪ್ರಶಸ್ತಿಯನ್ನು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಚಂದ್ರಶೇಖರ ಕಂಬಾರ ಅವರಿಗೆ ನೀಡಲಾಗುತ್ತಿದ್ದು ಐವತ್ತು ಸಾವಿರ ನಗದು ಹಣವನ್ನು ನೀಡಿ ಗೌರವಿಸಲಾಗುತ್ತಿದೆ. ಅಂದು ಸಂಜೆ ಗಾಯಕ ಅರ್ಜುನ್ ಇಟಗಿ ತಂಡದವರಿಂದ ಸಂಗೀತಾ ಕಾರ್ಯಕ್ರಮ ನಡೆಯಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತ ಸಮೂಹ ಪಾಲ್ಗೊಂಡು ಕಾರ್ಯಕ್ರಮದ ಯಶಸ್ವಿಗೆ ಸಹಕರಿಸುವಂತೆ ಕರೆ ನೀಡಿದರು ಬಳಿಕ ಶರಣಪ್ಪ ಭತ್ತದ್ ಮಾತನಾಡಿ, ಬಸವೇಶ್ವರರ ಜಯಂತಿ ನಿಮಿತ್ತ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮದಲ್ಲಿ ನಂದವಾಡಗಿಯ ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಖೇಡಗಿವಿರಕ್ತಮಠದಬಸವರಾಜೇಂದ್ರ ಮಹಾಸ್ವಾಮಿಗಳು ಸಾನಿಧ್ಯ ವಹಿಸಲಿದ್ದು, ಮುಂಡರಗಿಯ ಸಂಸ್ಥಾನಮಠದ ಡಾ.ಮಲ್ಲಿಕಾರ್ಜುನ ಮಹಾಸ್ವಾಮಿಗಳು, ನವಿಲಕಲ್ಲು ಶಾಂಬವಿ ಬೃಹನ್ಮಠದ ಅಭಿನವ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಸೇರಿದಂತೆ ಅನೇಕ ಶ್ರೀಮಠದ ಸ್ವಾಮೀಜಿಗಳು, ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ನಂತರ ಪ್ರಚವಚನಕಾರ ಶ್ರೀಗಣೇಶ್ ಶಾಸ್ತ್ರಿ ಮಾತನಾಡಿದರು. ಪ್ರಮುಖರಾದ ಬಸವರಾಜ ಗುಗ್ಗಳಶೆಟ್ರ, ಪ್ರಶಾಂತ ಪ್ರಭುಶೆಟ್ಟರ್, ಶರಣಪ್ಪ ಭತ್ತದ್, ಮುನಿಯಪ್ಪ ಪ್ರಭುಶೆಟ್ಟರ್, ವಾಗೀಶ್ ಹಿರೇಮಠ, ಮೃತ್ಯುಂಜಯಸ್ವಾಮಿ ಇದ್ದರು.

ಕಿರು ಸುದ್ದಿ

ದೇವಾಲಯದಲ್ಲಿ ವಿಶೇಷ ಪೂಜೆ



◆**ಬಳ್ಳಾರಿ:** ನಗರದ ಕೋಟೆ ಪ್ರದೇಶದ ಸುಪ್ರಸಿದ್ಧ ಶ್ರೀಕೋಟೆ ಮಲ್ಲೇಶ್ವರ ದೇವಾಲಯದಲ್ಲಿ ಭಕ್ತರಿಗೆ ಅನ್ನಪ್ರಸಾದ (ದಾಸೋಹ) ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಇದು 1 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಭಕ್ತರಿಂದ ದೇವಾಲಯದಲ್ಲಿ ವಿಶೇಷ ಪೂಜೆಗಳ ನಡೆದವು. ದೇಗುಲದ ಪ್ರಧಾನ ಅರ್ಚಕರಾದ, ದಾಸೋಹ ಸಮಿತಿ ಗೌರವಾಧ್ಯಕ್ಷ ಕೆ.ವಿ.ಎನ್.ಶಾಸ್ತ್ರೀ ಅವರ ನೇತೃತ್ವದಲ್ಲಿ ವಿಶೇಷ ಪೂಜೆಗಳು ನಡೆದವು. ರೈತ ಸಂಘದ ಅಧ್ಯಕ್ಷ ಡಾ.ದರೂರು ಪುರುಷೋತ್ತಮ ಗೌಡ ಮಾತನಾಡಿ, ನಗರದ ಪ್ರಸಿದ್ಧ ಕೋಟೆ ಮಲ್ಲೇಶ್ವರ ದೇವಾಲಯದಲ್ಲಿ 1ನೇ ವರ್ಷದ ದಾಸೋಹ ದಿನವನ್ನು ಆಚರಿಸಲಾಯಿತು. ನಮ್ಮ ಬಳ್ಳಾರಿಯ ಕೋಟೆ ಮಲ್ಲೇಶ್ವರ ದೇವಾಲಯ ಅತ್ಯಂತ ಪುರಾತನ ದೇವಾಲಯವಾಗಿದ್ದು, ನಗರ ಸೇರಿದಂತೆ ರಾಜ್ಯಾದ್ಯಂತ ಭಕ್ತರ ದಂಡೇ ದರ್ಶನಕ್ಕೆ ಹರಿದು ಬರುತ್ತಿದೆ. ನಗರಕ್ಕೆ ಯಾವುದೇ ಅತಿಥಿಗಳು ಆಗಮಿಸಿದರು ಕೋಟೆ ಮಲ್ಲೇಶ್ವರ ಸ್ವಾಮಿ ಪುಣ್ಯಕ್ಷೇತ್ರಕ್ಕೆ ಆಗಮಿಸಿ ದರ್ಶನ ಪಡೆಯುತ್ತಾರೆ. ಪ್ರತಿ ವರ್ಷ ಸ್ವಾಮಿಯ ಜಾತ್ರಾ ಮಹೋತ್ಸವ ಅದ್ದೂರಿಯಿಂದ ನಡೆಯುತ್ತಿದೆ. ಭಕ್ತರ ಸಲಹೆ ಮೇರೆಗೆ ಪ್ರತಿ ಸೋಮವಾರ ಭಕ್ತರಿಗೆ ದಾಸೋಹದ ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರಧಾನ ಕಾರ್ಯದರ್ಶಿ ಮುದಿಮಲ್ಲಯ್ಯ, ಸಹ ಕಾರ್ಯದರ್ಶಿ ಶಿವಗುಂಡಯ್ಯ, ಖಜಾಂಚಿ ಸುರೇಶ್ ಆಡೂರು, ಮಹೇಂದ್ರ, ಪರಮೇಶ್, ಪೇಟಯ್ಯ, ಬಂಡೇಗೌಡ, ಪ್ರಭಾಕರ್, ಜ್ಯೋತಿ, ಈರಣ್ಣ ಇತರರಿದ್ದರು.

ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನ



◆**ಹೂವಿನಹಡಗಲಿ:** ತಾಲೂಕಿನ ಹೊಳಗುಂದಿ ಗ್ರಾಮದ ಹೊರವಲಯದಲ್ಲಿರುವ ಗ್ಲೋಬಲ್ ಪದವಿಪೂರ್ವ ಕಾಲೇಜಿನಲ್ಲಿ ಶುಕ್ರವಾರ ಫಲಿತಾಂಶ ಸಂಭ್ರಮೋತ್ಸವ ಸಮಾರಂಭ ನಡೆಯಿತು. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕ ಗಳಿಸಿದ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಎ.ನಂದಿನಿ, ಸಂಜನಾ ಆರ್.ಎಂ., ಪ್ರಿಯಾಂಕ ಎಂ.ಎಸ್., ಪ್ರತಿಕ್ಷಾ ಎನ್. ವಿದ್ಯಾರ್ಥಿಗಳನ್ನು ಅಭಿನಂದಿಸಿ ಗೌರವಿಸಲಾಯಿತು. ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷ ಡಿ.ಅಬ್ದುಲ್ ರಫಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಾಂಶುಪಾಲರಾದ ಮಹೇಶ ಕುಮತಿಮಠ ಆಡಳಿತ ಮಂಡಳಿ ಅಧಿಕಾರಿ ಡಿ ಕರೀಂ ಸಾಹೇಬ ,ಉಪನ್ಯಾಸಕರಾದ ಬಸವರಾಜ ಇತರರಿದ್ದರು.

ಬ್ಲಾಕ್ ಬೆಲ್ಟ್ ಗ್ರೇಡಿಂಗ್ ಶಿಬಿರ



◆**ಹನುಮಸಾಗರ:** ಕರಾಟೆಯ ಕ್ರೀಡಾ ಪಟುಗಳು ತಮಿಳುನಾಡು ಕನ್ಯಾಕುಮಾರಿಯ ಸಿಎಸ್ಐ ಆಡಿಟೋರಿಯಂ ಹಾಲ್‌ನಲ್ಲಿ ಎರಡು ದಿನ ಅಖಿಲ ಭಾರತ ಸಿಲಂಬವ್ ಫೆಡರೇಶನ್ ವತಿಯಿಂದ ಆಯೋಜಿಸಿದ್ದ, ಬ್ಲಾಕ್ ಬೆಲ್ಟ್ ಗ್ರೇಡಿಂಗ್ ಶಿಬಿರದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಯ ಏಳು ಶಿಬಿರಾರ್ಥಿಗಳು ಭಾಗವಹಿಸಿ ವಿವಿಧ ಗ್ರೇಡ್ ಪಡೆದುಕೊಂಡರು. ಇಂಟರ್ ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ ಹಾಗೂ ಚಲನಚಿತ್ರ ನಟ ಸೇಲ್ವರಾಜ್ ಪಿ.ಹಾಸನ್ ತರಬೇತಿ ನೀಡಿ ಪ್ರಮಾಣ ಪತ್ರ ಹಾಗೂ ಬ್ಲಾಕ್ ಬೆಲ್ಟ್ ವಿತರಿಸಿದರು. ಕೊಪ್ಪಳ ಜಿಲ್ಲೆಯ ಮಹಾಂತೇಶ ಬೀಳಗಿ ಸೆಕೆಂಡ್ ಡ್ಯಾನ್ ಪಡೆದುಕೊಂಡರೆ, ಮಲ್ಲೇಶ ಕೋಳೂರು ಹಾಗೂ ವಿರಾಜ್ ಗುಡಿಕೋಟಿ ಫಸ್ಟ್ ಡ್ಯಾನ್, ಬೆಂಗಳೂರ ಜಿಲ್ಲೆಯ ಜಪಮುನಿ ಎ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕುಮಾರ್ ಎಂ. ಜಿ, ಬಿಜಾಪುರ ಜಿಲ್ಲೆಯ ರಾಯನಗೌಡ ಬಿರಾದಾರ್, ಗುಲ್ಬರ್ಗದ ನಬಿ ನದಾಫ್, ಫಸ್ಟ್ ಡ್ಯಾನ್ ಪಡೆದುಕೊಂಡರು ಎಂದು ಕರ್ನಾಟಕ ರಾಜ್ಯ ಸಿಲಂಬವ್ ಕಾರ್ಯದರ್ಶಿ ಮಹಾಂತೇಶ ಬೀಳಗಿ ತಿಳಿಸಿದರು.



ಕರೂರ: ಸಮೀಪದ ಹೆಚ್ಚು ಹೊಸಹಳ್ಳಿ ಗ್ರಾಮ ಹೊಸಳ್ಳಿ ಪಂಚಾಯಿತಿಯಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಕನಕದುರ್ಗಾ ಲ್ಯಾಬ್ ವತಿಯಿಂದ ಉಚಿತ ಆರೋಗ್ಯ ಶಿಬಿರ ನಡೆಸಲಾಯಿತು.

ರೂಪಾ ಪಾಟೀಲಗೆ 'ಸರಸ್ವತಿ ಕನ್ನಡ ರತ್ನ' ಪ್ರಶಸ್ತಿ ಪ್ರದಾನ



◆**ಸುರಪುರ:** ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನ ಸಾಲಿಗ್ರಾಮ ದಾವಣಗೆರೆ ವತಿಯಿಂದ ಏ.19ರಂದು ಚೆನ್ನಗಿರಿ ವಿರುಪಾಕ್ಷಪ್ಪ ಧರ್ಮಶಾಲಾ ಕಲ್ಯಾಣ ಮಂಟಪದಲ್ಲಿ ಯಾದಗಿರಿ ಜಿಲ್ಲೆಯ ಶಹಾಪುರದ ಸೂಗುರೇಶ್ವರ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿಯಾದ ಕುಮಾರಿ ರೂಪಾ ಶಂಕರರಾವ್ ಪಾಟೀಲ ಅವರಿಗೆ 'ಸರಸ್ವತಿ ಕನ್ನಡ ರತ್ನ' ರಾಜ್ಯ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಗುವುದು ಎಂದು ಪ್ರತಿಷ್ಠಾನದ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ ಶೆಣೈ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಇವರು ಮುಂದಿನ ದಿನಮಾನಗಳಲ್ಲಿ ಇನ್ನು ಹೆಚ್ಚಿನ ಸಾಧನೆ ಮಾಡಿ ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದು ಹೆತ್ತ ತಂದೆ, ತಾಯಿ, ಪೋಷಕರಿಗೆ, ಅಕ್ಷರಾಭ್ಯಾಸ ನೀಡಿದ ಗುರುಗಳಿಗೆ, ಹುಟ್ಟಿದ ಊರಿಗೆ, ಕೀರ್ತಿ ತರಲಿ ಎಂದು ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ನಾಗೇಶ ಸಂಜೀವ ಕಿಣಿ ಬೆಂಗಳೂರು, ಪ್ರಧಾನ ಕಾರ್ಯದರ್ಶಿ ಶ್ರೀಪತಿ ರಾಘವೇಂದ್ರ ಶೆಣೈ ಸಾಲಿಗ್ರಾಮ, ಸರ್ವ ಸದಸ್ಯರು, ಪದಾಧಿಕಾರಿಗಳು ತಿಳಿಸಿದ್ದಾರೆ.



ವಿಜಯನಗರ: ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಅರ್ಚನಾ ಡಿ.ಎಂ. ಅವರನ್ನು ಹೊಸಪೇಟೆಯಲ್ಲಿರುವ ಬುದ್ಧ ಫಂಕ್ಷನ್ ಹಾಲ್‌ನಲ್ಲಿ ಶನಿವಾರ ಜಿಲ್ಲಾ ಅಂಬೇಡ್ಕರ್ ಸಂಘದಿಂದ ಅದ್ಧೂರಿಯಾಗಿ ಸನ್ಮಾನಿಸಲಾಯಿತು. ಸಂಘದ ಪ್ರಮುಖರಾದ ವೀರಸ್ವಾಮಿ, ಕೆ.ಪಿ.ಉಮಾಪತಿ, ಯರಿಯಪ್ಪ, ಪ್ರಭು ಕೊಡ್ಲೇ, ವೆಂಕಟೇಶ್, ವೆಂಕಪ್ಪ, ಗಾದಿಲಿಂಗಪ್ಪ, ಸೇಷು, ಮಾರೆಣ್ಣಾ ಕೊಲ್ಲಾಪುರಿ ಇದ್ದರು.

ವಿಜಯನಗರದಲ್ಲಿ ಖಾಕಿ ಪಡೆಯಿಂದ ಭರ್ಜರಿ ಬೇಟೆ

ಹೆಲ್ಮೆಟ್ ಇಲ್ಲದೇ ರಸ್ತೆಗಿಳಿದರೆ ಜೋಕೆ !

◆**ವಿಜಯನಗರ:** ಜಿಲ್ಲೆಯಲ್ಲಿ ಹೆಚ್ಚುತ್ತಿರುವ ರಸ್ತೆ ಅಪಘಾತಗಳನ್ನು ತಡೆಗಟ್ಟಲು ಮತ್ತು ಸಾರ್ವಜನಿಕರಲ್ಲಿ ಸುರಕ್ಷತೆಗಾಗಿ ಜಾಗೃತಿ ಮೂಡಿಸಲು ಜಿಲ್ಲಾ ಪೊಲೀಸ್ ಇಲಾಖೆ ಇದೀಗ ಫೀಲ್ಡ್‌ಗೆ ಇಳಿದಿದೆ. ಕಳೆದ ಎರಡ್ಮೂರು ದಿನಗಳಿಂದ ಜಿಲ್ಲಾ ಕೇಂದ್ರ ಹೊಸಪೇಟೆ ಸೇರಿದಂತೆ ಎಲ್ಲ ತಾಲೂಕು ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸಂಚಾರಿ ನಿಯಮ ಉಲ್ಲಂಘಿಸುವವರ ವಿರುದ್ಧ ಸಮರ ಸಾರಿದ್ದಾರೆ. ಅದರಲ್ಲೂ ಶಿರಸ್ತ್ರಾಣವಿಲ್ಲದೇ (ಹೆಲ್ಮೆಟ್) ರಸ್ತೆಗಿಳಿಯುವ ಬೈಕ್ ಸವಾರರಿಗೆ ಬಿಸಿ ಮುಟ್ಟಿಸುತ್ತಿದ್ದಾರೆ.

ಬಯಲುಸೀಮೆ ವಿಜಯನಗರ ಜಿಲ್ಲೆಯಲ್ಲಿ ವರ್ಷವಿಡೀ ಬಿಸಿಲಿನ ತಾಪಮಾನ ಹೆಚ್ಚಾಗಿರುತ್ತದೆ. ಇದೇ ಕಾರಣವನ್ನು ಮುಂದಿಟ್ಟುಕೊಂಡು ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಎಂದರೆ ಮೂಗು ಮುರಿಯುತ್ತಾರೆ. ಆದರೂ, ಸುರಕ್ಷತೆ ದೃಷ್ಟಿಯಿಂದ ಹೆಲ್ಮೆಟ್ ಧರಿಸುವಂತೆ ಸಾರ್ವಜನಿಕರಲ್ಲಿ ಪೊಲೀಸ್ ಇಲಾಖೆ ನಿರಂತರ ಜಾಗೃತಿ ಮೂಡಿಸಿದೆ. ಈ ನಡುವೆ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ದ್ವಿಚಕ್ರ ಅಪಘಾತಗಳಲ್ಲಿ ಹೆಲ್ಮೆಟ್ ಧರಿಸದಿರುವವರ ಮರಣ ಪ್ರಮಾಣ ಹೆಚ್ಚಿದೆ. ಅಪಘಾತಗಳ ಅಂಕಿ– ಸಂಖ್ಯೆಗಳಿಂದ ಎಚ್ಚೆತ್ತುಕೊಂಡಿರುವ ಜಿಲ್ಲಾ ಪೊಲೀಸ್ ಇಲಾಖೆ ಇದೀಗ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ.

ಬಿಸಿಲಲ್ಲೂ ಬಿಗಿ ನಾಕಾಬಂಧಿ: ಜಿಲ್ಲೆಯಲ್ಲಿ ಬೇಸಿಗೆ ಬಿಸಿಲು ಜೋರಾಗಿದೆ. ನೆತ್ತಿ ಸುಡುತ್ತಿರುವ ಬಿರು ಬಿಸಿಲನ್ನು ಲೆಕ್ಕಿಸದೇ ಪೊಲೀಸರು ಪ್ರಮುಖ ಆಯಕಟ್ಟಿನ ಸ್ಥಳಗಳಲ್ಲಿ ಬೀಡುಬಿಟ್ಟಿದ್ದಾರೆ. ನಗರ ಹಾಗೂ ಪಟ್ಟಣಗಳಲ್ಲಿರುವ ಪ್ರಮುಖ ವೃತ್ತಗಳು ಹಾಗೂ ಆಯಕಟ್ಟಿನ ಸ್ಥಳಗಳಲ್ಲಿ 'ನಾಕಾಬಂಧಿ' ಹಾಕಲಾಗಿದ್ದು ಪ್ರತಿಯೊಂದು ದ್ವಿಚಕ್ರ ವಾಹನವನ್ನು ತಪಾಸಣೆ ನಡೆಸುತ್ತಿದ್ದಾರೆ. ಹೆಲ್ಮೆಟ್ ಇಲ್ಲದ ಸವಾರರನ್ನು ತಡೆಯುವ ಪೊಲೀಸರು, ಚಾಲನಾ ಪರವಾನಗಿ (ಡಿಎಲ್) ಮತ್ತು ವಾಹನದ ದಾಖಲೆಗಳನ್ನೂ ಸಹ ಪರಿಶೀಲಿಸುತ್ತಿದ್ದಾರೆ.



> ನಾವು ಕೇವಲ ದಂಡ ವಸೂಲಿ ಮಾಡುವುದಕ್ಕಾಗಿ ಈ ಕಾರ್ಯಾಚರಣೆ ನಡೆಸುತ್ತಿಲ್ಲ. ಪ್ರತಿಯೊಬ್ಬ ಸವಾರನ ಪ್ರಾಣವೂ ನಮಗೆ ಅಮೂಲ್ಯ. ಅಪಘಾತ ಸಂಭವಿಸಿದಾಗ ಹೆಲ್ಮೆಟ್ ಧರಿಸಿದ್ದರೆ ಪ್ರಾಣಾಪಾಯದಿಂದ ಪಾರಾಗಬಹುದು ಎಂಬುದು ನಮ್ಮ ಕಳಕಳಿಯಾಗಿದೆ.
>
> ■ ಜಾಹ್ನವಿ ಎಸ್., ಎಸ್ಪಿ

ಹೆಲ್ಮೆಟ್ ತಂದರಷ್ಟೇ ಬೈಕ್ ರಿಲೀಸ್: ಸಾಮಾನ್ಯವಾಗಿ ಹೆಲ್ಮೆಟ್ ಇಲ್ಲದವರಿಗೆ ದಂಡ ವಿಧಿಸಿ ಕಳುಹಿಸುವುದು ವಾಡಿಕೆ. ಆದರೆ, ಈ ಬಾರಿ ವಿಜಯನಗರ ಪೊಲೀಸರು ಭಿನ್ನ ಹಾದಿ ತುಳಿದಿದ್ದಾರೆ. ಕಳೆದ ಎರಡು ದಿನಗಳಿಂದ ಎಲ್ಲೆಡೆ ಬೈಕ್ ಧರಿಸುವಂತೆ ಬೈಕ್ ಸವಾರರಿಗೆ ತಿಳುವಳಿಕೆ ನೀಡಿದ್ದ ಖಾಕಿಪಡೆ, ಭಾನುವಾರ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದ್ದಾರೆ. ಹೆಲ್ಮೆಟ್ ಧರಿಸದೇ ಸಿಕ್ಕಿಬಿದ್ದ ಸವಾರರ ಬೈಕ್‌ಗಳನ್ನು ವಶಪಡಿಸಿಕೊಳ್ಳುತ್ತಿರುವ ಅಧಿಕಾರಿಗಳು, 'ಮನೆಗೆ ಹೋಗಿ ಹೆಲ್ಮೆಟ್ ತಂದು ತೋರಿಸಿ, ಇಲ್ಲವೇ ಬೈಕ್ ಇಲ್ಲೇ ಬಿಟ್ಟು ಹೋಗಿ' ಎಂದು ಖಡಕ್ ಸೂಚನೆ ನೀಡುತ್ತಿದ್ದಾರೆ.

ಇದರಿಂದಾಗಿ ಕೆಲವರು ಮನೆಯಲ್ಲಿರುವ ಹೆಲ್ಮೆಟ್ ತಂದು ತೋರಿಸಿದರೆ, ಇನ್ನುಳಿದವರು ಅನಿವಾರ್ಯವಾಗಿ ಸಮೀಪದಲ್ಲೇ ಹೆಲ್ಮೆಟ್ ಮಾರುವವರಿಂದ ಖರೀದಿಸುತ್ತಿದ್ದಾರೆ. ಮತ್ತೆಂದೂ ಹೆಲ್ಮೆಟ್ ಮರೆಯಬಾರದು, ಇಲ್ಲವೆ ದುಬಾರಿ ದಂಡ ಹಾಕುವುದಾಗಿ ಎಚ್ಚರಿಕೆ ನೀಡಿ, ಬಿಟ್ಟುಕಳುಹಿಸುತ್ತಿದ್ದಾರೆ. ಪೊಲೀಸರ ನಡೆಗೆ ಸಾರ್ವಜನಿಕರಲ್ಲಿ ಮೆಚ್ಚುಗೆ ವ್ಯಕ್ತವಾಗುತ್ತಿದೆಯಾದರೂ, ಬಿರು ಬಿಸಿಲಿನಲ್ಲಿ ಹೆಲ್ಮೆಟ್ ಧರಿಸುವುದು ಹಿಂಸೆ ಎಂದು ಜನ ಸಾಮಾನ್ಯರು ಪೇಚಾಡುವಂತಾಗಿದೆ.

ಗುರು ಅನುಗ್ರಹವಾದರೆ ಸಕಲವೂ ಪ್ರಾಪ್ತಿ

◆**ಯಾದಗಿರಿ:** ಗುರುಗಳಲ್ಲಿ ನಾವು ಪ್ರಾರ್ಥಿಸಬೇಕಾಗಿರುವುದು ಕೇವಲ ಅನುಗ್ರಹವನ್ನು ಮತ್ತು ಗುರು ಕೃಪೆಯನ್ನು ಮಾತ್ರ. ಗುರು ಕೃಪೆ ನಮ್ಮ ಮೇಲೆ ಹರಿಯಿತೆಂದರೆ ಸಕಲವೂ ದೊರಕುತ್ತದೆ ಎಂದು ಪಂಡಿತ್ ನರಸಿಂಹಾಚಾರ್ ಪುರಾಣಿಕ ಹೇಳಿದರು.

ಭಾನುವಾರ ಇಲ್ಲಿನ ಶ್ರೀರಾಘವೇಂದ್ರ ಪರಿಮಳ ಮಂಟಪದಲ್ಲಿ ವಿಶ್ವಮಾಧ್ವ ಮಹಾಪರಿಷತ್‌ನಿಂದ ಆಯೋಜಿಸಲಾಗಿದ್ದ ಮಕ್ಕಳ ಬೇಸಿಗೆ ಧಾರ್ಮಿಕ ಶಿಬಿರದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿ, ಶಾಸ್ತ್ರಗಳು ವಿದ್ಯೆಯನ್ನು ಪಡೆಯುವುದೇ ದೊಡ್ಡ ಸಾಧನೆಯಾಗಲಾರದು ಎಂದು ಒತ್ತಿ ಹೇಳುತ್ತವೆ. ಕಾರಣ ಅದರೊಡನೆ ನಮ್ರತೆಯೂ ಇರಬೇಕು. ವಿದ್ಯೆ ವಿನಯದಿಂದ ಭೂಷಿತವಾದಾಗ ಮಾತ್ರ ವಿದ್ಯೆ ಪರಿಪೂರ್ಣವಾಗಿ ನಮಗೆ ದೊರಕುತ್ತದೆ ಎಂದರು.

ಈಗ ಕಲಿತ ವಿದ್ಯೆಯನ್ನು ದಿನಂಪ್ರತಿ ಹಿತಾವತ್ತಾಗಿ ಮುಂದುವರಿಸಿಕೊಂಡು ಹೋಗಬೇಕು. ಏ 6ರಿಂದ 12ರ ರವಿವಾರದವರೆಗೆ ಒಟ್ಟು ಏಳು ದಿನಗಳ ಕಾಲ ನಡೆದ ಈ ಶಿಬಿರದಲ್ಲಿ ದೇವರ ನಾಮ, ದೇವರ ಸ್ತೋತ್ರಗಳು, ಹರಿಕಥಾಮೃತಸಾರ, ತ್ರಿಕಾಲ ಸಂಧ್ಯಾವಂದನೆ, ಸೂಳಾದಿಗಳು, ನಿತ್ಯ ನೈಮಿತಿಕ ವಿಚಾರ, ಯತಿಗಳ ದಾಸರ ಪರಿಚಯ, ಹಾಗೂ ವಿವಿಧ ಧಾರ್ಮಿಕ ಚಟುವಟಿಕೆಗಳನ್ನು ತಿಳಿಸಿಕೊಡಲಾಯಿತು ಎಂದು ಹೇಳಿದರು.

ಮಠದ ವ್ಯವಸ್ಥಾಪಕರಾದ ರಾಘವೇಂದ್ರ ಜೋಶಿ ಅವರು ಶಿಬಿರಾರ್ಥಿಗಳಿಗೆ ಎಲ್ಲ ರೀತಿಯ ವ್ಯವಸ್ಥೆಯನ್ನು ಕಲ್ಪಿಸಿದರೆ, 7 ದಿನಗಳ ಕಾಲ ಶಿಬಿರಾರ್ಥಿಗಳಿಗೆ ಪಂ.ನರಸಿಂಹಾಚಾರ್ ಪುರಾಣಿಕ ಅವರ ಜೊತೆ ಹೆಣ್ಣು ಮಕ್ಕಳಿಗೆ ದಿವ್ಯಾ ಪುರಾಣಿಕ ಮತ್ತು ಗಂಡು ಮಕ್ಕಳಿಗೆ ಪಂ.ಹರೀಶ ಆಚಾರ ನಾರಾಯಣಪೇಟ್ ಅವರುಗಳು ಧಾರ್ಮಿಕ ವಿಷಯವಾಗಿ ಬೋಧನೆ ಮಾಡಿದರು.

ದಿನೇಶ ವಿಸಿ ಮತ್ತು ಲಕ್ಷ್ಮೀಕಾಂತ್ ಕುಲಕರ್ಣಿ ಅವರಿಗೆ ಕಳೆದ ಜ.26ರಂದು ಜಿಲ್ಲಾಡಳಿತ ವತಿಯಿಂದ ಗಣರಾಜ್ಯೋತ್ಸವ ಪ್ರಶಸ್ತಿ ನೀಡಿರುವುದನ್ನು ಸ್ಮರಿಸಿ, ಶ್ರೀಮದ್ ಉತ್ತರಾದಿ ಮಠ ಹಾಗೂ ವಿಶ್ವಮಧ್ವ ಮಹಾ ಪರಿಷತ್ ಯಾದಗಿರಿ ಘಟಕದ ವತಿಯಿಂದಲೂ ಸನ್ಮಾನಿಸಿ ಗೌರವಿಸಲಾಯಿತು.

ಈ ಶಿಬಿರದಲ್ಲಿ ನಗರದ ನೂರಾರು ವಿಪ್ರ ಮಕ್ಕಳು ಬೇಸಿಗೆಯ ಧಾರ್ಮಿಕ ಶಿಬಿರದಲ್ಲಿ ಭಾಗವಹಿಸಿ ಶಿಬಿರದ ಸದುಪಯೋಗಪಡಿಸಿಕೊಳ್ಳುವುದರ ಮುಖಾಂತರ ದೇವರ ಅನುಗ್ರಹಕ್ಕೆ ಪಾತ್ರರಾಗದರು.



ಮಕ್ಕಳಿಗೆ ನೈತಿಕ ಮೌಲ್ಯ ಬೆಳೆಸಿ: ಮಣಿಕಂಠ

◆**ಹೂವಿನಹಡಗಲಿ:** ಪಾಲಕರು ಮಕ್ಕಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸಿ ಎಂದು ಪಿಎಸ್ಐ ಮಣಿಕಂಠ ಕೆ.ಎಚ್. ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಮೌಂಟ್ ಕಾರ್ಮೆಲ್ ಶಾಲೆಯ 2025-26ರ ಸಾಲಿನ 15ನೇ ಶಾಲಾ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಹಿಂದೆ ಶಾಲೆಗಳಲ್ಲಿ ಮಕ್ಕಳು ತಪ್ಪು ಮಾಡಿದಾಗ ಶಿಕ್ಷಕರು ಹೊಡೆದು ಬುದ್ಧಿ ಹೇಳಿ ಸರಿಮಾರ್ಗದಲ್ಲಿ ನಡೆಯಲು ಮಾರ್ಗದರ್ಶನ ನೀಡುತ್ತಿದ್ದರು. ಆದರೆ ಈಗ ಆ ಪರಿಸ್ಥಿತಿ ಇಲ್ಲ, ಮಕ್ಕಳನ್ನು ತಿದ್ದಿ ತೀಡುವ ಮಹತ್ವದ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಹೇಳಿದರು.

ಬೋಧನೆ ಜೊತೆಗೆ ಮಾನವೀಯ ಸಂಬಂಧಗಳು ಸಮಾನತೆ ಸಾಮರಸ್ಯ ಸೌಹಾರ್ದತೆ ಬೆಳೆಸುವ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳು ಸ್ಪಂದಿಸಲಿ ಎಂದು ತಿಳಿಸಿದರು.

ಕನ್ನಡ ಜಾಗೃತಿ ಸಮಿತಿ ಜಿಲ್ಲಾ ಸದಸ್ಯ ಸುರೇಶ ಅಂಗಡಿ ಥಾಮಸ್ ಆಲ್ವಾ ಎಡಿಸನ್ ಮದರ್ ತೆರೇಸಾ ಮೊದಲಾದ ಮಹನೀಯರ ನಡೆ ನುಡಿ ಮಕ್ಕಳು ಅನುಸರಿಸಿರಿ ಎಂದರು.

ಪ್ರಾಚಾರ್ಯ ಫಾದರ್ ವಿಕ್ಟರ್ ವಿಜಯ್ ಪೈಸ್ 2025-26ರ ಶಾಲಾ ವಾರ್ಷಿಕ ವರದಿ ವಾಚಿಸಿದರು. ಸಂಚಾಲಕ ಫಾದರ್ ಡೇಂಜಿಲ್ ವೇಗಸ್ ಮಾತನಾಡಿ, ಮಕ್ಕಳ ಉತ್ತಮ ಭವಿಷ್ಯ ರೂಪಿಸುವುದು ಸಂಸ್ಥೆಯ ಮುಖ್ಯ ಧೋರಣೆ ಆಗಿದೆ ಎಂದು ತಿಳಿಸಿದರು.

ಪಟ್ಟಣ ಸಿಆರ್‌ಪಿ ವೀರೇಶ ಬಗಲಿ ಮಾತನಾಡಿ, ಸಂಸ್ಥೆ ಮುಂದಿನ ದಿನಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಲು ಮುಂದಾಗಬೇಕು ಎಂದು ತಿಳಿಸಿದರು. ಫಾದರ್ ಆರ್ಚಿಬಾಲ್ಡ ಗೋನ್ಸಾವಿಲ್ಸ ಕರ್ನಾಟಕ ಗೋವಾ ಪ್ರಾಂತ್ಯದ ಮೊದಲ ಪ್ರಾಂತಾಧಿಕಾರಿ ಅಧ್ಯಕ್ಷತೆ ವಹಿಸಿದ್ದರು.

ಫಾದರ್ ಹೆನ್ರಿ ಮೊರಾಸ್ ಸಿಸ್ಟರ್ ರೋಸಿಟಾ, ತಾನಿಯಾ ಫಾದರ್ ಪ್ರಕಾಶ್ ರೆಬೆಲ್ಲೊ ಫಾದರ್ ಲೀಪರ್ಡ್ ರೊನಾಲ್ಡ ಬ್ರದರ್ ಲಿಕ್ಸನ್ ಸೇರಿದಂತೆ ಶಾಲಾ ಶಿಕ್ಷಕ ಸಿಬ್ಬಂದಿ ಉಪಸ್ಥಿತರಿದ್ದರು.

ಪತ್ರಕರ್ತ ಎಂ.ದಯಾನಂದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿ ಕಾರ್ಮೆಲ್ ಶಾಲೆಕಾರ್ಯ ನಿರ್ವಹಿಸುತ್ತಿದೆ ಎಂದು ಹೇಳಿದರು. ಶಿಕ್ಷಕರಾದ ಮಹಾಲಕ್ಷ್ಮಿ, ಪ್ರಕಾಶ್, ಅನಿಲ್, ಪ್ರಶಾಂತ್ ನಿರ್ವಹಿಸಿದರು. ಶಾಲೆಯ ವಿವಿಧ ತರಗತಿಗಳ ಮಕ್ಕಳು ಪ್ರದರ್ಶಿಸಿದ ಆಕರ್ಷಕ ನೃತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಮನಸೂರೆಗೊಂಡವು.



ಪ್ರಾಣಿ ಪಕ್ಷಿಗಳಿಗೆ ಕಾಳು, ನೀರಿನ ಬಟ್ಟಲು ವಿತರಣೆ

◆**ಬಳ್ಳಾರಿ:** ನಿಮಗಾಗಿ ನಾವು ಸಂಸ್ಥೆಯ ವತಿಯಿಂದ ಬಿಸಿಲಿನ ಬೇಗೆಯನ್ನು ಅನುಭವಿಸುತ್ತಿರುವ ಪ್ರಾಣಿ ಪಕ್ಷಿಗಳ ನೆರವಿಗಾಗಿ ಕಾಳು, ನೀರಿನ ಬಟ್ಟಲು ಮತ್ತು ತೊಟ್ಟಿಗಳನ್ನು ಆಸಕ್ತ ಸಾರ್ವಜನಿಕರಿಗೆ ವಿತರಿಸುವ ಕಾರ್ಯಕ್ರಮವನ್ನು ನಗರದ ನಿಮಗಾಗಿ ನಾವು ಸಂಸ್ಥೆಯ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ವಿನಯಕುಮಾರ್ ಅವರು ಮಾತನಾಡಿ, ಬಿಸಿಲಿನ ತಾಪಕ್ಕೆ ಜನರು ತತ್ತರಿಸಿದ್ದು, ಮೂಕ ಜೀವಿಗಳಿಗೆ ಸಮಸ್ಯೆ ಹೇಳತೀರದಾಗಿದೆ. ನಿತ್ಯ ನಾನಾ ರೀತಿಯ ತೊಂದರೆ ಅನುಭವಿಸುತ್ತಿರುವುದು ಕಂಡು ಬರುತ್ತಿದೆ. ಈ ಹಿನ್ನೆಲೆ ಈ ಸೇವಾ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದೇವೆ. ನಮ್ಮ ಸಹಜೀವಿಗಳನ್ನು ಸಂರಕ್ಷಿಸುವ ಕೆಲಸ ಪ್ರತಿಯೊಬ್ಬರಿಂದಲೂ ಆಗಬೇಕು ಎಂದು ತಿಳಿಸಿದರು. ಎಂಜಿನಿಯರ್ ಶ್ರೀಧರ್ ಅವರು ಮಾತನಾಡಿದರು.

ಯೋಜನೆಯ ಕಾರ್ಯದರ್ಶಿ ಅಜಯ್ ಮಾತನಾಡಿ, ಈ ಬಟ್ಟಲು ಮತ್ತು ತೊಟ್ಟಿಗಳ ಉಚಿತ ವಿತರಣೆಯು ಈ ತಿಂಗಳು ಪೂರ್ತಿ ನಡೆಯಲಿದ್ದು, ಆಸಕ್ತರು ಸಂಸ್ಥೆಯ ಮೊಬೈಲ್ ಸಂಖ್ಯೆ 9448584400 ನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದು ಎಂದು ತಿಳಿಸಿದರು.



ಸಂಸ್ಥೆಯ ಸದಸ್ಯರಾದ ಶಾಂತ, ಶಮಸ್ಸದ್ ಖಾನುಂ, ನಸೀಮಾ, ಮೆಹಬೂಬ್ ಭಾಷ, ದಕ್ಷಿಣ ಮೂರ್ತಿ, ವೀರೇಶ್, ಮನೋಜ್, ಶ್ರೀಧರ್, ಪ್ರದೀಪ್ ರೆಡ್ಡಿ, ಶ್ರೀನಿವಾಸ, ಶರಣ್, ಬಾಲಾಜಿ, ಶರಣ್, ಮಹಮ್ಮದ್, ಬಾಲು, ಆನಂದ್ ಯೋಗಿ, ಅನಿಲ್, ಹಸೇನ್, ವೆಂಕಟೇಶ್, ಭರತ್, ಹರ್ಷವರ್ಧನ್, ಮಾರುತಿ ಇತರರು ಉಪಸ್ಥಿತರಿದ್ದರು.

ಖರ್ಗೆ ವಿರುದ್ಧ ಕ್ರಮಕ್ಕೆ ಬಿಜೆಪಿ ಯುವ ಮೋರ್ಚಾದಿಂದ ದೂರು

◆**ಕೊಟ್ಟೂರು:** ಇತ್ತೀಚೆಗೆ ಅಸ್ಸಾಂ ಚುನಾವಣಾ ಪ್ರಚಾರದಲ್ಲಿ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ್ ಖರ್ಗೆಯವರು ಆರ್‌ಎಸ್‌ಎಸ್ ಮತ್ತು ಬಿಜೆಪಿ ಪಕ್ಷವನ್ನು ವಿಷ ಸರ್ಪಕ್ಕೆ ಹೋಲಿಸಿ ಅವುಗಳನ್ನು ಕೊಲ್ಲಬೇಕೆಂಬ ಪ್ರಚೋದನಾಕಾರಿ ಹೇಳಿಕೆಯನ್ನು ನೀಡಿರುವುದರಿಂದ ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಕೊಟ್ಟೂರು ಮಹಾ ಶಕ್ತಿ ಕೇಂದ್ರದ ಬಿಜೆಪಿ ಯುವ ಮೋರ್ಚಾ ವತಿಯಿಂದ ಕೊಟ್ಟೂರು ಪೊಲೀಸ್ ಠಾಣೆಗೆ ದೂರನ್ನು ನೀಡಲಾಯಿತು.

ಖರ್ಗೆ ಹೇಳಿಕೆಯಿ ಅಶಾಂತಿ ಉಂಟುಮಾಡುವಂತಿದ್ದು ಸಂವಿಧಾನ ವಿರೋಧಿಯಾಗಿದೆ. ಅಲ್ಪಸಂಖ್ಯಾತರ ಓಲೈಕೆಗಾಗಿ ಎಐಸಿಸಿ ಅಧ್ಯಕ್ಷರು ನೀಡಿದ ಹೇಳಿಕೆಯು ದೇಶಾದ್ಯಂತ ಇರುವ ಆರ್‌ಎಸ್‌ಎಸ್ ಹಾಗೂ ಬಿಜೆಪಿ ಕಾರ್ಯಕರ್ತರಿಗೆ ಅಪಾಯ ತಂದೊಡ್ಡುವ ಸಂದರ್ಭ ಇದ್ದು ಖರ್ಗೆಯವರ ವಿರುದ್ಧ ಪೊಲೀಸರು ಸ್ವಯಂ ಪ್ರೇರಿತ ದೂರು ದಾಖಲೆಸಿಕೊಂಡು ಅವರನ್ನು ಬಂಧಿಸಬೇಕೆಂದು ಬಿಜೆಪಿ ಯುವ ಮೋರ್ಚಾದಿಂದ ಒತ್ತಾಯಿಸಲಾಯಿತು.



ಜಿಲ್ಲಾ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೆ.ಎಚ್.ಎಂ.ಸಚಿನ್ ಕುಮಾರ್, ಕೊಟ್ಟೂರು ಯುವ ಮೋರ್ಚಾ ಘಟಕದ ಅಧ್ಯಕ್ಷ ಮಣಿಕಂಠ, ಎಸ್ಸಿ ಮೋರ್ಚಾ ಅಧ್ಯಕ್ಷ ವಿಷ್ಣು, ಉಪಾಧ್ಯಕ್ಷ ಸೋಮಶೇಖರ್, ಕಾರ್ಯದರ್ಶಿ ವಿನಾಯಕ, ಅಭಿಷೇಕ್, ನಾಗರಾಜ್ ಇತರರಿದ್ದರು.

ಸಂಗೀತಾಳಿಗೆ ಪತ್ರಕರ್ತರಿಂದ ಸನ್ಮಾನ




◆**ಯಲಬುರ್ಗಾ:** ಕುಕನೂರು ತಾಲೂಕಿನ ಮಂಗಳೂರ ಗ್ರಾಮದ ಶೇಖರಗೌಡ ಪೋಲಿಸ್ ಪಾಟೀಲ್ ಅವರ ಮಗಳಾದ ಕು.ಸಂಗೀತಾ ಪೊಲೀಸ್‌ಪಾಟೀಲ ಅವರು ಪಿಯುಸಿ ಪರೀಕ್ಷೆಯಲ್ಲಿ 598 ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡ ವಿದ್ಯಾರ್ಥಿನಿಗೆ ಯಲಬುರ್ಗಾ ತಾಲೂಕಾ ಪತ್ರಕರ್ತರ ಸಂಘದ ವತಿಯಿಂದ ಕು.ಸಂಗೀತಾ ಎಸ್. ಪೊಲೀಸ್‌ಪಾಟೀಲ ಅವರಿಗೆ ಸನ್ಮಾನಿಸಲಾಯಿತು.

ಪತ್ರಕರ್ತರ ಸಂಘದ ತಾಲೂಕಾಧ್ಯಕ್ಷ ಶಿವಮೂರ್ತಿ ಇಟಗಿ ಮಾತನಾಡಿ, ಮಂಗಳೂರಿನಂತಹ ಗ್ರಾಮೀಣಪ್ರದೇಶದ ಕು.ಸಂಗೀತಾ ಎಸ್.ಪೊಲೀಸ್‌ಪಾಟೀಲ ಅವರು ನಿರಂತರ ಅಭ್ಯಾಸದಿಂದ ಪಿಯುಸಿಯಲ್ಲಿ 598 ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವುದು ಬಹುದೊಡ್ಡ ಸಾಧನೆಯಾಗಿದೆ. ಹೀಗೆ ಮುಂದೆ ಉನ್ನತ ಸ್ಥಾನವನ್ನು ಪಡೆದುಕೊಂಡು ಜಿಲ್ಲೆ, ತಾಲೂಕಿಗೆ, ಹೆತ್ತವರ ಕೀರ್ತಿ ತರುವಂತಹ ಮಗಳಾಗಬೇಕು ಎಂದರು. ಪತ್ರಕರ್ತ ಈರಣ್ಣ ತೋಟದ ಮಾತನಾಡಿ, ಸಂಗೀತಾ ಮಾಡಿದ ಸಾಧನೆಯಿಂದ ಸಮಾಜ ಸೇರಿದಂತೆ ಎಲ್ಲರೂ ನಿಮ್ಮ ಮನೆ ಬಾಗಿಲಿಗೆ ಬಂದು ಎಲ್ಲ ರೀತಿಯಿಂದ ಸಹಾಯ, ಸಹಕಾರ ಮಾಡುವಂತಹ ಕಾರ್ಯವಾಗುತ್ತಿದೆ ಎಂದು ಹೇಳಿದರು. ಪತ್ರಕರ್ತರಾದ ವಿ.ಎಸ್.ಶಿವಪ್ಪಯ್ಯನಮಠ, ಎಸ್.ಕೆ.ದಾನಕೈ, ಮುತ್ತಪ್ಪ ಆದಿ, ಮಹಿಳಾ ಪ್ರತಿನಿಧಿ ಅಕ್ಕಮಹಾದೇವಿ ಪಾಟೀಲ, ಶೇಖರಗೌಡ ಪೋಲಿಸ್ ಪಾಟೀಲ, ಮಂಜುನಾಥ ಅಧಿಕಾರಿ, ಸುರೇಶಗೌಡ ಶಿವನಗೌಡ್ರ, ಶ್ರೀಶೈಲಪ್ಪ ಗೊಂಡಬಾಳ ಮತ್ತಿತರರು ಇದ್ದರು.

ಪೊಲೀಸರಿಗೆ ಶೀಘ್ರದಲ್ಲೇ ಬೊಜ್ಜು ಪರೀಕ್ಷೆ: ಎಸ್‌ಪಿ

◆**ವಿಜಯನಗರ:** ಕಾನೂನು ಸುವ್ಯವಸ್ಥೆ ಕಾಪಾಡುವ ಪೊಲೀಸ್ ಸಿಬ್ಬಂದಿ ಸದಾ ದೈಹಿಕವಾಗಿ, ಮಾನಸಿಕವಾಗಿ ಸದೃಢರಾಗಿರಬೇಕು. ಬೊಜ್ಜು ಬೆಳೆಸಿ ಕೊಳ್ಳಬಾರದು. ಶೀಘ್ರದಲ್ಲೇ ಬಿಎಂಐ ಯಂತ್ರದ ಮೂಲಕ ಬೊಜ್ಜು ಪರೀಕ್ಷೆ ಕಡ್ಡಾಯಗೊಳಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ಹೇಳಿದರು.

ಪತಂಜಲಿ ಯೋಗ ಸಮಿತಿಯ ಜಿಲ್ಲಾ ಘಟಕದ ವತಿಯಿಂದ ಹೊಸಪೇಟೆಯ ಡಿಎಆರ್ ಪೊಲೀಸ್ ಪರೇಡ್ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ಹೊಸಪೇಟೆ ಉಪವಿಭಾಗ ವ್ಯಾಪ್ತಿಯ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಾಗಿ ಆಯೋಜಿಸಿರುವ 15 ದಿನಗಳ ಉಚಿತ ಯೋಗ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿ, ಯೋಗ, ಪ್ರಾಣಾಯಾಮಗಳಿಂದ ದೇಹದ ಬೊಜ್ಜು ಕರಗಿಸುವುದು ಮಾತ್ರವಲ್ಲ, ಮಾನಸಿಕ ಸದೃಢತೆ ಸಾಧಿಸಬಹುದು. ಫ್ಯಾಟ್ ಪರೀಕ್ಷೆ ಮುಂದಿನ ದಿನಗಳಲ್ಲಿ ಆಗಾಗ ನಡೆಯುತ್ತಲೇ ಇರಲಿದೆ, ಹೀಗಾಗಿ ಈ ಶಿಬಿರದಲ್ಲಿ ಮಾತ್ರವಲ್ಲ, ಮುಗಿದ ಮೇಲೂ ತಮ್ಮ ಮನೆಗಳಲ್ಲಿ ನಿತ್ಯ ಯೋಗ, ಪ್ರಾಣಾಯಾಮ ಮೂಲಕ ದೈಹಿಕ, ಮಾನಸಿಕ ದೃಢತೆ ಕಾಪಾಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.



ಯೋಗ ಒಂದು ಜೀವನ ಪದ್ಧತಿ ಆಗಬೇಕು. ನಾವೆಲ್ಲರೂ ಒತ್ತಡದಲ್ಲೇ ಕೆಲಸ ಮಾಡುವವರು, ಆದರೆ ನಮ್ಮ ಆಂತರಿಕ ಒತ್ತಡ ನಿವಾರಿಸಲು ಯೋಗ ಪರಿಣಾಮಕಾರಿ. ಹೀಗಾಗಿ ಒತ್ತಾಯಕ್ಕಾಗಿ ಯೋಗ ತರಬೇತಿ ಮಾಡುತ್ತಿದ್ದೇವೆ ಎಂಬ ಭಾವನೆ ಯಾರಿಗೂ ಬೇಡ. ಕೇವಲ ಜಿಲ್ಲಾ ಕೇಂದ್ರದಲ್ಲಿ ಈ ತರಬೇತಿ ನೀಡುತ್ತಿಲ್ಲ, ಇತರ ಎರಡೂ ಉಪವಿಭಾಗಗಳಲ್ಲೂ ಈ ತರಬೇತಿ ಶಿಬಿರ ನಡೆಯಲಿದೆ. ಹೊಸಪೇಟೆಯಲ್ಲಿ ಪಾಲ್ಗೊಳ್ಳದವರಿಗಾಗಿ ಇನ್ನೊಂದು ತಂಡದಲ್ಲಿ ಯೋಗ ತರಬೇತಿ ನಡೆಯಲಿದೆ. ನಮ್ಮ ಕೋರಿಕೆ ಮನ್ನಿಸಿ, ಮೂರೂ ಉಪವಿಭಾಗಗಳಲ್ಲಿ ಯೋಗ ತರಬೇತಿ ನಡೆಸಲು ಸಮ್ಮತಿ ಸೂಚಿಸಿದ ಪತಂಜಲಿ ಯೋಗ ಸಮಿತಿಗೆ ಕೃತಜ್ಞರಾಗಿರುತ್ತೇವೆ ಎಂದು ಎಸ್‌ಪಿ ಹೇಳಿದರು.

ಎಎಸ್‌ಪಿ ಜಿ.ಮಂಜುನಾಥ್ ಮಾತನಾಡಿ, ಯೋಗದಿಂದ ದೇಹದ ಪ್ರತಿಯೊಂದು ಅಂಗವೂ ಸಚೇತನಗೊಳ್ಳುತ್ತದೆ ಎಂದರು. ಡಿವೈಎಸ್‌ಪಿ ಟಿ.ಮಂಜುನಾಥ್ ಮಾತನಾಡಿ, ಯೋಗ ನಮ್ಮ ದೈನಂದಿನ ಅಭ್ಯಾಸವಾಗಬೇಕು ಎಂದರು.

ಜಿಲ್ಲಾ ಯೋಗ ಸಮಿತಿಯ ಪ್ರಮುಖರಾದ ಅನಂತ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಹಿರಿಯ ಯೋಗ ಸಾಧಕಿ ಉಮಾ ವಿಶ್ವನಾಥ್, ಪತಂಜಲಿ ಯೋಗ ಸಮಿತಿಯ ಪೂಜಾ ಐಲಿ, ಕವಿತಾ ಭಾಸ್ಕರ್, ಗೀತಾ ಮಹಾರಾಜ್, ರಾಜಭಕ್ತಿ, ಎಂ.ಜಿ.ಬಾಲಕೃಷ್ಣ, ರಾಮು ಉಪಸ್ಥಿತರಿದ್ದರು.

ಗಮನ ಸೆಳೆದ ಶ್ರೀನಿವಾಸ ಕಲ್ಯಾಣ ನಾಟಕ



◆**ಬಳ್ಳಾರಿ:** ಶ್ರೀರಾಮ ನವಮಿ ಹಬ್ಬದ ನಿಮಿತ್ತ ಶಿರೆಕೊಳ ರಾಮದೇವರು, ರಾಘವೇಂದ್ರ ಸ್ವಾಮಿಗಳ ಮಠದ ಆವರಣದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬಳ್ಳಾರಿಯ ತುಂಗ ಗಂಗಾ ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ಶ್ರೀಜ ನಿರ್ದೇಶನದ ಶ್ರೀನಿವಾಸ ಕಲ್ಯಾಣ ನಾಟಕವನ್ನು ಕಲಾವಿದರು ಅತ್ಯುತ್ತಮವಾಗಿ ಪ್ರದರ್ಶಿಸಿದರು.

ಪ್ರತಿಯೊಬ್ಬ ಕಲಾವಿದರು ಮನೋಜ್ಞವಾಗಿ ಪ್ರದರ್ಶನ ಮಾಡಿ ಗಮನಸೆಳೆದರು. ದೇವಸ್ಥಾನದ ಅರ್ಚಕರು ಪ್ರವೀಣ್ ಆಚಾರ್, ಶ್ರೀನಿವಾಸ್ ಆಚಾರ್ ಅವರು, ನಂತರ ಕಲಾವಿದರಿಗೆ ಪ್ರಶಸ್ತಿ ಪತ್ರ, ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ರಂಗ ಕಲಾವಿದ, ಪತ್ರಕರ್ತ ನಾಗಭೂಷಣ್ ಅವರು ಕಾರ್ಯಕ್ರಮ ನಿರೂಪಿಸಿದರು ನೃತ್ಯ ಗುರುಗಳು ಶ್ರೀಜ, ಪರಿಮಳ, ಗಾಯಕರು ಶ್ರೀನಿವಾಸ್, ರಘುನಂದನ್, ಊರಿನ ಮುಖಂಡರು ನಾಗರಾಜರಾವ್, ಶಿವರುದ್ರಯ್ಯ ಸ್ವಾಮಿ, ತನ್ಮಯಿ, ಅಮೃತ, ದೀಕ್ಷಾ, ಗುಣಸಿಂಧು, ಸೋನು, ರಾಧಾ ಕೃಷ್ಣ, ವಿದ್ಯಾ, ಪ್ರೀತಿಕಾ, ದೀಪ್ತಿ, ಬಾಂದವಿ, ಶ್ರೈನು, ಪ್ರೀತಿ, ಶಾನ್ವಿ ಸೇರಿದಂತೆ ದೇವಸ್ಥಾನದ ಅರ್ಚಕರು ಇತರರಿದ್ದರು.